# ಐಕ್ಯಭಾವದ ಪ್ರತೀಕ

## 12ನೇ ಅಧಿವೇಶನ




ಸರ್ವಾಧಿಕಾರ ವಿರೋಧಿ ವ್ಯಾಪಕ ಪ್ರತಿರೋಧ ರಚಿಸಿ • ಎಡ
ಮತ್ತು ಪ್ರಜಾಪ್ರಭುತ್ವ ಐಕ್ಯತೆ ನಿರ್ಮಿಸಿ • ಪಕ್ಷದ ಸ್ವತಂತ್ರ
ಚಟುವಟಿಕೆಗಳನ್ನು ಹೆಚ್ಚಿಸಿ • ಸರ್ವಾಧಿಕಾರ ವಿರೋಧಿ
ವ್ಯಾಪಕ ಪ್ರತಿರೋಧ ನಿರ್ಮಿಸಿ • ಎಡ ಮತ್ತು ಪ್ರಜಾಪ್ರಭುತ್ವ
ಐಕ್ಯತೆ ನಿರ್ಮಿಸಿ • ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಹೆಚ್ಚಿಸಿ

# ಐಕ್ಯರಂಗ

ಹನ್ನೆರಡನೇ
ಅಧಿವೇಶನ
ವಿಶೇಷಾಂಕ

| | | |
|---|---|---|
| ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಮುಖ ಪತ್ರಿಕೆ | ಸಂಪುಟ 8<br>ಸಂಚಿಕೆ 2–5 | ಜನವರಿ 26, ಫೆ. 2<br>1986<br>ಬೆಲೆ : 3-00 ರೂ. |

ಒಳಪುಟಗಳಲ್ಲಿ.... .... ....

# ಹನ್ನೆರಡನೇ ಅಧಿವೇಶನ-ಇನ್ನೊಂದು ಮೈಲಿಗಲ್ಲು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಕಲ್ಕತ್ತೆಯಲ್ಲಿ 1985ರ ಡಿಸೆಂಬರ್ 25 ರಿಂದ 29ರವರೆಗೆ ಜರುಗಿತು. ಇದರಲ್ಲಿ 591 ಪ್ರತಿನಿಧಿಗಳು ಮತ್ತು 50 ವೀಕ್ಷಕರು ಭಾಗವಹಿಸಿದ್ದರು. ಅಧಿವೇಶನದ ಮುಕ್ತಾಯದಲ್ಲಿ ಡಿಸೆಂಬರ್ 30 ರಂದು ನಡೆದ ಸಾಮೂಹಿಕ ಸಭೆಯಲ್ಲಿ 10 ಲಕ್ಷಕ್ಕೂ ಮೀರಿ ಜನ ಸೇರಿದ್ದರು. ವಿವಿಧ ರಾಜ್ಯಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಜನ ಈ ಸಭೆಯಲ್ಲಿ ಪಾಲ್ಗೊಳ್ಳಲು ಕಲ್ಕತ್ತಾನಗರಕ್ಕೆ ಬಂದಿದ್ದರು. ಪಕ್ಷದ ಅಧಿವೇಶನ ಕಲ್ಕತ್ತೆಯ ಮತ್ತು ಸಮಸ್ತ ಪಶ್ಚಿಮ ಬಂಗಾಳ ರಾಜ್ಯದ ಜನತೆಯಲ್ಲಿ ಸಡಗರ ತಂದಿತ್ತು; ಅಷ್ಟೇ ಅಲ್ಲ, ದೇಶಾದ್ಯಂತ ಆಸಕ್ತಿ ಕೆರಳಿಸಿತ್ತು. ಸಿ. ಪಿ. ಐ. (ಎಂ)ನ ರಾಜಕೀಯ-ಸೈದ್ಧಾಂತಿಕ ಐಕ್ಯತೆ ಹಾಗೂ ಸಂಘಟನಾತ್ಮಕಒಗ್ಗಟ್ಟಿನಲ್ಲಿ ಪಕ್ಷದ ಈ ಹನ್ನೆರಡನೇ ಅಧಿವೇಶನ ಒಂದು ಚಾರಿತ್ರಿಕ ಮೈಲಿಗಲ್ಲು ಎಂದರೆ ಅತಿಶಯೋಕ್ತಿಯಾಗಲಾರದು.

ಇದಕ್ಕೆ ಮೊದಲು ದೇಶಾದ್ಯಂತ ಪಕ್ಷದ ಎಲ್ಲಾ ಘಟಕಗಳು ಕರಡು ರಾಜಕೀಯ ನಿರ್ಣಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿ ಎರಡು ಸಾವಿರಕ್ಕೂ ಹೆಚ್ಚು ತಿದ್ದುಪಡಿಗಳನ್ನು ಕೇಂದ್ರಸಮಿತಿಗೆ ಕಳಿಸಿದವು. ಅಧಿವೇಶನದಲ್ಲೂ ಕೆಲವು ತಿದ್ದುಪಡಿಗಳನ್ನು ಸೂಚಿಸಲಾಯಿತು. ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ—ಒಂದು, ಪಕ್ಷದ ಧೋರಣೆಯನ್ನು ರೂಪಿಸುವಲ್ಲಿ ಪಕ್ಷದ ಸದಸ್ಯರ ಅತ್ಯಂತ ವ್ಯಾಪಕ ಪಾತ್ರ ಮತ್ತು ಎರಡನೆಯದಾಗಿ, ಕರಡಿನ ಮೂಲಭೂತ ನಿರೂಪಣೆಗಳನ್ನು ಬಲ ಅಥವಾ ಎಡ ದಿಕ್ಕಿನತ್ತ ಬದಲಿಸಲು ಒಂದೇ ಒಂದು ತಿದ್ದುಪಡಿ ಕೂಡಾ ಬಯಸಲಿಲ್ಲ ಎನ್ನುವುದು. ಕರಡಿನಲ್ಲಿದ್ದ ಅಂಶಗಳನ್ನು ಮತ್ತಷ್ಟು ವಿಶದಗೊಳಿಸುವುದು ಮತ್ತು ಹೆಚ್ಚಿನ ಒತ್ತು ನೀಡುವುದೇ ಹೆಚ್ಚಿನ ತಿದ್ದುಪಡಿಗಳ ಉದ್ದೇಶವಾಗಿತ್ತು. ಇದು ಸಿ.ಪಿ.ಐ. (ಎಂ)ನ ರಾಜಕೀಯ-ಕಾರ್ಯತಂತ್ರಾತ್ಮಕ ಒಗ್ಗಟ್ಟು ಹೆಚ್ಚುತ್ತಿರುವುದರ ಸೂಚನೆ.

## ದೀರ್ಘ ಅನುಭವದಿಂದ ಬಂದ ಐಕ್ಯತೆ

ಪಕ್ಷದ ಏಳನೇ ಅಧಿವೇಶನ 1964ರಲ್ಲಿ ಐಕ್ಯ ಸಿ.ಪಿ.ಐ.ನ ಪ್ರಬಲ ವಿಭಾಗದೊಂದಿಗೆ ಹಾಗೂ ಅದರ ವರ್ಗಶಾಮೀಲಿನ, ಬಲ ಪರಿಷ್ಕರಣವಾದೀ ಧೋರಣೆಗಳೊಂದಿಗೆ ವ್ಯವಹಾರ ಚುಕ್ತಾಗೊಳಿಸುವುದಕ್ಕಾಗಿ ಜರುಗಿತು. ಎಂಟನೇ ಅಧಿವೇಶನ ಡಿಸೆಂಬರ್ 1968ರಲ್ಲಿ ನಕ್ಸಲೀಯರು ಪ್ರತಿನಿಧೀಕರಿಸಿದ್ದ ಎಡ-ದುಸ್ಸಾಹಸವಾದೀ ರಾಜಕೀಯ-ಸೈದ್ಧಾಂತಿಕ ಮಾರ್ಗದೊಂದಿಗೆ ಲೆಕ್ಕ ಫೈಸಲು ಮಾಡಿಕೊಳ್ಳಬೇಕಾಯಿತು. ಒಂಭತ್ತನೇ ಅಧಿವೇಶನ ಕಾಂಗ್ರೆಸ್ ಸರಕಾರ ಪಶ್ಚಿಮ ಬಂಗಾಳದಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದಕ ಆಳ್ವಿಕೆಯನ್ನು ಹೇರಿದ್ದಾಗ ಮತ್ತು ಕೇರಳದಲ್ಲಿ ತೀವ್ರ ದಬ್ಬಾಳಿಕೆ ನಡೆಸುತ್ತಿದ್ದ ಸಮಯದಲ್ಲಿ ಸೇರಿತ್ತು. ಹತ್ತನೇ ಅಧಿವೇಶನ ತತ್ಕಾಲೀನ ಕಾರ್ಯತಂತ್ರ ಹಾಗೂ ಭಾರತೀಯ ಕ್ರಾಂತಿಯ ಕಾರ್ಯಯೋಜನೆಯ ಬಗ್ಗೆ ಒಂದು ಗಂಭೀರ ವಾತಾವರಣದಲ್ಲಿ ಬಿರುಸಿನಿಂದ ಚರ್ಚಿಸಿ ನಿರ್ಣಯಕ್ಕೆ ಬರಬೇಕಾಗಿತ್ತು. ನಂತರ ಹನ್ನೊಂದನೇ ಅಧಿವೇಶನದಲ್ಲಿ ಜನತಾ ಪಕ್ಷದ ವಿಭಜನೆ ಹಾಗೂ ನಂತರ 1979ರ ಮಧ್ಯಕಾಲದಲ್ಲಿ ನಡೆದ ಘಟನೆಗಳ ಬಗ್ಗೆ ಪಕ್ಷದ ನಿಲುವನ್ನು ಚರ್ಚಿಸಿ ನಿರ್ಧಾರಕ್ಕೆ ಬರಬೇಕಾಯಿತು. ಈ ರೀತಿ ಹನ್ನೆರಡನೇ ಅಧಿವೇಶನದಲ್ಲಿ ಕಂಡು ಬಂದ ರಾಜಕೀಯ ಸೈದ್ಧಾಂತಿಕ ಐಕ್ಯತೆ ದೀರ್ಘಕಾಲದ ತಪ್ಪು ಒಪ್ಪುಗಳ ಮೂಲಕ ವಿಮರ್ಶೆ ಹಾಗೂ ಆತ್ಮ ವಿಮರ್ಶೆಯ ಮೂಲಕ, ಭಾರತದ ವಾಸ್ತವ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅನ್ವಯಿಸುವ ಒಂದು ಶ್ರಮಶೀಲ ಹೋರಾಟದ ಮೂಲಕ ದೀರ್ಘಕಾಲದ ಅನುಭವದಿಂದ ಸಾಧಿಸಿದ ಐಕ್ಯತೆ.

ಈ ಅಧಿವೇಶನ ಹನ್ನೊಂದನೇ ಅಧಿವೇಶನದ ನಂತರ ಕಳೆದ ನಾಲ್ಕು ವರ್ಷಗಳಲ್ಲಿ ಪಕ್ಷದ ಕೆಲಸವನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿ,ವಿಮರ್ಶಿಸಿ ಹನ್ನೊಂದನೇ ಅಧಿವೇಶನದಲ್ಲಿ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಸನ್ನಿವೇಶಗಳ ಬಗ್ಗೆ ಮಾಡಿದ ರಾಜಕೀಯ ಹಾಗೂ ವರ್ಗ-ವಿಮರ್ಶೆ ಮತ್ತು ಪ್ರಮುಖ ನಿರೂಪಣೆಗಳು ಸರಿಯೆಂದು ಸಾಬೀತಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಹನ್ನೊಂದನೇ ಅಧಿವೇಶನದ ವರದಿ ಮತ್ತು ನಿರ್ಣಯದಲ್ಲಿ ಮಾಡಿದ ರಾಜಕೀಯ ವಿಶ್ಲೇಷಣೆ ಮತ್ತು ಅಂದಾಜು ರಾಷ್ಟ್ರೀಯ ಮತ್ತು

ಅಂತರ್ರಾಷ್ಟ್ರೀಯ ರಂಗಗಳಲ್ಲಿ ಮೂಡಿಬಂದ ಹಲವಾರು ಪ್ರಶ್ನೆಗಳ ಬಗ್ಗೆ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ನೆರವಾಯಿತು ಎಂದೂ ಹನ್ನೆರಡನೇ ಅಧಿವೇಶನ ತೀರ್ಮಾನಕ್ಕೆ ಬಂತು.

## ಸಾಮ್ರಾಜ್ಯಶಾಹಿಗಳ ವಿರುದ್ಧ

ಅಸಂಸ್ಥಾ ಸಾಮ್ರಾಜ್ಯಶಾಹಿಗಳಿಂದ ಬಂದಿರುವ ಪರಮಾಣು ಯುದ್ಧದ ಬೆದರಿಕೆಯ ಗಂಭೀರ ಪಿಡುಗನ್ನು ಗಮನಿಸಿದ ಹನ್ನೆರಡನೇ ಅಧಿವೇಶನ, ಶಾಂತಿಯ, ರಾಷ್ಟ್ರೀಯ ಸ್ವಾಧೀನತೆಯ, ಪ್ರಜಾಪ್ರಭುತ್ವದ ಹಾಗು ಸಮಾಜವಾದದ ರಕ್ಷಣೆಗೆ ನಿಲ್ಲುವಂತೆ ಭಾರತೀಯ ಜನತೆಯನ್ನು ಒಂದುಗೂಡಿಸಬೇಕೆಂದು ಇಡೀ ಪಕ್ಷಕ್ಕೆ ಕರೆನೀಡಿದೆ.

ಹನ್ನೆರಡನೇ ಅಧಿವೇಶನದ ನಿರ್ಣಯ ಅಲಿಪ್ತ ಆಂದೋಲನದ ಬಗ್ಗೆ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಜಾಗತಿಕ ಶಾಂತಿಯ ಹೋರಾಟದಲ್ಲಿ ಅದರ ಮಹತ್ವದ ಪಾತ್ರದ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದೆ.

ಭಾರತವನ್ನು ಅಸ್ಥಿರಗೊಳಿಸಬಯಸುವ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಬಯಲಿಗೆಳೆದ ಅಧಿವೇಶನ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆ ಬಂದಿರುವುದರ ಬಗ್ಗೆ ಎಚ್ಚರಿಕೆ ನೀಡಿ ಈ ಕುಟಿಲೋಪಾಯಗಳ ವಿರುದ್ಧ ಹೋರಾಡಬೇಕೆಂದು ಜನತೆಗೆ-ಕಾರ್ಮಿಕರು, ರೈತರು, ಮಧ್ಯಮ ವರ್ಗದ ಜನ ಹಾಗೂ ದೇಶಪ್ರೇಮಿ ಮತ್ತು ಶಾಂತಿಪ್ರಿಯರಾದ ಲಕ್ಷಾಂತರ ಜನಗಳಿಗೆ—ಕರೆನೀಡಿದೆ.

ಒಂದೆಡೆ ಅಲಿಪ್ತತೆ, ಶಾಂತಿ ಹಾಗೂ ಸಾಮ್ರಾಜ್ಯಶಾಹಿ ವಿರೋಧದ ಗುರಿಗಳನ್ನು ಎತ್ತಿಹಿಡಿಯುತ್ತಾ ಪಕ್ಷದ ಈ ಅಧಿವೇಶನ ಇನ್ನೊಂದೆಡೆ ರಾಜೀವಗಾಂಧಿ ಹಾಗೂ ಅವರ ಸರಕಾರದ ಹೊಸ ಆರ್ಥಿಕ ನೀತಿಯನ್ನು ತೀವ್ರವಾಗಿ ಗಮನಿಸಿ ಈ 'ಹೊಸ ಆರ್ಥಿಕ ನೀತಿ' ಎಂಬುದು ನಮ್ಮ ರಾಷ್ಟ್ರೀಯ ಸ್ವಾಧೀನತೆಯನ್ನು ಬುಡಮೇಲು ಮಾಡುವ, ಸ್ವಾವಲಂಬನೆಯ ನಮ್ಮ ರಾಷ್ಟ್ರೀಯ ಗುರಿಯನ್ನು ಗಾಳಿಗೆ ತೂರುವ ಮತ್ತು ದೇಶದ ಆರ್ಥಿಕ ಸ್ವಾಧೀನತೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮತ್ತು ದೇಶದೊಳಗೆ ಅವರ ಗುತ್ತೇದಾರಿ ಮಿತ್ರರುಗಳ ಅಡಿಯಾಳಾಗಿಸಲು ದಾರಿ ಮಾಡಿಕೊಡುವ ನೀತಿಯೆಂದು ಬಲವಾಗಿ ಖಂಡಿಸಿತು.

ದೇಶದಲ್ಲಿ ಕೋಮುವಾದದ ಮತ್ತು ಜಾತೀಯತೆಯ ಪಿಡುಗು ಹೆಚ್ಚುತ್ತಿರುವುದನ್ನು ತೀವ್ರ ಆತಂಕದಿಂದ ಗಮನಿಸಿದ ಅಧಿವೇಶನ ಪಕ್ಷಕ್ಕೆ ಈ ಬಗ್ಗೆ ಎಚ್ಚರಿಕೆ ನೀಡಿತು. ಕೋಮುವಾದಿ ಹಾಗೂ ಜಾತೀವಾದಿ ಶಕ್ತಿಗಳ ಈ ಬೆಳವಣಿಗೆ ಹೇಗೆ ನಮ್ಮ ದೇಶದಲ್ಲಿ ಬೆಳೆಯುತ್ತಿರುವ ವರ್ಗ ಹಾಗೂ ಸಾಮೂಹಿಕ ಕ್ರಾಂತಿಕಾರೀ ಆಂದೋಲನದ ಮೇಲೆ ದುಷ್ಪರಿಣಾಮ ಬೀರುತ್ತದೆಯೆಂಬುದನ್ನು ಅದು ತೀಕ್ಷ್ಣವಾಗಿ ವಿಶ್ಲೇಷಿಸಿತು.

## ಸಾಧನೆಗಳ ವಿಮರ್ಶೆ

ಪಕ್ಷದ ಸದಸ್ಯ ಸಂಖ್ಯೆಯಲ್ಲಿ ಹಾಗೂ ಲಕ್ಷಗಟ್ಟಲೆ ಕಾರ್ಮಿಕರನ್ನು, ರೈತರನ್ನು, ಯುವಕರನ್ನು, ವಿದ್ಯಾರ್ಥಿಗಳನ್ನು, ಮಹಿಳೆಯರನ್ನು ಮತ್ತು ಮಧ್ಯಮವರ್ಗದ ನೌಕರರನ್ನು ವಿವಿಧ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ಸಂಘಟಿಸುವ ಪಕ್ಷದ ಕೆಲಸ ಕಾರ್ಯಗಳಲ್ಲಿ ಹೆಚ್ಚಳವಾಗಿರುವುದರ ಬಗ್ಗೆ ಅಧಿವೇಶನ ಹೆಮ್ಮೆ ವ್ಯಕ್ತಪಡಿಸಿತು. ಆದರೆ ಇದು ಪಕ್ಷದ ಮತ್ತು ಅದರ ನೀತಿಯ ಬಗ್ಗೆ ಹೆಚ್ಚುತ್ತಿರುವ ಜನಪ್ರಿಯತೆಗೆ ಅನುಗುಣವಾಗಿ ಹೆಚ್ಚಿಲ್ಲ ಎಂಬುದನ್ನು ಅಧಿವೇಶನ ಕಂಡುಕೊಂಡಿತು. ಹಲವಾರು ಕ್ಷೇತ್ರಗಳಲ್ಲಿ, ಪ್ರದೇಶಗಳಲ್ಲಿ, ರಾಜ್ಯಗಳಲ್ಲಿ ಪಕ್ಷದ ಯಾವುದೇ ರೀತಿಯ ದೊಡ್ಡ ಮುನ್ನಡೆ ಸಾಧಿಸಿಲ್ಲ ಮತ್ತು ಈ ದೌರ್ಬಲ್ಯವನ್ನು, ಮುಖ್ಯತ: ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ನೀಗಿಸಲು ಸೂಕ್ತ ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕೆಂದು ಅಧಿವೇಶನ ಕರೆ ನೀಡಿತು.

ಕಳೆದ ಎಂಟು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಜನ-ಪರ ಪರ್ಯಾಯ ಧೋರಣೆಗಳಿಗಾಗಿ ಹೆಚ್ಚೆಚ್ಚು ವ್ಯಾಪಕ ಜನವಿಭಾಗಗಳನ್ನು ಸಂಘಟಿಸುವಲ್ಲಿ ಹಾಗೂ ಶ್ರಮಜೀವಿ ಜನಸಮೂಹಗಳಲ್ಲಿ ಮತ್ತು ಪ್ರಗತಿಪರ ಬುದ್ಧಿಜೀವಿಗಳಲ್ಲಿ ಭರವಸೆಯ ಪ್ರೇರಣೆ ನೀಡುವಲ್ಲಿ ಪಶ್ಚಿಮ ಬಂಗಾಲ ಹಾಗೂ ತ್ರಿಪುರಾದ ಎರಡು ಎಡನೇತೃತ್ವದ ಸರಕಾರಗಳು ವಹಿಸಿದ ಪಾತ್ರದ ಬಗ್ಗೆ ಅಧಿವೇಶನ ಹೆಮ್ಮೆ ವ್ಯಕ್ತಪಡಿಸಿದೆ. ವಾಸ್ತವವಾಗಿ, ಕಾಂಗ್ರೆಸ್ ಪಕ್ಷ ತನ್ನ ವರ್ಗಧೋರಣೆಗಳಿಂದಾಗಿ ಸರ್ವಾಧಿಕಾರೀ ಆಳ್ವಿಕೆಯತ್ತ ಭರದಿಂದ ಸಾಗುತ್ತಿರುವಾಗ ಅದನ್ನು ತಡೆಯುವಲ್ಲಿ, ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಪ್ರಬಲ ಕಾವಲು ಠಾಣೆಗಳಾಗಿ ಈ ಎರಡು ಸರಕಾರಗಳು ಕೆಲಸ ಮಾಡುತ್ತಿವೆ ಎಂದು ಅಧಿವೇಶನಅಭಿಪ್ರಾಯಪಟ್ಟಿತು.

ಪ್ರಜಾಸತ್ತಾತ್ಮಕ ಕೇಂದ್ರವಾದವೆನ್ನುವುದು ಒಂದು ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಪಕ್ಷದ ಮೂಲಾಧಾರ. ಪಕ್ಷದೊಳಗಿನ ಒಕ್ಕೂಟವಾದೀ (ಫೆಡರಲಿಸ್ಟ್) ವಿಚಾರಗಳು ಹಾಗೂ ಆಚರಣೆಗಳು ಈ ನೀತಿಗೆ ತೀವ್ರ ಅಪಾಯವೊಡ್ಡುತ್ತಿವೆಯೆಂಬುದನ್ನು ಹನ್ನೆರಡನೇ ಅಧಿವೇಶನ

# ಕಾಮ್ರೇಡ್ ಪಿ. ಸುಂದರಯ್ಯ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಕೇಂದ್ರ ಸಮಿತಿಯು ಪ್ರಮುಖ ಸದಸ್ಯರುಗಳಲ್ಲಿ ಒಬ್ಬರಾದ ಮತ್ತು ಭಾರತ ಕಮ್ಯುನಿಸ್ಟ್ ಆಂದೋಲನದಲ್ಲಿ ಒಬ್ಬ ಎದ್ದು ಕಾಣುವ ಮುಖಂಡರಾದ ಕಾಮ್ರೇಡ್ ಪಿ. ಸುಂದರಯ್ಯನವರ ನಿಧನಕ್ಕೆ ತನ್ನ ಸಂತಾಪ ಸೂಚಿಸುತ್ತದೆ.

ತನ್ನ ಹದಿನೈದನೇ ವರ್ಷದ ವಯಸ್ಸಿನಲ್ಲಿ ಸೈಮನ್ ಕಮಿಶನ್‌ನ ಬಹಿಷ್ಕಾರದೊಂದಿಗೆ ರಾಜಕೀಯ ಜೀವನ ಆರಂಭಿಸಿದ ಕಾಮ್ರೇಡ್ ಸುಂದರಯ್ಯ ತನ್ನ ಜೀವನದ ಐದೂವರೆ ದಶಕಕ್ಕೂ ಹೆಚ್ಚಿನ ಕಾಲವನ್ನು ಭಾರತದ ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವ, ಕಾರ್ಮಿಕವರ್ಗ ಹಾಗೂ ಕಮ್ಯುನಿಸ್ಟ್ ಆಂದೋಲನಗಳಿಗಾಗಿ ಮುಡಿಪಿಟ್ಟರು.

ಕಾಮ್ರೇಡ್ ಸುಂದರಯ್ಯ 1936ರಲ್ಲಿ ಪಕ್ಷದ ಮೊದಲ ಅಖಿಲ ಭಾರತ ಕೇಂದ್ರ ಸ್ಥಾಪನೆಗೊಂಡಾಗ ಕೇಂದ್ರ ಸಮಿತಿಯ ಒಬ್ಬ ಸದಸ್ಯರಾದರು. ಅವರು ಆರಂಭದಲ್ಲಿ 1964 ರಿಂದ 1976ರವರೆಗೆ ಸಿ. ಪಿ. ಐ (ಎಂ)ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ತನ್ನ ನಿಧನದ ಸಮಯದಲ್ಲಿ ಅವರು ಕೇಂದ್ರ ಸಮಿತಿಯ ಒಬ್ಬ ಸದಸ್ಯರಾಗಿದ್ದರು. ಹಾಗೂ ಪಕ್ಷದ ಆಂಧ್ರಪ್ರದೇಶ ರಾಜ್ಯ ಸಮಿತಿಯು ಕಾರ್ಯದರ್ಶಿಗಳಾಗಿದ್ದರು.

ಕಾಮ್ರೇಡ್ ಸುಂದರಯ್ಯ ತೆಲಂಗಾಣಾ ರೈತರ ವೀರ ಸಶಸ್ತ್ರ ಹೋರಾಟದ ಅತ್ಯಂತ ಪ್ರಮುಖ ಮುಖಂಡರಲ್ಲಿ ಒಬ್ಬರಾಗಿದ್ದರು. ಒಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿ ಮತ್ತು ನಂತರ ಕಮ್ಯುನಿಸ್ಟ್ ಹಾಗೂ ಕಾರ್ಮಿಕವರ್ಗದ ಓರ್ವ ಮುಖಂಡರಾಗಿ ಅವರು ಹಲವಾರು ವರ್ಷಗಳನ್ನು ಜೈಲಿನಲ್ಲಿ ಕಳೆದರು ಮತ್ತು 12 ವರ್ಷಗಳ ಕಾಲ ಭೂಗತರಾಗಿ ದುಡಿದರು. ಭೂಗತ ಕಾರ್ಯಯಂತ್ರವನ್ನು ಸಂಘಟಿಸುವಲ್ಲಿ ಅವರು ಅಗಾಧ ಪ್ರತಿಭೆಯನ್ನು ಪ್ರದರ್ಶಿಸಿದರು.

ಕಾಮ್ರೇಡ್ ಸುಂದರಯ್ಯ ಸಂಯುಕ್ತ ಕಮ್ಯುನಿಸ್ಟ್ ಪಕ್ಷದಲ್ಲಿ ಪರಿಷ್ಕರಣವಾದದ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದ್ದ ಅತ್ಯಂತ ಪ್ರಮುಖ ಮುಖಂಡರಲ್ಲಿ ಒಬ್ಬರಾಗಿದ್ದರು. ಪಕ್ಷದ ಮರುಸಂಘಟನೆ ಮಾಡುವಲ್ಲಿ ಮತ್ತು ಒಂದು ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಕಾರ್ಯಕ್ರಮ ಹಾಗೂ ಧೋರಣೆಗಳ ಆಧಾರದ ಮೇಲೆ ಸಿ.ಪಿ.ಐ.(ಎಂ) ನ್ನು ಸ್ಥಾಪಿಸುವಲ್ಲಿ ಅವರು ಒಂದು ನೇತೃತ್ವದ ಪಾತ್ರ ವಹಿಸಿದರು. ನಂತರ ಎಡ-ದುಸ್ಸಾಹಸವಾದ ತಲೆಯೆತ್ತಿದಾಗ ಅವರು ಮುಖಂಡತ್ವದಲ್ಲಿದ್ದ ಇತರರೊಂದಿಗೆ ಎಡ-ದುಸ್ಸಾಹಸವಾದೀ ಮಾರ್ಗಚ್ಯುತಿಯ ವಿರುದ್ಧ ಒಂದು ಅವಿಶ್ರಾಂತ ಸಮರ ನಡೆಸಿದರು.

ಕಾಮ್ರೇಡ್ ಸುಂದರಯ್ಯ ಪಕ್ಷವನ್ನು ಕಟ್ಟುವ ಕೆಲಸದ ಅತ್ಯುಚ್ಚ ಪ್ರಾಮುಖ್ಯತೆಯ ಬಗ್ಗೆ ಸದಾ ಯೋಚಿಸುತ್ತಿದ್ದರು. ಮತ್ತು ಅದು ತನ್ನ ಪ್ರಧಾನ ಕರ್ತವ್ಯಗಳಲ್ಲಿ ಒಂದು ಎಂದುಕೊಂಡು ದುಡಿದರು. ಪಕ್ಷದ ಕಾರ್ಯಕರ್ತರ ಬಗ್ಗೆ ಅವರ ಸಮರ್ಪಣಾ ಭಾವವನ್ನು ಪಕ್ಷ ಸದಾ ನೆನಪಿಸಿಕೊಳ್ಳುತ್ತದೆ.

ತನ್ನ ಸರಳ ಹಾಗೂ ಸಮರ್ಪಿತ ಜೀವನದಿಂದಾಗಿ ತನ್ನ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬ ಸಂಗಾತಿಗೂ ಅವರು ಅತ್ಯಂತ ಪ್ರೀತಿಪಾತ್ರರಾಗಿದ್ದರು. ಮತ್ತು ವ್ಯಾಪಕ ರಾಜಕೀಯ ವಲಯಗಳಲ್ಲಿ ಗೌರವಪಾತ್ರರಾಗಿದ್ದರು.

ಸಿ. ಪಿ. ಐ. (ಎಂ)ನ ಅಧಿವೇಶನ ಕಾಮ್ರೇಡ್ ಸುಂದರಯ್ಯನವರಿಗೆ ತನ್ನ ಕ್ರಾಂತಿಕಾರೀ ಶ್ರದ್ಧಾಂಜಲಿ ಸಲ್ಲಿಸುತ್ತದೆ ಮತ್ತು ಕಾಮ್ರೇಡ್ ಲೀಲಾ ಸುಂದರಯ್ಯನವರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತದೆ.

---

ವಿಶೇಷವಾಗಿ ಗಮನಿಸಿದೆ. ಕಾರ್ಮಿಕ ವರ್ಗದ ಕ್ರಾಂತಿಕಾರೀ ಪಕ್ಷವನ್ನು ಕಟ್ಟಬೇಕಾದುದು ಮೇಲಿನಿಂದಲೇ ಎಂಬ ಸುವಿಖ್ಯಾತ ಕಮ್ಯುನಿಸ್ಟ್ ಸಂಘಟನಾ ನೀತಿಯನ್ನು ಪುನರುಚ್ಚರಿಸುತ್ತಾ ಅಧಿವೇಶನ ಇದನ್ನು ಸಾಧಿಸಬೇಕಾದರೆ ಒಂದು ಬಲಶಾಲೀ ಪಕ್ಷದ ಕೇಂದ್ರವನ್ನು -ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೋವನ್ನ - ಕಟ್ಟಬೇಕೆಂದು ಒತ್ತಿ ಹೇಳಿತು. ಇಂತಹ ಬಲವಾದ ಕೇಂದ್ರ ಮಾತ್ರವೇ ಜನತಾ ಪ್ರಜಾಪ್ರಭುತ್ವವಾದೀ ಕ್ರಾಂತಿಗೆ ಕಾರ್ಮಿಕ ವರ್ಗವನ್ನು, ರೈತಾಪಿವರ್ಗವನ್ನು ಮತ್ತು ಇತರ ಎಲ್ಲಾ ಶ್ರಮಜೀವಿ ಜನಗಳನ್ನು ಸಂಘಟಿಸಿ ಅಣಿಗೊಳಿಸಬಲ್ಲುದು ಎಂದು ಅಧಿವೇಶನ ಪುನರುಚ್ಚರಿಸಿತು. ಸಿ.ಪಿ.ಐ. (ಎಂ)ನ ಈ ಹನ್ನೆರಡನೇ ಅಧಿವೇಶನ ಕೇಂದ್ರ ಸಮಿತಿಯು ಸದಸ್ಯ ಬಲವನ್ನು 66ಕ್ಕೆ ಹೆಚ್ಚಿಸಿ ಸದ್ಯದ ಘಟ್ಟದಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಮರ್ಥ, ಪ್ರತಿಭಾಶಾಲೀ ಯುವಕ ಸಂಗಾತಿಗಳನ್ನು ಕೇಂದ್ರ ಸಮಿತಿಯಲ್ಲಿ ಸೇರಿಸಿದೆ.

# ಅಧಿವೇಶನದ ದಿನಚರಿ

ಡಿಸೆಂಬರ್ 25 : ಸಾಲ್ಟ್‌ಲೇಕ್ ಕ್ರೀಡಾಂಗಣ. ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ನೆರೆದಿದ್ದ ಪ್ರತಿನಿಧಿಗಳನ್ನುದ್ದೇಶಿಸಿ ಸರೋಜ್‌ಮುಖರ್ಜಿಯವರ ಸಂಕ್ಷಿಪ್ತ ಭಾಷಣ. ನಂತರ ಹರಿಕಿಶನ್‌ಸಿಂಗ್ ಸುರ್ಜಿತ್‌ರವರಿಂದಪಕ್ಷದಧ್ವಜಾರೋಹಣ, ಬಾಣಬಿರುಸು, ಪಟಾಕಿಗಳ ಸಡಗರದ ನಡುವೆ.

ಪಶ್ಚಿಮ ಬಂಗಾಳದ ಇಪ್ಟಾ (IPTA) ತಂಡದಿಂದ ಕ್ರಾಂತಿಗೀತೆಗಳು ಮತ್ತು ವಾದ್ಯವೃಂದದಿಂದ ಕ್ರಾಂತಿಕಾರೀ ಸಂಗೀತ.

ಹುತಾತ್ಮರ ಸ್ತಂಭದೆದುರು ಇ.ಎಂ. ಎಸ್. ರವರಿಂದ ಹೂಮಾಲೆ ಸಮರ್ಪಣೆ ಹಾಗೂ ಜೀವತೆತ್ತ ಸಂಗಾತಿಗಳಿಗೆ ಕ್ರಾಂತೀಕಾರೀ ನಮನ. ಅವರನ್ನನುಸರಿಸಿ ಎಲ್ಲಾ ಪಾಲಿಟ್‌ಬ್ಯೂರೋ ಸದಸ್ಯರಿಂದ, ಕೇಂದ್ರ ಸಮಿತಿ ಸದಸ್ಯರಿಂದ ಮತ್ತು ಪ್ರತಿನಿಧಿಗಳಿಂದ ಹುತಾತ್ಮರ ಸ್ತಂಭದೆದುರು ಕ್ರಾಂತಿಕಾರೀ ಶ್ರದ್ಧಾಂಜಲಿ.

ಕ್ರೀಡಾಂಗಣದ ಮೊದಲ ಮಹಡಿಯಲ್ಲಿರುವ ಅಧಿವೇಶನದ ವಿಶಾಲ ಸಭಾಂಗಣಕ್ಕೆ ಸಡಗರದಿಂದ ಸಾಲುಗಟ್ಟಿ ನಿಂತ ಬಿಳಿ ಸಮವಸ್ತ್ರಧಾರಿ ಬಾಲಿಕೆಯರಿಂದ ಶುಭಾಶಯಗಳನ್ನು ಸ್ವೀಕರಿಸುತ್ತಾ ಒಬ್ಬೊಬ್ಬರಾಗಿ ಪ್ರತಿನಿಧಿಗಳ ಪ್ರವೇಶ. ಸಭಾಂಗಣದಲ್ಲಿ ವಿಭಿನ್ನ ರಾಜ್ಯಗಳ ಪ್ರತಿನಿಧಿ ಮಂಡಲಿಗಳಿಗೆ ಜಾಗಗಳನ್ನು ನಿಗದಿಗೊಳಿಸಲಾಗಿತ್ತು. ಕೆಂಪು ಬಣ್ಣದಿಂದ ಸಿಂಗರಿಸಲ್ಪಟ್ಟ ವೇದಿಕೆ ಹಿನ್ನೆಲೆಯಲ್ಲಿ ನಡುವೆ ಕುಡುಗೋಲು-ಸುತ್ತಿಗೆಯಿದ್ದ ದೊಡ್ಡ ಕೆಂಬಾವುಟ ಮತ್ತು ಅದರ ಇಕ್ಕೆಲಗಳಲ್ಲೂ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಹಾಗೂ ಸ್ಟಾಲಿನ್ನರ ದೊಡ್ಡ ದೊಡ್ಡ ಭಾವಚಿತ್ರಗಳು.

ಉದ್ಘಾಟನಾ ಸಭೆ-ಇಪ್ಟಾ ತಂಡದಿಂದ "ಪಾರ್ಟಿಸಾನ್ಸ್" (ಪಕ್ಷವರ್ತಿಗಳು) ಕ್ರಾಂತಿಗೀತೆ. ಜ್ಯೋತಿಬಸುರವರಿಂದ ಸ್ವಾಗತ ಭಾಷಣ.

ಸಮಸ್ತ ಪಾಲಿಟ್‌ಬ್ಯೂರೋ ಚಾಲಕ ಸಮಿತಿಯಾಗಬೇಕೆಂಬ ಇ. ಎಂ. ಎಸ್. ಸೂಚನೆಗೆ ಜ್ಯೋತಿಬಸು ಅನುಮೋದನೆ. ಸುರ್ಜಿತ್, ಅಬ್ದುಲ್ಲಾ ರಸೂಲ್, ಸುಶೀಲಾ ಗೋಪಾಲನ್, ದಶರಥ್ ದೇಬ್ ಮತ್ತು ಯು. ರಾಮುಮ್‌ರ ಅಧ್ಯಕ್ಷ ಮಂಡಳಿಯನ್ನು ರಚಿಸುವ ಇ.ಎಂ.ಎಸ್. ಸೂಚನೆ ಹಾಗೂ ಜ್ಯೋತಿಬಸು ಅನುಮೋದನೆ.

ಸುರ್ಜಿತ್ ಅವರಿಂದ ಸಂಗಾತಿಗಳಾದ ಪ್ರಮೋದ್‌ದಾಸ್‌ಗುಪ್ತಾ, ಪಿ. ಸುಂದರಯ್ಯ ಎಂ.ಆರ್.ವೆಂಕಟರಾಮನ್, ದೇಸ್‌ರಾಜ್ ಚಡ್ಡಾ ಮತ್ತುರಾಮದಾಸ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯ.ಪ್ರತಿನಿಧಿಗಳೆಲ್ಲಾ ಎದ್ದು ನಿಂತು ಮೌನಶ್ರದ್ಧಾಂಜಲಿ.ನಂತರ ಪ್ರಾಣಾರ್ಪಣೆಗೈದ ಸಂಗಾತಿಗಳನ್ನು ನೆನಪಿಸುವ ನಿರ್ಣಯ ಸುರ್ಜಿತ್‌ರವರಿಂದ.

ಚಿತ್ತಬ್ರತ ಮಜುಮ್‌ದಾರ್, ಎನ್. ಕೆ. ಶುಕ್ಲಾ ಹಾಗೂ ಎಸ್. ರಾಮಚಂದ್ರನ್ ಪಿಳ್ಳೆಯವರಿರುವಕ್ರೆಡೆಂಶಿಯಲ್ ಕಮಿಟಿಯ ಚುನಾವಣೆಯ ನಂತರ ಇ. ಎಂ. ಎಸ್. ರವರಿಂದ ಉದ್ಘಾಟನಾ ಭಾಷಣ.

ಪಿ. ಉಮಾನಾಥ್‌ರವರಿಂದ ಯುದ್ಧ ಮತ್ತು ಶಾಂತಿಯ ಬಗ್ಗೆ ನಿರ್ಣಯದ ಮಂಡನೆ. ಸುನಿಲ್ ಮೈತ್ರ ಅವರಿಂದ ಅನುಮೋದನೆ.

ಕೆನಡಾ ಕಮ್ಯುನಿಸ್ಟ್ ಪಕ್ಷ, ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ, ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ, ಚೀಣಾ ಕಮ್ಯುನಿಸ್ಟ್ ಪಕ್ಷ, ಜೆಕೋಸ್ಲೋವಾಕಿಯ ಕಮ್ಯುನಿಸ್ಟ್ ಪಕ್ಷ ಮತ್ತು ಪೋಲೆಂಡ್ ಸಂಯುಕ್ತ ಕಾರ್ಮಿಕರ ಪಕ್ಷದಿಂದ ಸೋದರ ಸಂದೇಶಗಳನ್ನು ಸುಜೀತ್ ಓದುವುದರೊಂದಿಗೆ ಬೆಳಗಿನ ಸಭೆ ಮುಕ್ತಾಯ.

ಅಪರಾಹ್ನ ಸಭೆ-ದಕ್ಷಿಣ ಆಫ್ರಿಕಾದ ಬಗ್ಗೆ ಇ.ಬಾಲನಂದನ್‌ರವರಿಂದ ನಿರ್ಣಯ ಮಂಡಿಸುವುದರೊಂದಿಗೆ ಆರಂಭ. ಗಣೇಶ ಶಂಕರ ವಿದ್ಯಾರ್ಥಿ ಅನುಮೋದನೆ.

ಬಿ. ಟಿ. ಆರ್. ರವರಿಂದ ಕರಡು ರಾಜಕೀಯ ನಿರ್ಣಯದ ಮಂಡನೆ. ನಿರ್ಣಯದ ಬಗ್ಗೆ ದೀರ್ಘವಾಗಿ ಮಾತನಾಡಿದ ನಂತರ ಬಿ. ಟಿ. ಆರ್. ಈ ಕರಡಿಗೆ ಸುಮಾರು 200ಕ್ಕೂ ಹೆಚ್ಚು ತಿದ್ದುಪಡಿಗಳು ಬಂದಿವೆ ಎಂದು ಹೇಳುತ್ತಾ ಅವುಗಳಲ್ಲಿ ಹೆಚ್ಚಿನವು ಉತ್ತಮ ಪದ ಬಳಕೆ ಅಥವಾ ಸ್ಪಷ್ಟೀಕರಣದ ಸ್ವರೂಪದಲ್ಲಿರುವುದರಿಂದ ಅವನ್ನು ಪ್ರತ್ಯೇಕವಾಗಿ ಚರ್ಚಿಸಬೇಕಾಗಿಲ್ಲ ಎಂದರು.

ಅಧ್ಯಕ್ಷ ಮಂಡಳಿಯಿಂದ ನಿರ್ಣಯದ ಬಗ್ಗೆ ಮರುದಿನದ ಚರ್ಚೆಯಲ್ಲಿ ವಿಭಿನ್ನ ರಾಜ್ಯಗಳ ಪ್ರತಿನಿಧಿ ಮಂಡಲಗಳಿಗೆ ಸಂಖ್ಯೆಗನುಗುಣವಾಗಿ ಸಮಯದ ನಿಗದಿ.

**ಡಿಸೆಂಬರ್ 26 :** ಬೆಳಗಿನ ಸಭೆ—ವಿಮೋಚನಾ ಆಂದೋಲನಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ಸಮರ ಮುಖರ್ಜಿಯವರ ನಿರ್ಣಯದೊಂದಿಗೆ ಆರಂಭ. ಪ್ರಕಾಶ್ ಕರಾಟ್ ಅನುಮೋದನೆ.

ರೋಮೇನಿಯ ಕಮ್ಯುನಿಸ್ಟ್ ಪಕ್ಷ, ಕೋರಿಯಾ ಪ್ರಜಾಸತ್ತಾತ್ಮಕ ಜನತಾ ಗಣತಂತ್ರ ಕಾರ್ಮಿಕರ ಪಕ್ಷ, ಫ್ರಾನ್ಸ್‌ನ ಕಮ್ಯುನಿಸ್ಟ್ ಪಕ್ಷ ಮತ್ತು ಆಸ್ಟ್ರೇಲಿಯಾದ ಕಮ್ಯುನಿಸ್ಟ್ ಪಕ್ಷಗಳಿಂದ ಸೋದರ ಸಂದೇಶಗಳ ವಾಚನ-ಸುರ್ಜಿತ್‌ರವರಿಂದ.

ರಾಜಕೀಯ ನಿರ್ಣಯದ ಕರಡಿನ ಮೇಲೆ ದಿನದ ಅಂತ್ಯದವರೆಗೆ ಚರ್ಚೆ. ಈ ದಿನದ ಬೆಳಗಿನ ಹಾಗೂ ಅಪರಾಹ್ನದ ಸಭೆಗಳಲ್ಲಿ ಈ ಚರ್ಚೆಯಲ್ಲಿ ಭಾಗವಹಿಸಿದವರೆಂದರೆ-ಪಶ್ಚಿಮ ಬಂಗಾಳದ ಬಪ್ಲಬ್‌ದಾಸ್ ಗುಪ್ತಾ, ಬಿನೊಯ್ ಕೊನಾರ್ ಮತ್ತು ಗೌತಮ್‌ದೇವ್, ಕೇರಳದ ವಿ.ವಿ. ದಕ್ಷಿಣಾಮೂರ್ತಿ ಮತ್ತು ಥಾಮಸ್ ಐಸಾಕ್; ತಮಿಳುನಾಡಿನ ಎನ್. ಶಂಕರಯ್ಯ; ಆಂಧ್ರ ಪ್ರದೇಶದ ಪಿ. ವಿ. ರಾಘವಲು ಮತ್ತು ಬಿ. ಎನ್. ರೆಡ್ಡಿ, ಮಹಾರಾಷ್ಟ್ರದ ಪಿ. ಸಾಂಗ್ರುಗಿರಿ, ಉತ್ತರ ಪ್ರದೇಶದ ರಾಮ್ ಸುಮೇರ್ ಯಾದವ್, ಕರ್ನಾಟಕದ ಎಸ್. ಸೂರ್ಯನಾರಾಯಣರಾವ್, ಹಿಮಾಚಲ ಪ್ರದೇಶದ ಡಿ. ಎನ್. ಕಪೂರ್, ಗುಜರಾತಿನ ಸುಭೋದ್ ಮೆಹ್ತಾ, ಜಮ್ಮು ಮತ್ತು ಕಾಶ್ಮೀರದ ಗುಲಾಮ್‌ನಭಿ ಮಲ್ಲಿಕ್, ಹರ್ಯಾಣದ ಪ್ರಥ್ವಿ ಮಲ್ಲಿಕ್, ಪಂಜಾಬಿನ ಚರಣ್‌ಸಿಂಗ್ ವಿರ್ಡಿ, ರಾಜಸ್ಥಾನದ ಹೇತರಾಮ್ ಬೇನಿವಾಲ್, ಅಸ್ಸಾಂನ ನೂರುಲ್ ಹುದಾ, ದೇಹಲಿಯ ಜೋಗಿಂದರ್ ಶರ್ಮಾ, ಬಿಹಾರ್‌ನ ಉಮಾಕಾಂತ ಶುಕ್ಲಾ, ಒರಿಸ್ಸಾದ ಜನಾರ್ಧನ ಪತಿ, ಮಧ್ಯ ಪ್ರದೇಶದ ಶೈಲೇಂದ್ರ ಶೈಲಿ, ತ್ರಿಪುರಾದ ಸಮರ್ ಚೌಧುರಿ, ಅಂಡಮಾನ್‌ನ ಎನ್. ವಾಸುದೇವನ್, ಗೋವಾದ ಶಿವರಾಂ ಮಂಬ್ರೇಕರ್, ಸಿ. ಐ. ಟಿ. ಯು ಕೇಂದ್ರದ ಪಿ. ಕೆ. ಗಂಗೂಲಿ ಹಾಗೂ ಮಹಿಳಾ ರಂಗದ ಕನಕ್ ಮುಖರ್ಜಿ.

ಚರ್ಚೆ ಮುಗಿದ ಮೇಲೆ ಮೂರು ನಿರ್ಣಯಗಳ ಅಂಗೀಕಾರ. ಎ. ನಲ್ಲಶಿವಂ ಮಂಡಿಸಿದ ಏಶ್ಯಾದಲ್ಲಿ ಸಾಮ್ರಾಜ್ಯಶಾಹೀ ಕುಟಿಲೋಪಾಯಗಳ ಕುರಿತಾದ ನಿರ್ಣಯ. ಗೋದಾವರಿ ಪರುಳೇಕರ್ ರಿಂದ ಅನುಮೋದನೆ. ನೆರೆಯ ದೇಶಗಳೊಂದಿಗೆ ಸೌಹಾರ್ಧತೆಯ ಬಗ್ಗೆ ಎನ್. ಪ್ರಸಾದರಾವ್ ಮಂಡಿಸಿದ ನಿರ್ಣಯಕ್ಕೆ ಮಹ್ಮದ್ ಅಮಿನ್‌ರ ಅನುಮೋದನೆ. ಎಂ. ಕೆ. ಫಂದೆಯವರು ಮಂಡಿಸಿದ ಎಡರಂಗ ಸರಕಾರಗಳ ರಕ್ಷಣೆ ಕುರಿತಾದ ನಿರ್ಣಯಕ್ಕೆ ಎಂ.ಎಂ. ಲಾರೆನ್ಸ್ ಅನುಮೋದನೆ.

**ಡಿಸೆಂಬರ್ 27 :** ಬೆಳಗಿನ ಸಭೆ-ಭೋಪಾಲ ಅನಿಲ ದುರಂತದ ಬಗ್ಗೆ ನಿರ್ಣಯದ ಮಂಡನೆಯೊಂದಿಗೆ ಆರಂಭ. ಮಂಡಿಸಿದವರು ನೃಪೆಂಗ್ ಚಕ್ರವರ್ತಿ ಮತ್ತು ಅನುಮೋದಕರು ಪಿ.ಕೆ. ಗಂಗೂಲಿ.

ನಿಕಾರಗುವಾದ ಬಗ್ಗೆ ನಿರ್ಣಯ-ಬಿಮಾನ್ ಬೋಸ್ ಮಂಡನೆ, ಕೆ.ಎನ್. ರವೀಂದ್ರನಾಥ ಅನುಮೋದನೆ.

ಹೊಸ ಶಿಕ್ಷಣ ಧೋರಣೆಯ ಬಗ್ಗೆ ಸೀತಾರಾಂ ಯೆಚುರಿಯವರಿಂದ ನಿರ್ಣ

## ಕಾಮ್ರೇಡ್ ಎಂ. ಆರ್. ವೆಂಕಟರಾಮನ್

ಸಿ. ಪಿ. ಐ. (ಎಂ) ನ ಹನ್ನೆರಡನೇ ಅಧಿವೇಶನ ಕೇಂದ್ರ ಸಮಿತಿಯ ಅನುಭವೀ ಸದಸ್ಯ ಕಾಮ್ರೇಡ್ ಎಂ. ಆರ್. ವೆಂಕಟರಾಮನ್ ಅವರ ನಿಧನಕ್ಕೆ ಅಪಾರ ದುಃಖ ವ್ಯಕ್ತಪಡಿಸುತ್ತದೆ.

ಅವರು 1939ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಹಾಗೂ 1942ರಲ್ಲಿ ತಮಿಳುನಾಡು ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಅವರನು ಬಾರಿಬಾರಿಗೆ ಬಂಧನಕ್ಕೊಳಗಾಗಿದ್ದರು. ಅವರ ಒಟ್ಟು ಜೈಲು ಜೀವನ 11 ವರ್ಷಗಳು ಮತ್ತು ಭೂಗತ ಜೀವನ ಮೂರು ವರ್ಷಗಳು.

ಕಾಮ್ರೇಡ್ ಎಂ. ಆರ್. ವೆಂಕಟರಾಮನ್ 50ರ ದಶಕದಲ್ಲಿ ಪರಿಷ್ಕರಣವಾದದ ವಿರುದ್ಧ ಒಂದು ದೃಢ ನಿಲುವು ತಳೆದು 1964ರಲ್ಲಿ ಅವರು ರಾಷ್ಟ್ರೀಯ ಮಂಡಳಯಿಂದ ಹೊರನಡೆದು ಸಿ. ಪಿ. ಐ. (ಎಂ)ನ್ನು ಸ್ಥಾಪಿಸಿದ ಸಂಗಾತಿಗಳನ್ನು ಸೇರಿಕೊಂಡರು. ಎಡ ಮಾರ್ಗಚ್ಯುತಿಯ ವಿರುದ್ಧವೂ ಕಾಮ್ರೇಡ್ ವೆಂಕಟರಾಮನ್ ಅಷ್ಟೇ ಕಸುವಿನಿಂದ ಹೋರಾಡಿದರು.

ಸಿ.ಪಿ.ಐ. (ಎಂ) ಸ್ಥಾಪನೆಯ ನಂತರ ತನ್ನ ನಿಧನದವರೆಗೂ ಅವರು ಕೇಂದ್ರ ಸಮಿತಿಯ ಸದಸ್ಯರಾಗಿ ಮುಂದುವರಿದರು. ಮತ್ತು ಅವರು ಹಲವು ವರ್ಷಗಳ ಕಾಲ ಸಿ.ಪಿ.ಐ. (ಎಂ)ನ ಕೇಂದ್ರ ಹತೋಟಿ ಆಯೋಗದ ಸಂಚಾಲಕರಾಗಿದ್ದರು.

ಪಕ್ಷದ ಅಧಿವೇಶನ ಕಾಮ್ರೇಡ್ ವೆಂಕಟರಾಮನ್‌ರವರ ಸ್ಮರಣೆಗೆ ತನ್ನ ಕ್ರಾಂತಿಕಾರೀ ಶ್ರದ್ಧಾಂಜಲಿ ಅರ್ಪಿಸುತ್ತದೆ ಮತ್ತು ಅವರ ಕುಟುಂಬಕ್ಕೆ ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

ಯದ ಮಂಡನೆ, ಸೈಫುದ್ದೀನ್ ಚೌಧುರಿ ಯವರಿಂದ ಅನುಮೋದನೆ.

ಸುರ್ಜಿತ್-ಜಪಾನ್ ಕಮ್ಯುನಿಸ್ಟ್ ಪಕ್ಷ, ಹಂಗೇರಿ ಸಮಾಜವಾದೀ ಕಾರ್ಮಿಕರ ಪಕ್ಷ ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಮತ್ತು ಕಂಪೂಚಿಯಾ ಜನತಾ ಕ್ರಾಂತಿಕಾರಿ ಪಕ್ಷದಿಂದ ಸೋದರ ಸಂದೇಶಗಳು.

ರಾಜಕೀಯ ನಿರ್ಣಯದ ಕರಡಿನ ಮೇಲಿನ ಚರ್ಚೆಗೆ ಬಿ. ಟಿ. ಆರ್. ಉತ್ತರ. ರಾಜಕೀಯ ನಿರ್ಣಯದ ಅವಿರೋಧ ಅಂಗೀಕಾರ.

ಅಪರಾಹ್ನ ಸಭೆ—ನಂದಕಿಶೋರ್ ಶುಕ್ಲಾ ಮಂಡಿಸಿ ಪಿ. ಕೆ. ಕುಂಜಚ್ಚನ್ ಅನುಮೋದಿಸಿದ ಪರಿಶಿಷ್ಟ ಜಾತಿ-ಪರಿಶಿಷ್ಟ ಜನಾಂಗ ಕುರಿತಾದ ನಿರ್ಣಯದೊಂದಿಗೆ ಆರಂಭ. ನಂತರ ಹೆಮೆನ್‌ದಾಸ್‌ರಿಂದ ಇರಾನ್‌ನಲ್ಲಿ ದಬ್ಬಾಳಿಕೆ ಕುರಿತು ನಿರ್ಣಯದ ಮಂಡನೆ. ಸುನಿತ್ ಚೋಪ್ರಾ ಅನುಮೋದನೆ.

ಇ.ಎಂ.ಎಸ್. ರವರಿಂದ ರಾಜಕೀಯ-ಸಂಘಟನಾತ್ಮಕ ವರದಿಯ ಮಂಡನೆ. ವರದಿಯ ಮೇಲೆ ಚರ್ಚೆ ಆರಂಭ.

**ಡಿಸೆಂಬರ್ 28**–ವರದಿಯ ಮೇಲೆ ಚರ್ಚೆ ಮುಂದುವರಿಯಿತು. ನಡುವೆ ಬೆಳಗಿನ ಸಭೆಯಲ್ಲಿ ಅಸ್ಸಾಂ ಕುರಿತು ಅಚಿಂತ್ಯ ಭಟ್ಟಾಚಾರ್ಯ ಅವರಿಂದ ನಿರ್ಣಯ ಮಂಡನೆ. ಬಿನೊಯ್ ಚೌಧುರಿ ಅನುಮೋದನೆ. ನಂತರ ಸುರ್ಜಿತ್‌ರವರಿಂದ ಸೋದರ ಸಂದೇಶಗಳ ವಾಚನ—ಜರ್ಮನ್ ಪ್ರಜಾಪ್ರಭುತ್ವವಾದೀ ಗಣರಾಜ್ಯ ಸಮಾಜವಾದೀ ಐಕ್ಯತಾ ಪಕ್ಷ, ಯುಗೋಸ್ಲಾವಿಯಾದ ಲೀಗ್ ಆಫ್ ಕಮ್ಯುನಿಸ್ಟ್, ಲಾವೊ ಜನತಾ ಕ್ರಾಂತಿಕಾರಿ ಪಕ್ಷಗಳಿಂದ. ಅಪರಾಹ್ನದ ಸಭೆ ವರದಿಯ ಬಗ್ಗೆ ಚರ್ಚೆಯ ಜತೆಗೆ ಸರಕಾರೀ ನೌಕರರ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಸುಕೋಮಲ್ ಸೆನ್ ನಿರ್ಣಯ ಮಂಡನೆ-ಎನ್. ಜೆ. ಐಯ್ಯರ್ ಅನುಮೋದನೆ.

**ಡಿಸೆಂಬರ್ 29**—ಬೆಳಗಿನ ಸಭೆ ಆರಂಭದಲ್ಲಿ ಸುರ್ಜಿತ್‌ರವರಿಂದ ಸೋದರ ಸಂದೇಶಗಳ ವಾಚನ—ಇಟಲಿ ಕಮ್ಯುನಿಸ್ಟ್ ಪಕ್ಷ, ಆಫ್‌ಘಾನಿಸ್ತಾನ ಜನತಾ ಪ್ರಜಾಪ್ರಭುತ್ವ ಪಕ್ಷ, ಪಾಕಿಸ್ತಾನ ಕಮ್ಯುನಿಸ್ಟ್ ಪಕ್ಷ, ನೇಪಾಳ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತದಲ್ಲಿ ಪ್ಯಾಲೆಸ್ಟೈನ್ ವಿದ್ಯಾರ್ಥಿಗಳ ಸಾರ್ವತ್ರಿಕ ಸಂಘಗಳಿಂದ. ರಾಜಕೀಯ ಸಂಘಟನಾತ್ಮಕ ವರದಿಯ ಮೇಲೆ ಚರ್ಚೆ ಮುಂದುವರಿಕೆ. ಡಿಸೆಂಬರ್ 27ರಿಂದ ಈ ಚರ್ಚೆಯಲ್ಲಿ ಭಾಗವಹಿಸಿದ ಸಂಗಾತಿಗಳು—ಶ್ಯಾಮಲ್ ಚಕ್ರವರ್ತಿ, ಚಿತ್ತಬ್ರತ ಮಜುಂದಾರ್, ಸೂರ್ಯ ಮಿಶ್ರಾ ಮತ್ತು ಮಂಜು ಗುಪ್ತಾ (ಪಶ್ಚಿಮ ಬಂಗಾಳ), ಜಿ. ಸುಧಾಕರನ್, ಶಿವದಾಸ ಮೆನನ್ ಮತ್ತು ಕೆ. ಮೋಹನನ್ (ಕೇರಳ), ಪಿ. ರಾಮಚಂದ್ರನ್ (ತಮಿಳುನಾಡು) ಎ. ಪಿ. ವಿಠಲ್ (ಆಂಧ್ರಪ್ರದೇಶ), ಜಿ. ಕೆ. ಪರ್ಮಾರ್ (ಗುಜರಾತ್), ಪ್ರೇಂ ಸಿಂಗ್ (ಯು. ಕೆ.), ಪ್ಯಾರಸಿಂಗ್ ಬಲ್ಸ (ಕೆನಡಾ), ವಿ. ಜೆ. ಕೆ. ನಾಯರ್ (ಕರ್ನಾಟಕ), ಮಲಬಾಡೆ (ಮಹಾರಾಷ್ಟ್ರ) ಜಗನ್ನಾಥ ಮಿಶ್ರಾ (ಒರಿಸ್ಸಾ) ರವಿ ಸಿನ್ಹಾ (ಉತ್ತರ ಪ್ರದೇಶ), ಉಧವ್ ಬರ್ಮನ್ (ಅಸ್ಸಾಂ) ಸೂರಜ್ ಬಾನ್ ಭಾರದ್ವಾಜ್ (ದಿಲ್ಲಿ), ಮಂಗತ್ ರಾಂ ಪಾಸ್ಲಾ (ಪಂಜಾಬ್), ಇಂದರ್‌ಜಿತ್‌ಸಿಂಗ್ (ಹರ್ಯಾಣಾ), ಶಿವಪಥ್ ಸಿಂಗ್ (ರಾಜಸ್ಥಾನ), ಮಾನಿಕ್ ಸರ್ಕಾರ (ತ್ರಿಪುರಾ), ಎನ್. ಕೆ. ಶುಕ್ಲಾ (ಬಿಹಾರ್), ಮೊಹರ್ ಸಿಂಗ್ (ಹಿಮಾಚಲ ಪ್ರದೇಶ), ಎಸ್. ಕುಮಾರ್ (ಮಧ್ಯಪ್ರದೇಶ), ಮಹ್ಮದ್ ಯೂಸುಫ್ (ಜಮ್ಮು ಕಾಶ್ಮೀರ), ಜುಗ್ಗಲ್ ಸಿಂಗ್ (ಮಣಿಪುರ) ವಿ. ಸಿ. ಬ್ಯಾನರ್ಜಿ (ಅಂಡಮಾನ್) ನೇಪಾಲ್ ಭಟ್ಟಾಚಾರ್ಯ (ಎಸ್. ಎಫ್. ಐ.), ಹನ್ನನ್ ಮೊಲ್ಲಾ (ಡಿ. ವೈ. ಎಫ್. ಐ.) ಶಾಂತಿಮಯ ಘೋಷ್ (ಅಖಿಲ ಭಾರತ ಕಿಸಾನ್ ಸಭಾ), ಪಿ. ಕೆ. ಕುಂಜಚ್ಚನ್ (ಅಖಿಲ-ಭಾರತ ಕೃಷಿ ಕಾರ್ಮಿಕರ ಸಂಘ) ವಿಮಲಾ ರಣದಿವೆ (ಸಿ. ಐ. ಟಿ. ಯು.) ಉಮಾನಾಥ್ (ಎ.ಐ.ಡಿ.ಡಬ್ಲು.ಎ.) ದಿಪೆನ್ ಘೋಷ್ (ಸಂಸದೀಯ ರಂಗ) ಕಿಟ್ಟಿ ಮೆನನ್ ಮತ್ತು ಕನ್ಯಾ ಬ್ಯಾನರ್ಜಿ (ಕೇಂದ್ರ ಸಮಿತಿ ಸಿಬ್ಬಂದಿ). ಚರ್ಚೆಯ ನಡುವೆ ಬಿ. ಟಿ. ಆರ್. ಕೂಡ ಮಧ್ಯ ಪ್ರವೇಶಿಸಿ ಮಾತನಾಡಿದರು.

ಕೇಂದ್ರ ಸಮಿತಿಯ ಸದ್ಯದ ಆರ್ಥಿಕ ಧೋರಣೆಯ ಬಗ್ಗೆ ಅಶೋಕ ಮಿತ್ರಾ ಅವರಿಂದ ಒಂದು ನಿರ್ಣಯದ ಮಂಡನೆ. ಕಾರ್ತಿಕ್‌ರ್ರಾ ಅನುಮೋದನೆ. ಜ್ಯೋತಿ ಬಸು ಕೂಡಾ ಈ ನಿರ್ಣಯದ ಮೇಲೆ ಮಾತನಾಡುತ್ತಾ ಸಿಧಿ ಹಂಚಿಕೆಯಲ್ಲಿ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೊಡುವುದರಲ್ಲಿ ಕೇಂದ್ರ ಸರಕಾರ ಸತತವಾಗಿ ಪಶ್ಚಿಮ ಬಂಗಾಳದ ವಿರುದ್ಧ ಪಕ್ಷಪಾತ ನಡೆಸುತ್ತಾ ಬಂದಿದೆಯೆಂದು ಹೇಳಿದರು. ಹೊಸ ಆರ್ಥಿಕ ಧೋರಣೆ ಜನತೆಯನ್ನು ದುಃಸ್ಥಿತಿಗೊಳಿಸಿ ಗುತ್ತೇದಾರಿಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಪೋಷಿಸುವಂತಿದೆ ಎಂದ ಅವರು ಏಳನೇ ಯೋಜನೆಯ ಕರಡನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆ ನಡೆಯುವ ಕೇವಲ ಮೂರು ವಾರಗಳ ಮೊದಲು ಕಳಿಸಲಾಯಿತು. ಅಂದರೆ ಅದರರ್ಥ ಅದರ ಆಳವಾದ ಅಧ್ಯಯನಕ್ಕೆ ಸಮಯವಿರಲಿಲ್ಲ

ಎಂದು ಹೇಳಿದರು. ಇದನ್ನು ಕನಿಷ್ಟ ಆರು ತಿಂಗಳ ಮೊದಲಾದರೂಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಬೇಕೆಂದು ಪಶ್ಚಿಮ ಬಂಗಾಳಸರ್ಕಾರ ಒತ್ತಾಯಿಸಿತ್ತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲೂ ದಸ್ತಾವೇಜು ಸಮಾಜವಾದ ತರುವುದಾಗಿ ಹೇಳಿಕೊಂಡಿರುವುದರಿಂದ ಅದಕ್ಕೆ ವಿರೋಧವೇ ಇರಬಾರದು ಎಂಬ ರೀತಿಯಲ್ಲಿ ವರ್ತಿಸಲಾಯಿತು. ಆದರೆ ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಈ ವಿಶ್ಲೇಷಣೆಯನ್ನು ಒಪ್ಪದೆ ಏಳನೇ ಯೋಜನೆಯ ದಸ್ತಾವೇಜು ಮತ್ತು ಹೊಸ ಆರ್ಥಿಕ ಧೋರಣೆಯ ಉದ್ದೇಶ ಮತ್ತಷ್ಟು ಬಂಡವಾಳಶಾಹೀ ಅಭಿವೃದ್ಧಿ ತರುವುದೇ ಆಗಿದೆ ಎಂದು ಪುನರುಚ್ಚರಿಸಿದವು. ಕೆಲವು ಕಾಂಗ್ರೆಸ್ (ಐ) ಮುಖ್ಯಮಂತ್ರಿಗಳಿಗೆ ಈ ಟೀಕೆಯನ್ನು ಸಹಿಸಿಕೊಳ್ಳುವುದೂ ಸಾಧ್ಯವಾಗಲಿಲ್ಲ. ಅವರು ಪ್ರಧಾನ ಮಂತ್ರಿಗಳನ್ನು ಭಟ್ಟಂಗಿಗಳ ರೀತಿಯಲ್ಲಿ ಹೊಗಳುತ್ತಾ ಪಶ್ಚಿಮ ಬಂಗಾಳದ ನಿಲುವಿಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು ಎಂದು ಜ್ಯೋತಿಬಸು ಹೇಳಿದರು.

ರಾಜಕೀಯ—ಸಂಘಟನಾತ್ಮಕ ವರದಿಯ ಮೇಲಿನ ಚರ್ಚೆಗೆ ಹಾಗೂ ಚರ್ಚೆಯ ಸಮಯದಲ್ಲಿ ಎತ್ತಿದ ಪ್ರಶ್ನೆಗಳಿಗೆ ಎಂ. ಬಸವಪುನ್ನಯ್ಯನವರಿಂದ ಉತ್ತರ.

ಅಪರಾಹ್ನ ಸಭೆ—ನಾಲ್ಕು ನಿರ್ಣಯಗಳ ಅಂಗೀಕಾರದೊಂದಿಗೆ ಆರಂಭ. ಪಂಜಾಬ್ ಬಗ್ಗೆ ಸುರ್ಜಿತ್ ಮಂಡಿಸಿ ಪ್ರಕಾಶ ಕರಾಟ್ ಅನುಮೋದಿಸಿದ ನಿರ್ಣಯ, ಕಾಂತಿ ಬಿಸ್ವಾಸ್ ಮಂಡಿಸಿದುದನ್ನು ರಾಮಚಂದ್ರಪಿಳ್ಳೆ ಅನುಮೋದಿಸಿದ ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಕುರಿತಾದ ನಿರ್ಣಯ, ಮಹಿಳೆಯರ ಸಮಾನ ಹಕ್ಕು ಕುರಿತು ಗೋವಿಂದಪಿಳ್ಳೆ ಮಂಡಿಸಿ ಅಹಲ್ಯಾ ರಂಗ್ನೇಕರ್ ಅನುಮೋದಿಸಿದ ನಿರ್ಣಯ ಮತ್ತು ಮನೋರಂಜನ್ ರಾಯ್ ಮಂಡಿಸಿದ ಮೇ ದಿನದ ಶತಮಾನೋತ್ಸವ ಕುರಿತಾದ ನಿರ್ಣಯ. ವಿ. ಪಿ. ಚಿಂತನ್ ಇದನ್ನು ಅನುಮೋದಿಸಿದರು.

ಈಗಾಗಲೇ ತಿಳಿಸಿದ್ದ ಪಕ್ಷದ ಸಂವಿಧಾನದ ತಿದ್ದುಪಡಿಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು.

ಕ್ರೆಡೆಂಶಿಯಲ್ ಕಮಿಟಿಯ ವರದಿ— ಚಿತ್ತಬ್ರತ ಮಜುಂದಾರ್ ಅವರಿಂದ. ಹೊಸ ಕೇಂದ್ರ ಸಮಿತಿಯ ಚುನಾವಣೆ. 70 ಸ್ಥಾನಗಳಲ್ಲಿ 66ನ್ನು ಭರ್ತಿಮಾಡಿ ನಾಲ್ಕನ್ನು ಮುಂದೆ ಭರ್ತಿಮಾಡಿಕೊಳ್ಳಲು ಬಿಡಲಾಯಿತು. ಹೊಸ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಮತ್ತು ಪಾಲಿಟ್‌ಬ್ಯೂರೋವನ್ನು ಚುನಾಯಿಸಲು ಸಭೆ ಸೇರಲು ಅನುಕೂಲವಾಗುವಂತೆ ಸಭೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

ಅಧಿವೇಶನ ಮತ್ತೆ ಆರಂಭವಾದಾಗ ಪ್ರಧಾನ ಕಾರ್ಯದರ್ಶಿಗಳಾಗಿ ಇ.ಎಂ.ಎಸ್. ಆಯ್ಕೆ ಹಾಗೂ ಪಾಲಿಟ್‌ಬ್ಯೂರೋ ಸದಸ್ಯರ ಹೆಸರುಗಳನ್ನು ಸುರ್ಜಿತ್ ತಿಳಿಯಪಡಿಸಿದರು.

ಅಧಿವೇಶನದ ಕೊನೆಯಲ್ಲಿ ಇ. ಎಂ. ಎಸ್. ರಿಂದ ಹನ್ನೆರಡನೇ ಅಧಿವೇಶನವನ್ನು ನಡೆಸಲು ಒಪ್ಪಿದ ಪಕ್ಷದ ಪಶ್ಚಿಮಬಂಗಾಳ ಘಟಕ ಮತ್ತು ಕ್ರೀಡಾಂಗಣದಲ್ಲಿ ಹಗಲು ರಾತ್ರಿ ದುಡಿದ ಸಾವಿರಕ್ಕೂ ಮಿಕ್ಕಿದ ಸ್ವಯಂ ಸೇವಕರಿಗೆ ಅಭಾರ ಮನ್ನಣೆ.

**ಡಿಸೆಂಬರ್ 30** : ಬ್ರಿಗೇಡ್ ಪರೇಡ್ ಮೈದಾನದಲ್ಲಿ ಲಕ್ಷಾಂತರ ಜನ ಸೇರಿದ್ದ ಬಹಿರಂಗ ಸಭೆ. ●

# ಇಟಲಿ ಕಮ್ಯುನಿಸ್ಟ್ ಪಕ್ಷದ ಸಂದೇಶ

ನಿಮ್ಮ ಪಕ್ಷದ ಅಧಿವೇಶನದ ಸಂದರ್ಭದಲ್ಲಿ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷ ಸ್ನೇಹಪೂರ್ಣ ಶುಭಾಶಯಗಳನ್ನು ಕಳುಹಿಸುತ್ತಿದೆ ಮತ್ತು ಈ ಅಧಿವೇಶನ ಸಿ.ಪಿ.ಐ. (ಎಂ)ನ ಭವಿಷ್ಯದ ಚಟುವಟಿಕೆಗಳ ಮೇಲೆ ಹಾಗೂ ನಿಮ್ಮ ಮಹಾನ್‌ದೇಶ ಮತ್ತು ಜನತೆಯ ಪ್ರಗತಿಗೆ ಸಕಾರಾತ್ಮಕ ಫಲನೀಡುವದೆಂಬ ಭರವಸೆ ವ್ಯಕ್ತಪಡಿಸುತ್ತದೆ. ಮತ್ತು ನಮ್ಮೆರಡು ಪಕ್ಷಗಳ ಸಮಾಚಾರ ವಿನಿಮಯ ಮುಂದುವರಿಯುತ್ತದೆ ಎಂದು ನಿರೀಕ್ಷಿಸುತ್ತೇವೆ. ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಮುಂಬರುವ 17ನೇ ಅಧಿವೇಶನಕ್ಕೆ ನಮ್ಮ ಆಹ್ವಾನವನ್ನು ಈ ಮೂಲಕ ನೀಡುತ್ತಿದ್ದೇವೆ.

ನಿಮಗೆ ಯಶಸ್ಸು ಕೋರುತ್ತಾ, ಹಾರ್ದಿಕ ಶುಭಾಶಯಗಳೊಂದಿಗೆ

—**ಕೇಂದ್ರ ಸಮಿತಿ**

## ಸ್ವಾಗತ ಭಾಷಣ : ಕಾಂ. ಜ್ಯೋತಿಬಸು

# ಅಂತಿಮ ಗುರಿಯತ್ತ ಮುಂದೆ ಸಾಗುವಲ್ಲಿ ಇನ್ನಷ್ಟು ಭರವಸೆ

ಪ್ರಿಯ ಸಂಗಾತಿಗಳೇ,

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೇ ಅಧಿವೇಶನಕ್ಕಾಗಿ ಇಲ್ಲಿ ಕಲ್ಕತ್ತೆಯಲ್ಲಿ ನೆರೆದಿರುವ ಎಲ್ಲಾ ಪ್ರತಿನಿಧಿಗಳಿಗೆ ಮತ್ತು ಇತರರಿಗೆ ನಾನು ಸಿ.ಪಿ.ಐ.(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಪರವಾಗಿ ಹಾರ್ದಿಕ ಸುಸ್ವಾಗತ ಕೋರುತ್ತೇನೆ. ಕಲ್ಕತ್ತೆ ಕಷ್ಟಪಡುತ್ತಿರುವ ಆದರೂ ಹೋರಾಡುತ್ತಿರುವ, ಸ್ಪಂದಿಸುವ ಮತ್ತು ಯೋಚಿಸುವ, ಸಾಮ್ರಾಜ್ಯಶಾಹೀ ವಿರೋಧಿ ಹೋರಾಟದ ಮತ್ತು ಸಾಮಾಜಿಕ ಸುಧಾರಣೆಗಳು ಹಾಗೂ ಸಾಂಸ್ಕೃತಿಕ ಪುನರುಜ್ಜೀವನದ ವಲಯಗಳಲ್ಲಿ ಶ್ರೀಮಂತ ಪರಂಪರೆಯಿರುವ ನಗರ. ಈ ರಾಜ್ಯ ದೇಶದ ವಿಭಜನೆಯಿಂದ ಮತ್ತು ಗಡಿಯಾಚೆಯಿಂದ 70 ಲಕ್ಷ ನಿರಾಶ್ರಿತರ ಜನಪ್ರವಾಹ ಬಂದುದರಿಂದಾಗಿ ಅಗಾಧ ತೊಂದರೆಗಳನ್ನು, ಸಂಕಷ್ಟಗಳನ್ನು ಎದುರಿಸಿದೆ. ಕೆಲವು ನೆರೆಯ ರಾಜ್ಯಗಳಲ್ಲಿ ಉದ್ಯೋಗಾವಕಾಶಗಳಿಲ್ಲದ್ದರಿಂದ ಈಗಲೂ ಜನ ಉದ್ಯೋಗ ಅರಸಿಕೊಂಡು ಈ ರಾಜ್ಯಕ್ಕೆ ಬರುತ್ತಾರೆ. ಆದರೆ ಇಲ್ಲಿದ್ದ ಹಾಗೂ ಕೇಂದ್ರದ ಕಾಂಗ್ರೆಸ್ ಆಳ್ವಿಕೆಗಳು ರಾಜ್ಯ ಎದುಸುತ್ತಾ ಬಂದಿರುವ ವಿಶಿಷ್ಟ ಸಮಸ್ಯೆಗಳನ್ನು ಗಮನಕ್ಕೆ ತಗೊಳ್ಳಲೇ ಇಲ್ಲ. ಕೇಂದ್ರ ಹಾಗೂ ರಾಜ್ಯದಲ್ಲಿದ್ದ ಕಾಂಗ್ರೆಸ್‌ ಸರಕಾರಗಳು ಕಮ್ಯುನಿಸ್ಟರನ್ನು ಹಾಗೂ ಇತರ ಎಡಶಕ್ತಿಗಳನ್ನು ದಮನ ಮಾಡುವುದರಲ್ಲೇ ಹೆಚ್ಚು ಆಸಕ್ತರಾಗಿದ್ದರೇ ಹೊರತು ಹದಗೆಡುತ್ತಿದ್ದ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುವುದರಲ್ಲಲ್ಲ.

ಆದರೆ ಕಮ್ಯುನಿಸ್ಟ್ ಪಕ್ಷ ಜನರ ಪರವಾಗಿ ನಿಂತಿತು, ಕಾಂಗ್ರೆಸ್‌ ಆಳರಸರು ಹಾಗೂ ಪಟ್ಟಭದ್ರಹಿತಾಸಕ್ತಿಗಳ ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ಹಾಗೂ ಜನತೆಯ ಜೀವನ ನಿರ್ವಹಣೆಗಾಗಿ ಸತತ ಹಾಗೂ ನಿರಂತರ ಹೋರಾಟಕ್ಕಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟುಗೂಡಿಸುತ್ತಾ ಬಂತು. ವಿಶೇಷವಾಗಿ ನಮ್ಮ ಪಕ್ಷ ಸಿ.ಪಿ.ಐ.(ಎಂ)ನ ಸ್ಥಾಪನೆಯಾದ ನಂತರ ಬಲ ಹಾಗೂ ಎಡ ಪರಿಷ್ಕರಣವಾದದ ವಿರುದ್ಧ ಒಂದು ನಿರಂತರ ಸೈದ್ಧಾಂತಿಕ ಸಮರ ನಡೆಸುತ್ತಾ, ಅದೇ ಸಮಯದಲ್ಲಿ ಕಾಂಗ್ರೇಸ್‌ನ ಸರ್ವಾಧಿಕಾರೀ ಆಳ್ವಿಕೆಯ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ದೃಢಗೊಳಿಸುವ ಧೋರಣೆ ಅನುಸರಿಸುತ್ತಾ ಬಂದಿದ್ದೇವೆ. ಜನತೆ ನಮ್ಮನ್ನು ವಿರೋಧ ಪಕ್ಷವಾಗಿ ನೋಡಿದ್ದಾರೆ ಮತ್ತು ಸರಕಾರದಲ್ಲೂ ನೋಡಿದ್ದಾರೆ. ನಮ್ಮ ಉದ್ದೇಶದ ಪ್ರಾಮಾಣಿಕತೆ ಅವರಿಗೆ ತಿಳಿದಿದೆ. ಕಾರ್ಮಿಕರ, ರೈತರ, ಮಧ್ಯಮ ವರ್ಗಗಳ ದೀರ್ಘ ಹೋರಾಟಗಳು ನಡೆದಿವೆ. ಬಹಳ ಜನ ತ್ಯಾಗಮಾಡಿದ್ದಾರೆ, ಕಷ್ಟಪಟ್ಟಿದ್ದಾರೆ. ಅವರಲ್ಲಿ ಹಲವಾರು ಪ್ರಾಣತೆತ್ತಿದ್ದಾರೆ. ಈ ಹಿನ್ನೆಲೆಯಲ್ಲೇ ಚುನಾವಣಾ ಹೋರಾಟಗಳು ನಡೆದಿವೆ. ಅವು ಸಂಯುಕ್ತರಂಗ ಮತ್ತು ಎಡರಂಗ ಸರಕಾರಗಳ ಸ್ಥಾಪನೆಗೆ ಮತ್ತು ನಮ್ಮ ಪಕ್ಷ ಬಲಗೊಳ್ಳಲು ದಾರಿಮಾಡಿಕೊಟ್ಟಿವೆ. ಮತ್ತು ಈ ಬಾರಿ ನಮ್ಮ ಎಡರಂಗದ ಮಿತ್ರರೊಂದಿಗೆ ಕಳೆದ ಎಂಟೂವರೆ ವರ್ಷಗಳಿಂದ ಅಧಿಕಾರದಲ್ಲಿ ಮುಂದುವರೆಯುತ್ತಿದ್ದೇವೆ. ನಮ್ಮ ಪಕ್ಷದ ಪಶ್ಚಿಮ ಬಂಗಾಲ ರಾಜ್ಯ ಸಮಿತಿ, ಕೇಂದ್ರ ಸಮಿತಿ ಹಾಗೂ ಪಾಲಿಟ್‌ಬ್ಯೂರೋದ ನಾಯಕತ್ವದಲ್ಲಿ ನಾವು ಕಾಂಗ್ರೆಸ್‌ (ಐ) ಹಾಗೂ ಇತರ ಪ್ರತಿಗಾಮೀ ಶಕ್ತಿಗಳ ಆಕ್ರಮಣವನ್ನು ಎದುರಿಸಿ ನಿಂತು ನಮ್ಮ ಕರ್ತವ್ಯ ನಡೆಸಿಕೊಡುತ್ತಿದ್ದೇವೆ. ನಮ್ಮ ಸರಕಾರ ಕೇವಲ ನಮ್ಮ ರಾಜ್ಯದ ಸರಕಾರ ಎಂದು ನಾವು ಭಾವಿಸುವುದಿಲ್ಲ. ಅದು ಭಾರತದಾದ್ಯಂತ

ಇರುವ ಶ್ರಮಜೀವಿ ಜನತೆಯ ಒಂದು ಕೋಟಿ. ಕಾಂಗ್ರೆಸ್‌ (ಐ) ನ ವಿವಿಧ ಪ್ರಚಾರ ಯಂತ್ರಗಳು ಹಾಗೂ ವಿವಿಧ ಭಾಷೆಗಳ ದೊಡ್ಡ ಪ್ರಚಾರ ಹೊಂದಿರುವ ಕೆಲವು ಪತ್ರಿಕೆಗಳು ಹರಡಿಸುವ ಸುಳ್ಳುಗಳ, ದೂಷಣೆಗಳ ದುರ್ಗಂಧವನ್ನು ಹೋಗಲಾಡಿಸಲು ನಾವು ಭಾರತದ ಶ್ರಮಜೀವಿ ಜನಗಳ ಬೆಂಬಲ ಹಾಗೂ ಸಹಾನುಭೂತಿಯಿಂದ ಬಲಪಡೆಯುತ್ತೇವೆ, ವಿಶೇಷವಾಗಿ ನಮ್ಮ ಪಕ್ಷ ಹಾಗೂ ಅದರ ಬೆಂಬಲಿಗರಿಂದ ಬಲಪಡೆಯುತ್ತೇವೆ. ತಾನು ರಾಜಕೀಯ ದುರುದ್ದೇಶದಿಂದ ಪಕ್ಷಪಾತ ಪೂರ್ಣ ನಿಲುವು ತಳೆದರೂ ಕೂಡಾ ಇಷ್ಟು ದೀರ್ಘ ಕಾಲ ನಮ್ಮ ಅಸ್ತಿತ್ವವಿರುವುದರಿಂದ ಕೇಂದ್ರಕ್ಕೆ ಆತಂಕವುಂಟಾಗುತ್ತಿದೆ. ಆದ್ದರಿಂದ ನಮ್ಮ ಸರಕಾರವನ್ನು ಮತ್ತು ಪಕ್ಷವನ್ನು ಹೀಗಳೆಯಲು ಮತ್ತು ಹಲವು ವಿಧಗಳಲ್ಲಿ ಬೆದರಿಸಲು ನಿರಂತರ ಯತ್ನ ನಡೆಯುತ್ತಿವೆ. ಇಂದು ಪಶ್ಚಿಮ ಬಂಗಾಳದ ಎಡರಂಗ ಸರಕಾರ ಹಾಗೂ ತ್ರಿಪುರಾದ ಎಡರಂಗ ಸರಕಾರ ದೇಶಾದ್ಯಂತ ಶ್ರಮಜೀವಿ ಜನತೆಯನ್ನು ಆಕರ್ಷಿಸಿವೆ. ಅವರು ನಮ್ಮತ್ತ ನಿರೀಕ್ಷೆಯಿಂದ ನೋಡುತ್ತಿದ್ದಾರೆ. ನಮ್ಮ ಪಕ್ಷ ಅವರ ಈ ನಂಬಿಕೆಗೆ ಅರ್ಹವಾಗಿ ನಡೆದುಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಇನ್ನೊಂದೆಡೆ ಒಂದು ಬಂಡವಾಳಶಾಹಿ ಭೂಮಾಲಿಕ ವ್ಯವಸ್ಥೆಯಲ್ಲಿ, ಕೇಂದ್ರದಲ್ಲಿ ಹಿರಿಬೂರ್ಜ್ವಾ ವರ್ಗದ ನೇತೃತ್ವದ ಬೂರ್ಜ್ವಾ ಭೂಮಾಲಿಕ ಸರಕಾರವಿರುವಾಗ ಒಂದು ರಾಜ್ಯದಲ್ಲಿ ಎಡರಂಗ ಸರಕಾರ ನಡೆಸುವಲ್ಲಿನ ಕಷ್ಟಗಳ ಪೂರ್ಣ ಅರಿವು ನಮ್ಮ ಪಕ್ಷಕ್ಕಿದೆ. ಆದರೂ ಸೀಮಿತ ಅಧಿಕಾರಗಳು ಹಾಗೂ ಹಲವಾರು ಮಿತಿಗಳ ನಡುವೆಯೂ ಜನತೆಗೆ ಇತ್ತ ವಚನಗಳನ್ನು ಪೂರ್ಣಗೊಳಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ನಮ್ಮ ನ್ಯೂನತೆ ಹಾಗೂ ದೌರ್ಬಲ್ಯಗಳ ಅರಿವು ಖಂಡಿತವಾಗಿಯೂ ನಮಗಿದೆ. ಅದನ್ನು ನಾವು ಜನತೆಯಿಂದ ಅಡಗಿಸಿಕೊಳ್ಳಲೇನೂ ಪ್ರಯತ್ನಿಸುತ್ತಿಲ್ಲ. ಅವರ ನೆರವಿನಿಂದ ಅವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಾವು ಆಳುವ ಕಾಂಗ್ರೆಸ್ (ಐ) ಪಕ್ಷದ ರಾಕ್ಷಸೀ ಪಿತೂರಿಗಳು, ವಿಚ್ಛಿದ್ರಕಾರಿ ಹಾಗೂ ಪ್ರತಿಗಾಮಿ ಶಕ್ತಿಗಳು, ಅವುಗಳ ಹಿಂದೆ ಇರುವ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಸದಾ ಜಾಗರೂಕರಾಗಿದ್ದೇವೆ. ನಮ್ಮ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಾಗ ನಾವು ನಿರಂತರವಾಗಿ ಜನಗಳ ಹಾಗೂ ಅವರ ಸಾಮೂಹಿಕ ಸಂಘಟನೆಗಳ ಬೆಂಬಲ ಪಡೆದುಕೊಳ್ಳುತ್ತೇವೆಯೇ ವಿನಃ ಕೇವಲ ಅಧಿಕಾರಶಾಹಿಯ ಮೇಲೆ ಅವಲಂಬಿಸಿಕೊಂಡಿರುವುದಿಲ್ಲ. ಕಾರ್ಮಿಕರು, ಕೃಷಿ ಕೂಲಿಗಾರರು, ಮಧ್ಯಮವರ್ಗಗಳು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನಾಂಗಗಳವರಿಗೆ ನಾವು ಅವರ ಅತ್ಯಂತ ನಂಬಿಗಸ್ತ ಗೆಳೆಯರು ಹಾಗೂ ನಮ್ಮ ಸರಕಾರ ಅವರ ನ್ಯಾಯೋಚಿತ ಬೇಡಿಕೆಗಳಿಗಾಗಿ ಹೋರಾಡುವ ಒಂದು ಪರಿಣಾಮಕಾರೀ ಸಾಧನ ಎಂಬುದು ತಿಳಿದಿದೆ. ಕೇಂದ್ರ ಸರಕಾರದ ಹಾಗೂ ಪ್ರತಿಗಾಮಿ ಶಕ್ತಿಗಳ ಕುಟಿಲ ತಂತ್ರಗಳ ವಿರುದ್ಧ ನಿಂತೂ ಕೂಡಾ ಈ ಎಲ್ಲ ಜನ ಸಮೂಹಗಳ ಹಿತಾಸಕ್ತಿಗಳಿಗಾಗಿ ರಾಜ್ಯದ ಆರ್ಥಿಕತೆಯನ್ನು ಸುಧಾರಿಸಲು ನಮ್ಮ ಅಧಿಕಾರಗಳು ಸೀಮಿತವಾಗಿದ್ದಾಗ್ಯೂ ಪ್ರಯತ್ನಿಸುತ್ತಿದ್ದೇವೆ ಎಂಬುದು ಅವರಿಗೆ ತಿಳಿದಿದೆ. ಜನಗಳಿಗೆ ಪರಿಹಾರ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳು ಸಿಗುವಂತೆ ಮಾಡುವಾಗಲೇ ನಾವು ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸಲು ಯತ್ನಿಸುತ್ತಿದ್ದೇವೆ. ಈ ಮೂಲಕ ಅವರಿಗೆ ಗೆಳೆಯರು ಯಾರು, ವೈರಿಗಳು ಯಾರು ಎಂದು ವ್ಯತ್ಯಾಸ ಕಾಣಲು ಸಾಧ್ಯವಾಗಿ, ಅಖಿಲ ಭಾರತ ರಂಗದಲ್ಲಿ ಒಂದು ಮೂಲಭೂತ ಹಾಗೂ ರಚನಾತ್ಮಕ ಬದಲಾವಣೆ ತರುವ ಉದ್ದೇಶ ಸಾಧನೆಯ ಕೆಲಸ ಎಷ್ಟು ಕ್ಲಿಷ್ಟವಾಗಿದೆ, ಕಷ್ಟಕರವಾಗಿದೆ ಎಂದು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ನಮ್ಮ ಹೋರಾಟವನ್ನು ಸಂಘಟಿಸುವಾಗ ಮತ್ತು ನಮ್ಮ ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ ನಾವು ಜನತೆಯ ಪ್ರಜ್ಞೆಯ ಮಟ್ಟವನ್ನು ಸರಿಯಾಗಿ ಅಂದಾಜು ಮಾಡಲು ಯತ್ನಿಸುತ್ತೇವೆ. ಅದನ್ನು ಕುಗ್ಗಿಸಿ ನೋಡುವುದಿಲ್ಲ ಅಥವಾ ಹಿಗ್ಗಿಸಿ ಕೂಡಾ ನೋಡುವುದಿಲ್ಲ. ನಾವು ಅವರಿಂದ ಕಲಿತುಕೊಳ್ಳುತ್ತಾ ಅವರಿಗೆ ಸರಿಯಾದ ರೀತಿಯ ನಾಯಕತ್ವ ನೀಡಲು ಪ್ರಯತ್ನಿಸುತ್ತೇವೆ. ನಾವು ಸಾಧಿಸಬೇಕಾದ ಗುರಿ ಎಷ್ಟು ಕಷ್ಟಕರವಾಗಿದೆ ಎಂಬುದನ್ನು ಕಾಂಗ್ರೆಸ್ (ಐ) ಪಕ್ಷ ಹಿಂದೆ ದುರಾಡಳಿತ ನಡೆಸಿದ್ದರೂ ಕೂಡಾ ಅದು ನೀತಿಗೆಟ್ಟ, ಕಚ್ಚಾಡುವ ಗುಂಪುಗಳಿಂದ ಕೂಡಿದ್ದರೂ, ಸಮಾಜವಿರೋಧಿ ವ್ಯಕ್ತಿಗಳಿಗೆ ಅದು ಆಶ್ರಯ ಕೊಟ್ಟರೂ ಕೂಡಾ ಅದಕ್ಕೆ ಸಮಾಜದ ಮೇಲಿನ ಸ್ತರಗಳ ಕೆಲವು ವಿಭಾಗಗಳಿಂದ ಬೆಂಬಲ ಸಿಗುತ್ತಿದೆ ಮಾತ್ರವಲ್ಲ, ಜನ ಸಾಮಾನ್ಯರನ್ನು ದಾರಿ ತಪ್ಪಿಸಲು ಕೂಡಾ ಅದಕ್ಕೆ ಸಾಧ್ಯವಾಗುತ್ತಿದೆ ಎಂಬ ವಾಸ್ತವ ಸಂಗತಿಯನ್ನು ನೋಡಿದಾಗ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಇದರಲ್ಲಿ ಅದು ವ್ಯಾಪಕ ಪ್ರಸಾರ ಹೊಂದಿರುವ ಸತತವಾಗಿ ನಮ್ಮ ವಿರುದ್ಧ ವಿಕೃತ ವರದಿ, ಸುಳ್ಳು ಹಾಗೂ ತಪ್ಪು ದೋಷಾರೋಪಣೆಗಳನ್ನು

ನಡೆಸುತ್ತಿರುವ ಹೆಚ್ಚಿನ ಪತ್ರಿಕೆಗಳ ನೆರವು ಪಡೆದುಕೊಳ್ಳುತ್ತದೆ.

ಹನ್ನೆರಡನೇ ಅಧಿವೇಶನ ನಡೆಯುವ ಸ್ಥಳ ಯುವ ಭಾರತಿ ಕ್ರೀಡಾಂಗಣ, ಬಿಧಾನ ನಗರ, ಏಶ್ಯಾದ ಅತ್ಯಂತ ದೊಡ್ಡ ಕ್ರೀಡಾಂಗಣಗಳಲ್ಲಿ ಒಂದು. ಜನತೆಯ ವಿವಿಧ ವಿಭಾಗಗಳ ಅತ್ಯಂತ ವ್ಯಾಪಕ ಬೆಂಬಲ, ಸಹಕಾರ ಹಾಗೂ ಸದ್ಭಾವನೆಗಳಿದ್ದುದರಿಂದ ಮಾತ್ರವೇ ನಮಗೆ ಇಂತಹ ಒಂದು ವಿಶಿಷ್ಟ ಕ್ರೀಡಾಂಗಣವನ್ನು ಮತ್ತು ಒಂದು ಸಾವಿರ ಹಾಸಿಗೆಗಳಿರುವ ಯುವ ಸಂಕೀರ್ಣವನ್ನು ಕಟ್ಟಲು ಸಾಧ್ಯವಾಗಿರುವುದು. ಈ ಅಧಿವೇಶನದ ಯಶಸ್ಸಿಗೆ ಇತರ ಹಲವು ಅಂಶಗಳ ಜತೆಗೆ ಜನತೆ ಕೂಡಾ ನಮ್ಮ ಪಕ್ಷದ ಅಧಿವೇಶನದ ನಿಧಿಗೆ ಅಗಾಧ ಪ್ರಮಾಣದಲ್ಲಿ ಕೊಡುಗೆಗಳನ್ನಿತ್ತಿದ್ದಾರೆ.

ನಮ್ಮ ಪಕ್ಷದ ಹನ್ನೆರಡನೇ ಅಧಿವೇಶನ ರಾಜ್ಯಾದ್ಯಂತ ಜನಗಳ ನಡುವೆ ಅಭೂತಪೂರ್ವ ಉತ್ಸಾಹವನ್ನು ಜಾಗೃತಗೊಳಿಸಿದೆ. ಎಲ್ಲಾ ಸ್ತರಗಳ ವ್ಯಾಪಕ ಜನಸಮೂಹಗಳು ನಮ್ಮ ಪಕ್ಷದ ಬಗ್ಗೆ ಅಪ್ಪಟ ಪ್ರೀತಿ ಹಾಗೂ ಭರವಸೆ ತೋರಿದ್ದಾರೆ.

ಸಂಗಾತಿಗಳೇ, ಇಲ್ಲಿ ನಮ್ಮ ಹಲವಾರು ಪಕ್ಷದ ಸಂಗಾತಿಗಳು ಕೈಲಾದ ಎಲ್ಲಾ ಪ್ರಯತ್ನ ಮಾಡಿದ್ದಾಗ್ಯೂ ಈ ಅಧಿವೇಶನವನ್ನು ಸಂಘಟಿಸುವಲ್ಲಿ ಕೆಲವು ನ್ಯೂನ್ಯತೆಗಳಿರುತ್ತವೆ ಎಂಬುದರ ಅರಿವು ನಮಗಿದೆ. ಅದನ್ನು ಸಹಾನುಭೂತಿಯಿಂದ ಸಹಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಪಕ್ಷದ ಹನ್ನೆರಡನೇ ಅಧಿವೇಶನ ನಮ್ಮ ಅಂತಿಮ ಗುರಿಯಾದ ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಸಂಘಟಿಸಿ, ಒಂದುಗೂಡಿಸಲು ನಮ್ಮಲ್ಲಿ ತಲುಪುವ ಮುನ್ನಡೆಯ ಮಾರ್ಗದಲ್ಲಿ ಮತ್ತಷ್ಟು ಭರವಸೆ ತುಂಬುತ್ತದೆ ನಾವು ನಡೆಸಬೇಕಾಗಿರುವ ಹೋರಾಟಗಳಿಗೆ ಜನಸಮೂಹಗಳನ್ನು ಸಿದ್ಧಗೊಳಿಸಿ, ಎನ್ನುವುದರಲ್ಲಿ ಏನೂ ಸಂದೇಹವಿಲ್ಲ.

ಶ್ರದ್ಧಾಂಜಲಿ :

## ಕಾಮ್ರೇಡ್ ದೇಸ್‌ರಾಜ್ ಚಡ್ಡಾ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಪಕ್ಷದ ಕೇಂದ್ರ ಸಮಿತಿಯ ಒಬ್ಬ ಸದಸ್ಯರಾಗಿದ್ದ ಕಾಮ್ರೇಡ್ ದೇಸ್‌ರಾಜ್ ಚಡ್ಡಾರ ಸಾವಿಗೆ ಸಂತಾಪ ವ್ಯಕ್ತಪಡಿಸುತ್ತದೆ.

1938 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು 1951 ರಲ್ಲಿ ಪಂಜಾಬ್ ಪ್ರಾಂತ ಸಮಿತಿಯ ಕಾರ್ಯದರ್ಶಿ ಮಂಡಳಿಗೆ ಚುನಾಯಿತರಾದರು.

1940 ರ ಅಂತ್ಯದಲ್ಲಿ ಅವರು ಬಂಧಿಸಲ್ಪಟ್ಟು ಕುಪ್ರಸಿದ್ಧ ಲಾಹೋರ್ ಕೋಟೆಯಲ್ಲಿ ಬ್ರಿಟಿಶರು ಅವರನ್ನು ಚಿತ್ರಹಿಂಸೆಗೊಳಪಡಿಸಿದರು.

ದೇಸ್‌ರಾಜ್ ಕಮ್ಯುನಿಸ್ಟ್ ಆಂದೋಲನದಲ್ಲಿ ಪರಿಷ್ಕರಣವಾದದ ವಿರುದ್ಧ ದೃಢ ನಿಲುವು ತಳೆದರು. 1964 ರಿಂದ ಅಂದರೆ ಆರಂಭದಿಂದಲೇ ಪಕ್ಷದ ಕೇಂದ್ರವನ್ನು ನೆಲೆಮೂಡಿಸುವಲ್ಲಿ ಅವರು ಒಂದು ನಿರ್ಣಾಯಕ ಪಾತ್ರ ವಹಿಸಿದರು. ಪಕ್ಷದ ಕೇಂದ್ರ ಕಚೇರಿಯನ್ನು ನಡೆಸುವಲ್ಲಿ ಅವರ ಸಮರ್ಪಣ ಭಾವ ಎಲ್ಲರಿಗೂ ಒಂದು ಅನುಕರಣೀಯ ಉದಾಹರಣೆಯಾಗಲಿದೆ.

ಕಾಮ್ರೇಡ್ ದೇಸ್‌ರಾಜ್ ಸಿ.ಪಿ.ಐ.(ಎಂ)ನ ಎಂಟನೇ ಅಧಿವೇಶನದಲ್ಲಿ ಕೇಂದ್ರ ಸಮಿತಿಗೆ ಚುನಾಯಿತರಾದರು.

ಅಧಿವೇಶನ ಕಾಮ್ರೇಡ್ ದೇಸ್‌ರಾಜ್‌ರವರ ನೆನಪಿಗೆ ತನ್ನ ಕ್ರಾಂತಿಕಾರಿ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಇ. ಎಮ್. ಎಸ್. ನಂಬೂದಿರಿಪಾಡರ ಉದ್ಘಾಟನಾ ಭಾಷಣ :

# ಸರ್ವಾಧಿಕಾರಿ ಮತ್ತು ಛಿದ್ರಕಾರಿ ಶಕ್ತಿಗಳ ವಿರುದ್ಧ ಐಕ್ಯತೆಯನ್ನು ಬಲಗೊಳಿಸಿರಿ

ನಮ್ಮ ಪಕ್ಷದ ಹನ್ನೆರಡನೇ ಮಹಾಧಿವೇಶನದಲ್ಲಿ ಪಾಲುಗೊಳ್ಳಲು ಇಲ್ಲಿಗೆ ಬಂದಿರುವ ಪ್ರತಿನಿಧಿಗಳ ಅನುಕೂಲತೆಗಾಗಿ ಅಚ್ಚುಕಟ್ಟಾದ ಏರ್ಪಾಟುಗಳನ್ನು ಮಾಡಿರುವ ಪ.ಬಂಗಾಳದ ನಮ್ಮ ಸಂಗಾತಿಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಇಲ್ಲಿ ಸೇರಿರುವ ಎಲ್ಲ ಪ್ರತಿನಿಧಿಗಳೂ ನನ್ನ ಮಾತಿಗೆ ದನಿಗೂಡಿಸುತ್ತಾರೆಂಬ ಭರವಸೆ ನನಗಿದೆ.

ಕಲ್ಕತ್ತಾದಲ್ಲಿ ಈ ಹಿಂದೆ ನಮ್ಮ ಪಕ್ಷದ ಏಳನೇ ಮಹಾಧಿವೇಶನಕ್ಕಾಗಿ ನಾವಿಲ್ಲಿ ಸೇರಿದ್ದ ದಿನಗಳು ನನಗೀಗ ನೆನಪಾಗುತ್ತಿವೆ. ಪರಿಷ್ಕರಣವಾದಿಗಳ ಜೊತೆಗೆ ನಮ್ಮ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವನ್ನು ನಾವು ಸ್ಥಾಪಿಸಿದ್ದು ಆ ಏಳನೇ ಅಧಿವೇಶನದಲ್ಲೇ. ಈ 12 ನೇ ಮಹಾಧಿವೇಶನದಲ್ಲಿ ಕಳೆದ 21 ವರ್ಷಗಳ ನಮ್ಮ ಕಾರ್ಯಚಟುವಟಿಕೆಗಳನ್ನು ವಿಮರ್ಶಿಸುವ ಇರಾದೆ ನಮಗಿಲ್ಲ. ಕಳೆದ ನಾಲ್ಕು ವರ್ಷಗಳ ಚಟುವಟಿಕೆಗಳನ್ನು ವಿಮರ್ಶೆ ಮಾಡುವುದಷ್ಟೇ ಈ ಅಧಿವೇಶನದ ಉದ್ದೇಶ.

## ಜನವಿರೋಧಿ ಧೋರಣೆಗಳು

ಆದರೂ, ಇಪ್ಪತ್ತೊಂದು ವರ್ಷಗಳ ಹಿಂದೆ ನಾವು ಅಂಗೀಕರಿಸಿದ್ದ ಪಕ್ಷದ 'ಕಾರ್ಯಕ್ರಮ'ದ ಕುರಿತು ನಾನಿಲ್ಲಿ ಹೇಳಲೇಬೇಕಾಗಿದೆ. ಆ 'ಕಾರ್ಯಕ್ರಮ' ದಲ್ಲಿ ಹೇಳಲಾಗಿರುವ ಕೆಲವು ಅಂಶಗಳು ಈ ಕೆಳಗಿನಂತಿವೆ.

ಮೊದಲನೆಯದಾಗಿ, ಕೇಂದ್ರದ ಕಾಂಗ್ರೆಸ್ ಸರಕಾರವು ಅನುಸರಿಸುತ್ತಿರುವ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗವು ದೇಶವನ್ನು ಮುಗ್ಗಟ್ಟಿನಿಂದ ಮುಗ್ಗಟ್ಟಿನೆಡೆಗೆ ಮತ್ತು ಅಂತಿಮವಾಗಿ ಸರ್ವತೋಮುಖವಾದ ಬಿಕ್ಕಟ್ಟಿನ ಕಡೆಗೆ ಮುನ್ನಡೆಸುತ್ತಿದೆ. ಈ ಬಂಡವಾಳಶಾಹಿ ಭೂಮಾಲಿಕ ಸರಕಾರವನ್ನು ಕಿತ್ತೆಸೆದು ಅದರ ಸ್ಥಾನದಲ್ಲಿ ದುಡಿಯುವ ವರ್ಗದ ನೇತೃತ್ವದಲ್ಲಿರುವ ಜನತೆಯ ಸರಕಾರವನ್ನು ಸ್ಥಾಪಿಸದಿದ್ದರೆ ಈ ದೇಶಕ್ಕೆ ಉಳಿಗಾಲವಿಲ್ಲವೆಂದು ನಾವು ಸ್ಪಷ್ಟವಾಗಿ ಹೇಳಿದ್ದೆವು.

ಎರಡನೆಯದಾಗಿ, ಒಂದೆಡೆ ದುಡಿಯುವ ವರ್ಗವನ್ನು ಒಳಗೊಂಡಂತೆ ಭಾರತದ ಸಮಸ್ತ ಜನತೆ ಮತ್ತು ಇನ್ನೊಂದೆಡೆ ಭಾರತೀಯ ಗುತ್ತೇದಾರಿ ಬಂಡವಾಳಗಾರರು, ಇವರಿಬ್ಬರಿಗೂ ಸಾಮ್ರಾಜ್ಯಶಾಹಿಯ ಜೊತೆಗೆ ವೈರುಧ್ಯಗಳಿವೆ ಎಂಬುದನ್ನೂ ನಾವು ಹೇಳಿದ್ದೆವು. ಇದರ ಅರ್ಥ ಈ ದೇಶದ ಜನತೆಯ ಮತ್ತು ಇಲ್ಲಿನ ಆಳುವ ವರ್ಗಗಳ ನಡುವೆ ಪರಿಹರಿಸಲಾಗದ ವೈರುಧ್ಯಗಳಿರುವಂತೆಯೇ ಇನ್ನೊಂದೆಡೆ ಈ ದೇಶದ ಜನತೆ (ಆಳುವ ವರ್ಗಗಳನ್ನೂ ಒಳಗೊಂಡು) ಮತ್ತು ಸಾಮ್ರಾಜ್ಯಶಾಹಿಯ ನಡುವೆ ಕೂಡಾ ವೈರುಧ್ಯಗಳಿವೆ. ಜಾಗತಿಕ ಬಂಡವಾಳ ಶಾಹಿಯ ಬಿಕ್ಕಟ್ಟು ಆಳವಾಗುತ್ತಾ ಹೋದಂತೆ ಈ ವೈರುಧ್ಯಗಳೂ ತೀವ್ರವಾಗುತ್ತವೆ.

ಭಾರತೀಯ ಆಳುವ ವರ್ಗಗಳಿಗೆ ಸಾಮ್ರಾಜ್ಯ ಶಾಹಿಯ ಜೊತೆ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳೂ ಸೇರಿದಂತೆ ಅನೇಕ ವಿಷಯಗಳಲ್ಲಿ ಮೂಲಭೂತವಾದ ವೈರುಧ್ಯಗಳಿರುವ ಕಾರಣ ಈ ಆಳುವ ವರ್ಗಗಳು ಕೆಲವೊಮ್ಮೆ ಸಾಮ್ರಾಜ್ಯಶಾಹಿಯ ಜೊತೆಗೆ ತಿಕ್ಕಾಟಕ್ಕಿಳಿಯುವುದು ಸಹಜ. ಇಂತಹ ಪ್ರಶ್ನೆಗಳಲ್ಲಿ, ಅಂದರೆ ಆರ್ಥಿಕ ಪ್ರಶ್ನೆ, ವಿಶ್ವಶಾಂತಿಯ ಪ್ರಶ್ನೆ ಮತ್ತು ಭಾರತದ ಆಳುವ ವರ್ಗಗಳು ಸಾಮ್ರಾಜ್ಯ ಶಾಹಿಯ ಜೊತೆಗೆ ತಿಕ್ಕಾಟಕ್ಕಿಳಿಯುವ ಇತರ ಎಲ್ಲಾ ಮಹತ್ವದ ಪ್ರಶ್ನೆಗಳಲ್ಲೂ ನಾವು ನಮ್ಮ ದೇಶದ

ಆಳುವ ವರ್ಗಗಳಿಗೂ ಅವರ ಸರಕಾರಕ್ಕೂ ನಿರಂತರ ಬೆಂಬಲ ನೀಡುತ್ತೇವೆ. ಆದರೆ ಈ ಸಹಕಾರ, ಆಳುವ ವರ್ಗಗಳು ಸಾಮ್ರಾಜ್ಯಶಾಹಿಗೆ ಸಡ್ಡು ಹೊಡೆದು ಅದನ್ನು ಪ್ರಾಮಾಣಿಕವಾಗಿ ಎದುರಿಸಿ ಸೆಣಸಾಡುವಷ್ಟರ ಮಟ್ಟಿಗೆ ಮಾತ್ರ ಸೀಮಿತವಾಗಿರುತ್ತದೆ.

ಇಷ್ಟಕ್ಕೇ ಭಾರತದ ಆಳುವವರ್ಗಗಳು ಮತ್ತು ನಮ್ಮ ದೇಶದ ಜನತೆಯ ನಡುವಿನ ವೈರುದ್ಧ್ಯಗಳೇನೂ ಕಡಿಮೆಯಾಗುವುದಿಲ್ಲ. ಹಾಗಾಗಿ, ಇಲ್ಲಿನ ಬಂಡವಾಳಶಾಹಿ ಭೂಮಾಲಕ ಪ್ರಭುತ್ವವನ್ನೂ ಅದರ ಸರಕಾರವನ್ನೂ ಕಿತ್ತೊಗೆದು ಅದರ ಜಾಗದಲ್ಲಿ ಜನತಾಪ್ರಭುತ್ವ ಮತ್ತು ಜನತೆಯ ಸರಕಾರವನ್ನು ಸ್ಥಾಪಿಸುವ ನಮ್ಮ ಪ್ರಯತ್ನದಲ್ಲಿನಾವು ಎಳ್ಳಷ್ಟೂ ಔದಾಸೀನ್ಯ ಮಾಡುವುದಿಲ್ಲ.

ನಮ್ಮ ಹನ್ನೊಂದನೇ ಮಹಾಧಿವೇಶನದ ನಂತರದ ಕಳೆದ ನಾಲ್ಕು ವರ್ಷಗಳಲ್ಲಿ ನಡೆದ ಇನ್ನೊಂದು 'ಮಹತ್ವಪೂರ್ಣ ಘಟನೆಯೆಂದರೆ ಇಂದಿರಾಗಾಂಧಿಯವರ ಹತ್ಯೆ ಮತ್ತು ಆ ಬಳಿಕ ನಡೆದ ಹಲವಾರು ವಿದ್ಯಮಾನಗಳು. ನಮ್ಮ ಆಳುವ ವರ್ಗಗಳನ್ನೂ ಒಳಗೊಂಡಂತೆ ಭಾರತೀಯ ಜನತೆ ಮತ್ತು ಸಾಮ್ರಾಜ್ಯಶಾಹಿ-ಇವೆರಡರ ನಡುವಣ ವೈರುದ್ಧ್ಯಗಳು ಇನ್ನೂ ಆಳಕ್ಕಿಳಿದಿವೆಯೆಂಬುದನ್ನು ಈ ಘಟನೆಗಳು ತೋರಿಸಿಕೊಟ್ಟಿವೆ. ಸಾಮ್ರಾಜ್ಯಶಾಹಿ ತಾನು ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮತ್ತು ಏಶ್ಯಾದ ಅನೇಕ ರಾಷ್ಟ್ರಗಳಲ್ಲಿ ಬಳಸಿದ್ದ ಕಾರ್ಯವಿಧಾನವನ್ನೇ ಈ ದೇಶದಲ್ಲೂ ಮೊದಲ ಬಾರಿಗೆ ಬಳಸಿದ್ದುದು ಕಂಡು ಬಂದಿದೆ.

ಇಂದಿರಾಗಾಂಧಿಯವರ ಹತ್ಯೆ ಒಂದು ಸುವ್ಯವಸ್ಥಿತ ಕೊಲೆಯಲ್ಲದೆ ಇನ್ನೇನೂ ಅಲ್ಲ; ಮತ್ತು ಸಾಮ್ರಾಜ್ಯಶಾಹಿ ಹಿಂದೆ ನಿಂತು ಈ ಬರ್ಬರ ಕೃತ್ಯವನ್ನು ನಡೆಸಿತ್ತೆಂಬುದೂ ಅಷ್ಟೇ ಸ್ಪಷ್ಟ. ಇದನ್ನು ಹೇಳಿದ ಮಾತ್ರಕ್ಕೆ ಭಾರತದ ಜನತೆ ಮತ್ತು ಕಾಂಗ್ರೆಸ್ ಪಕ್ಷ ಪ್ರತಿನಿಧಿಸುತ್ತಿರುವ ಭಾರತೀಯ ಆಳುವ ವರ್ಗಗಳು ಇವೆರಡರ ನಡುವಿನ ವೈರುದ್ಧ್ಯಗಳು ತಿಳಿಯಾಗಿ ಬಿಟ್ಟಿವೆ ಎಂಬ ಅರ್ಥ ಅಲ್ಲ.

## ಛಿದ್ರಕಾರೀ ಶಕ್ತಿಗಳು

ಕಳೆದ ಹಲವಾರು ವರ್ಷಗಳಿಂದ ಕಾಂಗ್ರೆಸ್ ಪಕ್ಷವು ಎಲ್ಲಾ ವಿರೋಧಪಕ್ಷಗಳ ಮೇಲೆ, ಅದರಲ್ಲೂ ಮುಖ್ಯವಾಗಿ ಎಡ ವಿರೋಧ ಪಕ್ಷಗಳ ಮೇಲೆ ಉಗ್ರ ಆಕ್ರಮಣಗಳನ್ನು ನಡೆಸಿಕೊಂಡು ಬಂದಿದೆ. ಇದರ ಜೊತೆಗೆನೇ ಕಾಂಗ್ರೆಸ್ ಪಕ್ಷ 1959 ರಿಂದಲೂ ವಿವಿಧ ರೀತಿಯ ವಿಭಾಜಕ ಮತ್ತು ಪ್ರತ್ಯೇಕವಾದಿ ಶಕ್ತಿಗಳ ಜೊತೆಗೆ ಸಂದರ್ಭಸಾಧಕತನದ ರಾಜಿ ಒಪ್ಪಂದಗಳನ್ನೂ ಮಾಡಿಕೊಳ್ಳುತ್ತಾ ಬಂದಿದೆ.

ವಿಜಯವಾಡದಲ್ಲಿ ನಡೆದ ನಮ್ಮ ಪಕ್ಷದ ಹನ್ನೊಂದನೇ ಮಹಾಧಿವೇಶನದಲ್ಲೇ ನಾವು ಈ ಪ್ರತ್ಯೇಕವಾದಿ ಶಕ್ತಿಗಳು ಬಲವರ್ಧಿಸುತ್ತಿರುವುದರ ಕುರಿತು ಎಚ್ಚರಿಕೆ ನೀಡಿದ್ದೇವೆ. ಈ ವಿಛಿದ್ರಕಾರಿ ಶಕ್ತಿಗಳು ಯಾವುವು ಮತ್ತು ಅವುಗಳಿಂದಾಗುತ್ತಿರುವ ಅಪಾಯ ಏನು ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ. ವಿರೋಧ ಪಕ್ಷಗಳ ವಿರುದ್ಧ ಮತ್ತು ಮುಖ್ಯವಾಗಿ ಎಡ ವಿರೋಧಪಕ್ಷಗಳ ವಿರುದ್ಧ ತಮ್ಮ ಸಂಕುಚಿತ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬರುವ ಸಲುವಾಗಿ ಕಾಂಗ್ರೆಸ್ ಮುಂದಾಳುಗಳು ಅನುಸರಿಸುತ್ತಿರುವ ಧೋರಣೆಗಳೂ ವಿಛಿದ್ರಕಾರಿ ಮತ್ತು ವಿಭಾಜಕ ಶಕ್ತಿಗಳ ಬಲವರ್ಧನೆಗೆ ಹೇಗೆ ಕಾರಣವಾಗುತ್ತಿವೆಯೆಂಬುದನ್ನೂ ನಮ್ಮ ವಿಜಯವಾಡ ಅಧಿವೇಶನದಲ್ಲಿ ಹೇಳಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಈ ಪ್ರತ್ಯೇಕವಾದಿ ಮತ್ತು ವಿಭಾಜಕಶಕ್ತಿಗಳು ಇನ್ನಷ್ಟು ಬಲಶಾಲಿಯಾಗಿವೆ. ಕಾಂಗ್ರೆಸ್ ಪಕ್ಷವು ಇಂತಹ ಶಕ್ತಿಗಳಿಗೆ ಪ್ರತ್ಯಕ್ಷವಾಗಿ ಬೆಂಬಲ ನೀಡುತ್ತಿರುವುದೇಇದಕ್ಕೆ ಕಾರಣ. ಇಂದಿರಾ ಗಾಂಧಿಯವರ ಹತ್ಯೆಯಲ್ಲಿ ಪರ್ಯವಸಾನ ಹೊಂದಿದ ಪಂಜಾಬ್ ಸಮಸ್ಯೆ ಕೂಡಾ ಉಲ್ಬಣಗೊಳ್ಳುವುದಕ್ಕೆ ಇದೇ ಕಾರಣ. ಭಿಂದ್ರನ್‌ವಾಲೆಯಂತಹ ಭಯೋತ್ಪಾದಕನನ್ನು ಸೃಷ್ಟಿಸಿ ಬೆಳೆಸುವುದಕ್ಕೂ ಕಾಂಗ್ರೆಸಿಗರು ಹೇಸಲಿಲ್ಲ ಎನ್ನುವುದನ್ನು ಮರೆಯದಿರೋಣ.

ಅಸ್ಸಾಮಿನ ವಿಷಯ ತೆಗೆದುಕೊಳ್ಳಿ. ಅಲ್ಲಿ ತಮ್ಮ ಅಲ್ಪ ಸಂಖ್ಯಾತ ಸರಕಾರವನ್ನು ಪ್ರತಿಷ್ಠಾಪಿಸುವುದಕ್ಕಾಗಿ ಕಾಂಗ್ರೆಸಿಗರು ಏನೆಲ್ಲ ದೊಂಬರಾಟ ನಡೆಸಿಲ್ಲ! ಇದರಿಂದಾಗಿ ಪ್ರತ್ಯೇಕವಾದಿ ಚಳುವಳಿಗಾರರಿಗೆ ಚಿನ್ನದಂಥಾ ಅವಕಾಶ ದೊರೆತಿದೆ.

ಹಾಗೆಯೇ ಅಮ್ರಬಂಗಾಲಿ ಮತ್ತು ಟಿ.ಯು.ಜೆ.ಎಸ್. ಜೊತೆಗೆ ಅಪವಿತ್ರ ಮೈತ್ರಿ ಮಾಡಿಕೊಳ್ಳದೆ ಕಾಂಗ್ರೆಸ್‌ನ ಬೇಳೆ ತ್ರಿಪುರದಲ್ಲಿ ಬೇಯುವುದಕ್ಕೆ ಸಾಧ್ಯವೇ ಇಲ್ಲ.

ಜಾತೀಯ ಮತ್ತು ಕೋಮುವಾದಿ ಪಕ್ಷಗಳ ಜೊತೆಗೆ ಮೈತ್ರಿ ಮಾಡಿಕೊಳ್ಳದೆ ಕಾಂಗ್ರೆಸ್ಸು ಕೇರಳದಲ್ಲಿ ಒಂದು ನಿಮಿಷವೂ ಅಧಿಕಾರದಲ್ಲಿ ಮುಂದುವರಿಯುವುದು ಅಸಾಧ್ಯ.

ಭಾರತ ಸರಕಾರವು ವಿದೇಶ ನೀತಿ ಪ್ರಶ್ನೆಯಲ್ಲಿ ವಹಿಸುತ್ತಿರುವ ಪಾತ್ರದಲ್ಲಿನ ಕೆಲವು ಒಳ್ಳೆಯ ಅಂಶಗಳನ್ನು ನಾವು ಗಮನಿಸಿದ್ದೇವೆ ನಿಜ. ಆದರೆ ಅಷ್ಟು ಮಾತ್ರಕ್ಕೆ ಕಾಂಗ್ರೆಸ್ ಸರಕಾರದ ಕುರಿತು ನಮ್ಮ ಮೂಲಭೂತ ಟೀಕೆ ಅಥವಾ ಕೆಲವು ನಿರ್ದಿಷ್ಟ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಾವು ಭಾರತ ಸರಕಾರವನ್ನು ಕುರಿತು ಮಾಡುತ್ತಿರುವ ವಿಮರ್ಶೆ ಎಳ್ಳಷ್ಟೂ ಮೆತ್ತಗಾಗುವುದಿಲ್ಲ.

ಕಾಂಗ್ರೆಸ್ ಸರಕಾರವನ್ನೂ ಅದರ ನೀತಿಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುವವರು ನಾವು ಮಾತ್ರ ಎಂಬುದು ಈಗ ಜಗಜ್ಜಾಹೀರಾಗಿದೆ.

ಇಂದಿರಾಗಾಂಧಿಯವರ ಹತ್ಯೆ ಮತ್ತು ಅದಕ್ಕೆ ಕಾರಣವಾದ ಅನೇಕ ಬೆಳವಣಿಗೆಗಳ ಕುರಿತು ರಾಷ್ಟ್ರದ ಸಮಗ್ರ ಭಾವನೆ ಮತ್ತು ಮಿಡಿತಗಳ ಜೊತೆಗೆ ನಾವು ಸ್ಪಂದಿಸಿದ್ದೇವೆ. ಆದರೆ, ಈ ಎಲ್ಲ ಘಟನೆಗಳಿಗೆ ಕಾರಣವಾದ ಕಾಂಗ್ರೆಸ್ ಪಕ್ಷವಾಗಲೀ ಕಾಂಗ್ರೆಸ್ ಸರಕಾರವಾಗಲೀ ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದೂ ನಾವು ಹೇಳಿದ್ದೇವೆ.

ನಮ್ಮ ದೇಶದ ಭವಿಷ್ಯ ಅಪಾಯದಲ್ಲಿದೆಯೆಂದೂ, ಕಾಂಗ್ರೆಸ್ ಸರಕಾರ ಅನುಸರಿಸುತ್ತಿರುವ ಧೋರಣೆಗಳಿಂದಾಗಿ ರಾಷ್ಟ್ರದ ಭದ್ರತೆಗೆ ಗಂಡಾಂತರವೊದಗಿದೆಯೆಂದೂ ನಾವು ಸಾರಿಸಾರಿ ಹೇಳಿದ್ದೇವೆ. ನಮ್ಮ ನಿಲುಮೆಗಳು ಅಚಲವಾಗಿವೆ ಮತ್ತು ತತ್ವನಿಷ್ಠವಾಗಿವೆಯೆನ್ನುವುದಕ್ಕೆ ಸಂದೇಹ ಇಲ್ಲ.

ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಜಯ ಗಳಿಸಿದಾಗ 'ರಾಜೀವ್ ಗಾಳಿ' ದೇಶದಲ್ಲಿ ಬೀಸುತ್ತಿದೆಯೆಂದು ಜನ ಆಡಿಕೊಳ್ಳುತ್ತಾ ಇದ್ದರು. ಆದರೆ ಕೇವಲ ಮೂರು ತಿಂಗಳ ನಂತರ ವಿಧಾನ ಸಭಾ ಚುನಾವಣೆಗಳು ನಡೆದಾಗ ಕಾಂಗ್ರೆಸ್ ಹಲವೆಡೆ ಮಣ್ಣು ಮುಕ್ಕಿತು. ಕಾಂಗ್ರೆಸ್ ಪಕ್ಷ ಜನತೆಯ ನಡುವೆ ತನ್ನ ಪ್ರಭಾವವನ್ನು ಭರದಿಂದ ಕಳೆದುಕೊಳ್ಳುತ್ತಿದೆ. ಅದು ಈಗ ಹಳೆಯ ಕಾಂಗ್ರೆಸ್ ಪಕ್ಷ ಅಲ್ಲ. ಅಷ್ಟೇ ಅಲ್ಲ, ಅದು ಅಪ್ಪಟ ಸ್ವಾರ್ಥಿಗಳ ಗುಂಪಾಗಿಬಿಟ್ಟಿದೆ.

ವಿದೇಶೀ ಧೋರಣೆಯಲ್ಲಿ ಅಡಕವಾಗಿರುವ ರಾಜಕೀಯ ಪ್ರಶ್ನೆಗಳಲ್ಲಿ ರಾಜೀವ ಗಾಂಧಿ ತನ್ನ ಹಿಂದಿನ ಪ್ರಧಾನ ಮಂತ್ರಿಗಳಂತೆ ಕಟ್ಟುನಿಟ್ಟಾದ ನಿಲುಮೆ ಹೊಂದಿರುವುದು ನಿಜ; ಆದರೆ ವಿದೇಶೀ ನೀತಿಯಲ್ಲಿನ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅವರ ನಿಲುವು ಹಾಗಿಲ್ಲ. ವಿದೇಶಿ ನೀತಿಗೆ ಎರಡು ಮುಖಗಳಿವೆ. ಮೊದಲನೆಯದು ರಾಜಕೀಯ ಪ್ರಶ್ನೆಗೆ ಸಂಬಂಧಪಟ್ಟಿದೆ. ಯುದ್ಧ ಮತ್ತು ಶಾಂತಿಯ ಪ್ರಶ್ನೆ, ಹಾಗೂ ಜಗತ್ತನ್ನು ಅಣುಯುದ್ಧದ ಮೂಲಕ ವಿನಾಶದ ಅಂಚಿಗೆ ತಳ್ಳುತ್ತಿರುವ ಸಾಮ್ರಾಜ್ಯಶಾಹಿಗಳ ನೀತಿಯ ವಿರುದ್ಧ ಹೋರಾಡುವುದು—ಇವುಗಳಿಗೆ ಸಂಬಂಧಿಸಿದೆ. ಭಾರತ ಈ ಎಲ್ಲ ಪ್ರಶ್ನೆಗಳಲ್ಲೂ ಸರಿಯಾದ ನಿಲುಮೆ ಅಂಗೀಕರಿಸಿದೆ; ಇದು ನಮಗೆ ತೃಪ್ತಿ ನೀಡುವ ಅಂಶ. ಉತ್ತರ–ದಕ್ಷಿಣ ಸಂಬಂಧಗಳ ಪ್ರಶ್ನೆಯಲ್ಲೂ ರಾಜೀವಗಾಂಧಿ ಸರಿಯಾದ ನಿಲುಮೆ ಅಂಗೀಕರಿಸಿರುವುದು ಸಮಾಧಾನಕರ.

ಆದರೆ ಭಾರತದ ಆರ್ಥಿಕತೆಯನ್ನು ಬಂಡವಾಳಶಾಹಿ ದಾರಿಯಲ್ಲಿ ಬೆಳೆಸುವುದಕ್ಕಾಗಿ ಜಾಗತಿಕ ಬ್ಯಾಂಕ್, ಐ. ಎಂ. ಎಫ್. ಮತ್ತು ಬಹುರಾಷ್ಟ್ರೀಯ ಖಾಸಗಿ

ಶ್ರದ್ಧಾಂಜಲಿ

## ಕಾಮ್ರೇಡ್ ರಾಮದಾಸ್

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಕಾಮ್ರೇಡ್ ರಾಮದಾಸ್‌ರ ಮೃತ್ಯುವಿಗೆ ಆಳವಾದ ದುಃಖ ವ್ಯಕ್ತಪಡಿಸುತ್ತದೆ. ಅವರು 1968 ರಿಂದ ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. "ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆ ಆರಂಭವಾದಂದಿನಿಂದ ಅದರ ಕಾರ್ಯಕಾರೀ ಸಂಪಾದಕರಾಗಿ ತನ್ನ ಕರ್ತವ್ಯ ನೆರವೇರಿಸುತ್ತಿದ್ದುದು ಮಾತ್ರವಲ್ಲದೆ ಕೇಂದ್ರದಲ್ಲಿ ಅವರು ಇತರ ಮಹತ್ವದ ಜವಾಬ್ದಾರಿಗಳನ್ನು ನಿಭಾಯಿಸಿದರು.

1950ರ ದಶಕದ ಮಧ್ಯಕಾಲದಿಂದಲೇ ಅವರು ಪಕ್ಷದೊಳಗೆ ಪರಿಷ್ಕರಣವಾದದ ವಿರುದ್ಧ ಹೋರಾಡುತ್ತಿದ್ದ ಶಕ್ತಿಗಳನ್ನು ಒಂದೇಸಮನೆ ಕ್ರೋಢೀಕರಿಸುಲು ದುಡಿದರು. ಹಾಗೂ ಪರಿಷ್ಕರಣವಾದದಿಂದ ಅಂತಿಮವಾಗಿ ಸಿಡಿದು ದೂರವಾಗಿ ಸಿ. ಪಿ. ಐ. (ಎಂ) ಸ್ಥಾಪಿಸುವವರೆಗಿನ ಸೈದ್ಧಾಂತಿಕ ಹಾಗೂ ಸಂಘಟನಾ ಸಿದ್ಧತೆಗಳಲ್ಲಿ ಅವರು ಭಾಗವಹಿಸಿದರು.

ಕೇಂದ್ರದ ಕಾರ್ಯಯಂತ್ರವನ್ನು ಸೇರುವ ಮೊದಲು ಮತ್ತು ಆಮೇಲೆ ಪಕ್ಷಕ್ಕೆ ಅವರು ಸಲ್ಲಿಸಿದ ಸೇವೆ ಅಮೂಲ್ಯ. ಅವರಿಗೆ ಕ್ರಾಂತಿಕಾರೀ ಶ್ರದ್ಧಾಂಜಲಿ ಅರ್ಪಿಸುತ್ತಾ ಅಧಿವೇಶನ ಅವರ ಕುಟುಂಬಕ್ಕೆ ಮನಃಪೂರ್ವಕ ಸಂತಾಪ ವ್ಯಕ್ತಪಡಿಸುತ್ತದೆ.

ಸಂಸ್ಥೆಗಳ ಮೇಲೆ ನಮ್ಮ ದೇಶದ ಅವಲಂಬನೆ ಹೆಚ್ಚಾಗುತ್ತಿದೆ. ಕಾಂಗ್ರೆಸ್‌ನ ಧೋರಣೆಗಳು ದೇಶದ ಆರ್ಥಿಕತೆಯನ್ನು ವಿನಾಶದ ಕಡೆಗೆ ಸಾಗಿಸುತ್ತಿರುವುದನ್ನು ಇಲ್ಲಿ ನಿಚ್ಚಳವಾಗಿ ಕಾಣಬಹುದು. ಆರ್ಥಿಕ ರಂಗದಲ್ಲಿ ಹೆಚ್ಚು ಹೆಚ್ಚು ರಾಜಿ ಒಪ್ಪಂದ ಮಾಡಿಕೊಂಡಂತೆ ಅದು ದೇಶದ ವಿದೇಶ ನೀತಿಯ ಮೇಲೂ ದುಷ್ಪರಿಣಾಮ ಬೀರುವುದು ಖಚಿತ. ಆರ್ಥಿಕರಂಗದಲ್ಲಿ ನಡೆಯುತ್ತಿರುವ ಈ ರಾಜಿ ಧೋರಣೆಯನ್ನು ನಿಲ್ಲಿಸದೇ ಹೋದಲ್ಲಿ ಅದು ನಮ್ಮ ವಿದೇಶ ನೀತಿಯಲ್ಲಿನ ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿರುವ ಅಂಶಗಳನ್ನು ಅಪಾಯಕ್ಕೀಡುಮಾಡುವ ಸಂಭವ ಹೆಚ್ಚು.

ಹೀಗಿರುವಾಗ, ಆಳುವ ವರ್ಗಗಳು ಅನುಸರಿಸುತ್ತಿರುವ ವಿದೇಶೀ ನೀತಿಯ ರಾಜಕೀಯ ಮುಖ ಮತ್ತು ಆರ್ಥಿಕ ಮುಖ, ಇವೆರಡರ ನಡುವಿನ ವ್ಯತ್ಯಾಸವನ್ನು ಗಮನಿಸಬೇಕಾದುದು ಅಗತ್ಯ. ಆರ್ಥಿಕ ರಂಗದಲ್ಲಿ ರಾಜಿ ಒಪ್ಪಂದ ಮತ್ತು ರಾಜಕೀಯ ರಂಗದಲ್ಲಿ ಸಾಮ್ರಾಜ್ಯಶಾಹಿಗೆ ವಿರುದ್ಧವಾದ ನಿಲುವು ಇವೆರಡರ ಮಧ್ಯೆ ಯಾವುದೇ ವಿರೋಧಾಭಾಸಗಳಿಲ್ಲ. ಯಾಕೆಂದರೆ ಅವು ಭಾರತದ ಆಳುವ ವರ್ಗಗಳ ವರ್ಗಸ್ವರೂಪದ ಸ್ವಭಾವಕ್ಕೆ ಸಹಜವಾಗಿಯೇ ಇವೆ.

ಇಷ್ಟಲ್ಲದೆ, ನಮ್ಮ ಸರಕಾರದ ಆಂತರಿಕ ಧೋರಣೆಗಳು ಹೇಳಿಕೇಳಿ ಜನವಿರೋಧಿ ನಿಲುವುಗಳಾಗಿವೆ. ಆದಕಾರಣ ನಾವು ವಿದೇಶ ನೀತಿಯಲ್ಲಿನ ಆರ್ಥಿಕ ಧೋರಣೆಗಳನ್ನೂ, ಸರಕಾರದ ಆಂತರಿಕ ನೀತಿಯನ್ನು ವಿರೋಧಿಸಬೇಕಾಗಿದೆ. ಸರಕಾರದ ವಿದೇಶನೀತಿಯಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ನಿಲುವುಗಳಿಗೆ ನಿಃಶ್ಯರ್ತ ಬೆಂಬಲ ಕೊಡುತ್ತಿರುವಾಗಲೂ ಈ ವಿರೋಧವನ್ನು ನಾವು ವ್ಯಕ್ತಪಡಿಸಬೇಕಾದುದು ಅಗತ್ಯ.

## ಮೀಸಲಾತಿಯ ಪ್ರಶ್ನೆ

ಕಾಂಗ್ರೆಸ್ (ಐ) ಸರಕಾರವು ನಮ್ಮ ದೇಶದಲ್ಲಿ 'ಮುಂದುವರಿದ' ಮತ್ತು 'ಹಿಂದುಳಿದ' ಕೋಮುಗಳ ಜನತೆಯ ಐಕ್ಯತೆಯನ್ನು ಕಾಪಾಡಿಕೊಳ್ಳುವ ಬದಲು, ನಿರುದ್ಯೋಗ ಸಮಸ್ಯೆಯ ನಿವಾರಣೆಗೆ 'ಮೀಸಲಾತಿ'ಯೇ ಪರಿಹಾರ ಎಂಬುದನ್ನು ತೋರಿಸಿಕೊಡಲು ಪ್ರಯತ್ನಿಸಿದೆಯಲ್ಲದೆ ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಈ ಪ್ರಶ್ನೆಯ ಮೇಲೆ ಜನರ ಭಾವನೆಗಳನ್ನು ಬಡಿದೆಬ್ಬಿಸಿದೆ. ಜನತೆಯನ್ನು ಜಾತೀಯತೆಯ ನೆಲೆಯಲ್ಲಿ ಒಡೆದು ಅವರ ಐಕ್ಯತೆಯನ್ನು ಛಿದ್ರಗೊಳಿಸುವ ಈ ಆಟ ಕಾಂಗ್ರೆಸ್ಸಿಗೆ ಹೊಸತೇನಲ್ಲ.

ಹಲವು ತಲೆಮಾರುಗಳಿಂದ, ಹೆಚ್ಚೇಕೆ ಹಲವಾರು ಶತಮಾನಗಳಿಂದ ಅನೇಕ ಜಾತಿ ಮತ್ತು ಕೋಮಿನ ಜನರನ್ನು ಜಾತಿ ಪದ್ಧತಿಯ ಅಡಿಯಲ್ಲಿ ದಬ್ಬಾಳಿಕೆ ನಡೆಸಿ ಹತ್ತಿಕ್ಕಲಾಗಿರುವ ಈ ದೇಶದಲ್ಲಿ ಮೀಸಲಾತಿಯೊಂದು ತಾತ್ಕಾಲಿಕ ಅವಶ್ಯಕತೆ. ಇಷ್ಟಕ್ಕೇ ನಾವು ಅದನ್ನು ಬೆಂಬಲಿಸುತ್ತೇವೆ. ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಜಾತಿಗಳಿಗೆ ಹಾಗೂ ಕೆಲವು ಹಿಂದುಳಿದ ವರ್ಗಗಳಿಗೂ ಮೀಸಲಾತಿ ಇರುವುದು ಅಗತ್ಯವೆಂದು ನಾವು ಭಾವಿಸುತ್ತೇವೆ.

ಕೋಮು ಆಧಾರಿತ ಮೀಸಲಾತಿಯನ್ನು ಒಂದು ತಾತ್ಕಾಲಿಕ ಅವಶ್ಯಕತೆಯೆಂಬುದಾಗಿ ಅದನ್ನು ಬೆಂಬಲಿಸುವುದರ ಜೊತೆಗೇ ಪರಿಶಿಷ್ಟ ಜಾತಿ (SC) ಅಥವಾ ಪರಿಶಿಷ್ಟ ವರ್ಗ (ST) ಗಳಲ್ಲದ ಇತರ ಹಿಂದುಳಿದ ಜನರ ವಿಷಯದಲ್ಲಿ ಜಾತಿಯೊಂದೇ ಮಾನದಂಡವಾಗಲಾರದು. ಬದಲು ಆರ್ಥಿಕ ಹಿನ್ನೆಲೆಯನ್ನೂ ಪರಿಶೀಲಿಸಬೇಕಾದುದು ಅಗತ್ಯವೆಂದು ನಮ್ಮ ಅಭಿಮತ. ಶೆಡ್ಯೂಲ್ಡ್ ಕಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್‌ಗಳಿಗೆ ಮಾತ್ರ ಜಾತಿಯ ನೆಲೆಯಲ್ಲಿ ಮೀಸಲಾತಿ ಮುಂದುವರಿಯಬೇಕು. ಮತ್ತು ಅದಕ್ಕಾಗಿ ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸಬಾರದು.

ಮೀಸಲಾತಿಗೆ ಸಂಬಂಧಿಸಿದಂತೆ ದೇಶದ ಜನತೆಯ ಒಗ್ಗಟ್ಟನ್ನು ಕಾಪಾಡಿಕೊಳ್ಳುವುದಷ್ಟೇ ನಮ್ಮ ಈ ನಿಲುವಿನ ಉದ್ದೇಶ. ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ (ಐ) ಮೀಸಲಾತಿಯ ಪ್ರಶ್ನೆಯನ್ನೆತ್ತಿಕೊಂಡು ಅದನ್ನು ಚುನಾವಣೆ ಗೆಲ್ಲಲು ಬಳಸಿಕೊಳ್ಳುವ ಮುಖಾಂತರ ಜನರಲ್ಲಿ ಒಡಕುಂಟುಮಾಡಲು ಪ್ರಯತ್ನಿಸುತ್ತಿದೆ. ಇದೇ ರೀತಿಯ ಹಲವಾರು ಪ್ರಶ್ನೆಗಳಲ್ಲಿ ಕಾಂಗ್ರೆಸ್ ದೇಶವನ್ನು ವಿಛಿದ್ರಗೊಳಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ವರ್ತಿಸುತ್ತಿರುವುದನ್ನು ಕಾಣಬಹುದು.

## ವಿಶಾಲ ಐಕ್ಯತೆ

ಕಳೆದ ನಾಲ್ಕು ವರ್ಷಗಳಲ್ಲಿ ಆಶಾಜನಕವಾಗಿರುವ ಕೆಲವು ವಿದ್ಯಮಾನಗಳೂ ನಡೆದಿವೆ. 1983-84ರ ಅವಧಿಯಲ್ಲಿ ನಡೆದ ನಾಲ್ಕು ಅಖಿಲ ಭಾರತ ಮಟ್ಟದ ಸಮಾವೇಶಗಳಲ್ಲಿ ದೇಶದ ಅನೇಕ ಎಡ ಮತ್ತು ಜಾತ್ಯತೀತ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಂಡದ್ದು ಇದರಲ್ಲಿ ಮುಖ್ಯವಾದ ಬೆಳವಣಿಗೆ. ಈ ನಾಲ್ಕು ಸಮ್ಮೇಳನಗಳು ಅನುಕ್ರಮವಾಗಿ ವಿಜಯವಾಡ, ದೆಹಲಿ ಶ್ರೀನಗರ ಮತ್ತು ಕಲ್ಕತ್ತಾದಲ್ಲಿ ನೆರವೇರಿದವು. ಈ ಎಲ್ಲ ಸಮಾವೇಶಗಳಲ್ಲೂ ಅಖಿಲ ಭಾರತ ಮಟ್ಟದ ಪಕ್ಷಗಳು, ರಾಷ್ಟ್ರೀಯ ಪಕ್ಷಗಳು ಮತ್ತು ಕೆಲವೊಮ್ಮೆ

ಪ್ರಾದೇಶಿಕ ಹಾಗೂ ಸ್ಥಳೀಯ ಪಕ್ಷಗಳೂ ಸೇರಿದಂತೆ 17-18 ಪಕ್ಷಗಳು ಭಾಗ ವಹಿಸಿವೆ.

ನಮ್ಮ ಅಭಿಪ್ರಾಯದಂತೆ ಈ ಸಮಾವೇಶಗಳ ಉದ್ದೇಶ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಬಲ್ಲಂತಹ ಒಂದು ಪರ್ಯಾಯ ಪಕ್ಷವನ್ನು ಕಟ್ಟುವುದು ಅಲ್ಲ; ಬದಲು ಕಾಂಗ್ರೆಸ್ ಸರಕಾರದ ಜನವಿರೋಧಿನೀತಿಯ ವಿರುದ್ಧ ಸ್ಥಳೀಯವಾಗಿ, ರಾಜ್ಯಮಟ್ಟದಲ್ಲಿ ಮತ್ತು ಅಖಿಲ ಭಾರತ ಮಟ್ಟದಲ್ಲಿ ಐಕ್ಯ ಹಾಗೂ ಸಾಮುದಾಯಿಕ ಹೋರಾಟಗಳನ್ನು ಬೆಳೆಸುವುದೇ ಈ ಸಮಾವೇಶಗಳ ಮುಖ್ಯ ಗುರಿ. ಈ ಎಲ್ಲ ಚಳುವಳಿಗಳ ಪರಿಣಾಮವಾಗಿ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್‌ಗೆ ಬದಲೀ ಆದ ಶಕ್ತಿಯೊಂದು ಬೆಳೆದು ಬರಲೂ ಸಾಧ್ಯ. ಅದೇನೇ ಇದ್ದರೂ ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಜನತೆಯನ್ನು ಒಂದುಗೂಡಿಸಬಯಸುವ ಎಲ್ಲಾ ಎಡ ಮತ್ತು ಜಾತ್ಯತೀತ ವಿರೋಧ ಪಕ್ಷಗಳು ದೇಶವನ್ನು ಕಾಡುತ್ತಿರುವ ಹಲವಾರು ಜ್ವಲಂತ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳನ್ನೆತ್ತಿಕೊಂಡು ಅವುಗಳ ನೆಲೆಯಲ್ಲಿ ಸಾರ್ವತ್ರಿಕ ಚಳುವಳಿಗಳನ್ನು ನಡೆಸಬೇಕಾದುದು ಅವುಗಳ ಮೊದಲ ಕರ್ತವ್ಯ.

ನಮ್ಮ ಉದ್ದೇಶವೂ ಇದೇ ಆಗಿದೆ. ಈ ಗುರಿಗಳನ್ನು ಗಮನದಲ್ಲಿರಿಸಿಕೊಂಡೇ ನಾವು ಈ ಎಲ್ಲ ರಾಷ್ಟ್ರೀಯ ಮಟ್ಟದ ಸಮಾವೇಶಗಳ ಯಶಸ್ಸಿಗಾಗಿ ದುಡಿದಿದ್ದೇವೆ ಮತ್ತು ಅವುಗಳಲ್ಲಿ ಪಾಲುಗೊಂಡಿದ್ದೇವೆ. ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾಗಬಲ್ಲ ಶಕ್ತಿಯೊಂದು ಹುಟ್ಟದೇ ಹೋದರೂ ನಾವು ನಮ್ಮ ಉದ್ದೇಶಿತ ಗುರಿಯನ್ನು ಸಾಕಷ್ಟು ಮಟ್ಟಿಗೆ ಸಾಧಿಸಿದ್ದೇವೆ ಎಂಬುದನ್ನು ಹೇಳಬಲ್ಲೆ.

ಈ ಸಮಾವೇಶಗಳಲ್ಲಿ ಒಮ್ಮತದಿಂದ ಕೈಗೊಳ್ಳಲಾದ ಕೆಲವು ತೀರ್ಮಾನಗಳನ್ನು ಕೆಲವು ರಾಜಕೀಯ ಪಕ್ಷಗಳು ಕಾರ್ಯರೂಪಕ್ಕೆ ತರಲಾಗದೆ ಹೋಗಿವೆ. ಇನ್ನು ಕೆಲವು ಪಕ್ಷಗಳು ಇಂತಹ ತೀರ್ಮಾನಗಳಿಗೆ ತಾವು ಬದ್ಧರಾಗಿದ್ದರೂ ಅವುಗಳಿಗೆ ವಿರುದ್ಧವಾಗಿ ನಡೆದುಕೊಂಡಿವೆ.

ಹೀಗಿದ್ದರೂ, ಆರ್ಥಿಕ ಪ್ರಶ್ನೆಗಳ ಮೇಲೆ ಪ್ರಜಾಪ್ರಭುತ್ವದ ರಕ್ಷಣೆ, ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಪ್ರಶ್ನೆಗಳ ಮೇಲೆ ರಾಷ್ಟ್ರ ಮಟ್ಟದಲ್ಲಿ ಐಕ್ಯ ಚಳುವಳಿಯೊಂದರ ನಿರ್ಮಾಣ ಈಗಲೂ ಸಾಧ್ಯವೆಂದು ನಾವು ಭಾವಿಸುತ್ತೇವೆ.

ಈ ಕಾರಣದಿಂದ ಕಾಂಗ್ರೆಸ್ ಪಕ್ಷದ ವಿರುದ್ಧ ಮತ್ತು ಕಾಂಗ್ರೆಸ್ ಸರಕಾರದ ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಹಾಗೂ ಜಾತೀಯತೆ ಮತ್ತು ಕೋಮುವಾದದಂತಹ ವಿಭಿದ್ರಕಾರಿ ಶಕ್ತಿಗಳ ವಿರುದ್ಧ ಎಡ ಮತ್ತು ಜಾತ್ಯತೀತ ಪಕ್ಷಗಳ ಒಗ್ಗಟ್ಟನ್ನು ಸಾಧಿಸಬೇಕಾದುದರ ಅಗತ್ಯವನ್ನು ಕುರಿತು ನಮ್ಮ ರಾಜಕೀಯ ಕರಡು ನಿರ್ಣಯದಲ್ಲಿ ಮೊದಲು ಕೊಟ್ಟರುವಷ್ಟೇ ಪ್ರಾಧಾನ್ಯತೆಯನ್ನು ಈಗಲೂ ಕೊಟ್ಟಿದ್ದೇವೆ.

## ಎಡ ಐಕ್ಯತೆ

ಎಡ ಪಕ್ಷಗಳ ಐಕ್ಯತೆಯ ಪ್ರಶ್ನೆಯನ್ನು ಮಾತ್ರ ಇದಕ್ಕಿಂತ ತುಸು ಭಿನ್ನವಾದ ರೀತಿಯಲ್ಲಿ ನೋಡಬೇಕಾಗುತ್ತದೆ. ವಿಶಾಲ ತಳಹದಿಯಲ್ಲಿ ಎಡ ಮತ್ತು ಜಾತ್ಯತೀತ ಪಕ್ಷಗಳ ಮೇಲೆ ಸತ್ಪ್ರಭಾವಬೀರುವ ಉದ್ದೇಶದಿಂದ ಎಡಪಕ್ಷಗಳು ತಮ್ಮೊಳಗಿನ ಐಕ್ಯತೆಯನ್ನು ಇನ್ನಷ್ಟು ಬಲಗೊಳಿಸಬೇಕಾದುದು ಅಗತ್ಯ. ಅದಕ್ಕೆ ನಾವು ಎಡ ಪಕ್ಷಗಳ ಐಕ್ಯತೆಯ ಪ್ರಶ್ನೆಗೆ ತುಂಬಾ ಮಹತ್ವ ನೀಡುತ್ತೇವೆ.

ಸಿ. ಪಿ. ಐ (ಎಂ) ಮತ್ತು ಸಿ. ಪಿ. ಐ ಪಕ್ಷಗಳ ನಡುವಿನ ಐಕ್ಯತೆಯ ಬಗ್ಗೆಯಂತೂ ನಾವು ವಿಶೇಷ ಮಹತ್ವ ನೀಡುತ್ತೇವೆ. ಆದರೆ ಐಕ್ಯತೆ ಎಂದಾಕ್ಷಣ ಎರಡೂ ಪಕ್ಷಗಳು ಒಂದಾಗಿ ವಿಲೀನ ಹೊಂದುವುದು ಎಂದು ಅನೇಕ ಜನ ಭಾವಿಸಿದ್ದಾರೆ. ಆದರೆ ನಾವು ಈ ರೀತಿ ಭಾವಿಸಿಲ್ಲ. ನಮ್ಮೆರಡೂ ಪಕ್ಷಗಳ ನಡುವೆ ಮೂಲಭೂತವಾದ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಇನ್ನೂ ಇರುವ ಕಾರಣ ನಾವು ಬೇರೆ ಬೇರೆ ಪಕ್ಷಗಳಾಗಿಯೇ ಇದ್ದೇವೆ. ಆದರೂ ಹಲವಾರು ಪ್ರಶ್ನೆಗಳಲ್ಲಿ ನಮ್ಮೆರಡೂ ಪಕ್ಷಗಳು ಹೆಚ್ಚು ಹೆಚ್ಚು ಸಾಮೀಪ್ಯಕ್ಕೆ ಬರುತ್ತಿರುವುದು ನಿಜ.

ಉದಾಹರಣೆಗೆ ಕೆಲಕಾಲದ ಹಿಂದೆ ಎರಡೂ ಪಕ್ಷಗಳ ಕೇಂದ್ರ ಸಮನ್ವಯ ಸಮಿತಿಯೊಂದನ್ನು ರಚಿಸಬೇಕೆಂದು ನಾವು ನಿರ್ಧರಿಸಿದ್ದೆವು. ದುರದೃಷ್ಟವಶಾತ್ ಈ ಸಮನ್ವಯ ಸಮಿತಿ ಇದೀಗ ಕೆಲಸ ಮಾಡುತ್ತಿಲ್ಲ. ಇದು ಸರಿಯಾಗಿ ಕಾರ್ಯ ನಿರ್ವಹಿಸಬೇಕೆಂದು ನಮ್ಮ ಅಪೇಕ್ಷೆ; ಹಾಗೆನೇ ನಾವಿದನ್ನು ಒತ್ತಾಯಿಸುತ್ತ ಬಂದಿದ್ದೇವೆ. ಎರಡೂ ಪಕ್ಷಗಳ 'ವಿಲೀನ' ಸಾಧ್ಯವಿಲ್ಲ ಎಂದ ಮಾತ್ರಕ್ಕೆ ಎರಡು ಪಕ್ಷಗಳೂ ಒಂದಾಗಿ ಐಕ್ಯ ಚಳುವಳಿ ನಡೆಸಬಾರದೆಂದೇನೂ ಇಲ್ಲ, ಅದು ಅಸಾಧ್ಯವೂ ಅಲ್ಲ. ಇಂತಹ ಐಕ್ಯ ಚಳುವಳಿಗೆ ಕೇಂದ್ರ ಸಮನ್ವಯ ಸಮಿತಿ ಆಧಾರವಾಗಿರಬೇಕು.

ಯುದ್ಧ ಮತ್ತು ಶಾಂತಿಯ ಪ್ರಶ್ನೆಯಲ್ಲೂ ನಮ್ಮೆರಡೂ ಪಕ್ಷಗಳು ಒಂದಾಗಿವೆ. ಅಷ್ಟೇ ಅಲ್ಲ; ನಮ್ಮ ಜೊತೆಗೆ ಇನ್ನೂ ಆರು ಪಕ್ಷಗಳು ಸೇರಿ ದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶವೊಂದನ್ನು ಏರ್ಪಡಿಸಿದ್ದೇವೆ. ಈ ಸಮಾವೇಶದ ತೀರ್ಮಾನವನ್ನು ಅನುಷ್ಠಾನಕ್ಕೆ ತರಲು ಸಮಿತಿ

ಯೊಂದನ್ನು ನೇಮಿಸಲಾಗಿದೆ; ಮತ್ತು ಇದರ ಸಂಚಾಲಕರಾಗಿ ಸ್ವತಃ ಕಾಮ್ರೇಡ್ ರಾಜೇಶ್ವರರಾವ್ ಅವರೇ ಇದ್ದಾರೆ. ಈ ಸಮಿತಿ ಇನ್ನಷ್ಟು ಕ್ರಿಯಾಶೀಲವಾದರೆ ಭಾರತದಲ್ಲಿ ವಿಶ್ವಶಾಂತಿಯ ಪ್ರಶ್ನೆಯ ಮೇಲೆ ಇನ್ನೂ ಬೃಹತ್ ಪ್ರಮಾಣದ ಚಳುವಳಿಗಳನ್ನು ಸಂಘಟಿಸುವುದು ನಮಗೆ ಸಾಧ್ಯವಾದೀತು.

ನಮ್ಮೆರಡೂಪಕ್ಷಗಳ ನಡುವೆ ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳು ನಿಚ್ಚಳವಾಗಿ ಮುಂದುವರಿಯುತ್ತಿರುವವರೆಗೆ ಎರಡೂ ಪಕ್ಷಗಳ ವಿಲೀನ ಅಸಾಧ್ಯ ಮಾತ್ರವಲ್ಲ, ಅಂತಹ ಮಾತೇ ಅರ್ಥಹೀನ. ಈ ಪ್ರಶ್ನೆಯನ್ನು ಸದ್ಯ ಒತ್ತಟ್ಟಿಗಿರಿಸೋಣ. ಹಾಗಿದ್ದರೂ, ನಮ್ಮ ಕೇಂದ್ರ ಸಮನ್ವಯ ಸಮಿತಿಯನ್ನು ಇನ್ನಷ್ಟು ಚುರುಕುಗೊಳಿಸುವುದು ನಮ್ಮಿಂದ ಸಾಧ್ಯವಿಲ್ಲವೆ? ಆ ಮೂಲಕ ಶಾಂತಿ ಸಮಿತಿಯನ್ನು ಸಕ್ರಿಯಗೊಳಿಸುವುದು ಅಂತಹ ಪ್ರಯಾಸದ ಕೆಲಸವೆ?

ಬಹುಶಃ ಎಡಪಕ್ಷಗಳ ಐಕ್ಯತೆಯನ್ನು ಬಲಪಡಿಸುವ ನಮ್ಮ ಗಂಭೀರ ಪ್ರಯತ್ನಗಳಿಗೆ ಇದೇ ಪ್ರಾರಂಭದ ಹೆಜ್ಜೆಯಾಗ ಬಹುದು. ಎಡಶಕ್ತಿಗಳು ತಮ್ಮ ಬಲವನ್ನು ವರ್ಧಿಸಿಕೊಳ್ಳುವಲ್ಲೂ ಮತ್ತು ಇತರ ಜಾತ್ಯತೀತ ಶಕ್ತಿಗಳ ಜೊತೆಗಿನ ತಮ್ಮ ಸಂಬಂಧವನ್ನು ಬಲಪಡಿಸಿಕೊಳ್ಳುವಲ್ಲೂ ಇದು ಅತ್ಯಂತ ಸಹಕಾರಿಯಾಗಬಲ್ಲದು.

ಇವೆಲ್ಲವನ್ನೂ ಸಾಧಿಸಬೇಕಾದರೆ ಏಳು ವರ್ಷಗಳ ಹಿಂದೆ ನಮ್ಮ ಪಕ್ಷದ ಸಾಲ್ಕಿಯಾ ಪ್ಲೀನಮ್‌ನಲ್ಲಿ ಹೇಳಿರುವಂತೆ, ನಮ್ಮ ಪಕ್ಷವು ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾತ್ಮಕ ಕೆಲಸಗಳನ್ನು ಕ್ರಮಬದ್ಧವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆನ್ನುವುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ●

ಶ್ರದ್ಧಾಂಜಲಿ :

## ಕಾಮ್ರೇಡ್ ಪ್ರಮೋದ್ ದಾಸ್‌ಗುಪ್ತಾ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಪಾಲಿಟ್‌ಬ್ಯೂರೋ ಸದಸ್ಯ, ಪಶ್ಚಿಮ ಬಂಗಾಳರಾಜ್ಯ ಸಮಿತಿ ಕಾರ್ಯದರ್ಶಿ ಹಾಗೂ ಪಶ್ಚಿಮ ಬಂಗಾಳ ಎಡರಂಗದ ಅಧ್ಯಕ್ಷರಾಗಿದ್ದ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತಾರವರ ನಿಧನಕ್ಕೆ ತನ್ನ ಸಂತಾಪ ಸೂಚಿಸುತ್ತದೆ.

ತನ್ನ ಐದು ದಶಕಕ್ಕೂ ಮೀರಿದ ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ಕಾಮ್ರೇಡ್ ಪ್ರಮೋದ್‌ದಾಸ್ ಗುಪ್ತಾರವರು ನೀಡಿದ ಕಾಣಿಕೆ ಅಗಾಧ. ಇದರಲ್ಲಿ 43 ವರ್ಷಗಳು ಕಮ್ಯುನಿಸ್ಟ್, ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವ ಆಂದೋಲನಗಳಿಗೆ ಸಮರ್ಪಿತವಾಗಿದ್ದವು. ಕಾಮ್ರೇಡ್ ಪ್ರಮೋದ್ ದಾಸ್‌ಗುಪ್ತಾ 1964ರಲ್ಲಿ ಏಳನೆಯ ಅಧಿವೇಶನದಲ್ಲಿ ಪಾಲಿಟ್‌ಬ್ಯೂರೋಗೆ ಚುನಾಯಿತರಾಗಿದ್ದು ತನ್ನ ನಿಧನದ ವರೆಗೂ ಆ ಸ್ಥಾನದಲ್ಲಿ ಉಳಿದರು.

ಕಾಮ್ರೇಡ್ ಪ್ರಮೋದ್‌ದಾಸ್ ಗುಪ್ತಾ ಸಂಯುಕ್ತವಾಗಿದ್ದ ಭಾರತ ಕಮ್ಯುನಿಸ್ಟ್ ಪಕ್ಷದಲ್ಲಿ ಬಲ ಪರಿಷ್ಕರಣವಾದದ ವಿರುದ್ಧ ಉಗ್ರಹೋರಾಟದಲ್ಲಿ ಮತ್ತು ಸಿ. ಪಿ. ಐ. (ಎಂ)ನ್ನು ಒಂದು ಕ್ರಾಂತಿಕಾರೀ ಪಕ್ಷವನ್ನಾಗಿ ಕಟ್ಟುವಲ್ಲಿ ಬಹಳ ಮಹತ್ವದ ಒಂದು ಪಾತ್ರ ವಹಿಸಿದರು. ಅಷ್ಟೇ ಅವಿಶ್ರಾಂತರಾಗಿ ಪಶ್ಚಿಮಬಂಗಾಳದಲ್ಲಿ ಎಡ-ದುಸ್ಸಾಹಸವಾದಿಗಳ ವಿರುದ್ಧ ಹೋರಾಟವನೇತೃತ್ವವನ್ನು ವಹಿಸಿದರು. ಅವರು 1970-76ರ ಅರೆ ಫ್ಯಾಸಿಸ್ಟ್ ಭಯೋತ್ಪಾದಕತೆಯ ಅತ್ಯಂತ ಕಷ್ಟಕರ ದಿನಗಳಲ್ಲಿ ಪಕ್ಷಕ್ಕೆ ಅತ್ಯಂತ ಚಾಕಚಕ್ಯತೆಯಿಂದ ಮಾರ್ಗದರ್ಶನ ನೀಡಿದುದರಿಂದ ಸಿ. ಪಿ. ಐ. (ಎಂ) ಪಶ್ಚಿಮ ಬಂಗಾಳದಲ್ಲಿ ಅತ್ಯಂತ ಶಕ್ತಿಶಾಲೀ ಪಕ್ಷವಾಗಿ ಮೂಡಿಬರುವಂತಾಯಿತು. 1967 ಹಾಗೂ 1969ರಲ್ಲಿ ಸಂಯುಕ್ತರಂಗ ಸರಕಾರ ಸ್ಥಾಪಿಸಲು ಹಾಗೂ 1977ರ ಲೋಕಸಭಾ ಚುನಾವಣೆಗಳಲ್ಲಿ ಸರ್ವಾಧಿಕಾರ ವಿರೋಧಿ ರಂಗವೊಂದನ್ನು ಬೆಸೆದು ಕಾಂಗ್ರೆಸ್ (ಐ)ನ್ನು ಸಂಪೂರ್ಣವಾಗಿ ಸೋಲಿಸಲು ಸಾಧ್ಯವಾಗುವಂತೆ ಪಕ್ಷ ಅನುಸರಿಸಿದ ಸಂದರ್ಭೋಚಿತ ಕಾರ್ಯತಂತ್ರಗಳಲ್ಲಿ ಅವರದ್ದು ಮಹಾನ್ ಕೊಡುಗೆ. ಎಡರಂಗವನ್ನು ಬೆಸೆಯುವಲ್ಲಿ ಹಾಗೂ 1977 ಮತ್ತು 1982ರ ಉಜ್ವಲ ಚುನಾವಣಾ ವಿಜಯಗಳ ಪ್ರಮುಖ ರೂವಾರಿಗಳಲ್ಲಿ ಅವರೊಬ್ಬರಾಗಿದ್ದರು.

ಕಾಮ್ರೇಡ್ ಪ್ರಮೋದ್‌ದಾಸ್ ಗುಪ್ತಾ ಸಕಲ ಸಂಕಷ್ಟಗಳನ್ನೆದುರಿಸಿ, ಸಕಲ ತ್ಯಾಗಗೈದು ಒಬ್ಬ ಕ್ರಾಂತಿಕಾರಿಯ ಜೀವನ ನಡೆಸಿದ ಒಬ್ಬ ಸಮರ್ಪಿತ ಕಮ್ಯುನಿಸ್ಟ ರಾಗಿದ್ದರು. ಅವರ ನಿರಾಡಂಬರ ಜೀವನ, ಪಕ್ಷದ ಶಿಸ್ತು ಕಾಯ್ದುಗೊಳ್ಳುವಲ್ಲಿ ಅವರ ಒತ್ತಾಯ, ಕಾರ್ಯಕರ್ತರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವನ್ನು ಪರಿಹರಿಸಲು ನೆರವಾಗುವ ಅವರ ಸಾಮರ್ಥ್ಯ ಇವೆಲ್ಲವುಗಳಿಂದಾಗಿ ತಮ್ಮ ಸಂಪರ್ಕಕ್ಕೆ ಬಂದ ಎಲ್ಲರಿಗೂ ಕಾಮ್ರೇಡ್ ಪ್ರಮೋದ್ ಅತ್ಯಂತ ಪ್ರಿಯರಾಗಿದ್ದರು. ಅವರೊಬ್ಬ ಎದ್ದು ಕಾಣುವ ಸಂಘಟನಾ ಪ್ರತಿಭೆಗಳಿದ್ದ ಸಂಗಾತಿಯಾಗಿದ್ದರು.

ಪಕ್ಷದ ಅಧಿವೇಶನ ಕಾಮ್ರೇಡ್ ಪ್ರಮೋದ್‌ದಾಸ್ ಗುಪ್ತಾರವರ ನೆನಪಿಗೆ ತನ್ನ ಕ್ರಾಂತಿಕಾರೀ ಶ್ರದ್ಧಾಂಜಲಿ ಸಲ್ಲಿಸುತ್ತದೆ ಮತ್ತು ಅವರ ದುಃಖತಪ್ತ ಕುಟುಂಬದ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತದೆ.

# ಸಂತಾಪ ಸೂಚಕ ನಿರ್ಣಯಗಳು

ಹನ್ನೆರಡನೇ ಅಧಿವೇಶನ, ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಸುಪ್ರೀಂ ಸೋವಿಯೆತ್‌ನ ಅಧ್ಯಕ್ಷ ಮಂಡಳಿಯ ಅಧ್ಯಕ್ಷರಾಗಿದ್ದ ಕಾಮ್ರೇಡ್ ಎಲ್. ಐ.ಬ್ರೆಜ್ನೆವ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ. ಅವರು ಸೋವಿಯೆತ್ ಜನತೆಯ ಒಬ್ಬ ಎದ್ದು ಕಾಣುವ ಮುಖಂಡರು ಮತ್ತು ಸೋವಿಯೆತ್ ಒಕ್ಕೂಟದ ಶಾಂತಿ ಧೋರಣೆಯ ಒಬ್ಬ ಪ್ರಮುಖ ಶಿಲ್ಪಿಯಾಗಿದ್ದರು.

ಅಧಿವೇಶನ ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಸುಪ್ರಿಂ ಸೋವಿಯೆತ್‌ನ ಅಧ್ಯಕ್ಷ ಮಂಡಳಿಯ ಅಧ್ಯಕ್ಷರಾಗಿದ್ದ ಕಾಮ್ರೇಡ್ ಯೂರಿ ಆಂಡ್ರೊಪೋವ್‌ರ ಅಕಾಲ ಮೃತ್ಯುವಿಗೆ ತನ್ನ ದುಃಖ ವ್ಯಕ್ತಪಡಿಸುತ್ತದೆ. ಅವರು ಒಬ್ಬ ಕಟ್ಟಾ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಹಾಗೂ ಜಾಗತಿಕ ಶಾಂತಿಯ ರಕ್ಷಕರಾಗಿದ್ದರು.

ಅಧಿವೇಶನ ಸಿ. ಪಿ. ಎಸ್. ಯು. ನ ಪ್ರಧಾನ ಕಾರ್ಯದರ್ಶಿ ಹಾಗೂ ಸೋವಿಯೆತ್ ಜನತೆ ಮತ್ತು ಪ್ರಭುತ್ವದ ಸುವಿಖ್ಯಾತ ಮುಖಂಡರಾಗಿದ್ದ ಕಾಮ್ರೇಡ್ ಕೆ. ಯು. ಚೆರ್ನೆಂಕೋರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಸಿ. ಪಿ. ಎಸ್. ಯು. ನ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಸೋವಿಯೆತ್ ಒಕ್ಕೂಟದ ರಕ್ಷಣಾ ಮಂತ್ರಿಯಾಗಿದ್ದ ಕಾಮ್ರೇಡ್ ಡಿ. ಎಫ್. ಉಸ್ತಿನೋವ್‌ರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಹನ್ನೆರಡನೇ ಅಧಿವೇಶನ ಚೀಣಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಚೀಣಿ ಕ್ರಾಂತಿಯ ಒಬ್ಬ ಪ್ರಮುಖ ಮುಖಂಡ ಕಾಮ್ರೇಡ್ ಲಿಯಾವೊ ಚೆಂಗ್ಜಿ ಅವರ ನಿಧನಕ್ಕೆ ಸಂತಾಪ ಸೂಚಿಸುತ್ತದೆ.

ಅಧಿವೇಶನ ಚೀಣಾ ಕಮ್ಯುನಿಸ್ಟ್ ಪಕ್ಷದ ಕೇಂದ್ರೀಯ ಸಲಹಾ ಆಯೋಗದ ಉಪಾಧ್ಯಕ್ಷರುಗಳಾದ ಕಾಮ್ರೇಡ್ ಕ್ಸಿಯೋವು,ಕಾಮ್ರೇಡ್ ತಾನ್ ಝೆನ್ಲಿನ್, ಕಾಮ್ರೇಡ್ ಲಿ ವೈಹಾನ್ ಇವರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ. ಚೀಣಾದಲ್ಲಿ ಕ್ರಾಂತಿಗೆ ಹಾಗೂ ಸಮಾಜವಾದ ಕಟ್ಟುವಲ್ಲಿ ಈ ನುರಿತ ಕ್ರಾಂತಿಕಾರಿಗಳ ಕೊಡುಗೆ ಸದಾ ಸ್ಮರಣೀಯ.

ಹನ್ನೆರಡನೇ ಅಧಿವೇಶನ ಅಲ್ಬೇನಿಯನ್ ಕಾರ್ಮಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಅಲ್ಬೇನಿಯಾದ ಜನತೆಯ ಪ್ರಮುಖ ಮುಖಂಡ ಕಾಮ್ರೇಡ್ ಎನ್ವರ್ ಹೊಕ್ಸಾಹಾರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಇಟಲಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಇಟಲಿಯ ಎಡ ಶಕ್ತಿಗಳ ಸುವಿಖ್ಯಾತ ಮುತ್ಸದ್ದಿ ಕಾಮ್ರೇಡ್ ಎನ್ರಿಕೋ ಬರ್ಲಿಂಗೆರ್‌ರವರ ನಿಧನಕ್ಕೆ ಸಂತಾಪ ಸೂಚಿಸುತ್ತದೆ.

ಅಧಿವೇಶನ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಅನುಭವೀ ಮುಖಂಡ ಮತ್ತು ಹಲವಾರು ವರ್ಷಗಳು ಪಕ್ಷದ ಕೇಂದ್ರ ಸಮಿತಿಯ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಕ್ಸಾನ್‌ಥುಯ್‌ರವರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ. ಫ್ರೆಂಚ್, ಜಪಾನೀ ಹಾಗೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದಲ್ಲಿ ಹಾಗೂ ವಿಯೆಟ್ನಾಂನ ಪುನರೇಕೀಕರಣದಲ್ಲಿ ಅವರ ಕಾಣಿಕೆ ಸದಾ ನೆನಪಿನಲ್ಲಿರುತ್ತದೆ.

ಹನ್ನೆರಡನೇ ಅಧಿವೇಶನ ಜಪಾನೀ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಮಂಡಳಿಯ ಉಪಾಧ್ಯಕ್ಷ ಕಾಮ್ರೇಡ್ ಟೋಮಿಯೋ ನಿಶಿಝೂವಾರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಕಂಪೂಚಿಯಾ ಜನತಾ ಕ್ರಾಂತೀಕಾರಿ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಮತ್ತು ಕಂಪೂಚಿಯಾ ಜನತಾ ಗಣರಾಜ್ಯದ ಮಂತ್ರಿಮಂಡಳದ ಅಧ್ಯಕ್ಷ ಕಾಮ್ರೇಡ್ ಜಾನ್ಸಿಯವರ ನಿಧನಕ್ಕೆ ಸಂತಾಪ ಸೂಚಿಸುತ್ತದೆ.

ಅಧಿವೇಶನ ಜರ್ಮನಿ ಸಮಾಜವಾದೀ ಐಕ್ಯತಾ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಜರ್ಮನ್ ಪ್ರಜಾಪ್ರಭುತ್ವ

ವಾದೀ ಗಣರಾಜ್ಯದ ರಕ್ಷಣಾಮಂತ್ರಿ ಕಾಮ್ರೇಡ್ ಹೈಂರ್ಝ್ ಹೋಫ್ಮನ್‌ರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ವಿಖ್ಯಾತ ಕ್ರಾಂತಿಕಾರೀ ಕವಿ, ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಗಾರ ಮತ್ತು ಪಾಕೀಸ್ತಾನದಲ್ಲಿ ಪ್ರಜಾಪಭುತ್ವ ಹಕ್ಕುಗಳ ಮರುಸ್ಥಾಪನೆಯ ಪ್ರತಿಪಾದಕ ಫೈಜ್‌ಅಹ್ಮದ್ ಫೈಜ್‌ರವರ ನೆನಪಿಗೆ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರ ನಿಧನದಿಂದಾಗಿ ನಮ್ಮ ಉಪಖಂಡ ಸಾಂಸ್ಕೃತಿಕ ರಂಗದಲ್ಲಿ ಒಬ್ಬ ಮಹಾನ್ ವ್ಯಕ್ತಿಯನ್ನು ಕಳಕೊಂಡಿದೆ.

ಹನ್ನೆರಡನೇ ಅಧಿವೇಶನ ಭಾರತ ಕಮ್ಯುನಿಸ್ಟ್ ಪಕ್ಷದ ನುರಿತ ಮುಖಂಡ ಕಾಮ್ರೇಡ್ ಸೋಹನ್‌ಸಿಂಗ್ ಜೋಶ್, ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿ ಕಾಮ್ರೇಡ್ ಎಂ.ಎನ್. ಗೋವಿಂದನ್ ನಾಯರ್ ಮತ್ತು ಸಿ.ಪಿ.ಐ.ನ ಅನುಭವೀ ಮುಖಂಡ ಕಾಮ್ರೇಡ್ ಸೋಮನಾಥ ಲಹಿರಿಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

# ಹುತಾತ್ಮರಿಗೆ ಶ್ರದ್ಧಾಂಜಲಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಕಮ್ಯುನಿಸ್ಟ್, ಕಾರ್ಮಿಕವರ್ಗ ಹಾಗೂ ಪ್ರಜಾಪ್ರಭುತ್ವ ಆಂದೋಲನಗಳಿಂದಾಗಿ ಪ್ರಾಣಾರ್ಪಣೆ ಗೈದಿರುವ ಹುತಾತ್ಮರಿಗೆ ತನ್ನ ಕ್ರಾಂತಿಕಾರಿ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ಪಶ್ಚಿಮ ಬಂಗಾಳದ 246 ಸಂಗಾತಿಗಳು ಕಾಂಗ್ರೆಸ್ (ಐ) ಗೂಂಡಾಗಳಿಂದ, ಭೂಮಾಲಿಕರಿಂದ ಮತ್ತು ಸಮಾಜವಿರೋಧಿ ವ್ಯಕ್ತಿಗಳಿಂದ ಕೊಲೆಯಾದರು. ತ್ರಿಪುರಾದಲ್ಲಿ ಟಿ.ಎನ್.ವಿ./ಟಿ.ಯು.ಜೆ.ಎಸ್. ತೀವ್ರಗಾಮಿಗಳಿಂದ, ಕಾಂಗ್ರೆಸ್ (ಐ) ಹಾಗೂ ಆಮ್ರಬಂಗಾಲಿ ಗೂಂಡಾಪಡೆಗಳಿಂದ ಕೊಲೆಗೀಡಾದ 197 ಸಂಗಾತಿಗಳು ರಾಷ್ಟ್ರೀಯ ಐಕ್ಯತೆ, ಮತ್ತು ಕೋಮು ಸೌಹಾರ್ದದ ರಕ್ಷಣೆಯಲ್ಲಿ ತನ್ನ ಜೀವ ಬಲಿದಾನಗೈದಿದ್ದಾರೆ. ಕೇರಳದಲ್ಲಿ ಎಪ್ಪತ್ತೈದು ಸಂಗಾತಿಗಳು ಕಾಂಗ್ರೆಸ್ (ಐ) ಹಾಗೂ ಆರ್.ಎಸ್.ಎಸ್.ನವರಿಂದ ಕೊಲೆಯಾಗಿದ್ದಾರೆ. ಅಸ್ಸಾಂನಲ್ಲಿ 45 ಸಂಗಾತಿಗಳು ಎ.ಎ.ಎಸ್.ಯು. ಮತ್ತು ಎ.ಎ.ಜಿ.ಎಸ್.ಸಿ. ನವರ ಸಂಕುಚಿತವಾದೀ ಭಯೋತ್ಪಾದಕತೆಯನ್ನು ಧೈರ್ಯದಿಂದ ಎದುರಿಸಿ ತಮ್ಮ ಪ್ರಾಣತ್ಯಾಗ ಮಾಡಿದ್ದಾರೆ, ಆಂಧ್ರಪ್ರದೇಶದಲ್ಲಿ 42 ಸಂಗಾತಿಗಳು ಪ್ರಜಾಪ್ರಭುತ್ವ ಚಳುವಳಿಗೆ ಅದರ ದೃಢತೆಗಾಗಿ ಕಾಂಗ್ರೆಸ್ (ಐ) ಹಾಗೂ ನಕ್ಸಲೈಟ್ ಗೂಂಡಾ ಪಡೆಗಳಿಂದ ಕೊಲ್ಲಲ್ಪಟ್ಟು ಅಸುನೀಗಿದ್ದಾರೆ.

ಈ ಅವಧಿಯಲ್ಲಿ ತಮಿಳುನಾಡಿನಲ್ಲಿ ಆರು ಸಂಗಾತಿಗಳು ಕೊಲೆಗೀಡಾಗಿದ್ದಾರೆ. ಅವರು ಪೋಲೀಸ್ ಗೋಳಿಬಾರು, ಆರ್.ಎಸ್.ಎಸ್. ಆಕ್ರಮಣ ಹಾಗೂ ಆಡಳಿತವರ್ಗಗಳ ಗೂಂಡಾ ದಾಳಿ ಎದುರಿಸುತ್ತಾ ತಮ್ಮ ಪ್ರಾಣಾರ್ಪಣೆಗೈದಿದ್ದಾರೆ. ಬಿಹಾರದಲ್ಲಿ 25 ಸಂಗಾತಿಗಳು ಪೋಲೀಸರಿಂದ, ಭೂಮಾಲಿಕರ ಗೂಂಡಾಗಳಿಂದ ಮತ್ತು ಕಾಂಗ್ರೆಸ್ (ಐ) ದಾಳಿಗಳಿಂದ ಕೊಲ್ಲಲ್ಪಟ್ಟಿದ್ದಾರೆ. ಪಂಜಾಬಿನಲ್ಲಿ ಒಬ್ಬ ಸಂಗಾತಿ ಪೋಲೀಸ್ ಲಾಠೀಪ್ರಹಾರದಿಂದ ಅಸುನೀಗಿದ್ದಾರೆ. ಮೋದೀ ನಗರದಲ್ಲಿ ಮಾಲೀಕರ ಏಜೆಂಟರುಗಳಿಂದ ಹತ್ತು ಕಾರ್ಮಿಕರು ಹಾಗೂ ಅವರ ಕುಟುಂಬದ ಸದಸ್ಯರು ಕೊಲೆಯಾಗಿದ್ದಾರೆ. ಇವರಲ್ಲಿ ಒಬ್ಬ ಸಿ.ಐ.ಟಿ.ಯು. ಮುಖಂಡರ ಹೆಂಡತಿಯೂ ಸೇರಿದ್ದರು.

ಇತರ ಹಲವಾರು ಮಂದಿ ಇತರ ರಾಜ್ಯಗಳಲ್ಲಿ, ಕಾರ್ಮಿಕರ, ರೈತರ, ಕೃಷಿ ಕಾರ್ಮಿಕರ, ವಿದ್ಯಾರ್ಥಿಗಳ, ಯುವ ಜನರ ಹಾಗೂ ಮಹಿಳೆಯರ ಹೋರಾಟಗಳಲ್ಲಿ ತಮ್ಮ ಜೀವತೆತ್ತಿದ್ದಾರೆ.

ಪಕ್ಷದ ಅಧಿವೇಶನ, ಪಕ್ಷಕ್ಕಾಗಿ ಹಾಗೂ ದುಡಿಯುವ ಜನತೆಗಾಗಿ ದೃಢವಾಗಿ ನಿಂತ ಈ ಸಂಗಾತಿಗಳ ಬಗ್ಗೆ ಹೆಮ್ಮೆಪಡುತ್ತದೆ. ಅವರ ಮಹಾನ್ ಉದಾಹರಣೆ ಕಾರ್ಮಿಕವರ್ಗದ ಆಂದೋಲನವನ್ನು ಮುಂದೊಯ್ಯಲು ನಮಗೆ ಸದಾ ಪ್ರೇರಣೆ ನೀಡುತ್ತದೆ.

ಅಧಿವೇಶನ ಅವರ ಹೋರಾಟವನ್ನು ಮುಂದುವರಿಸಿ, ಅವರನ್ನು ಸದಾ ಸ್ಮರಿಸಿಕೊಳ್ಳುವ ಪ್ರತಿಜ್ಞೆಗೈಯುತ್ತದೆ. ಅವರ ಜೀವನ ಮತ್ತು ಬಲಿದಾನ ಅವರು ಬಿಟ್ಟು ಹೋದ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸುವ ನಮ್ಮೆಲ್ಲರ ನಿರ್ಧಾರವನ್ನು ದೃಢಗೊಳಿಸುತ್ತದೆ.

ಅಧಿವೇಶನ ಹುತಾತ್ಮರಾದ ಈ ಎಲ್ಲಾ ಸಂಗಾತಿಗಳ ಕುಟುಂಬಗಳಿಗೆ ತಮ್ಮ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತದೆ.

## ಕಾ| ಬಿ. ಟಿ. ರಣದಿವೆಯುವರಿಂದ

# 'ಕರಡು ರಾಜಕೀಯ ನಿರ್ಣಯ'ದ ಮಂಡನೆ

ಕರಡು ರಾಜಕೀಯ ನಿರ್ಣಯವನ್ನು ಮಂಡಿಸುತ್ತಾ, ಕಾಂ.ಬಿ. ಟಿ. ಆರ್‌ರವರು 'ನಮ್ಮ ದೇಶದ ಪರಿಸ್ಥಿತಿ ಮಾತ್ರವೇ ಅಲ್ಲ, ಇಡೀ ವಿಶ್ವದಲ್ಲಿ ನಡೆಯುತ್ತಿರುವ ವರ್ಗ ಸಂಘರ್ಷಗಳೆಲ್ಲಾ ನಮ್ಮ ಪಕ್ಷಕ್ಕೆ ಕಾಳಜಿಯನ್ನುಂಟು ಮಾಡುವಂತಹವೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ, ನಾವು ಜಾಗತಿಕ ರಂಗದಲ್ಲಿ ಬೆಳೆಯುತ್ತಿರುವವೈರುಧ್ಯಗಳನ್ನು ಹಾಗೂ ಭಾರತದಲ್ಲಿ ನಮ್ಮ ಇಂದಿನ ಚಳುವಳಿಯ ಮೇಲೆ ಅದರ ಪರಿಣಾಮವನ್ನು, ಅರ್ಥ ಮಾಡಿಕೊಳ್ಳಬೇಕು.

ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನ ಬಗ್ಗೆ ಉಲ್ಲೇಖಿಸುತ್ತಾ, ಬಿ.ಟಿ. ಆರ್. ರವರು ಅದರಲ್ಲಿ ಒಂದು ಸಣ್ಣ ಚೇತರಿಕೆ ಕಂಡರೂ,ತಂತ್ರಜ್ಞಾನದಕ್ರಾಂತಿ ಸಂಭವಿಸಿದರೂ,ಬಂಡವಾಳಶಾಹಿಸಮಾಜದ ಸಮಸ್ಯೆಗಳು ಪರಿಹಾರವಾಗಿಲ್ಲ. ದೀರ್ಘ ಕಾಲದ ಬಿಕ್ಕಟ್ಟಿನ ಮಧ್ಯೆ, ಬಂಡವಾಳ ಶಾಹಿ ವ್ಯವಸ್ಥೆ ಪಡೆದ ಚೇತರಿಕೆ ನಿಧಾನವಾಗಿದೆ. ಹೆಚ್ಚಿನ ಬಡ್ಡಿ ದರಗಳು ಹಾಗೂ ಡಾಲರ್‌ನ ಅಧಿಕ ಮೌಲ್ಯ ಈ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತಿವೆ. ಇತ್ತೀಚಿಗೆ ಡಾಲರಿನ ಮೌಲ್ಯ ಕಡಿಮೆಯಾಗಿದೆ. ಇದು ಜಪಾನಿನಲ್ಲಿ, ಅಮೇರಿಕಾದಲ್ಲಿ ಮತ್ತಿತರ ದೇಶಗಳಲ್ಲಿ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. ಪೌಂಡ್‌ನ ಮೌಲ್ಯ ಕೂಡ ಕಡಿಮೆಯಾಗಿದೆ. ನಿರುದ್ಯೋಗದ ಸಮಸ್ಯೆ ಉಲ್ಬಣಗೊಳ್ಳುತ್ತಿದೆ.

ಈ ಬಿಕ್ಕಟ್ಟಿನಿಂದತಪ್ಪಿಸಿಕೊಳ್ಳುವುದಕ್ಕೆ ಸಾಮ್ರಾಜ್ಯಶಾಹಿಗಳಿಗೆ ಇರುವ ದಾರಿ ಹೆಚ್ಚು ಮಾರುಕಟ್ಟೆಗಳನ್ನು ಕಬಳಿಸುವುದು ಈ ಉದ್ದೇಶಕ್ಕಾಗಿಯೇ ಅವರು ಯುದ್ಧ ಸಿದ್ಧತೆಯಲ್ಲಿ ತೊಡಗಿದ್ದಾರೆ. ಇದು ಎರಡು ಸಮಾಜ ವ್ಯವಸ್ಥೆಗಳ ನಡುವಿನ ತಾರತಮ್ಯವನ್ನು ನೇರವಾಗಿ ಬಯಲಿಗಿಡುತ್ತದೆ. ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿಯ ರಾಕ್ಷಸೀ ವ್ಯವಸ್ಥೆ, ಅದರ ಸಿದ್ಧ ವಸ್ತುಗಳಿಗೆ ಮಾರುಕಟ್ಟೆ ಇಲ್ಲದ್ದಕ್ಕಾಗಿ ಯುದ್ಧಕ್ಕಾಗಿ ಕಾಲ್ಕೆರೆಯುತ್ತಾ ಮಿಲಿಟರಿ-ಕೈಗಾರಿಕಾ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಿ ಮಿಲಿಟರಿ ಮತ್ತಿತರ ಯುದ್ಧ ಸಾಧನಗಳನ್ನು ಉತ್ಪಾದಿಸುತ್ತಿದೆ. ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮ ಇದು.

### ಮೊನಚಾದ ವೈರುಧ್ಯಗಳು

ನಮ್ಮ ಕಾಲದ ಪ್ರಮುಖ, ಕೇಂದ್ರ ವೈರುಧ್ಯವೆಂದರೆ ಸಮಾಜವಾದಿ ಹಾಗೂ ಬಂಡವಾಳ ಶಾಹಿಯ ನಡುವಿನವೈರುಧ್ಯವೇ ಈ ವೈರುಧ್ಯ ಮೊನಚಾಗುತ್ತಿದ್ದಂತೆ ಉಳಿದ ವೈರುಧ್ಯಗಳೂ ತೀವ್ರವಾಗುತ್ತವೆ. ಸಾಮ್ರಾಜ್ಯಶಾಹಿ ಬಣದ ಒಳಗೇ ಇರುವ ವೈರುಧ್ಯಗಳ ಬಗ್ಗೆ ಮಾತನಾಡುತ್ತಾ ಕಾಂ. ಬಿ. ಟಿ. ಆರ್. ರವರು, ಸಾಂಪ್ರದಾಯಿಕ ಹಾಗೂ ರಾಸಾಯನಿಕ ಶಸ್ತ್ರಾಸ್ತ್ರಗಳಿಗೆಸಂಬಂಧಿಸಿದಂತೆ,ಅಸಂಸ್ಥಾ(USA) ತನ್ನ ನಿರ್ಣಯವನ್ನೇ ಇತರರ ಮೇಲೆ ಹೇರಲು ಪ್ರಯತ್ನಿಸಿತು. ಈ ವೈರುಧ್ಯದ ಇನ್ನೊಂದು ಆಯಾಮವೆಂದರೆ ಟ್ಯಾರಿಫ್ ಯುದ್ಧದ ರೂಪದಲ್ಲಿ ವ್ಯಕ್ತವಾಗುತ್ತಿರುವ ಆರ್ಥಿಕ ಸಂಘರ್ಷಗಳು.(ಟ್ಯಾರಿಫ್‌ಯುದ್ಧವೆಂದರೆ ಸಾಮ್ರಾಜ್ಯಶಾಹಿ ದೇಶಗಳು ಪರಸ್ಪರರ ರಫ್ತುಗಳು ತಮ್ಮ ದೇಶದ ಮಾರುಕಟ್ಟೆಯನ್ನು ಕಬಳಿಸುವುದನ್ನು ತಡೆಯುವುದಕ್ಕೆ ಹಾಕುವ ಸುಂಕಗಳು) ಇವೆಲ್ಲವೂ ಸಾಮ್ರಾಜ್ಯಶಾಹಿ ವಲಯದಲ್ಲಿ ಬಿರುಕುಗಳಿವೆ ಎಂಬುದನ್ನು ಎತ್ತಿ ತೋರಿಸಿದವು.

ಬಂಡವಾಳಶಾಹಿ ಹಾಗೂ ಕಾರ್ಮಿಕ ವರ್ಗದ ನಡುವಿನ ವೈರುಧ್ಯ—ಸಾಮಾಜಿಕ ಕಲ್ಯಾಣದ ಕ್ರಮಗಳನ್ನು ಕಡಿತಗೊಳಿಸುವುದು, ಒಂದು ವರ್ಷ ಕಾಲದ, ಬ್ರಿಟನ್ನಿನ ಗಣಿ ಕೆಲಸಗಾರರ ಸಂಪು, ಹಾಗೂ ಶಾಂತಿ ಚಳುವಳಿಯಲ್ಲಿ ಕಾರ್ಮಿಕ ವರ್ಗ ಅಣಿನೆರೆಯುತ್ತಿರುವುದು—ಇವುಗಳ ಮೂಲಕ ಪ್ರತಿಬಿಂಬಿಸಲ್ಪಡುತ್ತಿರುವುದನ್ನು ತೋರಿಸುತ್ತದೆ.

ರಾಷ್ಟ್ರೀಯ ವಿಮೋಚನಾ ಚಳುವಳಿ ಹಾಗೂ ಸಾಮ್ರಾಜ್ಯ ಶಾಹಿಗಳ ನಡುವಿನ ವೈರುಧ್ಯವೂ ಮೊನಚಾಗಿದೆ. ಇದು ಪ್ಯಾಲೆಸ್ಟೀನ್ ಪ್ರಶ್ನೆ ಇನ್ನೂ ಬಗೆಹರಿಯದೆ ಇರುವುದರಲ್ಲಿ, ಗ್ರೆನಡಾ ಮೇಲಿನ ಆಕ್ರಮಣದಲ್ಲಿ, ನಿಕರಾಗುವಾದ ಮೇಲಿನ ಧಾಳಿಯಲ್ಲಿ, ವ್ಯಕ್ತಗೊಂಡಿದೆ. ವಿಶ್ವ ಬ್ಯಾಂಕ್ ಹಾಗೂ ಐ. ಎಂ. ಎಫ್.

ಮೂಲಕ ಮೂರನೇ ವಿಶ್ವದ ರಾಷ್ಟ್ರಗಳಿಗೆ ಸಾಲದ ಬಲೆಯನ್ನು ಹರಡಿದ್ದಾರೆ. ಇದರಿಂದ ಈ ವೈರುಧ್ಯ ಮತ್ತಷ್ಟು ತೀವ್ರವಾಗಿದೆ.

ಇಂದಿನ ಜಾಗತಿಕ ಪರಿಸ್ಥಿತಿಯ ಪ್ರಾತಿನಿಧಿಕ ಲಕ್ಷಣ ವೆಂದರೆ ಸೋವಿಯೆತ್ ದೇಶದ ನಾಯಕತ್ವದ ಸಮಾಜವಾದಿ ಬಣ ಹಾಗೂ ಅಸಂಸ್ಥಾ ನಾಯಕತ್ವದ ಸಾಮ್ರಾಜ್ಯ ಶಾಹಿ ಬಣದ ನಡುವಣ ವೈರುಧ್ಯ. ಫ್ಯಾಸಿಸ್ಟ್ ವಿರೋಧಿ ವಿಜಯದ 40ನೇ ವಾರ್ಷಿಕದ ಆಚರಣೆ ಹಾಗೂ ಆಫ್ಘಾನಿಸ್ತಾನದ ಸಂರಕ್ಷಣೆಯಲ್ಲಿ ಸಾಧಿತವಾದಂತೆ, ಶಕ್ತಿ ಸಮತೋಲನ ಶ್ರೀಸಾಮಾನ್ಯನಿಗೆ ಅನುಕೂಲಕರವಾಗಿದೆ.

ಯುದ್ಧ, ಬಂಡವಾಳ ಶಾಹಿಯ ನಿರಂತರ ಸಹಚರ. ಬಂಡವಾಳ ಶಾಹಿ ಬಿಕ್ಕಟ್ಟು ಬೆಳೆಯುತ್ತಾ ಹೋದಂತೆ, ಸಮಾಜವಾದಿ ಜಗತ್ತಿನ ಬಲವೂ, ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯ ಶಕ್ತಿಯೂ ಜೊತೆ ಜೊತೆಗೇ ಬೆಳೆಯುತ್ತಿವೆ.

## ಶಾಂತಿಗಾಗಿ ಹೋರಾಟ

ಸೋವಿಯೆತ್ ದೇಶದ ಶಾಂತಿಯ ಪ್ರಸ್ತಾವಗಳಿಗೆ ಸಂಬಂಧಿಸಿ, ಅನೇಕ ಜನ, ಇವು ಜಾಣ ಪ್ರಚಾರ ಸಾಧನ ಎಂದಷ್ಟೇ ಪರಿಗಣಿಸುತ್ತಿದ್ದಾರೆ. ಇದೊಂದು ಗಂಭೀರ ರಾಜಕೀಯ ಸಮರ, ಪ್ರಚಾರವಲ್ಲ. ಸಮಾಜವಾದಿ ಜಗತ್ತಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಜಾಗತಿಕ ಶಾಂತಿ ಇನ್ನೂ ಸಂಪಾದಿಸಬೇಕಾದದ್ದು. ಈ ಶಾಂತಿ ಹೋರಾಟ ಸಮಾಜವಾದಿ ಬಣದ, ಸಾಮ್ರಾಜ್ಯಶಾಹಿಬಣದ ನಿಜ ಸ್ವರೂಪವನ್ನು ತೆರೆದಿಡುತ್ತದೆ ಎಂದರು.

ಶಾಂತಿಯ ರಕ್ಷಣೆಗಾಗಿ ಸಂಘಟನೆ ಎಂಬುದರ ಅರ್ಥ, ಸೋವಿಯೆತ್‌ದೇಶದ ರಕ್ಷಣಾಸನ್ನದ್ಧತೆ ಮತ್ತು ಪ್ರತಿಘಾತಿ ನಡೆಸುವ ಸಾಮರ್ಥ್ಯವೇ. ಅಣುಯುದ್ಧದ ಬೆದರಿಕೆಯ ವಿರುದ್ಧ ಹೋರಾಡುವುದು ಎಲ್ಲಾ ಕಾರ್ಮಿಕ ವರ್ಗದ ಪಕ್ಷಗಳ ಕರ್ತವ್ಯ. ಅದಕ್ಕಾಗಿಯೇ ನಮ್ಮ ಪಕ್ಷ ಶಾಂತಿ ಚಳುವಳಿಯನ್ನು ನಾವು ನಿರ್ವಹಿಸಬೇಕಾದ ಅತಿ ಮುಖ್ಯ ಅಂತರರಾಷ್ಟ್ರೀಯ ಕರ್ತವ್ಯ ಎಂದು ಪರಿಗಣಿಸುತ್ತದೆ.

ಶಾಂತಿ ಚಳುವಳಿ ಅಂತರರಾಷ್ಟ್ರೀಯ ಪ್ರಾಮುಖ್ಯತೆಯದ್ದು. ಯುದ್ಧದ ವಿರುದ್ಧ, ಶಾಂತಿಗಾಗಿ ಅತ್ಯಂತ ವಿಶಾಲವಾದ ರಂಗವನ್ನು ಕಟ್ಟಬೇಕು ಮತ್ತು ಅದೇ ಇಂದಿನ ಅತಿ ದೊಡ್ಡ ಕರ್ತವ್ಯ ಎಂಬುದು ನಮ್ಮ ತಿಳುವಳಿಕೆ.

ಪರಮ ಕೌಶಲ್ಯದ ಶಸ್ತ್ರಾಸ್ತ್ರಗಳ ಸಂಗ್ರಹ ನಮ್ಮ ಎದುರಿಗೇ ಇದ್ದರೂ ಕೂಡ ವಿಶ್ವ ಕಮ್ಯುನಿಸ್ಟ್ ಚಳುವಳಿ ಇನ್ನೂ ಪೂರ್ಣವಾಗಿ ಐಕ್ಯವಾಗಿಲ್ಲ. ಆದರೂ ಪರಿಸ್ಥಿತಿ ಬದಲಾಗಿದೆ. ಒಳ್ಳೆಯ ದಿಕ್ಕಿನಲ್ಲಿ ನಡೆದಿದೆ. ಸಮಾಜವಾದಿ ಬಣದ ಎರಡು ಪ್ರಧಾನ ಪಕ್ಷಗಳು ಪರಸ್ಪರ ಸಮೀಪಕ್ಕೆ ಬಂದಿವೆ.

ಸಿ.ಪಿ.ಐ. (ಎಂ)ಗೆ (ಸಿ.ಪಿ.ಎಸ್.ಯು ಹಾಗೂ ಸಿ.ಪಿ.ಸಿ.ಗಳ ಮತ್ತು ಸಿ.ಪಿ.ಐ. (ಎಂ) ಸಂಬಂಧದ ಪ್ರಶ್ನೆಯಲ್ಲಿ) ಸಮಾನ ದೂರವೆಂಬ ಪ್ರಶ್ನೆಯಿಲ್ಲ ಸಮಾಜವಾದಿ ಬಣದ ಹಾಗೂ ಸಾಮ್ರಾಜ್ಯಶಾಹಿ ಬಣದ ನಡುವಿನ ವೈರುಧ್ಯವೇ ಇಂದು ಪ್ರಧಾನ ವೈರುಧ್ಯವೆಂದೂ, ಸಾಮ್ರಾಜ್ಯಶಾಹಿಯೇ ವಿಶ್ವದ ಜನತೆಯ ಪ್ರಮುಖ ವೈರಿಯೆಂದೂ ನಾವು ಪರಿಗಣಿಸುತ್ತೇವೆ. ಈ ಆಧಾರದಲ್ಲಿ ನಾವು ಕಮ್ಯುನಿಸ್ಟ್ ಐಕ್ಯತೆಯನ್ನು ಬೆಸೆಯಬೇಕು.

## ರಾಷ್ಟ್ರೀಯ ಪರಿಸ್ಥಿತಿ

ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಬಿ.ಟಿ.ಆರ್.ರವರು ಮಾತನಾಡುತ್ತಾ, ಇಂದಿನ ಪ್ರಧಾನ ಕರ್ತವ್ಯವೆಂದರೆ ಆಳುವ ಪಕ್ಷವನ್ನು ಪ್ರತ್ಯೇಕಿಸಿ ದೂರ ಮಾಡುವ ತಂತ್ರಗಳನ್ನು ರೂಪಿಸುವುದು ಎಂದರು.

ಕೆಲವು ವರ್ಷಗಳ ಹಿಂದೆ ಒಬ್ಬ ವಿಯೆಟ್ನಾಂ ನಾಯಕರು ನಮ್ಮ ನಿಯೋಗಕ್ಕೆ ಈ ರೀತಿ ಹೇಳಿದ್ದರು "ಕಾರ್ಯಯೋಜನೆಯಿಲ್ಲದ ಬರೀ ಕಾರ್ಯತಂತ್ರ ಪರಿಷ್ಕರಣವಾದಕ್ಕೆ ಎಡೆಕೊಡುತ್ತದೆ. ಕಾರ್ಯತಂತ್ರವಿಲ್ಲದೆ ಬರೀ ಕಾರ್ಯಯೋಜನೆ ಪಂಥವಾದಕ್ಕೆ ಎಡೆಕೊಡುತ್ತದೆ."

ಭಾರತದ ಆರ್ಥಿಕದಲ್ಲಿ, ಬಿಕ್ಕಟ್ಟಿನ ಮೂಲಾಧಾರವೇ ಇಂದಿನ ಭೂಸಂಬಂಧಗಳು. ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಆಳುವ ವರ್ಗ ಹೆಚ್ಚು ವಿದೇಶಿ ಸಾಲಕ್ಕಾಗಿ ಪರಿತಪಿಸುತ್ತದೆ. ಯೋಜನೆಯನ್ನು ಕುಗ್ಗಿಸುವ ಹೊಸ ಆರ್ಥಿಕ ನೀತಿಯನ್ನು ಅನುಸರಿಸಲಾಗುತ್ತಿದೆ; ಸಾರ್ವಜನಿಕ ಉದ್ಯಮದ ಪಾತ್ರವನ್ನು ಕೆಳಕ್ಕೆ ತಳ್ಳಲಾಗುತ್ತಿದೆ; ಬಹುರಾಷ್ಟ್ರೀಯ ಕಂಪನಿಗಳು ಸ್ವಚ್ಛಂದವಾಗಿ ಕಾರ್ಯಾಚರಣೆ ನಡೆಸಲು ಅವಕಾಶ ನೀಡಲಾಗಿದೆ. ಭಾರತದಂತಹ ರಾಷ್ಟ್ರಗಳಲ್ಲಿ ಸಾರ್ವಜನಿಕ ಉದ್ಯಮವಲಯ, ವಿದೇಶಿ ಖಾಸಗಿ ಬಂಡವಾಳದ ವಿರುದ್ಧ ನಿರ್ದಿಷ್ಟ ಪಾತ್ರ ವಹಿಸುತ್ತದೆ. ಅಸಂಸ್ಥಾ (U.S.) ನಿಯಂತ್ರಿಸುತ್ತಿರುವ ವಿಶ್ವಬ್ಯಾಂಕ್‌ನ ಇಚ್ಛೆಗನುಗುಣವಾಗಿ, ಭಾರತವನ್ನು, ಹೆಚ್ಚುತ್ತಿರುವ ವಿದೇಶಿ ನಿಯಂತ್ರಣದಡಿಯಲ್ಲಿ, ಮುಕ್ತ ಖಾಸಗಿ ಆರ್ಥಿಕವನ್ನಾಗಿ ಮಾಡುವುದಕ್ಕಾಗಿ ಸಾರ್ವಜನಿಕ ಉದ್ಯಮವಲಯವನ್ನೇ ಕರಗಿಸಿಬಿಡಲಾಗುತ್ತಿದೆ. ವಿದೇಶಿ

ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುವುದಕ್ಕಾಗಿ, ಆಟೋಮೆಷನ್ (ಸ್ವಯಂಚಾಲೀಕರಣ), ಕಂಪ್ಯೂಟರೀಕರಣಗಳನ್ನು ತರಲಾಗುತ್ತಿದೆ. ಈ ಎಲ್ಲದರ ಪರಿಣಾಮವೆಂದರೆ ದೇಶದ ಸ್ವಾತಂತ್ರ್ಯಕ್ಕೆ ದೊಡ್ಡ ಅಪಾಯ.

ನಮ್ಮ ಕಾರ್ಯತಂತ್ರ ನಿರೂಪಣೆಗೆ ಈ ಬೆಳವಣಿಗೆಗಳ ಪ್ರಸ್ತುತತೆಯನ್ನು ವಿವರಿಸುತ್ತಾ, ಕಾ೦ ಬಿ.ಟಿ.ಆರ್ ರವರು, ಸಣ್ಣ ಬಂಡವಾಳಗಾರರು ಈಗಾಗಲೇ ಭಯ ವಿಹ್ವಲರಾಗಿದ್ದಾರೆ, ಆಳುವ ವರ್ಗಗಳ ಒಂದು ವಿಭಾಗ ಕೂಡ ಈ ನೀತಿಯನ್ನು ವಿರೋಧಿಸಲಾರಂಭಿಸಿದೆ. ಬಿಕ್ಕಟ್ಟಿನ ಒತ್ತಡದ ಪರಿಣಾಮವಾಗಿ ಕುಸಿಯುತ್ತಿರುವ ಕೃಷಿ ಉತ್ಪನ್ನಗಳ ಬೆಲೆಯಿಂದ ಹಾಗೂ ಏರಿದ ತೆರಿಗೆ ಮೊದಲಾದವುಗಳಿಂದ ರೈತಾಪಿ ವರ್ಗದೊಳಗಿನ ಮೇಲಿನ ವಿಭಾಗಗಳೂ ತೊಂದರೆಗೊಳಗಾಗಿವೆ ಎಂದರು.

## ಭಾರತಕ್ಕೆ ಎದುರಾಗಿರುವ ಅಪಾಯಗಳು

ಇನ್ನೊಂದು ವಿರುದ್ಧಾತ್ಮಕವಾದ ಬೆಳವಣಿಗೆಯೆಂದರೆ ಆಳುವ ವರ್ಗ ಮತ್ತು ಆಳುವ ಪಕ್ಷ ಇನ್ನೂ ಅಲಿಪ್ತ ನೀತಿಯನ್ನು ಅನುಸರಿಸುತ್ತಿರುವಂತೆಯೇ ಬಹುರಾಷ್ಟ್ರೀಯ ಕಂಪನಿಗಳಿಗೆ ಉದಾರವಾದ ರಿಯಾಯಿತಿಗಳನ್ನು ನೀಡುತ್ತಿರುವುದು. ಈ ಬಹುರಾಷ್ಟ್ರೀಯ ಕಂಪನಿಗಳಿಂದ ಆರ್ಥಿಕದ ಮೇಲೆ ಭಯಂಕರವಾದ ಒತ್ತಡ ಬರಲಿದೆ. ಇದು ನಮ್ಮ ವಿದೇಶಿ ನೀತಿಯನ್ನು ಬಾಧಿಸಲಿದೆ. ಈ ಪರಿಸ್ಥಿತಿಯ ಮುಖ್ಯ ದೌರ್ಬಲ್ಯವೆಂದರೆ ಜನಸಮುದಾಯವನ್ನು ಅಲಿಪ್ತ ಚಳುವಳಿಯಲ್ಲಿ ಒಳಗೊಳ್ಳಲಾಗಿಲ್ಲ.

# ಶಾಂತಿ ಮತ್ತು ಸಮಾಜವಾದ ಚಿರಾಯುವಾಗಲಿ : ಬ್ರಿಟಿಷ್ ಕಮ್ಯುನಿಷ್ಟ್ ಪಕ್ಷದ ಸಂದೇಶ

ನಾವು ನಿಮ್ಮ ಪಕ್ಷದ ಹನ್ನೆರಡನೇ ಅಧಿವೇಶನಕ್ಕೆ ಅತ್ಯಂತ ಹಾರ್ದಿಕ ಸೋದರ ಶುಭಾಶಯಗಳನ್ನು ಕಳುಹಿಸುತ್ತಿದ್ದೇವೆ.

ಬ್ರಿಟನ್ನಿನ ಮತ್ತು ಭಾರತೀಯ ಕಮ್ಯುನಿಸ್ಟರ ನಡುವೆ ಹಲವಾರು ವರ್ಷಗಳಿಂದ ಸ್ನೇಹ ಹಾಗೂ ಸಹಕಾರದ ನಿಕಟ ಸಂಬಂಧಗಳು ಇವೆ. ನಾವು ಭಾರತದಲ್ಲಿನ ಬೆಳವಣಿಗೆಗಳನ್ನು ಮತ್ತು ನಿಮ್ಮ ಪಕ್ಷದ ಧೋರಣೆಗಳು ಹಾಗೂ ಕಾರ್ಯಾಚರಣೆಗಳನ್ನು ಸಕ್ರಿಯ ಆಸಕ್ತಿಯಿಂದ ಗಮನಿಸುತ್ತಲೇ ಇರುತ್ತೇವೆ.

ನಾವೆಲ್ಲಾ ಜಗತ್ತಿನ ಎಲ್ಲಾ ಭಾಗಗಳಲ್ಲಿ ಕ್ಲಿಷ್ಟ ಸಮಸ್ಯೆಗಳನ್ನು ಹಾಗೂ ದೊಡ್ಡ ಅಪಾಯವನ್ನು ಎದುರಿಸುತ್ತಿದ್ದೇವೆ. ಪರಮಾಣು ನಿರ್ನಾಮದ ಬೆದರಿಕೆ ಸದಾ ಎದುರಿರುವ ಬೆದರಿಕೆ. ಪರಮಾಣು ಯುದ್ಧ ನಡೆದರೆ ಬದುಕುಳಿಯುವವರು ಬಹಳ ಕಮ್ಮಿ ಎನ್ನುವುದು ನಮಗೆ ತಿಳಿದಿದೆ. ಈ ಬೆದರಿಕೆಯನ್ನು ತಪ್ಪಿಸುವ ನಿಜವಾದ ನಿಶ್ಯಸ್ತ್ರೀಕರಣ ಕ್ರಮಗಳನ್ನು ಸಾಧಿಸುವ, ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಮಾನದಂಡಗಳನ್ನು ಹೇರುವ ಹೋರಾಟ ಒಂದು ನಿರ್ಣಾಯಕ ಹೋರಾಟ. ಭಾರತ ಇದರಲ್ಲಿ ತನ್ನ ಸ್ವಂತ ಕಾರ್ಯಾಚರಣೆಗಳ ಮೂಲಕ ಮತ್ತು ಅಲಿಪ್ತ ಆಂದೋಲನವನ್ನು ಪ್ರತಿನಿಧಿಸುವ ಮೂಲಕ ಒಂದು ಪ್ರಮುಖ ಪಾತ್ರವಹಿಸುತ್ತದೆ.

ಆದರೆ ಇದು ಸಾಧ್ಯವಾಗುವುದು ಭಾರತದಲ್ಲಿನ ಸಾರ್ವತ್ರಿಕ ಭಾವನೆಯ ಬಲದಿಂದಾಗಿ ಮತ್ತು ಶಾಂತಿ, ನಿಶ್ಯಸ್ತ್ರೀಕರಣ ಹಾಗೂ ಅಲಿಪ್ತತೆಯ ಪರವಾಗಿ ಲಕ್ಷಾಂತರ ಜನಗಳನ್ನು ಅಣಿನೆರೆಸುವುದರ ಮೂಲಕ. ಭಾರತ ಇತ್ತೀಚೆಗೆ ರಾಷ್ಟ್ರೀಯ ಐಕ್ಯತೆಯ ಮೇಲೆ ತೀವ್ರ ಆಘಾತಗಳನ್ನು ಮತ್ತು ತನ್ನ ಅಂತರಾಷ್ಟ್ರೀಯ ಧೋರಣೆಗಳನ್ನು ಬದಲಿಸುವಂತೆ ಸಾಮ್ರಾಜ್ಯಶಾಹೀ ಒತ್ತಡ ಎದುರಿಸಿದೆ.

ಈ ಒತ್ತಡವನ್ನು ಪ್ರತಿರೋಧಿಸುವಲ್ಲಿ ಹಾಗೂ ಸರಕಾರದ ಧೋರಣೆಗಳ ಮೇಲೆ ಪ್ರಭಾವ ಬೀರುವಲ್ಲಿ ನಿಮ್ಮ ಪ್ರಯತ್ನಗಳು ಮತ್ತು ಎಡ, ಪ್ರಗತಿಶೀಲ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳ ಪ್ರಯತ್ನಗಳು ಮಹತ್ವದ್ದು. ನಿಮ್ಮ ಭವಿಷ್ಯದ ಚಟುವಟಿಕೆಗಳಲ್ಲಿ ನಿಮಗೆ ಸಕಲ ಯಶಸ್ಸು ಸಿಗಲೆಂದು ನಾವು ಹಾರೈಸುತ್ತೇವೆ.

ಶಾಂತಿ ಮತ್ತು ಸಮಾಜವಾದ ಚಿರಾಯುವಾಗಲಿ !

**ಗೋರ್ಡನ್ ಮೆಕ್ಲೆನ್ನನ್**
ಪ್ರಧಾನ ಕಾರ್ಯದರ್ಶಿ
ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ

ವಿಶ್ವದ ಶಕ್ತಿಸಮತೋಲವನ್ನು ಬದಲಾಯಿಸುವಲ್ಲಿ ಅಲಿಪ್ತ ಚಳುವಳಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ರಾಷ್ಟ್ರೀಯ ವಿಮೋಚನೆ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳು ಅಲಿಪ್ತ ಚಳುವಳಿಯಲ್ಲಿ ತೂಗುಯ್ಯಾಲೆ ನಡೆದರೂ, ವಿಶ್ವಶಾಂತಿಯನ್ನು ಕಾಯ್ದುಕೊಳ್ಳುವುದರ ಪರವಾಗಿವೆ.

ಈ ತೂಗುಯ್ಯಾಲೆಗಳನ್ನಷ್ಟೇ ಒತ್ತಿ ಹೇಳುವುದು ತಪ್ಪು ದೃಷ್ಟಿಕೋನ. ಏಕೆಂದರೆ ಇದು ಸಾಮ್ರಾಜ್ಯಶಾಹಿ ಒಳಸಂಚುಗಳ ವಿರುದ್ಧ ಅಲಿಪ್ತ ಚಳುವಳಿ ವಹಿಸುವ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ನಮ್ಮ ಹಿರಿ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿಗಳ ನಡುವೆ ಇರುವ ವೈರುಧ್ಯ, ಅನೇಕ ರಂಗಗಳಲ್ಲಿ, ವಿಶೇಷವಾಗಿ ವಿದೇಶ ನೀತಿಯ ರಂಗದಲ್ಲಿ ನಮ್ಮ ಹೋರಾಟಗಳ ಹಿತಗಳಿಗೆ ಅನುಕೂಲವಾಗಿದೆ.

ಸಾಮ್ರಾಜ್ಯಶಾಹಿ ಹಾಗೂ ಭಾರತದ ಜನತೆಯ ನಡುವೆ ಮೊನಚಾಗುತ್ತಿರುವ ವೈರುಧ್ಯಗಳನ್ನೂ ಪರಿಗಣಿಸಬೇಕಾಗಿದೆ. ಖಾಲಿಸ್ತಾನ ಚಳುವಳಿಯಲ್ಲಿ, ಅಸ್ಸಾಂವಿಭಜನಕಾರರಿಗೆ ಧನಬೆಂಬಲ ನೀಡುವುದರಲ್ಲಿ, ಅಂತಿಮವಾಗಿ ಇಂದಿರಾಗಾಂಧಿಯ ಕೊಲೆಯಲ್ಲಿ, ಸಾಮ್ರಾಜ್ಯಶಾಹಿಗಳ ಕೈವಾಡ ಸಾಧಿತವಾಗಿದೆ. ನಮ್ಮ ದೇಶದ ಬಹುಸಂಖ್ಯೆಯ ಜನಕ್ಕೆ ಈ ರೀತಿಯ ಬೆಳವಣಿಗೆಗಳಾಗುತ್ತಿರುವುದರ ಅರಿವೇ ಇಲ್ಲ. ನಮ್ಮ ದೇಶದ ಸಮಗ್ರತೆಗಾಗಿ ನಡೆಯುವ ಹೋರಾಟ, ಸರ್ವಾಧಿಕಾರದ ವಿರುದ್ಧದ ಹೋರಾಟವೂ ಹೌದು ಎಂದು ಬಿ. ಟಿ. ಆರ್. ಹೇಳಿದರು.

ಭೂಮಾಲಿಕರು ಹಾಗೂ ಬಂಡವಾಳಶಾಹಿಯ ನಡುವಿನ ಶಾಮೀಲಿನ ನೇರ ಫಲಗಳೇ ಛಿದ್ರಕಾರಿ ಶಕ್ತಿಗಳು. ಧರ್ಮ, ಜಾತಿ, ಪ್ರಾದೇಶಿಕತೆ ಇತ್ಯಾದಿಗಳು ಪುರಾತನ ಭೂಸಂಬಂಧಗಳ ಫಲಗಳು. ಗಿರಿಜನರ ನಡುವೆ, ಬಡಜನತೆಯ ನಡುವೆ ಸಾಮ್ರಾಜ್ಯಶಾಹಿಗಳು ಬಹಳ ಜಾಣತನದ ಆಟ ನಡೆಸುತ್ತಿದ್ದಾರೆ. ನಿಜಸಂಗತಿಯೆಂದರೆ ನಮ್ಮ ಆಳುವ ವರ್ಗಗಳು, ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸಲು ಅಸಮರ್ಥರು ಎಂಬುದು. ಸಿ. ಪಿ. ಐ. (ಎಂ) ಮತ್ತು ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೇ ಈ ಸವಾಲನ್ನು ಎದುರಿಸಬೇಕು. ಜಾತಿವಾದದೊಂದಿಗೆ ಶಾಮೀಲಾಗುವ ಕಾಂಗ್ರೆಸ್ (ಐ)ನ ದಿವಾಳಿಕೋರ ನೀತಿಯನ್ನು ಕೂಡ ನಾವು ನೋಡಿದ್ದೇವೆ. ಆದರೆ ಕಾಂಗ್ರೆಸ್ (ಐ) ಮತ್ತು ಜಾತೀವಾದಿ ಶಕ್ತಿಗಳನ್ನು ಸಮೀಕರಿಸಲಾಗುವುದಿಲ್ಲ.

## ಪ್ರಜಾಪ್ರಭುತ್ವದ ಕುಸಿತ

ಪ್ರಜಾಪ್ರಭುತ್ವ ಕುಸಿಯುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಆಕಾರ ಮಾತ್ರ ಉಳಿದಿದೆ. ನ್ಯಾಯಾಂಗ, ಪೋಲೀಸು, ಆಡಳಿತ, ಎಲ್ಲವೂ ಕುಸಿಯುತ್ತಿದೆ. ಇದು ಕೂಡ ನಮ್ಮ ದೇಶದ ವರ್ಗ ಸಂಘರ್ಷದ ಮೇಲೆ ಪರಿಣಾಮ ಬೀರುತ್ತದೆ. ಆದರೆ ಎಡರಂಗ ಸರ್ಕಾರಗಳು, ಅವುಗಳ ಮೇಲೆ ಕೇಂದ್ರ ಸರ್ಕಾರದಿಂದ ಅನೇಕಧಾಳಿಗಳಾದರೂ ಕುಸಿದಿಲ್ಲ. ಸಾಮಾನ್ಯ ಜನರನ್ನು ಅದುಮಿಡುವುದು ಬಂಡವಾಳಶಾಹಿ ಭೂಮಾಲಿಕ ಮೈತ್ರಿಯ ಒಂದು ಅವಶ್ಯಕತೆ. ಎರಡೂ ಎಡರಂಗ ಸರ್ಕಾರಗಳ ಎಂಟು ವರ್ಷದ ಅಸ್ತಿತ್ವ ಆಳುವ ವರ್ಗಗಳ ಕೊಡುಗೆಯುಲ್ಲ, ಅದು ತೀವ್ರ ವರ್ಗ ಸಂಘರ್ಷದ ಫಲ ಎಂದು ತಿಳಿಯದಿರುವ ಅನೇಕ ಸಂಗಾತಿಗಳಿದ್ದಾರೆ. ಈ ಎಡರಂಗ ಸರ್ಕಾರಗಳ ಹಾಗೂ ಕಾಂಗ್ರೆಸ್ ಸರಕಾರದ ಹಿಂದಿರುವವರ್ಗಗಳು ಬೇರೆ ಬೇರೆ. ಎಡರಂಗ ಸರ್ಕಾರಗಳು ಪ್ರಜಾಪ್ರಭುತ್ವದ ಮುಂಚೂಣಿಯಲ್ಲಿರುವ ಕಾವಲುಠಾಣೆಗಳು, ಪಹರೆಯ ನೆಲೆಗಳು. ನಮ್ಮ ದೇಶದ ವರ್ಗ ವಾಸ್ತವವನ್ನು ಗಣನೆಗೆ ತಾರದೆ ಈ ಎಡರಂಗಸರ್ಕಾರಗಳ ಪ್ರಸ್ತುತತೆಯನ್ನೂ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ.

## ವಿಶಾಲ ಐಕ್ಯತೆ

ಸರ್ವಾಧಿಕಾರಿ ಆಡಳಿತವನ್ನು ನಾಶ ಮಾಡಬೇಕಾದರೆ ಆಳುವ ವರ್ಗಮೈತ್ರಿಯೊಳಗಿನ ಸಂಘರ್ಷದ ಒಂದೇ ಒಂದು ಘಟನೆಯನ್ನುಉದಾಸೀನ ಮಾಡಬಾರದು.

ಪ್ರಜಾಸತ್ತಾತ್ಮಕ ಮೌಲ್ಯಗಳ ಕುಸಿತ, ಕಾರ್ಮಿಕವರ್ಗವನ್ನು, ಸಿ.ಪಿ.ಐ. (ಎಂ) ಮತ್ತು ಇತರ ಎಡಪಕ್ಷಗಳನ್ನು ಮಾತ್ರವಲ್ಲ, ಇತರ ಬಂಡವಾಳಶಾಹಿ ವಿರೋಧ ಪಕ್ಷಗಳನ್ನೂ ತೊಂದರೆಗೀಡುಮಾಡುತ್ತದೆ. ಆದ್ದರಿಂದ ಅವು ಕೂಡ ಸರ್ವಾಧಿಕಾರದ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಬಹುದು. ಸಿ.ಪಿ.ಐ. (ಎಂ) ವಹಿಸಿದ ಪಾತ್ರದಿಂದ ಕೇಂದ್ರ—ರಾಜ್ಯಗಳ ಪ್ರಶ್ನೆ ಒಂದು ಪ್ರಧಾನ ರಾಷ್ಟ್ರೀಯ ಪ್ರಶ್ನೆಯಾಗಿ ಪರಿಣಮಿಸಿದೆ. ಬಿ. ಟಿ. ಆರ್‌ರವರು, ಪಕ್ಷ ಮೂಲಭೂತ ಬೇಡಿಕೆಗಳ ಮೇಲೆ ಜನತೆಯನ್ನು ಎಚ್ಚರಗೊಳಿಸಬೇಕು ಮತ್ತು ಮೀಸಲಾತಿ ಪ್ರಶ್ನೆಯಲ್ಲಿ ಆದಂತೆ ದುಡಿಯುವವರ ಐಕ್ಯತೆ ಭಿನ್ನಭಿನ್ನವಾಗುವುದರ ವಿರುದ್ಧ ಹೋರಾಡಬೇಕು ಎಂದರು. ಜನತೆಯ ಅತಿ ಹಿಂದುಳಿದ ವಿಭಾಗಗಳಲ್ಲಿ ಪಕ್ಷ ಕೆಲಸ ಮಾಡದಿರುವುದರಿಂದ ಅವರನ್ನು ಸರ್ವರಿಗೂ ಸಂಬಂಧಿ

(23ನೆಯ ಪುಟವನ್ನು ನೋಡಿ)

## ಇರಾನೀ ಕಮ್ಯುನಿಸ್ಟರ ಸಂದೇಶ

# ಅಂತರ್ರಾಷ್ಟ್ರೀಯತೆಯ ಉಜ್ವಲ ಅಭಿವ್ಯಕ್ತಿ

ಪ್ರಿಯ ಸಂಗಾತಿಗಳೇ,

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಹನ್ನೆರಡನೇ ಅಧಿವೇಶನವನ್ನು ನಡೆಸುತ್ತಿರುವ ಸಂದರ್ಭದಲ್ಲಿ ನಮ್ಮ ಹಾರ್ದಿಕ ಶುಭಾಶಯಗಳನ್ನು ಸ್ವೀಕರಿಸಬೇಕೆಂದು ವಿನಂತಿ. ಈ ಅಧಿವೇಶನ ಭಾರತೀಯ ಕಾರ್ಮಿಕ ವರ್ಗಕ್ಕೆ ಮತ್ತು ಹಾಗೇನೇ ಶಾಂತಿ ಮತ್ತು ಪ್ರಗತಿಯ ಎಲ್ಲಾ ಶಕ್ತಿಗಳಿಗೆ ಬೆಲೆ ಬಾಳುವ ನಿರ್ಣಯಗಳಿಗೆ ದಾರಿ ಹಾಕಿಕೊಡುತ್ತದೆ ಎಂಬ ವಿಶ್ವಾಸ ನಮಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿಗಳ ನೇತೃತ್ವದ ಜಾಗತಿಕ ಸಾಮ್ರಾಜ್ಯಶಾಹಿ, ಸೃಷ್ಟಿಸಿದ ಬಿಗಿ ಪರಿಸ್ಥಿತಿಯಿಂದಾಗಿ ಮಾನವ ಇತಿಹಾಸದ ಅತ್ಯಂತ ವಿನಾಶಕಾರೀ ಯುದ್ಧದ ಬೆದರಿಕೆ ಎದುರಿಸುತ್ತಿರುವ ಸನ್ನಿವೇಶವಿರುವಾಗ ನಿಮ್ಮ ಪಕ್ಷ ಶಾಂತಿಯ ರಕ್ಷಣೆಗಾಗಿ ವಿವಿದ ಶಕ್ತಿಗಳ ವ್ಯಾಪಕ ಸಂಘಟನೆಯ ಅವಶ್ಯಕತೆಯ ಬಗ್ಗೆ ಒತ್ತು ನೀಡಿರುವುದು ಬಹಳಷ್ಟು ಮಹತ್ವಪೂರ್ಣವಾದ ಅಂಶ.

ಗೌರವಾನ್ವಿತ ಸಂಗಾತಿಗಳೇ,

ಸದ್ಯ ಹಿಂದೂಮಹಾಸಾಗರ ಅಸಂಸ್ಥಾ ನಾವಿಕ ಪಡೆಗಳ ಹಾಗೂ ಅದರ ಮಿಲಿಟರಿ ನೆಲೆಗಳನ್ನು ಬೆಳೆಸುವ ಪ್ರದೇಶವಾಗಿ ಬಿಟ್ಟಿದೆ. ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ಆರಂಭವಾದ ಯುದ್ಧ ಇರಾನ್ ಮತ್ತು ಇರಾಕ್‌ನ ಆಡಳಿತಗಳ ನಡುವೆ ಮುಂದುವರಿಯುತ್ತಿದ್ದು, ಪರ್ಸಿಯಾ ಆಖಾತ ಪ್ರದೇಶವನ್ನು ಜಗತ್ತಿನ ಬಿಗಿ ಪರಿಸ್ಥಿತಿಯ ಮಹತ್ವದ ನಾಭಿ ಕೇಂದ್ರಗಳಲ್ಲಿ ಒಂದಾಗಿ ಪರಿವರ್ತಿಸಿದೆ. ಈ ಯುದ್ಧವನ್ನು ತಡೆಯಲು ನಿಮ್ಮ ಪಕ್ಷದ ಹೋರಾಟ ಎಲ್ಲಾ ಕಮ್ಯುನಿಸ್ಟರು ಮತ್ತು ಶಾಂತಿಪ್ರಿಯ ಶಕ್ತಿಗಳು ಜಾಗತಿಕ ಶಾಂತಿಗಾಗಿ ನಡೆಸುತ್ತಿರುವ ಹೋರಾಟದ ಅಂಗವಾಗಿದೆ.

ಪ್ರಿಯ ಸಂಗಾತಿಗಳೇ,

ಇರಾನೀ ಜನತೆಯನ್ನು ಖೊಮೇನಿಯ ಯುದ್ಧ ಪಿಪಾಸು ಮತ್ತು ದಮನಕಾರೀ ಆಳ್ವಿಕೆಯ ವಿರುದ್ಧ ಅವರ ಹೋರಾಟದಲ್ಲಿ ರಕ್ಷಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನಡೆಸಿದ ಪ್ರಯತ್ನಗಳ ಬಗ್ಗೆ ನಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಲು ಈ ಅವಕಾಶವನ್ನು ಬಳಸಿಕೊಳ್ಳುತ್ತಿದ್ದೇವೆ. ಅತ್ಯಂತ ದುರ್ಗಮ ದಬ್ಬಾಳಿಕೆಯ ಸ್ಥಿತಿಯಲ್ಲಿ ಹೋರಾಡುತ್ತಿರುವ ಇರಾನೀ ಕಮ್ಯುನಿಸ್ಟರೊಂದಿಗೆ ನಿಮ್ಮ ನಿರಂತರ ಸೌಹಾರ್ದತೆ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಒಂದು ಉಜ್ವಲ ಅಭಿವ್ಯಕ್ತಿ.

ಶಾಂತಿ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿ ನಿಮ್ಮ ಹೋರಾಟದಲ್ಲಿ ಜಯದೊರೆಯಲೆಂದು ನಾವು ಹಾರೈಸುತ್ತೇವೆ.

ಅತ್ಯಂತ ಪ್ರಾಮಾಣಿಕ ಕಮ್ಯುನಿಸ್ಟ್ ಶುಭಾಶಯಗಳೊಂದಿಗೆ.

**ಫಾರೊಖ್ ನೆಗಾಹ್‌ದರ್**

ಪ್ರಥಮ ಕಾರ್ಯದರ್ಶಿ,

ಇರಾನಿಯನ್ ಪೀಪಲ್ಸ್ ಫೆಧಾಯೀನ್‌ಗಳ ಸಂಘಟನೆ (ಮೆಜಾರಿಟಿ)

---

(22ನೇ ಪುಟದಿಂದ ಮುಂದುವರಿದುದು)

ಸಿದ ಹೋರಾಟದಲ್ಲಿ ತೊಡಗಿಸದಿರುವುದರಿಂದ, ಪ್ರತಿಗಾಮಿ ಶಕ್ತಿಗಳು, ಸಾಮ್ರಾಜ್ಯಶಾಹಿ ಏಜಂಟರುಗಳು ಹಾಗೂ ಕಾಂಗ್ರೆಸ್ (ಐ) ಜನತೆಯ ಒಗ್ಗಟ್ಟನ್ನು ಒಡೆಯಲು ಅವರನ್ನು ಉಪಯೋಗಿಸಿಕೊಳ್ಳುತ್ತಾರೆ. ಎಡ ಐಕ್ಯತೆಯನ್ನು ಕಟ್ಟುವುದರ ಪ್ರಾಮುಖ್ಯತೆಯನ್ನು ಕಾಂ. ಬಿ.ಟಿ.ಆರ್. ರವರು ಒತ್ತಿ ಹೇಳುತ್ತಾ, ಬಂಡವಾಳಶಾಹಿ ಭೂಮಾಲಿಕ ಪಕ್ಷಗಳಿಂದ ಭ್ರಮನಿರಸನಗೊಂಡ ಎಲ್ಲಾ ಜನರನ್ನೂ ಒಂದೇ ಪ್ರವಾಹವಾಗಿ ನೆರೆಸಲು ಇರುವುದು ಅದೊಂದೇ ದಾರಿ ಎಂದರು. ಅವರು, ಪಕ್ಷ ಸಾಮೂಹಿಕ ಹೋರಾಟಗಳನ್ನು ಆರಂಭಿಸಿ, ಮಧ್ಯೆ ಪ್ರವೇಶಿಸಿ ಜನತಾ ಪ್ರಜಾಪ್ರಭುತ್ವ ಕಡೆಗೆ ಜನರನ್ನು ಮುನ್ನಡೆಸಬೇಕು ಎಂದು ಕರೆ ನೀಡಿದರು.

# ರಾಜಕೀಯ ನಿರ್ಣಯದ ಸರ್ವಾನುಮತ ಅಂಗೀಕಾರ

ರಾಜಕೀಯ ನಿರ್ಣಯದ ಕರಡಿನ ಮೇಲೆ ನಡೆದ ಚರ್ಚೆಗೆ ಉತ್ತರಿಸುತ್ತಾ ಕಾಂ. ಬಿ. ಟಿ. ರಣದಿವೆಯವರು, ಕರಡು ನಿರ್ಣಯವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿದ್ದು, 4 ವರ್ಷಗಳ ಹಿಂದಿನ ವಿಜಯವಾಡ ಅಧಿವೇಶನದ ನಂತರ ಪಕ್ಷ ಇನ್ನಷ್ಟು ಐಕ್ಯವಾಗಿ ಬೆಳೆದಿದೆ ಎಂಬುದನ್ನು ತೋರಿಸಿತು ಎಂದರು. ನಮ್ಮ ಚಳುವಳಿಯನ್ನು ಬೆಳೆಸುವ ಹೋರಾಟದಲ್ಲಿ ಈ ದಸ್ತಾವೇಜು ಮೂರು ಮೊನೆಗಳ ಕಾರ್ಯತಂತ್ರಗಳನ್ನುಳ್ಳ ಸಾಧನ. ಸರ್ವಾಧಿಕಾರದ ವಿರುದ್ಧ ವಿಶಾಲ ಪ್ರತಿರೋಧ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಗಾಗಿ ಹೋರಾಟ, ಪಕ್ಷದ ಸ್ವತಂತ್ರ ಚಟುವಟಿಕೆ, ಎಂಬುವೇ ಆ ಮೂರು ಮೊನೆಗಳು.

ಪ್ರಾದೇಶಿಕ ಪಕ್ಷಗಳು ಮತ್ತು ಚಳುವಳಿಗೆ ಸಂಬಂಧಿಸಿ ಕಾಂ. ಬಿ. ಟಿ. ಆರ್. ರವರು, ಅವುಗಳನ್ನು ಸಿ. ಪಿ. ಐ. (ಎಂ) ಸಾಮ್ರಾಜ್ಯಶಾಹಿಯ ಕೈಚಳಕವೆಂದು ಎಂದೂ ಪರಿಗಣಿಸಿಲ್ಲ. ಅವು ಜನತೆಯ ಅತೃಪ್ತಿಯನ್ನು ಸಾಮ್ರಾಜ್ಯಶಾಹಿಗಳು ದುರುಪಯೋಗಪಡಿಸಿಕೊಂಡುದರ ಫಲ. ಪಕ್ಷ ಬಲವಾಗಿದ್ದು, ಸಾಮೂಹಿಕ ಚಳುವಳಿಗಳ ನೇತೃತ್ವ ವಹಿಸಿದರೆ, ಜನರನ್ನು ಒಂದು ಐಕ್ಯ ಹೋರಾಟದ ಕಡೆಗೆ ಕೊಂಡೊಯ್ಯಬಹುದು. ಪಶ್ಚಿಮ ಬಂಗಾಳದಲ್ಲಿ, ಚಳುವಳಿ ಬಲವಾಗಿರುವ ಕಡೆ ಮತ್ತು ಪ್ರಜಾಪ್ರಭುತ್ವ ಪ್ರಿಯ ಜನತೆಯ ಮೇಲೆ ಪಕ್ಷದ ಹಿಡಿತವಿರುವ ಕಡೆ, ವಿವಿಧ ಪಕ್ಷಗಳ ಧರ್ಮಾಂಧ, ಜಾತ್ಯಂಧ, ಬಾಷಾಂಧತೆಯ ಕರೆಯನ್ನು ಎದುರಿಸಬಹುದು. ಪಂಜಾಬಿನಲ್ಲಿ ಪಕ್ಷ ಅನುಸರಿಸಿದ ಕಾರ್ಯತಂತ್ರ ದರ್ಮಾಂಧತೆಯ ಕರೆಯಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುವುದರ ಮೂಲಕ ರೂಪುಗೊಂಡಿತು. ಅಸ್ಸಾಮಿನಲ್ಲಿ ದೇಶವನ್ನು ಛಿದ್ರ ಮಾಡುವ ಸಾಮ್ರಾಜ್ಯಶಾಹಿ ಒಳಸಂಚಿನ ವಿರುದ್ಧ ಮುಖಾಮುಖಿ ಹೋರಾಟವನ್ನು ಎದುರಿಸಬೇಕಾಯಿತು.

ಈ ಅತೃಪ್ತಿಯ ಮೂಲ ಕಾರಣ, ಕಾಂಗ್ರೆಸ್ (ಐ) ಆಡಳಿತ. ಬಂಡವಾಳಶಾಹಿ ಮಾರ್ಗವನ್ನನುಸರಿಸಿ ಭಾರತದ ಐಕ್ಯತೆ ಮತ್ತು ದೇಶೀಯ ಜನಾಂಗಗಳ ಪ್ರಶ್ನೆಯನ್ನು ಬಿಡಿಸಲಾಗುವುದಿಲ್ಲ. ಪ್ರತಿ ಘಟ್ಟದಲ್ಲಿಯೂ ಒಂದು ಬಲಯುತವಾದ ಸಾಮೂಹಿಕ ಹೋರಾಟ ಬೆಳೆಯದಿದ್ದರೆ, ಈ ಚಳುವಳಿಗಳು ವಿಭಜಕ ದಾರಿಗಳತ್ತ ತಿರುಗಿಸಲ್ಪಡುತ್ತದೆ.

ವಿಶಾಲರಂಗದ ಪರಿಕಲ್ಪನೆಯನ್ನು ವಿವರಿಸುತ್ತಾ ಬಿ.ಟಿ.ಆರ್. ರವರು, ವಿಭಜಕ ಶಕ್ತಿಗಳು ಬೆಳೆಯುತ್ತಿರುವ ಸಂದರ್ಭದಲ್ಲಿ, ಬಂಡವಾಳಶಾಹಿ ವಿರೋಧ ಪಕ್ಷಗಳ ಮಿತಿಗಳು ಸ್ಪಷ್ಟವಾಗುತ್ತವೆ. ಸರ್ವಾಧಿಕಾರಿ ಹಾಗೂ ಜನತೆಯ ನಡುವೆ ಬೆಳೆಯುತ್ತಿರುವ ಹಾಗೂ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಬೆಳೆಯುತ್ತಿರುವ ವೈರುಧ್ಯವೇ ಈ ವಿಶಾಲರಂಗದ ಆಧಾರ. ವಿರೋಧ ಪಕ್ಷಗಳ ವಿಜಯವಾಡ ಶೃಂಗಸಭೆಯಿಂದ ಕಲ್ಕತ್ತಾ ಶೃಂಗಸಭೆವರೆಗೆ ಕೆಲಸದ ಹಕ್ಕುಮುಂತಾದ ಜನಪರ ಒತ್ತಾಯಗಳು, ಒತ್ತಾಯಗಳ ಪಟ್ಟಿಯಲ್ಲಿ ಸೇರಿದುವು. ಇದು ಜನಸಮೂಹಗಳ ಒತ್ತಡದ ಫಲಿತಾಂಶ. ಬಂಡವಾಳಶಾಹಿ ವಿರೋಧ ಪಕ್ಷಗಳು ತೂಗುಯ್ಯಾಲೆಯಾಡುತ್ತಿದ್ದರೂ, ಕಲ್ಕತ್ತಾ ಶೃಂಗಸಭೆಯ ಒತ್ತಾಯಗಳಲ್ಲಿ ಅವು ಸೇರಿದುವು ಮತ್ತು ಅದರ ಆಧಾರದ ಮೇಲೆ ವಿಶಾಲರಂಗವೊಂದನ್ನು ಕಟ್ಟಬಹುದು ಎಂಬುದರಿಂದ ಈ ಮುನ್ನಡೆಯನ್ನು ನೋಡಬೇಕು.

ಎಡರಂಗ, ಎಡ ಹಾಗೂ ಪ್ರಜಾಪ್ರಭುತ್ವರಂಗ ಎಂಬ ಬಗ್ಗೆ ಬಂದ ಗೊಂದಲವನ್ನು ಕಾಂ. ಬಿ. ಟಿ. ಆರ್. ರವರು ಪರಿಹರಿಸುತ್ತಾ, ಪಕ್ಷ ತನ್ನ ಎಲ್ಲಾ ಚಟುವಟಿಕೆಗಳ ಮೂಲಕ ಜನತಾ ಪ್ರಜಾಪ್ರಭುತ್ವ ರಂಗವನ್ನು ನಿರ್ಮಿಸಲು ಬಯಸುತ್ತದೆ. ಆ ಕ್ರಿಯೆಯಲ್ಲಿ ಅನೇಕ ಸಖ್ಯತೆಗಳು ಬೆಳೆಯುತ್ತವೆ. ಎಲ್ಲಾ ವರ್ಗಗಳನ್ನು (ಜನತಾ ಪ್ರಜಾಪ್ರಭುತ್ವರಂಗದ) ಅಣಿನೆರೆಸುವುದರಿಂದ, ಒಂದು ಸರ್ವಸಾಮಾನ್ಯ ಹೋರಾಟದಲ್ಲಿ ಎಲ್ಲಾ ವರ್ಗಗಳನ್ನೂ ಒಟ್ಟಾಗಿಸುವುದರಿಂದ, ಪಕ್ಷದ ಪ್ರಭಾವವನ್ನು ಹೆಚ್ಚಿಸುವುದರಿಂದ ಹಾಗೂ ಹಂತಹಂತವಾಗಿ ನಾಯಕತ್ವವನ್ನು ಸ್ಥಾಪಿಸುವುದರಿಂದ (ಜನತಾ ಪ್ರಜಾಪ್ರಭುತ್ವ ರಂಗವನ್ನು ರಚಿಸುವುದರಲ್ಲಿ) ಪ್ರಗತಿಯನ್ನು ಸಾಧಿಸಬೇಕು. ಈ ರಂಗವನ್ನು

ಈಗಾಗಲೇ ಅಸ್ತಿತ್ವದಲ್ಲಿರುವ ರಂಗಗಳ ಒಂದು ಬಗೆಯೆಂದು ತಿಳಿಯಬಾರದು. ಕಾರ್ಮಿಕ ವರ್ಗ ಹಾಗೂ ಜನ ಸಮೂಹಗಳು ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವವರೆಗೆ ವರ್ಗಶಕ್ತಿಗಳ ಸಮೀಕರಣ ಬದಲಾಗುತ್ತಾ ಹೋಗುವ ಪ್ರಕ್ರಿಯೆ ಇದು. ಮೂಲ ಘೋಷಣೆಗಳ ಆಧಾರದಲ್ಲಿ ಜನತೆಯನ್ನು ಅಣಿನೆರೆಸುವಾಗ, ಪಕ್ಷ ಎಡ ಐಕ್ಯತೆಗೆ ಗಮನ ನೀಡಬೇಕು.

ಪಂಜಾಬ್ ಮತ್ತು ಅಸ್ಸಾಂನಲ್ಲಿಯಂತೆ ತಮಿಳುನಾಡಿನ ಸಂಗಾತಿಗಳು ಸಹ ಜನ ಸಮೂಹಗಳೊಡನೆ ಸಂಪರ್ಕವನ್ನು ಉಳಿಸಿಕೊಂಡೇ ತಮಿಳು ಭಾಷಾಂಧತೆಯ ವಿರುದ್ಧ ಹೋರಾಟ ನಡೆಸಿದ್ದಾರೆ. ಇದು ಕೂಡ ನಿರ್ಣಯದಲ್ಲಿ ಸೇರಬೇಕು ಎಂದವರು ತಿಳಿಸಿದರು.

ಬಿ. ಟಿ. ಆರ್. ರವರು ಕೃಷಿ ರಂಗದ ಮೇಲೆ ಸರ್ಕಾರದ ಪ್ರಸ್ತುತ ಧೋರಣೆಗಳ ಪರಿಣಾಮದ ಬಗ್ಗೆ ವಿವರಿಸುತ್ತಾ ನಿರ್ಣಯದಲ್ಲಿ ಇದನ್ನು ಕೂಡ ವಿಸ್ತರಿಸಿ ಹೇಳಲಾಗುವುದೆಂದರು. ಬಂಡವಾಳಶಾಹಿಯ ಮೇಲ್‌ಸ್ತರಗಳು ಹಾಗೂ ಅನಿವಾಸಿ ಭಾರತೀಯ ಬಂಡವಾಳದನಡುವೆ ವ್ಯತ್ಯಾಸಗಳು ಉಗಮವಾಗುತ್ತಿರುವುದರ ಬಗ್ಗೆ ಇನ್ನೂ ವಿವರವಾದ ಅಧ್ಯಯನ ಆಗಬೇಕಾಗಿದೆ. ಈಗಿನ ನೀತಿಗಳಿಂದ ಏಕಸ್ವಾಮ್ಯವಲ್ಲದ ಬಂಡವಾಳಶಾಹಿಗಳೂ ತೀವ್ರವಾಗಿ ಹೊಡೆತ ತಿನ್ನುತ್ತಿದ್ದಾರೆ. ಪಕ್ಷ ಇವೆಲ್ಲಾ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಂಡು ತನ್ನ ಕಾರ್ಯತಂತ್ರವನ್ನು ರೂಪಿಸಬೇಕೆಂದರು.

ನಂತರ ಪ್ರತಿನಿಧಿಗಳು ಸೂಚಿಸಿದ ತಿದ್ದುಪಡಿಗಳ ಬಗ್ಗೆ ವಿವರಿಸಿದ ನಂತರ ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು. ●

# ಚೀನಾ ಕಮ್ಯುನಿಸ್ಟ್ ಪಕ್ಷದ ಸಂದೇಶ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೇ ಅಧಿವೇಶನ ಸೇರಿದ ಈ ಸಂದರ್ಭದಲ್ಲಿ, ಚೀನಾ ಕಮ್ಯುನಿಸ್ಟ್ ಪಕ್ಷ ಅಧಿವೇಶನಕ್ಕೆ ತನ್ನ ಅಭಿನಂದನೆಗಳನ್ನೂ ಆ ಮೂಲಕ ಸಿ. ಪಿ. ಐ (ಎಂ)ನ ಎಲ್ಲಾ ಸದಸ್ಯರಿಗೂ ತನ್ನ ಹಾರ್ದಿಕ ಶುಭಾಶಯ ಹಾಗೂ ಉನ್ನತ ಗೌರವವನ್ನೂ ಸೂಚಿಸುತ್ತದೆ.

ಸಿ. ಪಿ. ಐ. (ಎಂ), ಹೋರಾಟದ ಪ್ರಭಾಯುತ ಪರಂಪರೆಯುಳ್ಳ, ಜನತೆಯೊಡನೆ ನಿಕಟ ಸಂಪರ್ಕವುಳ್ಳ ಮಾರ್ಕ್ಸ್‌ವಾದಿ ಪಕ್ಷ. ಈ ಹಿಂದಿನ ದೀರ್ಘಕಾಲದಲ್ಲಿ ಸಿ. ಪಿ. ಐ. (ಎಂ) ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆಯಲು ಮತ್ತು ರಕ್ಷಿಸಲು, ಭಾರತದ ಎಲ್ಲಾ ದೇಶಿಯ ಜನಾಂಗಗಳ ಐಕ್ಯತೆಯನ್ನು ಕಾಯ್ದುಕೊಳ್ಳಲು, ರಾಷ್ಟ್ರೀಯ ಆರ್ಥಿಕವನ್ನು ಅಭಿವೃದ್ಧಿಗೊಳಿಸಲು ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ನಿರಂತರವಾದ ಕುಂದಿಲ್ಲದ ಪ್ರಯತ್ನವನ್ನು ಮಾಡಿದೆ. ಸಾಮ್ರಾಜ್ಯಶಾಹಿಗಳನ್ನೂ ವಸಾಹತು ಶಾಹಿಗಳನ್ನೂ ವಿರೋಧಿಸುತ್ತಾ ರಾಷ್ಟ್ರೀಯ ವಿಮೋಚನಾ ಚಳುವಳಿಗಳನ್ನು ಬೆಂಬಲಿಸಲು, ವಿಶ್ವಶಾಂತಿಯನ್ನು ರಕ್ಷಿಸಲು ಕ್ರಿಯಾಶೀಲ ಹೋರಾಟಗಳಲ್ಲಿ ತೊಡಗಿದೆ. ನಮ್ಮೆರಡೂ ದೇಶಗಳ, ಜನತೆಯ ನಡುವಣ ಮೈತ್ರಿಯನ್ನು ರಕ್ಷಿಸುವುದಕ್ಕೆ ಹಾಗೂ ಮುಂದೆ ಬೆಳೆಸುವುದಕ್ಕೆ ಸಿ. ಪಿ. ಐ. (ಎಂ)ನ ಅಮೂಲ್ಯ ಕೊಡುಗೆಯನ್ನು ಚೀನಾದ ಕಮ್ಯುನಿಸ್ಟ್ ಪಕ್ಷ ಹಾಗೂ ಜನತೆ ಉನ್ನತ ಗೌರವದಿಂದ ನೋಡುತ್ತಾರೆ. ಸಿ. ಪಿ. ಐ. (ಎಂ) ಗೆ, ಅದರ ಸಾಧನೆಗಳಿಗಾಗಿ ನಾವು ಹಾರ್ದಿಕ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತೇವೆ. ಈ ಹಿಂದಿನ ಕೆಲವು ವರ್ಷಗಳಲ್ಲಿ ಚೀನಾ ಹಾಗೂ ಭಾರತದ ಸಂಬಂಧಗಳು, ಎರಡೂ ಕಡೆಗಳಿಂದ ಮೂಡಿ ಬಂದ ಜಂಟೀ ಪ್ರಯತ್ನದ ಫಲವಾಗಿ ಉತ್ತಮಗೊಂಡಿವೆ. ಮಾರ್ಕ್ಸ್‌ವಾದದ ಆಧಾರದ ಮೇಲೆ, ಸ್ವಾತಂತ್ರ್ಯದ, ಸಂಪೂರ್ಣ ಸಮಾನತೆಯ ಪರಸ್ಪರ ಗೌರವದ, ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶವಿಲ್ಲವೆಂಬ ತತ್ವಗಳ ಆಧಾರದ ಮೇಲೆ ನಿರ್ಮಿತವಾದ ನಮ್ಮ ಎರಡೂ ಪಕ್ಷಗಳ ಸಂಬಂಧಗಳು ನಮ್ಮ ಎರಡೂ ದೇಶಗಳ, ಜನತೆಯ ಮೈತ್ರಿಯನ್ನು ದೃಢಗೊಳಿಸಿ ಬೆಳೆಸುವುದಕ್ಕೆ ಅನುಕೂಲಕರವೆಂಬುದು ನಮಗೆ ಮನವರಿಕೆಯಾಗಿದೆ.

ನಾವು ಸಿ. ಪಿ. ಐ. (ಎಂ) ನ ಹನ್ನೆರಡನೇ ಅಧಿವೇಶನಕ್ಕೆ ಸಂಪೂರ್ಣ ಯಶಸ್ಸನ್ನು ಕೋರುತ್ತೇವೆ.

ಕೇಂದ್ರ ಸಮಿತಿ
**ಚೀಣಾ ಕಮ್ಯುನಿಸ್ಟ್ ಪಕ್ಷ**

ಇ. ಎಂ. ಎಸ್‌ರವರಿಂದ

# ರಾಜಕೀಯ-ಸಂಘಟನಾ ಕರಡು ವರದಿ ಮಂಡನೆ

ಪಕ್ಷದ ಪ್ರಧಾನ ಕಾರ್ಯದರ್ಶಿ, ಇ.ಎಂ. ಎಸ್. ನಂಬೂದಿರಿಪಾದ್‌ರವರು ಹಿಂದಿನ ನಾಲ್ಕು ವರ್ಷಗಳ ರಾಜಕೀಯ-ಸಂಘಟನಾ ವರದಿಯನ್ನು ಮಂಡಿಸುತ್ತಾ, ಸಮಯದ ಅಭಾವದಿಂದಾಗಿ ಈ ವರದಿ ಮಂಡಿತವಾದ ರೂಪದ ಬಗ್ಗೆ ಪಾಲಿಟ್‌ಬ್ಯೂರೊಗೆ ಸಮಾಧಾನವಾಗಿಲ್ಲ ಎಂದರು.

ಅವರು, ವಿವಿಧ ಉಪಸಮಿತಿ, ಅಂಶಿಕ ಸಮಿತಿ (ಫ್ರಾಕ್ಷನ್)ಗಳು ಸಲ್ಲಿಸಿದ ವರದಿಗಳನ್ನು ಅಭ್ಯಾಸ ಮಾಡಿ, ಒಳಗೊಳ್ಳಲು ಪಾಲಿಟ್‌ಬ್ಯೂರೋಗೆ ಆಗಲಿಲ್ಲ. ಅಧಿವೇಶನದ ಚರ್ಚೆಯಲ್ಲಿ ಈ ಕೊರತೆ ತುಂಬಬಹುದೆಂದು ಆಶಿಸಿದರು.

ಅನೇಕ ವಿಭಾಗಗಳಾಗಿ ವಿಂಗಡನೆಯಾಗಿರುವ ಈ ವರದಿ, ಪಕ್ಷದ ಕಣ್ಣೋಟದ ವಿಮರ್ಶೆ, ರಾಜ್ಯದ ವರದಿಗಳ ಸಾರಾಂಶ, ಪಕ್ಷ ಕೇಂದ್ರದಲ್ಲಿರುವ ಪಿ. ಬಿ. ಸದಸ್ಯರ, ಸಿ. ಸಿ. ಸದಸ್ಯರ ಚಟುವಟಿಕೆಗಳ ಸಾರಾಂಶ ಹಾಗೂ ಸಾಲ್ಕಿಯ ಪ್ಲೀನಂನಿಂದೀಚೆಗೆ ಪಕ್ಷದ ಸಂಘಟನೆಯ ಒಟ್ಟಾರೆ ಗುಣಮಾಪನವನ್ನು ಒಳಗೊಂಡಿತ್ತು.

ಪಶ್ಚಿಮ ಬಂಗಾಳದಲ್ಲಿನ ಜಂಟೀ ಉದ್ಯಮಗಳ ಬಗ್ಗೆ ಮಾತನಾಡುತ್ತ, ಇ. ಎಂ. ಎಸ್.ರವರು, ಬಂಡವಾಳಶಾಹಿ ಭೂಮಾಲಿಕ ಸರ್ಕಾರದ ಒಟ್ಟಾರೆ ನಿಯಂತ್ರಣದಲ್ಲಿ ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ, ಒಂದು ರಾಜ್ಯದಲ್ಲಿ ಕೆಲಸ ಮಾಡುವ ಸರ್ಕಾರ, ಪಕ್ಷದ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಬೇಕೆಂದು ನಿರೀಕ್ಷಿಸಲಾಗುವುದಿಲ್ಲ. ಸಿ.ಪಿ.ಐ.(ಎಂ) ನೇತೃತ್ವದ ರಾಜ್ಯ ಸರಕಾರಗಳು ಒಂದೆಡೆ ಕೇಂದ್ರ ಸರಕಾರದ ವರ್ಗಧೋರಣೆಗಳನ್ನು ಬಯಲಿಗೆಳೆಯಬೇಕು. ಹಾಗೆಯೇ ಮತ್ತೊಂದೆಡೆ ಜನರಿಗೆ ಆದಷ್ಟೂ ಪರಿಹಾರವನ್ನು ನೀಡಬೇಕು. ಪಕ್ಷದ ಕಾರ್ಯಕ್ರಮದ ಪ್ಯಾರಾ 112ರಲ್ಲಿ ಹೇಳಿದಂತೆ ಸಮಸ್ಯೆಗಳನ್ನು ಮೂಲಭೂತವಾಗಿ ಪರಿಹರಿಸಬಹುದು ಎಂಬ ಯಾವುದೇ ಭ್ರಮೆಯಿಲ್ಲದೆ, ಜನರಿಗೆ ಪರಿಹಾರಗಳನ್ನು ಒದಗಿಸಬೇಕು. ಹಾಗೆಯೇ ಭಾರತದ ಆರ್ಥಿಕ, ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿತವಾಗುವುದನ್ನು, ಏಕಸ್ವಾಮ್ಯ ಬಂಡವಾಳಗಾರರಿಗೆ ಹೆಚ್ಚು ಹೆಚ್ಚು ರಿಯಾಯತಿಗಳನ್ನು ನೀಡುವುದನ್ನು ಪಕ್ಷ ವಿರೋಧಿಸುವಾಗಲೇ, ಪಶ್ಚಿಮ ಬಂಗಾಲ ಹಣಹೂಡಿಕೆಯಿಲ್ಲದೆ ಸೊರಗುವುದನ್ನೂ ಅಪೇಕ್ಷಿಸುವುದಿಲ್ಲ.

ಬಹಳವಾಗಿ ಮಾತಿಗೊಳಗಾಗಿರುವ ಎಡ ಐಕ್ಯತೆ ಹಾಗೂ ಕಮ್ಯುನಿಸ್ಟ್ ಐಕ್ಯತೆಗಳ ಬಗ್ಗೆ ಮಾತನಾಡುತ್ತಾ ಕಾಂ.ಇ.ಎಂ.ಎಸ್‌ರವರು, ಸಿ.ಪಿ.ಐ. ನೊಂದಿಗೆ, ಪಕ್ಷದ ಭಿನ್ನಾಭಿಪ್ರಾಯಗಳು ಮೂಲಭೂತವಾದುವು. ಆ ಕಾರಣ ಈ ಭಿನ್ನಾಭಿಪ್ರಾಯಗಳು ಇರುವವರೆಗೂ ಎರಡೂ ಪಕ್ಷಗಳ ವಿಲೀನದ ಪ್ರಶ್ನೆಯೇ ಇಲ್ಲ. ಹಾಗೆಂದ ಮಾತ್ರಕ್ಕೆ ಸಿ.ಪಿ.ಐ. ಮತ್ತು ನಮ್ಮ ಪಕ್ಷ ಒಟ್ಟಿಗೆ ಬರುವುದಕ್ಕೆ ನಾವು ವಿರೋಧಿಗಳು ಎಂದಲ್ಲ. ಪಕ್ಷಗಳೆರಡೂ ವಿಲೀನವಾಗದೆ ಚಳುವಳಿಯಲ್ಲಿ ಐಕ್ಯತೆ ಸಾಧ್ಯವಿಲ್ಲ ಎಂಬ ನಿಲುವನ್ನು ನಾವು ಒಪ್ಪುವುದಿಲ್ಲ ಎಂದರು.

ಎರಡೂ ಪಕ್ಷಗಳ ಸಂಯೋಜಕ ಸಮಿತಿಯನ್ನು ಚುರುಕುಗೊಳಿಸಬೇಕು. ಹಾಗೂ ಸಂಯುಕ್ತ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕು. ವಿಶಾಲ ಐಕ್ಯತೆಯ ವಿಷಯದಲ್ಲಿ ಸಿ. ಪಿ. ಐ.ಗೆ ನಮ್ಮ ಪಕ್ಷದ ಜೊತೆ ತೀವ್ರ ಭಿನ್ನಾಭಿಪ್ರಾಯಗಳಿರುವುದರಿಂದ ಈ ದಿಶೆಯಲ್ಲಿ ಹೆಚ್ಚಿನ ಸಾಧನೆಯಾಗಿಲ್ಲ.

85-86ರ ಕೇಂದ್ರ ಬಜೆಟ್ ನಂತರ, ಪಕ್ಷ, ವಿರೋಧ ಪಕ್ಷಗಳ ಕಲ್ಕತ್ತಾ ಶೃಂಗಸಭೆಯ ಸರಣಿಯಲ್ಲಿ ಸಂಯುಕ್ತ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ಬಯಸಿದಾಗ, ಸಿ. ಪಿ. ಐ. ಎಡ ಪಕ್ಷಗಳು ಮಾತ್ರವೇ ಈ ಪ್ರಶ್ನೆಯ ಮೇಲೆ ಐಕ್ಯ ಕಾರ್ಯಾಚರಣೆ ನಡೆಸಬೇಕೆಂದು ವಾದಿಸಿತು.

ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಎಡ

ರಂಗ ಸರ್ಕಾರಗಳು ಸಿ. ಪಿ. ಐ. ಜೊತೆಗೆ, ಫಾರ್ವರ್ಡ್ ಬ್ಲಾಕ್, ಆರ್. ಎಸ್. ಪಿ. ಗಳನ್ನೂ ಒಳಗೊಂಡಿದೆ. ಕೇರಳ ಹಾಗೂ ಇತರ ರಾಜ್ಯಗಳಲ್ಲಿ ಸಿ. ಪಿ. ಐ (ಎಂ) ಇತರ ಎಡ ಪಕ್ಷಗಳೊಡನೆ ಕೆಲಸ ಮಾಡುತ್ತಿದೆ. ಎಡ ಐಕ್ಯತೆಯನ್ನು ಉಳಿಸಿಕೊಳ್ಳುವ ಹಾಗೂ ಬಲಪಡಿಸುವುದರ ಜೊತೆಗೇ ವಿರೋಧ ಪಕ್ಷಗಳ ನಾಲ್ಕು ಶೃಂಗ ಸಭೆಗಳಲ್ಲಿ ಭಾಗವಹಿಸಿದ ಜಾತ್ಯಾತೀತ ಪಕ್ಷಗಳನ್ನೂ ಒಳಗೊಳ್ಳಬೇಕು.

ವರದಿಯಲ್ಲಿ ನಮೂದಿತವಾಗಿರುವ ವಿವರಗಳಿಗೆ ಹೋಗದೆ ಇ. ಎಂ. ಎಸ್ ರವರು, ವಿಜಯವಾಡದಲ್ಲಿ ರೂಪಿಸಲಾದ ದೃಷ್ಟಿಕೋನವನ್ನು, ಪಿ. ಬಿ. ಮತ್ತು ಸಿ.ಸಿ.ಗೆ ಯಶಸ್ವಿಯಾಗಿ ಪ್ರಯೋಗಕ್ಕೆ ತರಲು ಸಾಧ್ಯವಾಗಿದೆ ಎಂಬುದನ್ನು ಒತ್ತಿ ಹೇಳಿದರು. ದೇಶದಲ್ಲಿ ಶಾಂತಿ ಚಳುವಳಿಯನ್ನು ಬೆಳೆಸುವಲ್ಲಿ ಪ್ರಗತಿಯಾಗಿದೆ. ಸರ್ವಾಧಿಕಾರದ ವಿರುದ್ಧ ಹೋರಾಟವನ್ನು ಬೆಳೆಸುವಲ್ಲಿ ಮುಂದುವರಿದಿದ್ದೇವೆ.

ಕೇಂದ್ರ ಸರಕಾರ, ಆಂಧ್ರ ಮಂತ್ರಿಮಂಡಳವನ್ನು ಕಿತ್ತೊಗೆದ ಸಮಯದಲ್ಲಿ ಹಾಗೂ, ವಿಜಯವಾಡ, ಶ್ರೀನಗರ, ದೆಹಲಿ, ಮತ್ತು ಕಲ್ಕತ್ತೆಗಳ ವಿರೋಧಿ ಶೃಂಗಸಮ್ಮೇಳನಗಳ ಸಮಯದಲ್ಲಿ ಇದಕ್ಕೆ ಸಾಕ್ಷಿಯನ್ನು ಬಹುದು. ನಮ್ಮ ಕಣ್ಣೋಟವನ್ನು ಜಾರಿಗೊಳಿಸುವಲ್ಲಿ ಒಂದು ಕಡೆ ಸರ್ವಾಧಿಕಾರಿ ಕಾಂಗ್ರೆಸ್ (ಐ) ನಿಂದ ಹಾಗೂ ಮತ್ತೊಂದು ಕಡೆ ಛಿದ್ರಕಾರಿ, ಪ್ರತ್ಯೇಕವಾದಿ ಶಕ್ತಿಗಳಿಂದ ದೂರವಿರಲು ಸಾಧ್ಯವಾಗಿದೆ. ಈ ಸಮಯದಲ್ಲಿ ಪಿ. ಬಿ. ಹಾಗೂ ಸಿ. ಸಿ. ಸರಿಯಾಗಿ ಕಾರ್ಯನಿರ್ವಹಿಸಿದ್ದರಿಂದ ಇದೆಲ್ಲವೂ ಸಾಧ್ಯವಾಯಿತು.

# ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷದ ಸಂದೇಶ

ನಿಮ್ಮ ಹನ್ನೆರಡನೇ ಅಧಿವೇಶನದ ಸಂದರ್ಭದಲ್ಲಿ ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷ ನಿಮಗೆ ಅತ್ಯಂತ ಹೃತ್ಪೂರ್ವಕ ಶುಭಾಶಯ ಕಳಿಸುತ್ತದೆ. ಸಾಮಾಜಿಕ ಪ್ರಗತಿ, ನ್ಯಾಯ, ಪ್ರಜಾಪ್ರಭುತ್ವ ಮತ್ತು ಶಾಂತಿಯ ರಕ್ಷಣೆಗಾಗಿ ಭಾರತೀಯ ಜನತೆಯ ಹೋರಾಟಗಳನ್ನು ನಮ್ಮ ಪಕ್ಷ ಅತ್ಯಂತ ಗಮನವಿಟ್ಟು ವೀಕ್ಷಿಸುತ್ತಾ ಬಂದಿದೆ.

ಅಲಿಪ್ತ ಆಂದೋಲನದಲ್ಲಿ ಹಾಗೂ ಅಂತರ್‍ರಾಷ್ಟ್ರೀಯ ರಂಗದಲ್ಲಿ ಮಹಾನ್ ಕೊಡುಗೆ ನೀಡುತ್ತಿರುವ ಭಾರತ, ಶಾಂತಿ ಮತ್ತು ನಿಶ್ಯಸ್ತ್ರೀಕರಣ, ಒಂದು ಹೊಸ ಅಂತರ್‍ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ, ಹಸಿವಿನ ವಿರುದ್ಧ ಹೋರಾಟ ಮುಂತಾದ ನಮ್ಮ ಯುಗದ ಪ್ರಮುಖ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವಲ್ಲಿ ಒಂದು ಮಹತ್ವದ ಪಾತ್ರವಹಿಸುತ್ತದೆ ಎಂಬುದು ನಮಗೆ ಗೊತ್ತಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಪರಮಾಣು ಯುದ್ಧದ ಪೈಪೋಟಿ ಹಾಗೂ ನಿಮ್ಮ ದೇಶದ ಸ್ವಾಧೀನತೆ ಮತ್ತು ಸಮಗ್ರತೆಯನ್ನು ಬುಡಮೇಲು ಮಾಡುವ ಪ್ರಯತ್ನಗಳ ವಿರುದ್ಧ ನಿಮ್ಮ ದೇಶದ ಪ್ರಜಾಪ್ರಭುತ್ವವಾದಿ ಮತ್ತು ಶಾಂತಿ ಶಕ್ತಿಗಳೊಂದಿಗೆ ನಾವು ಸೌಹಾರ್ದತೆ ವ್ಯಕ್ತಪಡಿಸುತ್ತೇವೆ.

ಸಾಮಾಜಿಕ ಪ್ರಗತಿ, ಪ್ರಜಾಪ್ರಭುತ್ವ, ಶಾಂತಿ ಹಾಗೂ ನಿಶ್ಯಸ್ತ್ರೀಕರಣಕ್ಕಾಗಿ ಭಾರತೀಯ ಜನತೆಯ ಹೋರಾಟಕ್ಕೆ ನಿಸ್ಸಂಶಯವಾಗಿಯೂ ಒಂದು ದೊಡ್ಡ ಕಾಣಿಕೆ ನೀಡಲಿರುವ ನಿಮ್ಮ ಅಧಿವೇಶನದ ಕೆಲಸಗಳಲ್ಲಿ ನಿಮಗೆ ಸಕಲ ಯಶಸ್ಸು ದೊರೆಯಲೆಂದು ಆಶಿಸುತ್ತೇವೆ.

**ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷ**

---

ಪಕ್ಷದ ಕೇಂದ್ರವನ್ನು ಹೆಚ್ಚು ಸಮರ್ಥವಾಗಿ ನಡೆಸುವಲ್ಲಿ ಕಾರ್ಯಕರ್ತರ ಕೊರತೆಯಿದೆ. ಹೊಸ ಕೇಂದ್ರ ಸಮಿತಿ, ರಾಜ್ಯ ಸಮಿತಿಗಳ ಸಹಕಾರದೊಂದಿಗೆ ತರಬೇತಿ ಪಡೆದ ಕಾರ್ಯಕರ್ತರಿಂದ ಕೇಂದ್ರವನ್ನು ಬಲಪಡಿಸುವ ಯೋಜನೆಯನ್ನು ಹಾಕಬೇಕಾಗಿದೆ ಎಂದರು. ಚಳುವಳಿಯನ್ನು ಬೆಳೆಸಲು ಹಾಗೂ ಬಲವಾದ ಪಕ್ಷವನ್ನು ಕಟ್ಟಲು, ಸಮರ್ಥವಾದ, ಪಕ್ವವಾದ ಕೇಂದ್ರ ಅತೀ ಅವಶ್ಯಕ. ಈ ಕರ್ತವ್ಯಕ್ಕೆ ಹೆಚ್ಚಿನ ಗಮನ ನೀಡಬೇಕು.

ಕೇರಳದಲ್ಲಿ, ಪಕ್ಷ ಮುಸ್ಲಿಂಲೀಗ್ ನೊಡನೆ ಸಂಬಂಧ ಕಡಿದುಕೊಂಡ ನಂತರದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸುತ್ತಾ, ನಮ್ಮ ಧೋರಣೆಯನ್ನು ಜನಸಮುದಾಯದ ಎಲ್ಲ ವಿಭಾಗಗಳೂ ಉತ್ಸಾಹಪೂರ್ಣವಾಗಿ ಸ್ವೀಕರಿಸಿದ್ದಾರೆ ಎಂದು ಹೇಳಿದರು.

# ಸಂತಾಪ ಸೂಚಕ ನಿರ್ಣಯಗಳು

ಪಕ್ಷದ ಹನ್ನೆರಡನೇ ಅಧಿವೇಶನ, ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯ **ಕಾಮ್ರೇಡ್ ಎನ್. ಶ್ರೀಧರನ್** ಅವರ ಸಾವಿಗೆ ಸಂತಾಪ ಸೂಚಿಸುತ್ತದೆ.ಒಂದು ರಸ್ತೆ ಅಪಘಾತದಲ್ಲಿ ಅವರ ಸಾವು ಪಕ್ಷಕ್ಕೆ ಮತ್ತು ಕಾರ್ಮಿಕ ವರ್ಗದ ಆಂದೋಲನಕ್ಕೆ ಒಂದು ದೊಡ್ಡ ನಷ್ಟ.

ಅಧಿವೇಶನ, ಪಕ್ಷದ ಪಂಜಾಬ್ ರಾಜ್ಯ ಸಮಿತಿಯ ಸದಸ್ಯ ಹಾಗೂ ರಾಜ್ಯದ ಕಮ್ಯುನಿಸ್ಟ್ ಆಂದೋಲನದ ಒಬ್ಬ ಅನುಭವೀ ಮುಖಂಡರಾದ **ಪೌಜಾಸಿಂಗ್ ಬುಲ್ಲರ್**ರ ನೆನಪಿಗೆ ಅರ್ಪಿಸುತ್ತದೆ.

ಅಧಿವೇಶನ **ಕಾಮ್ರೇಡ್ ಶಂಕರ್ ಗುಪ್ತ, ಕಾಮ್ರೇಡ್ ಪಂಮಳ್** ಮತ್ತು **ಕಾಮ್ರೇಡ್ ಪಂಕಜ್ ಆಚಾರ್ಯ, ಕಾಮ್ರೇಡ್ ಸಂತೋಷ್ ಮಿತ್ರ ಕಾಮ್ರೇಡ್ ಸುನಿಲ್ ಬಸು, ಕಾಮೆಡ್ರ್ ಗೋಲಕ್ ಪತಿ ರಾಯ್ ಮತ್ತು ಕಾಮ್ರೇಡ್ ಅರವಿಂದೋ ಘೋಷ್** ರವರ ಸ್ಮರಣೆಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ. ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರಾಗಿದ್ದ ಈ ಸಂಗಾತಿಗಳು ತಮ್ಮ ಜೀವನವನ್ನು ಪಕ್ಷ ಹಾಗೂ ಕಾರ್ಮಿಕ ವರ್ಗದ ಆಂದೋಲನಕ್ಕೆ ಮುಡಿಪಾಗಿಟ್ಟಿದ್ದರು.

ಅಧಿವೇಶನ ಸಿ. ಪಿ. ಐ. (ಎಂ)ನ ಮಹಾರಾಷ್ಟ್ರ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯ **ಕಾಮ್ರೇಡ್ ಪಿ. ಕೆ. ಕುರುಣೆ** ಯವರ ನೆನಪಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಅಧಿವೇಶನ ಸಿ. ಪಿ. ಐ. (ಎಂ)ನ ಆಂಧ್ರ ರಾಜ್ಯ ಸಮಿತಿಯ ಸದಸ್ಯ **ಕಾಮ್ರೇಡ್ ಭಾಸ್ಕರರಾವ್** ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ. ಆಂಧ್ರದ ರಾಜ್ಯ ಸಮಿತಿ ಸದಸ್ಯ **ಕಾಮ್ರೇಡ್ ಮೂಲಕೊಂಡ ರೆಡ್ಡಿ** ಯವರ ಸ್ಮರಣೆಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರು ನಕ್ಸಲೀಯರಿಂದ ಕೊಲೆಯಾದರು.

ಅಧಿವೇಶನ ಸಿ. ಪಿ. ಐ. (ಎಂ)ನ ಆಂಧ್ರ ರಾಜ್ಯ ಸಮಿತಿಯ ಸದಸ್ಯರುಗಳಾದ **ಕಾಮ್ರೇಡ್‌ರಾವೆಲ್ಲಾ ಸತ್ಯನಾರಾಯಣ** ಮತ್ತು **ಕಾಮ್ರೇಡ್ ಸತ್ಯರಾಜು** ಅವರ ನಿಧನಕ್ಕೆ ತನ್ನ ಸಂತಾಪ ಸೂಚಿಸುತ್ತದೆ.

ಅಧಿವೇಶನ ಸಿ. ಪಿ. ಐ. (ಎಂ)ನ ರಾಜಸ್ಥಾನ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರಾದ **ಕಾಮ್ರೇಡ್ ದುರ್ಗಾದಾಸ್ ಶಿರಾಲಿ** ಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಸಿ. ಪಿ. ಐ. (ಎಂ) ನ ಉತ್ತರ ಪ್ರದೇಶ ರಾಜ್ಯ ಸಮಿತಿ ಸದಸ್ಯರಾದ **ಕಾಮ್ರೇಡ್ ಶರಾಫತ್ ಹುಸ್ಸೇನ್ ರಿಜ್ವಿ** ಹಾಗೂ **ಸತ್ಯನಾರಾಯಣ ಸಿಂಗ್** ಅವರ ನಿಧನಕ್ಕೆ ಸಂತಾಪ ಸೂಚಿಸುತ್ತದೆ.

ಅಧಿವೇಶನ ಸಿ. ಪಿ. ಐ. (ಎಂ)ನ ದಿಲ್ಲಿ ರಾಜ್ಯ ಸಮಿತಿಯ ಸದಸ್ಯೆ **ಕಾಮ್ರೇಡ್ ಅಶೋಕಲತಾ ಜೈನ್** ರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಅಧಿವೇಶನ ಸಿ. ಪಿ. ಐ. (ಎಂ)ನ ಗುಜರಾತ್ ರಾಜ್ಯ ಸಮಿತಿಯ ಸದಸ್ಯರುಗಳಾದ **ಕಾಮ್ರೇಡ್ ಮಹಿಮೂನ್ ದೇಸಾಯಿ** ಮತ್ತು **ಕಾಮ್ರೇಡ್ ವಾಜುಭಾಯಿ ಶುಕ್ಲಾ** ರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಪಕ್ಷದ ಬಿಹಾರ ರಾಜ್ಯ ಸಮಿತಿಯ ಸದಸ್ಯ **ಕಾಮ್ರೇಡ್ ಅನ್ವರ್ ಹುಸ್ಸೇನ್** ರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

ಅಧಿವೇಶನ ಸಂಸತ್ತಿನಲ್ಲಿ ಸಿ. ಪಿ. ಐ. (ಎಂ) ಗುಂಪಿನ ಮುಖಂಡರಾದ **ಕಾಮೇಡ್ ಸರದೀಶ್ ರಾಯ್** ರ ನಿಧನಕ್ಕೆ ಸಂತಾಪ ವ್ಯಕ್ತ ಪಡಿಸುತ್ತದೆ; ಅಧಿವೇಶನ ಲೋಕಸಭಾದ ಸಿ. ಪಿ. ಐ. (ಎಂ) ಸದಸ್ಯ **ಕಾಮ್ರೇಡ್ ಮುಕುಂದಮಂಡಲೆ** ಯವರ ಸ್ಮರಣೆಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ.

# ಪೋಲಿಸಾರಿಯೋ ರಂಗದ ಸಂದೇಶ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದ)ದ ಹನ್ನೆರಡನೇ ಅಧಿವೇಶನದ ಸಂದರ್ಭದಲ್ಲಿ ಪೋಲಿಸಾರಿಯೋ ರಂಗ ಸಹರಾವಿ ಅರಬ್ ಪ್ರಜಾಸತ್ತಾತ್ಮಕ ಗಣತಂತ್ರದ ಜನತೆಯ ಪರವಾಗಿ ತನ್ನ ಹಾರ್ದಿಕ ಶುಭಾಶಯಗಳನ್ನು ಹಾಗೂ ನಿಮ್ಮ ಅಧಿವೇಶನದ ಯಶಸ್ಸಿಗೆ ಹಾರೈಕೆಗಳನ್ನು ವ್ಯಕ್ತಪಡಿಸ ಬಯಸುತ್ತದೆ.

ಈ ಸಂದರ್ಭವನ್ನು ಬಳಸಿ ಪೋಲಿಸಾರಿಯೋ ರಂಗ ನಿಮ್ಮ ಪಕ್ಷ ಎಡೆಬಿಡದೆ 1973ರ ಮೇ 10 ರಿಂದ ಇದುವರೆಗೆ ಸಹಾರಾವಿ ಜನತೆಯ ಸ್ವಾತಂತ್ರ್ಯಕ್ಕಾಗಿ, ಸ್ವಾಧೀನತೆಗಾಗಿ ಮತ್ತು ನಿವಾಸವಾದ ಸಹಾರಾವಿ ಪ್ರಜಾಸತ್ತಾತ್ಮಕ ಗಣತಂತ್ರ (SADR)ದ ರಾಷ್ಟ್ರೀಯ ಸಾರ್ವಭೌಮತೆಗಾಗಿ, ತಮ್ಮ ಏಕಮಾತ್ರ ಹಾಗೂ ಕಾನೂನುಬದ್ಧ ಪ್ರತಿನಿಧಿಯಾದ ಪೋಲಿಸಾರಿಯೋದ ನೇತೃತ್ವದಲ್ಲಿ ನಡೆಸಿದ ಸಶಸ್ತ್ರ ವಿಮೋಚನಾ ಹೋರಾಟಕ್ಕೆ ವ್ಯಕ್ತಪಡಿಸುತ್ತಾ ಬಂದ ಸಮರಶೀಲ ಸೌಹಾರ್ದತೆಗಾಗಿ ಹಾರ್ದಿಕ ಕೃತಜ್ಞತೆ ಸೂಚಿಸ ಬಯಸುತ್ತದೆ.

ಅಲ್ಲದೆ ನಿಮ್ಮ ಪಕ್ಷಕ್ಕೆ ಪೋಲಿಸಾರಿಯೋ ರಂಗ ನಮ್ಮ ನಡುವೆ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಮತ್ತು ಜನಾಂಗಭೇದ ನೀತಿಯ ವಿರುದ್ಧ ಜನತಾ ಹೋರಾಟಗಳ ಚೌಕಟ್ಟಿನಲ್ಲಿ ಇರುವ ಸ್ನೇಹ ಪೂರ್ಣ ಸಂಬಂಧಗಳನ್ನು ಮತ್ತಷ್ಟು ಬಲಗೊಳಿಸುವ ತನ್ನ ಸಂಕಲ್ಪವನ್ನು ವ್ಯಕ್ತಪಡಿಸಲಿಚ್ಛಿಸುತ್ತದೆ.

ಹಾರ್ದಿಕ ಸೋದರ ಶುಭಾಶಯಗಳು

ಪೋಲಿಸಾರಿಯೋ ರಂಗ

---

ಅಧಿವೇಶನ ಹನ್ನೆರಡನೇ ಅಧಿವೇಶನದಲ್ಲಿ ಭಾಗವಹಿಸಲು ತಲುಪುವ ಮಾರ್ಗದಲ್ಲಿ ನಿಧನರಾದ ಕೇರಳದ **ಕಾಮ್ರೇಡ್ ಜವಾಹರ್** ರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ.

# ಒಕ್ಕೂಟವಾದದ ವಿರುದ್ಧ ಹೋರಾಡಿ, ಬಲವಾದ ಕೇಂದ್ರವನ್ನು ಕಟ್ಟಿ.

ರಾಜಕೀಯ ಸಂಘಟನಾ ವರದಿಯ ಬಗೆಗಿನ ದೀರ್ಘ ಚರ್ಚೆಗೆ ಕಾಂ.ಎಂ. ಬಸವಪುನ್ನಯ್ಯನವರು ಉತ್ತರ ನೀಡುತ್ತಾ ಕೃಷಿಪ್ರಶ್ನೆಯ ಬಗ್ಗೆ ಹೆಚ್ಚಿನ ವಿವರಣೆಯನ್ನು ವರದಿಯಲ್ಲಿ ಸೇರಿಸಲಾಗುವುದು. ಆ ಬಗ್ಗೆ ಪ್ರತಿನಿಧಿಗಳು ಮಂಡಿಸಿದ ಅನೇಕ ಅಭಿಪ್ರಾಯಗಳು ಸರಿಯಾಗಿವೆ ಎಂದರು.

## ಕೃಷಿ ಪ್ರಶ್ನೆಯ ಅಧ್ಯಯನ

ಕೃಷಿ ಪ್ರಶ್ನೆಯ ಬಗ್ಗೆ ಸರ್ವಸಾಮಾನ್ಯ ಅಭಿಪ್ರಾಯಕ್ಕೆ ಬರಲು ಕಷ್ಟವಾಗುವುದಕ್ಕೆ ಒಂದು ಕಾರಣ, ರೈತಾಪಿ ಜನತೆಯಲ್ಲಿ ವರ್ಗೀಕರಣ ನಡೆದಿರುವ ರೀತಿಯ ಬಗ್ಗೆ ಆ ವಾದ ಅಧ್ಯಯನಗಳು ನಡೆಯದಿರುವುದು. ಉದಾಹರಣೆಗೆ, ಭೂಸುಧಾರಣಾ ಕ್ರಮಗಳಿಂದ, ವಿಶೇಷವಾಗಿ ಎಡ ನಾಯಕತ್ವದ ರಾಜ್ಯಗಳಲ್ಲಿ ಕೂಡ, ಮಧ್ಯಮ ವರ್ಗದ ರೈತರ ಮೇಲಾದ ಪರಿಣಾಮವೇನು ಎಂಬುದನ್ನು ಆಳವಾಗಿ ಇನ್ನೂ ಅರ್ಥ ಮಾಡಿಕೊಳ್ಳಬೇಕಾಗಿದೆ.

ಈ ಸಂದರ್ಭದಲ್ಲಿ, ಪಕ್ಷ ಬಲವಾಗಿರುವ ಜಿಲ್ಲೆಗಳಲ್ಲಿ, ಎರಡು ಹಳ್ಳಿಗಳನ್ನಾಯ್ದು ಮಾದರಿ ಅಭ್ಯಾಸ ನಡೆಸಿದರೆ, ಕೃಷಿ ಪ್ರಶ್ನೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಹಾಗೂ ಎಡರಂಗ ಸರ್ಕಾರದ ಧೋರಣೆಗಳ ಪರಿಣಾಮವನ್ನು ತಿಳಿದುಕೊಳ್ಳಲು ಕೂಡ ಸಹಾಯವಾಗುತ್ತದೆ. ಕೃಷಿವಲಯದಲ್ಲಿ ಕ್ರಿಯಾಶೀಲವಾಗಿರುವ ವಿವಿಧ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಕೂಡ ಈ ಅಧ್ಯಯನ ಅವಶ್ಯಕ ಎಂದು ಕಾ. ಎಂ. ಬಿ. ಯವರು ಸಲಹೆ ಮಾಡಿದರು. ರಾಜ್ಯಸಮಿತಿಗಳು ಅಧ್ಯಯನಗಳನ್ನು ನಡೆಸಿದ ಮೇಲೆ ಕೇಂದ್ರ ಸೂಕ್ತ ಮಾರ್ಗದರ್ಶನ ನೀಡುವುದು ಸಾಧ್ಯ ಎಂದರು.

ಕೃಷಿ ಪ್ರಶ್ನೆಗೆ ಸಂಬಂಧಿಸಿದಂತೆಯೇ, ಅನೇಕ ರಾಜ್ಯಗಳಲ್ಲಿ ಹರಡಿ ಹೋಗಿರುವ, ಸುಮಾರು 4 ಕೋಟಿ ಜನಸಂಖ್ಯೆ ಇರುವ ಗಿರಿಜನರ ಪ್ರಶ್ನೆಯೂ ಇದೆ. ಗಿರಿಜನರ ವಾಸ್ತವ ಪರಿಸ್ಥಿತಿಯ ಬಗ್ಗೆ ಕೂಡ ಅಧ್ಯಯನ ನಡೆಸಿ ವರದಿಗೆ ಅದನ್ನು ಸೇರಿಸಬೇಕಾಗಿದೆ.

ಪಕ್ಷದ ಘಟಕಗಳು ತಾವೇ ಸ್ವತಃ ಈ ರೀತಿಯ ಅಧ್ಯಯನಗಳನ್ನು ನಡೆಸದಿರುವ ಸಂದರ್ಭದಲ್ಲಿ, ಸರ್ವಸಾಮಾನ್ಯ ತೀರ್ಮಾನಗಳಿಗೆ ಬರಲು, ಸರಿಯಾದ, ಎಲ್ಲರಿಗೂ ಅನ್ವಯವಾಗುವ ಘೋಷಣೆಗಳನ್ನು ನೀಡಲು, ಈಗ ಇರುವ ಒಂದಕ್ಕೊಂದಕ್ಕೆ ಸಂಬಂಧವಿಲ್ಲದ ಚೂರುಪಾರು ಮಾಹಿತಿಯಿಂದ ಸಾಧ್ಯವಾಗುವುದಿಲ್ಲ.

## ಜಾತ್ಯಾತೀತತೆಯ ಪ್ರಶ್ನೆ

ಬಂಡವಾಳಶಾಹಿ ವಿರೋಧ ಪಕ್ಷಗಳ ನಡೆವಳಿಕೆ ಹಾಗೂ ಅವುಗಳ ಪಾತ್ರಕ್ಕೆ ಸಂಬಂಧಿಸಿದಂತೆ ಎಂ.ಬಿ.ಯವರು ಮಾತನಾಡುತ್ತಾ, ಪ್ರಕಟವಾಗಿ ಜಾತಿವಾದಿಯಾಗಿರುವ ಬಿಜೆಪಿ ಹಾಗೂ ಮುಸ್ಲಿಂ ಲೀಗ್‌ಗಳನ್ನು ಬಿಟ್ಟರೆ ಬೇರೆ ಪಕ್ಷಗಳನ್ನು, ಅವುಗಳಲ್ಲಿ ಕೆಲವು ತೂಗುಯ್ಯಾಲೆಯಾಡಿದರೂ ಕೂಡ, ಸ್ಥೂಲವಾಗಿ ಜಾತ್ಯಾತೀತ ಎಂದು ಪರಿಗಣಿಸಬಹುದು. ಅಕಾಲಿ ದಳದ ಉದಾಹರಣೆಯನ್ನು ತೆಗೆದುಕೊಂಡರೆ, 'ಸಿಕ್‌ಪಂಥ'ದ ಮೇಲೆ ಅವರ ಅವಲಂಬನೆ, ಅವರ ಬಹಳಷ್ಟು ಒತ್ತಾಯಗಳು ಪ್ರಜಾಸತ್ತಾತ್ಮಕವಾಗಿದ್ದರೂ ಕೂಡ, ಅದಕ್ಕೆ ಜಾತೀಯ, ಧಾರ್ಮಿಕ ಲೇಪವನ್ನು ಕೊಟ್ಟಿತು.

ಆದುದರಿಂದ ಬಂಡವಾಳಶಾಹಿ ವಿರೋಧ ಪಕ್ಷಗಳನ್ನು, ಒಂದೇ ಬಾರಿಗೆ ಜಾತಿವಾದಿ ಅಥವಾ ಜಾತ್ಯತೀತ ಎಂದು ಚೌಕಟ್ಟು ಹಾಕಲಾಗುವುದಿಲ್ಲ. ವಿವಿಧ ಕಾರ್ಯತಂತ್ರಾತ್ಮಕ ಕ್ರಮಗಳನ್ನು ರೂಪಿಸಲು ಸಾಕಷ್ಟು ಅವಕಾಶವಿರಬೇಕಾಗುತ್ತದೆ ಎಂದರು.

## ಒಕ್ಕೂಟವಾದ (federalism)

ಪಕ್ಷದಲ್ಲಿನ ಒಕ್ಕೂಟವಾದದ ಸಮಸ್ಯೆಯನ್ನು ಪ್ರಸ್ತಾಪಿಸಿ ಎಂ. ಬಿ.ಯವರು

ಅನೇಕ ಭಾಷೆ, ಸಂಸ್ಕೃತಿಗಳನ್ನುಳ್ಳ ದೇಶದಲ್ಲಿ ಇದೊಂದು ಸಂಕೀರ್ಣ ಸಮಸ್ಯೆ. ಆದರೆ ಒಕ್ಕೂಟವಾದದ ಎಲ್ಲಾ ರೂಪಗಳ ವಿರುದ್ಧ ನಿರಂತರ ಸೈದ್ಧಾಂತಿಕ ಸಮರವನ್ನೇ ಹೂಡಬೇಕಾಗುತ್ತದೆ, ಎಂದರು.

ಒಕ್ಕೂಟವಾದದ ಸಮಸ್ಯೆಯೇ ಹಾಗೆ, ಅದು ಮುಂದುವರಿಯುತ್ತಾ ಒಂದು ರೀತಿಯ 'ರಾಜ್ಯವಾದ'ಕ್ಕೆ ಎಡೆಮಾಡಿದೆ ಹಾಗೂ ಪಕ್ಷದ ಕೇಂದ್ರವನ್ನು ದುರ್ಬಲಗೊಳಿಸಿದೆ. ಆದುವದಿಂದ, ಯಾವುದೇ ರೂಪದ ಒಕ್ಕೂಟವಾದ ಕೂಡ, ತುರ್ತಾಗಿ ತಿದ್ದಿಕೊಳ್ಳಲೇಬೇಕಾದ ಅನಿಷ್ಟವೆಂಬುದನ್ನು ಇಡೀ ಪಕ್ಷ ಗುರುತಿಸಬೇಕು. ಕ್ರಾಂತಿಕಾರಿ ಪಕ್ಷವೊಂದರ ಸಂಘಟನಾ ತತ್ವದ ಕೀಲಿ ಕೈಯಾದ ಪ್ರಜಾಸತ್ತಾತ್ಮಕ ಕೇಂದ್ರವಾದದ ಪರಿಕಲ್ಪನೆಯ ವಿರುದ್ಧವೇ ಒಕ್ಕೂಟವಾದ ಮರೆತು ನಿಲ್ಲುತ್ತದೆ, ತೀವ್ರವಾದರೆ ಪಕ್ಷವನ್ನೇ ಕರಗಿಸುವ ವಾದಕ್ಕೆ (Liquidationism) ಎಡೆಕೊಡುತ್ತದೆ.

## ಅಖಿಲ ಭಾರತೀಯ ದೃಷ್ಟಿಕೋನ

ಒಕ್ಕೂಟವಾದವನ್ನು ಎದುರಿಸುವ ಒಂದು ಪ್ರಮುಖ ವಿಧಾನವೆಂದರೆ, ಅಖಿಲ ಭಾರತೀಯ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು ಹಾಗೂ ಒಂದು ರಾಜ್ಯದಲ್ಲಿ ಜರುಗುವ ಮುಖ್ಯ ಘಟನೆಗಳು, ಆ ರಾಜ್ಯಕ್ಕೆ ಮಾತ್ರ ಸಂಬಂಧಿಸಿದುವೆಂದು ಪರಿಗಣಿಸದಿರುವುದು. ಉದಾಹರಣೆಗೆ ಮುಖ್ಯ ಸಾಮೂಹಿಕ ಹೋರಾಟಗಳು ನಡೆದಾಗ, ಪಕ್ಷವೇ ನಾಯಕತ್ವ ನೀಡಿದ ಚಳುವಳಿಗಳು ಕೂಡ ಇದ್ದರೂ, ಅಬಗ್ಗೆ ವರದಿಗಳನ್ನು ಕೇಂದ್ರಕ್ಕೆ ಸಲ್ಲಿಸದಿರುವುದು ಹಾಗೂ ರಾಜ್ಯ ಸಮಿತಿಗಳು ಪಕ್ಷದ ಕೇಂದ್ರ ಮುಖವಾಣಿಗಳಾದ 'ಪೀಪಲ್ಸ್ ಡೆಮಾಕ್ರಸಿ' ಹಾಗೂ 'ಲೋಕ ಲಹಾರ್'ಗಳಿಗೆ ವರದಿಗಳನ್ನು ಕಳುಹಿಸದಿರುವುದು. ಈ ಕೆಲಸಕ್ಕೆ ಅರ್ಹರಾದವರನ್ನು ನೇಮಿಸದಿದ್ದುದರಿಂದ ವರದಿಗಳು ಬಂದಾಗಲೂ ಕೂಡ ಘಟನೆಗಳು ನಡೆದ ಬಹಳ ದಿನಗಳ ನಂತರ ಬರುತ್ತವೆ ಅಥವಾ ಇನ್ನೂ ಸಾಲದು ಎಂಬಂತಿರುತ್ತವೆ. ರಾಜ್ಯದಲ್ಲಿ ನಡೆಯುವ ಘಟನೆಗಳು ರಾಜ್ಯಕ್ಕೆ ಮಾತ್ರ ಮುಖ್ಯವಾದದ್ದು ಇಡೀಪಕ್ಷಕ್ಕಲ್ಲ ಎನ್ನುವ ಈ ವರ್ತನೆ ಕೂಡ ಒಕ್ಕೂಟವಾದದ ಒಂದು ರೂಪ.

ಒಂದು ರಾಜ್ಯ ಸಮ್ಮೇಳನದಲ್ಲಿ ವ್ಯಕ್ತವಾದ, ಯಾವುದೇ ರಾಜ್ಯ ಸಮ್ಮೇಳನಕ್ಕೆ ಇತರ ರಾಜ್ಯಗಳ ಕೆಲವು ಪ್ರತಿನಿಧಿಗಳನ್ನು ಆಹ್ವಾನಿಸಬೇಕು ಎಂಬ ಸಲಹೆಯನ್ನು ಅವರು ಶ್ಲಾಘಿಸಿ, ಈ ಸೂಚನೆಯನ್ನು ಅಧಿವೇಶನ ಪರಿಗಣನೆಗೆ ತೆಗೆದುಕೊಳ್ಳಬೇಕೆಂದರು.

## ಕೇಂದ್ರದ ಹೊರೆ

ಪಕ್ಷದ ಅಧಿವೇಶನದ ಸಿದ್ಧತೆಗಳ ವಿಷಯದಲ್ಲಿ ಕಾಂ. ಎಂ. ಬಿ. ಯವರು ಮಾತನಾಡುತ್ತಾ, ಆರುತಿಂಗಳ ಮೊದಲೇ ಯೋಜನೆ ಹಾಕಿದರೂ ಕೆಲವು ರಾಜ್ಯಗಳ ಸಮ್ಮೇಳನಗಳು ಪಕ್ಷದ ಅಧಿವೇಶನಕ್ಕೆ ಕೇವಲ ಒಂದು ತಿಂಗಳ ಮೊದಲಷ್ಟೇ ನಡೆದುವು. ಇದು, ಬಂದ ವರದಿಗಳನ್ನೆಲ್ಲ ಪರಿಶೀಲಿಸುವಲ್ಲಿ, ಕೇಂದ್ರದ ಹೊರೆಯನ್ನು ಹೆಚ್ಚಿಸಿತು ಮಾತ್ರವಲ್ಲ, ರಾಜಕೀಯ ಸಂಘಟನಾವರದಿಯಂತಹ ದಸ್ತಾವೇಜುಗಳನ್ನು ಸಿದ್ಧಪಡಿಸುವ ಕೆಲಸ ಕಷ್ಟವಾಯಿತು.

ಸಾಮೂಹಿಕ ಸಂಘಟನೆಗಳೂ, ಅನೇಕ ವೇಳೆ, ಪಕ್ಷದ ಕೇಂದ್ರಕ್ಕೆ ವರದಿಗಳನ್ನು ಸರಿಯಾದ ಸಮಯಕ್ಕೆ ಸಲ್ಲಿಸದೆ ಇಂತಹ ತಪ್ಪಿಗೆಡೆ ಮಾಡಿದುವು.

ಕಾ। ಎಂ. ಬಿ. ಯವರು, ಅವಶ್ಯಕ ಕಾರ್ಯಕರ್ತರನ್ನೊದಗಿಸಿ ಕೇಂದ್ರವನ್ನು ಬಲಪಡಿಸುವುದು ಅಂತಿಮವಾಗಿ ರಾಜ್ಯಗಳ ಜವಾಬುದಾರಿ. ಈ ಸಂದರ್ಭದಲ್ಲಿ ಸಾಲ್ಕಿಯಾ ಪ್ಲೀನಂ, ಪಕ್ಷದ ಕೇಂದ್ರವನ್ನು ಬಲಪಡಿಸುವ ಸರಿಯಾದ ದೃಷ್ಟಿಕೋನವನ್ನು ಹಾಕಿಕೊಟ್ಟಿದೆ ಎಂದರು.

## ಕೇರಳದ ಬೆಳವಣಿಗೆಗಳು

ಕೇರಳದ ಬೆಳವಣಿಗೆಗಳ ಬಗ್ಗೆ ಪ್ರಸ್ತಾಪಿಸುತ್ತಾ, ಸಂಗಾತಿಗಳ ಒಂದು ಸಣ್ಣ ವಿಭಾಗಕ್ಕೆ ಪಕ್ಷದ ಕಣ್ಣೋಟ ಸರಿಯೇ ಎಂಬ ಬಗ್ಗೆ ಸಂದೇಹಗಳಿದ್ದರೂ ಕೂಡ, ಎಡ, ಪ್ರಜಾಸತ್ತಾತ್ಮಕ ರಂಗ, ಮುಸ್ಲಿಂ ಲೀಗ್‌ನೊಂದಿಗೆ ಸಂಬಂಧವನ್ನು ಕಡಿದುಕೊಂಡದ್ದು ಸರಿಯಾಗಿದೆ ಹಾಗೂ ಇದರ ಫಲವಾಗಿ ಆ ರಾಜ್ಯದಲ್ಲಿ ಹಾಗೂ ಇಡೀ ದೇಶದಲ್ಲಿ ಪಕ್ಷ ಹೆಚ್ಚು ಪ್ರಭಾವಯುತವಾಗಿ ಮೂಡಿ ಬಂದಿದೆ ಎಂದರು.

ಮುಂದೆ ಆಗಬಹುದಾದ ಬೆಳವಣಿಗೆಗಳನ್ನು ಅವಲೋಕಿಸಿ, ಅವಶ್ಯವೆಂದು ಕಂಡುಬಂದಲ್ಲಿ, ಸೂಕ್ತವಾಗಿ ಮಧ್ಯಪ್ರವೇಶ ಮಾಡಲು ಕೇಂದ್ರ ಸಮಿತಿಗೆ, ಅಧಿವೇಶನ ಅಧಿಕಾರವೀಯಬೇಕೆಂದು ಎಂ.ಬಿ.ಯವರು ವಿನಂತಿಸಿದರು.

ವರದಿಯ ಕರಡನ್ನು ಅಂತಿಮಗೊಳಿಸಿ ಬಿಡುಗಡೆ ಮಾಡುವ ಅಧಿಕಾರವನ್ನು ಅಧಿವೇಶನ, ಹೊಸ ಕೇಂದ್ರ ಸಮಿತಿಗೆ ನೀಡಬೇಕೆಂದು ವಿನಂತಿಸಿದರು. ವರದಿಯಲ್ಲಿ ಸೇರಿಸಲನುಕೂಲವಾಗುವಂತೆ ತಪ್ಪು ಸಂಗತಿಗಳ (Factual) ತಿದ್ದುಪಾಟುಗಳನ್ನು ಎರಡು ವಾರದೊಳಗಾಗಿ ಕೇಂದ್ರಕ್ಕೆ ಕಳುಹಿಸಬೇಕೆಂದು ಪ್ರತಿನಿಧಿಗಳಿಗೆ ವಿನಂತಿ ಮಾಡಿದರು.

## ಸಿ. ಪಿ. ಐ. (ಎಂ) 12ನೇ ಅಧಿವೇಶನದ ನಿರ್ಣಯಗಳು :

# ಅಂತರರಾಷ್ಟ್ರೀಯ ಪರಿಸ್ಥಿತಿ

## ಯುದ್ಧಾಪಾಯದ ವಿರುದ್ಧ ಶಾಂತಿ ರಕ್ಷಣೆಗಾಗಿ

ಮಾನವ ಜನಾಂಗದ ಭವಿಷ್ಯವನ್ನೇ ಗಂಡಾಂತರಕ್ಕೊಡ್ಡಿ ಇಡೀ ಜಗತ್ತನ್ನೇ ಪರಮಾಣು ಯುದ್ಧದ ಭೀತಿಯಲ್ಲಿ ಮುಳುಗಿಸುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಂತಹಂತವಾದ ಯುದ್ಧಸಿದ್ಧತೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 12ನೇ ಅಧಿವೇಶನವು ಖಂಡಿಸುತ್ತದೆ. ಪರಮಾಣು ಯುದ್ಧವು ಎಲ್ಲಾ ಖಂಡಗಳಲ್ಲಿಯೂ ಮಾನವಸಮಾಜ ಮತ್ತು ಜೀವರಾಶಿಯನ್ನೇ ನಿರ್ನಾಮ ಮಾಡಬಹುದು. ಭಾರತದ ಎಲ್ಲ ಪ್ರಜ್ಞಾವಂತ ಜನತೆಯು ವಿಶ್ವಶಾಂತಿಯ ರಕ್ಷಣೆಗೆ ಅಣಿನೆರೆಯಬೇಕೆಂದು ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ವಿಫಲಗೊಳಿಸುವಲ್ಲಿ ತಮ್ಮ ಪಾತ್ರ ನಿರ್ವಹಿಸಬೇಕೆಂದು ಅಧಿವೇಶನವು ಕರೆನೀಡುತ್ತದೆ.

### ತಾರಾಯುದ್ಧ

ಜನಪ್ರಿಯ ವಿರೋಧವನ್ನು ಕಡೆಗಣಿಸಿ ರೀಗನ್ ಆಡಳಿತವು ಪಶ್ಚಿಮ ಯುರೋಪಿನಲ್ಲಿ ಪರ್ಶಿಂಗ್ ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ನೆಲೆಗೊಳಿಸುವಲ್ಲಿ ಮುನ್ನಡೆದಿದೆ. ನ್ಯಾಟೋ ಮಿತ್ರರನ್ನು ಸಹ ತನ್ನ ಆಕ್ರಮಣಕಾರಿ ಯುದ್ಧತಯಾರಿಯಲ್ಲಿ ಪಾಲ್ಗೊಳ್ಳುವಂತೆ ಒತ್ತಾಯಿಸುತ್ತಿದೆ. ಸಾಲ್ಟ್-11 ಒಪ್ಪಂದಕ್ಕೆ ವಿದಾಯ ಹೇಳಿ ಇದೀಗ ತನ್ನ ವ್ಯೂಹಾತ್ಮಕ ರಕ್ಷಣಾ ಯೋಜನೆ ಎಂದು ಕರೆಯಲ್ಪಡುತ್ತಿರುವ ತಾರಾಯುದ್ಧದ ಮೂಲಕ ಬಾಹ್ಯಾಕಾಶವನ್ನು ಮಿಲಿಟರೀಕರಣಗೊಳಿಸುವ ಅಪಾಯಕಾರಿ ಹೆಜ್ಜೆಯತ್ತ ನಡೆದಿದೆ. ತಾರಾಯುದ್ಧವೆಂದು ಜನಪ್ರಿಯವಾಗಿರುವ ಈ ಕಾರ್ಯಕ್ರಮವು ಶಸ್ತ್ರಾಸ್ತ್ರ ಪೈಪೋಟಿಯನ್ನು ಗುಣಾತ್ಮಕವಾಗಿ ಹೊಸದೊಂದು ಹಂತಕ್ಕೆ ಕೊಂಡೊಯ್ಯುತ್ತಿದ್ದು, ಶಸ್ತ್ರಾಸ್ತ್ರ ನಿಯಂತ್ರಣದ ಇಡೀ ಪ್ರಕ್ರಿಯೆಯನ್ನೇ ಬುಡಮೇಲು ಮಾಡುವ ಬೆದರಿಕೆಯೊಡ್ಡಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನವು ಮಿಲಿಟರಿ ಅಸ್ತ್ರಗಳಿಗಾಗಿ ವಾರ್ಷಿಕ ಸುಮಾರು 300 ಬಿಲಿಯನ್ ಡಾಲರ್‌ಗಳನ್ನು ವೆಚ್ಚಮಾಡುತ್ತಿದೆ. ಜಿನೆವಾ ಶೃಂಗಸಭೆಯಲ್ಲಿ ಗೊರ್ಬಾಚೆವ್‌ರವರು ಸೋವಿಯತ್ ಒಕ್ಕೂಟದ ಪರವಾಗಿ ಮುಂದಿಟ್ಟ ಶಸ್ತ್ರಾಸ್ತ್ರ ಪೈಪೋಟಿಯನ್ನು ತಡೆಗಟ್ಟಲು ಶೀಘ್ರ ಕ್ರಮಗಳಿಗಾಗಿ ಸಕಾರಣವಾದ ಸೂಚನೆಗಳಿಗೆ ಅನುಕೂಲಕರ ಪ್ರತಿಕ್ರಿಯೆ ವ್ಯಕ್ತಪಡಿಸಲು ರೀಗನ್‌ರವರು ನಿರಾಕರಿಸಿದರು.

### ಸೋವಿಯತ್ ಶಾಂತಿ ಪ್ರಸ್ತಾವಗಳು

ಇದಕ್ಕೆ ವ್ಯತಿರಿಕ್ತವಾಗಿ, ಒಂದು ಸಮಾಜವಾದಿ ದೇಶವೆಂಬುವಕ್ಕೆ ತಕ್ಕಂತೆ ಸೋವಿಯತ್ ಒಕ್ಕೂಟವು ವಿಶ್ವಶಾಂತಿಯನ್ನು ರಕ್ಷಿಸುವ ಮತ್ತು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುವ ಮಾರ್ಗವನ್ನು ಸತತವಾಗಿ ಅನುಸರಿಸುತ್ತಾ ಬಂದಿದೆ. ಪರಮಾಣು ಅಸ್ತ್ರಗಳನ್ನು ಪ್ರಯೋಗಿಸುವಲ್ಲಿ ತಾನು ಮೊದಲಿಗನಾಗುವುದಿಲ್ಲವೆಂದು ಘೋಷಿಸಿದೆ. 1985 ಆಗಸ್ಟ್‌ನಲ್ಲಿ 6 ತಿಂಗಳ ಕಾಲ ಅಣ್ವಸ್ತ್ರಗಳ ಪರೀಕ್ಷೆಯ ಮೇಲೆ ಏಕಪಕ್ಷೀಯ ನಿಷೇಧವನ್ನು ಘೋಷಿಸಿದ್ದು, ಅಮೆರಿಕಾವು ಸೂಕ್ತ ಪ್ರತಿಕ್ರಿಯೆ ನೀಡಿದಲ್ಲಿ ಇದನ್ನು ಮುಂದುವರಿಸುವುದಾಗಿ ತಿಳಿಸಿದೆ. ಎರಡೂ ದೇಶಗಳು ವ್ಯೂಹಾತ್ಮಕ ಪರಮಾಣು ಅಸ್ತ್ರಗಳಲ್ಲಿ ಶೇ 50 ರಷ್ಟನ್ನು ಕಡಿತಗೊಳಿಸುವ ದಿಟ್ಟ ಸೂಚನೆಯನ್ನು ಸಲಹೆ ಮಾಡಿದೆ. ಅಮೆರಿಕಾದ ತಾರಾಯುದ್ಧಗಳ ಯೋಜನೆಯಿದ್ದಾಗ್ಯೂ ಸಹ ತಾನು ಬಾಹ್ಯಾಕಾಶವನ್ನು ಮಿಲಿಟರೀಕರಣಗೊಳಿಸುವ ಯಾವುದೇ ಪ್ರಯತ್ನದಲ್ಲಿ ಕೈಹಾಕಿಲ್ಲ. ಗೋರ್ಬಚೆವ್‌ರವರ ಹೇಳಿಕೆಯ ಪ್ರಕಾರ ಯು.ಎಸ್.ಎಸ್.ಆರ್.ನ ಯುರೋಪಿಯನ್ ಭಾಗದಲ್ಲಿ SS-20 ಕ್ಷಿಪಣಿಗಳನ್ನು ತೊಡೆದುಹಾಕಲಾಗಿದೆ. ವಿಶ್ವದಲ್ಲಿನ ಬಿಗಿ ವಾತಾವರಣವನ್ನು ಸಡಿಲಗೊಳಿಸಲು ಆರು ರಾಷ್ಟ್ರಗಳ ನಾಯಕರ ಮನವಿಯನ್ನು ಸ್ವಾಗತಿಸಿದೆ. ಚೈನಾ ಸಹ ಅಣ್ವಸ್ತ್ರಗಳನ್ನು ಪ್ರಯೋಗಿಸುವುದರಲ್ಲಿ ತಾನು ಮೊದಲಿಗನಾಗುವುದಿಲ್ಲವೆಂದ್ಯ

ಘೋಷಿಸಿದೆ. ಇವೆಲ್ಲವೂ ಅತ್ಯಂತ ಬಲಿಷ್ಠವಾದ ಸಮಾಜವಾದಿ ರಾಷ್ಟ್ರದ ಹಾಗೂ ಸಮಾಜವಾದಿ ಶಿಬಿರದ ಸದುದ್ದೇಶಗಳನ್ನು ವ್ಯಕ್ತಪಡಿಸುತ್ತವೆ. ಏನೇ ಆದರೂ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಇದರ ಮಿತ್ರರು ಈ ಎಲ್ಲಾ ಪ್ರಯತ್ನಗಳನ್ನು ತಳ್ಳಿಹಾಕಿವೆ.

## ಯುದ್ಧದ ವಾಸ್ತವತೆ

ಅಮೆರಿಕನ್ ಸಾಮ್ರಾಜ್ಯಶಾಹಿಯು ಜಾಗತಿಕ ಪ್ರಾಬಲ್ಯ ಸಾಧಿಸುವ ಮತ್ತು ಕಮ್ಯುನಿಸಂ ವಿರುದ್ಧವಾದ ತನ್ನ 'ಪವಿತ್ರ ಯುದ್ಧ'ದ ಸಿದ್ಧತೆಗಾಗಿ ನವೀನ ಅಸ್ತ್ರಗಳ ತ್ವರಿತ ಉತ್ಪಾದನೆಯಲ್ಲಿ ಒಂದೇಸಮನೆ ತೊಡಗಿರುವ ಕಾರಣ ಯುದ್ಧದ ಅಪಾಯ ವಾಸ್ತವವಾಗಿದೆ. ಅಮೆರಿಕಾವು ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ರಾಷ್ಟ್ರಗಳನ್ನು ಅಣ್ವಸ್ತ್ರಗಳು ಹಾಗೂ ಮಿಲಿಟರಿ ನೆಲೆಗಳಿಂದ ಸುತ್ತುವರಿಯುವುದರಿಂದ ತೃಪ್ತಿಪಡದೆ ಹೊಸದಾಗಿ ಸ್ವತಂತ್ರಗೊಂಡ ರಾಷ್ಟ್ರಗಳಲ್ಲಿ ನಿಸ್ಸಂಕೋಚವಾದ ಹಸ್ತಕ್ಷೇಪ ನಡೆಸಲು ಮತ್ತು ರಾಷ್ಟ್ರೀಯ ವಿಮೋಚನಾ ಸಮರಗಳ ವಿರುದ್ಧವಾಗಿ ತನ್ನ ಶಸ್ತ್ರಾಸ್ತ್ರ ಬಲವನ್ನು ಉಪಯೋಗಿಸುತ್ತಿದೆ. ಗ್ರೆನೆಡಾದ ಮೇಲಿನ ಆಕ್ರಮಣವು ಜಾಗತಿಕ ಪ್ರಾಬಲ್ಯ ಸಾಧಿಸುವ ಅಮೇರಿಕಾದ ಉದ್ದೇಶಗಳನ್ನು ಸಾಬೀತು ಪಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ತನ್ನ ಇಷ್ಟಕ್ಕೆ ವಿರೋಧವಾಗಿ ನಿಲ್ಲುವ ಯಾವುದೇ ದೇಶದ ಮೇಲೆ ಎರಗಲು ಸಾಧ್ಯವಾಗುವಂತೆ ತುರ್ತು ರವಾನೆ ಸೈನ್ಯವನ್ನು ಸಜ್ಜುಗೊಳಿಸಿದೆ. ಮೂರನೆಯ ಜಗತ್ತಿನಲ್ಲಿ ಹೊಸ ನೆಲೆಗಳನ್ನು ಸ್ಥಾಪಿಸಲು ಮತ್ತು ಸಾಗರಗಳನ್ನು ಅಣ್ವಸ್ತ್ರಗಳಿಂದ ಸಜ್ಜಾದ ನೌಕಾ ಪಡೆಗಳಿಂದ ತುಂಬಲು ಅಮೆರಿಕಾವು ಹವಣಿಸುತ್ತದೆ.

## ಶಾಂತಿ ಚಳುವಳಿಯ ಪ್ರವಾಹ

ಯುದ್ಧದ ಅಪಾಯವನ್ನು ತಡೆಗಟ್ಟಲು ಸತತವಾದ ಮತ್ತು ದೃಢವಾದ ಸಮರದಲ್ಲಿ ತೊಡಗಿರುವ ಜಗತ್ತಿನ ಎಲ್ಲ ಶಾಂತಿಯೋಧರನ್ನು 12ನೇ ಅಧಿವೇಶನವು ಅಭಿನಂದಿಸುತ್ತದೆ. ಪಶ್ಚಿಮ ಯೂರೋಪ್, ಅಮೆರಿಕಾ ಸಂಯುಕ್ತ ಸಂಸ್ಥಾನ, ಜಪಾನ್ ಮತ್ತು ಜಗತ್ತಿನ ಎಲ್ಲ ಭಾಗಗಳಲ್ಲಿ ಎಲ್ಲ ವಿಭಾಗಗಳ ಜನರನ್ನು ಒಂದುಗೂಡಿಸಿ ಶಾಂತಿ ಚಳುವಳಿಯು ವಿಶಾಲವಾಗಿ ಬೆಳೆಯುತ್ತಾ ಯುದ್ಧ ಪಿತೂರಿಯ ವಿರುದ್ಧ ಸೆಣಸುತ್ತಿದೆ. ಅನೇಕ ದೇಶಗಳಲ್ಲಿ ಶಾಂತಿ ಚಳುವಳಿಯು ಬಲಗೊಳ್ಳುತ್ತಾ ಮುನ್ನಡೆಯುತ್ತಿದೆ. ಈ ಶಕ್ತಿಯುತ ಪ್ರವಾಹ, ಸೋವಿಯೆತ್ ಒಕ್ಕೂಟ ಮತ್ತು ಸಮಾಜವಾದಿ ರಾಷ್ಟ್ರಗಳು ಹಾಗೂ ಅಲಿಪ್ತ ಚಳುವಳಿ ಯುದ್ಧಕೋರರನ್ನು ಸೋಲಿಸಬಹುದೆನ್ನುವ ದೃಢ ವಿಶ್ವಾಸಕ್ಕೆ ಮೂಲವಾಗಿದೆ.

ಭಾರತದ-ಜನತೆಯನ್ನು ಬಡಿದೆಬ್ಬಿಸಿ ವಿಶಾಲ ತಳಹದಿಯ ಬಲಿಷ್ಠ ಶಾಂತಿ ಚಳುವಳಿಯನ್ನು ಕಟ್ಟುವ ಮೂಲಕ ವಿಶ್ವವ್ಯಾಪಿಯಾದ ಶಾಂತಿ ಪಡೆಗಳೊಂದಿಗೆ ಸೇರಲು ಒಂದಾಗಬೇಕೆಂದು ಎಲ್ಲಾ ದೇಶಪ್ರೇಮಿ ಮತ್ತು ಪ್ರಗತಿಪರ ಶಕ್ತಿಗಳು ಹಾಗೂ ಪಕ್ಷಗಳಿಗೆ 12ನೇ ಅಧಿವೇಶನವು ಕರೆ ನೀಡುತ್ತದೆ. ಇಂದಿನ ಶಾಂತಿ ಚಳುವಳಿಯನ್ನು ವಿಶಾಲಗೊಳಿಸಲು ಸಾಧ್ಯವಾಗುವಂತೆ ನಾಯಕತ್ವದ ಪಾತ್ರವನ್ನು ವಹಿಸಲು ದುಡಿಯುವ ಜನತೆಯನ್ನು ಸಂಘಟಿಸಬೇಕಾಗಿದೆ. ಸಾಮ್ರಾಜ್ಯಶಾಹಿ ಯುದ್ಧಪಿತೂರಿಗಳನ್ನು ಎದುರಿಸಲು ಎಲ್ಲಾ ಶಾಂತಿಪ್ರಿಯ ಮತ್ತು ದೇಶಪ್ರೇಮಿ ಭಾರತೀಯರೂ ಒಂದಾಗಬೇಕಾಗಿದೆ.

## ಇ. ಎಂ. ಎಸ್. ಗೆ ಅಭಿನಂದನೆಗಳು

ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಪರವಾಗಿ ನಾನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ನೀವು ಪುನರಾಯ್ಕೆಗೊಂಡುದಕ್ಕಾಗಿ ನಿಮಗೆ ಅತ್ಯಂತ ಹಾರ್ದಿಕ ಅಭಿನಂದನೆ ತಿಳಿಸಬಯಸುತ್ತೇನೆ.

ನಿಮ್ಮ ಆರೋಗ್ಯ ಚೆನ್ನಾಗಿರಲೆಂದು ಮತ್ತು ನಿಮ್ಮ ಉನ್ನತ ಕರ್ತವ್ಯಗಳಲ್ಲಿ ಇನ್ನೂ ಮಹಾನ್ ವಿಜಯ ಸಿಗಲೆಂದು ನಾನು ಹಾರೈಸುತ್ತೇನೆ.

ನಮ್ಮೆರಡು ಪಕ್ಷಗಳ ಮತ್ತು ನಮ್ಮೆರಡು ದೇಶಗಳ ಜನತೆಗಳ ನಡುವಿನ ಸೌಹಾರ್ದತೆ, ಸ್ನೇಹ ಸಂಬಂಧಗಳು ಮತ್ತು ಸೋದರ ಸಹಕಾರ ದಿನಗಳೆದಂತೆ ಮತ್ತಷ್ಟು ದೃಢಗೊಂಡು ಬೆಳೆಯುವಂತಾಗಲಿ.

ಹಾನೋಯ್ ಜನವರಿ 1, 1986

**ಲೆ ದುವಾನ್**
ಪ್ರಧಾನ ಕಾರ್ಯದರ್ಶಿ
ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ
ಕೇಂದ್ರ ಸಮಿತಿ.

# ಮೇ ದಿನದ ಶತಾಬ್ಧಿ :

ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಐಕ್ಯತೆ ಮತ್ತು ಸೌಹಾರ್ದತೆಯ ದಿನವಾದ ಮೇ ದಿನದ ಶತಾಬ್ಧಿಯನ್ನು ಆಚರಿಸಲು ಕಾರ್ಮಿಕ ಸಂಘಗಳ ಜಾಗತಿಕ ಒಕ್ಕೂಟವು ನೀಡಿರುವ ಕರೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 12ನೇ ಅಧಿವೇಶನವು ಸ್ವಾಗತಿಸುತ್ತದೆ.

ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವಿನ ವರ್ಗಹೋರಾಟದಲ್ಲಿ ಕಾರ್ಮಿಕ ಚಳುವಳಿಯ ಮೊತ್ತಮೊದಲ ಹುತಾತ್ಮರಾದ ಚಿಕಾಗೋ ಹುತಾತ್ಮರ ನೆನಪಿಗೆ ಮೇ ದಿನವನ್ನು ಸಮರ್ಪಿಸಲಾಗಿದೆ. ಬಂಡವಾಳಶಾಹಿ ಪ್ರಭುತ್ವ ಮತ್ತು ಬೂರ್ಜ್ವಾ ಪ್ರಜಾಪ್ರಭುತ್ವದೊಂದಿಗಿನ ಈ ಮೊದಲ ಘರ್ಷಣೆಯಲ್ಲಿ ಅನೇಕ ಕಾರ್ಮಿಕರು ಕೊಲೆಯಾದರು ಮತ್ತು ಅವರ ನಾಯಕರನ್ನು ಶಿಲುಬೆ ಹಾಗೂ ನೇಣುಗಂಬಕ್ಕೇರಿಸಲಾಯಿತು. ತಮ್ಮ ತಲೆ ಎತ್ತಿನಿಂತು ಮೃತ್ಯುಶಯ್ಯೆಯತ್ತ ನಡೆದ ಕಾರ್ಮಿಕವರ್ಗದ ಧೀರೋದಾತ್ತ ನಾಯಕರ ಸ್ಮರಣೆಗೆ 12ನೇ ಅಧಿವೇಶನವು ಶ್ರದ್ಧಾಂಜಲಿಯರ್ಪಿಸುತ್ತದೆ.

12 ರಿಂದ 14 ಗಂಟೆಗಳ ಬದಲು ಎಂಟುಗಂಟೆಯ ಕೆಲಸದ ಕಾರ್ಮಿಕರ ಬೇಡಿಕೆಗೆ ಅಮೆರಿಕಾದ ಬಂಡವಾಳಶಾಹಿ ವರ್ಗದ ಉತ್ತರ ಗುಂಡೇಟು ಮತ್ತು ಗಲ್ಲು ಶಿಕ್ಷೆ. ಆದರೆ ಈ ನರಮೇಧವು ಬೆಳೆದು ಬರುತ್ತಿದ್ದ ವರ್ಗಹೋರಾಟವನ್ನು ತಡೆಯಲಾಗಲಿಲ್ಲ, ಮಾತ್ರವಲ್ಲದೆ ಕೆಲವೇ ವರ್ಷಗಳಲ್ಲಿ ಹಲವಾರು ದೇಶಗಳಲ್ಲಿ ಎಂಟು ಗಂಟೆಯ ಕೆಲಸದ ದಿನವನ್ನು ಕಾನೂನುಬದ್ಧವಾಗಿ ಸ್ಥಾಪಿಸಲಾಯಿತು.

ಚಿಕಾಗೋ ನರಮೇಧದ ನಂತರದ ವರ್ಷಗಳಲ್ಲಿ ಎಲ್ಲಾ ದೇಶಗಳಲ್ಲಿಯೂ ಕಾರ್ಮಿಕವರ್ಗದ ಚಳುವಳಿಯು ಅಸಂಖ್ಯಾತ ಗುಂಡೇಟು ಮತ್ತು ನೇಣುಗಂಬಗಳನ್ನು ಎದುರಿಸಬೇಕಾಗಿ ಬಂದರೂ ಮುನ್ನಡೆಯುತ್ತಾ ಬಂದಿದೆ. ರಷ್ಯಾದ ಝಾರ್‌ನ ಡಂಜನ್‌ಗಳಲ್ಲಿ ಮತ್ತು ಹಿಟ್ಲರ್ ಫ್ಯಾಸಿಸಂನ ಮೃತ್ಯುಶಿಬಿರಗಳಲ್ಲಿ ಹೋರಾಟಗಳನ್ನು ನಡೆಸಲಾಯಿತು. ಇಂದು ಪುನಃ ಇರಾನ್, ಚಿಲಿ ಮತ್ತಿತರೆ ಅನೇಕ ದೇಶಗಳಲ್ಲಿನ ನರಹಿಂಸೆ ತುಂಬಿದ ಕಾರಾಗೃಹಗಳಲ್ಲಿ ಹೋರಾಟ ನಡೆಯುತ್ತಿದೆ.

ಇದೇ ಅವಧಿಯಲ್ಲಿ ಕಾರ್ಮಿಕ ವರ್ಗವು ವಿಜಯದಿಂದ ವಿಜಯದತ್ತ ಮುನ್ನಡೆಯಿತು. ಅಕ್ಟೋಬರ್ ಮಹಾಕ್ರಾಂತಿ ಮತ್ತು ಚೈನಾ ಮಹಾ ಕ್ರಾಂತಿಯನ್ನು ಕಾರ್ಮಿಕ ವರ್ಗದ ಮುಂದಾಳತ್ವದಲ್ಲಿ ಸಾಧಿಸಲಾಗಿದ್ದು ಇಂದು ಜಗತ್ತಿನ ಮೂರನೆಯ ಒಂದು ಭಾಗವು ಸಮಾಜವಾದಿ ಕ್ರಾಂತಿಯ ವಿಜಯ ಪತಾಕೆಯನ್ನು ಎತ್ತಿ ಹಿಡಿದಿದೆ. ಫ್ಯಾಸಿಸ್ಟ್ ವಿರೋಧಿ ಸಮರ ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟಗಳಲ್ಲಿ ಕಾರ್ಮಿಕ ವರ್ಗವು ಅನೇಕ ದೇಶಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಮಾಜವಾದಿ ಜಗತ್ತಿನ ಉದಯವು ಎಂಟು ಗಂಟೆಯ ಕೆಲಸದ ದಿನಕ್ಕೆ ಹೋರಾಡಿ ಮಡಿದ ಹುತಾತ್ಮರಿಗೆ ಸಂದ ಸೂಕ್ತ ಗೌರವವಾಗಿದೆ. ಒಂದು ಶತಮಾನ ಕಾಲದ ಕಾರ್ಮಿಕ ವರ್ಗದ ಮಹಾ ಸಾಧನೆಗಳನ್ನು, ವಿಜಯಗಳನ್ನು ನಾಶಗೊಳಿಸುವ ಸಲುವಾಗಿ ಸೋವಿಯತ್ ಸಮಾಜವಾದಿ ಒಕ್ಕೂಟದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿಯು ಅಕ್ರಮಣಕಾರಿ ಯುದ್ಧ ಸನ್ನಾಹ ನಡೆಸುತ್ತಿರುವ ಗಂಭೀರ ಸವಾಲಿನ ನಟ್ಟನಡುವೆ ಈ ಮಹಾ ಶತಾಬ್ಧಿಯು ಬಂದಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು, ಸಮಾಜವಾದವನ್ನು ನಿರ್ನಾಮ ಮಾಡುವ ತನ್ನ ಬಯಕೆಯನ್ನು ರೀಗನ್ ಬಹಿರಂಗವಾಗಿ ಘೋಷಿಸಿದ್ದಾನೆ. ಶತಾಬ್ಧಿ ಆಚರಣೆಯನ್ನು ಯುದ್ಧದ ವಿರುದ್ಧ ಮತ್ತು ಶಾಂತಿಯ ಪರವಾಗಿ ಜಾಗತಿಕ ಕಾರ್ಮಿಕ ವರ್ಗದ ಬಲ ಪ್ರದರ್ಶನವನ್ನಾಗಿ ಪರಿವರ್ತಿಸಬೇಕಾಗಿದೆ. ಶತಾಬ್ಧಿ ದಿನಾಚರಣೆಯ ದಿನದಂದು ಮಾನವ ಜನಾಂಗದ ಉಳಿವಿಗಾಗಿ ಇಡೀ ವಿಶ್ವದ ಕಾರ್ಮಿಕ ವರ್ಗವು ಶಾಂತಿಯ ಪತಾಕೆಯನ್ನು ಎತ್ತಿ ಹಿಡಿದು ಸಮಾಜವಾದಿ ರಾಷ್ಟ್ರಗಳನ್ನು ನಾಶಗೊಳಿಸುವ ಮತ್ತು ಪ್ರಪಂಚವನ್ನು ಪುನರಾಕ್ರಮಣ ಮಾಡುವ ಸಾಮ್ರಾಜ್ಯಶಾಹಿ ಪಿತೂರಿಯನ್ನು ಸೋಲಿಸುವ ಪ್ರತಿಜ್ಞೆಯನ್ನು ಜಗತ್ತಿನ ಜನತೆಯ ಮುಂದೆ ಸಾರಬೇಕು.

ಅಂತರ್ರಾಷ್ಟ್ರೀಯ ಸೌಹಾರ್ದತೆಯ ಪತಾಕೆಯನ್ನು ಎತ್ತಿ ಹಿಡಿದು ಸಾಮ್ರಾಜ್ಯಶಾಹಿಯ ಯುದ್ಧ ಯೋಜನೆಗಳನು ವಿಫಲಗೊಳಿಸಲು ಭಾರತದ ಕಾರ್ಮಿಕ ವರ್ಗವು ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಮೀಸಲಿಡುವುದೆಂದು ಅಂತರ್ರಾಷ್ಟ್ರೀಯ ಚಳುವಳಿಗೆ ಭರವಸೆ ನೀಡುವ ಸಲುವಾಗಿ ಶತಾಬ್ಧಿ ದಿನಾಚರಣೆಯನ್ನು ಅಪೂರ್ವ ರೀತಿಯಲ್ಲಿ ಆಚರಿಸಲು ಪಕ್ಷದ ಎಲ್ಲಾ ಘಟಕಗಳಿಗೆ ಮತ್ತು ಸಾಮೂಹಿಕ ಸಂಘಟನೆಗಳಿಗೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 12ನೇ ಅಧಿವೇಶನವು ಕರೆ ನೀಡುತ್ತದೆ.

# ರಾಷ್ಟ್ರೀಯ ವಿಮೋಚನಾ ಸಮರಗಳೊಂದಿಗೆ ಸಹಭಾವ

ಇತ್ತೀಚಿಗಿನ ಅವಧಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹೀ ಹೇರಿಕೆಯ ವಿರುದ್ಧ, ಇತ್ತೀಚಿಗಿನ ಅವಧಿಯಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಮಜಲಿನಿಂದ ಮಜಲಿಗೆ ಸಶಕ್ತವಾಗಿ ಬೆಳೆಯುತ್ತಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 12ನೇ ಅಧಿವೇಶನವು ಸಂತೋಷದಿಂದ ಗಮನಿಸುತ್ತದೆ. ಜಗತ್ತಿನ ವಿವಿಧ ಭಾಗಗಳಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಯ ವಿಜಯಯಾತ್ರೆಯನ್ನು ತಡೆಯುವ ಸಾಮ್ರಾಜ್ಯಶಾಹಿಯ ಎಲ್ಲಾ ಪ್ರಯತ್ನಗಳೂ ವಿಫಲವಾಗಿದ್ದು ವಸಾಹತುವಾದಿ ಮತ್ತು ನವ ವಸಾಹತುವಾದಿ ಗುಲಾಮಗಿರಿಯ ವಿರುದ್ಧವಾದ ಕ್ರಾಂತಿಕಾರಿ ಚಳುವಳಿಗಳು ಹೊಸ ಎತ್ತರದ ಮಜಲನ್ನು ಮುಟ್ಟಿದೆ.

## ಎಲ್ ಸಾಲ್ವಡೋರ್

ಅಮೆರಿಕನ್ ಸಾಮ್ರಾಜ್ಯಶಾಹಿ,ಎಲ್-ಸಾಲ್ವಡೋರ್‌ನ ಮೇಲೆ ಹೇರಿದ ದುವಾರ್ತೆಯ ನವ-ವಸಾಹತುಶಾಹಿ ಸರ್ಕಾರವನ್ನು ಕಿತ್ತೊಗೆಯಲು ದೃಢ ನಿರ್ಧಾರದಿಂದ ವಿಮೋಚನಾ ಸಮರದಲ್ಲಿ ತೊಡಗಿರುವ ಎಲ್‌ಸಾಲ್ವಡಾರೋದ ಧೀರ ಜನತೆಯನ್ನು ಹಾಗೂ ಫರಾಬುಂದಿ ಮಾರ್ತಿ ರಾಷ್ಟ್ರೀಯ ವಿಮೋಚನಾರಂಗ (FMLN) ವನ್ನು 12ನೇ ಅಧಿವೇಶನವು ಅಭಿನಂದಿಸುತ್ತದೆ. ಅಮೆರಿಕಾದ ಸಲಹೆಗಾರರು ಮತ್ತು ಪ್ರತಿಗಾಮಿ ಸಶಸ್ತ್ರ ಪಡೆಗಳು ರೂಪಿಸಿರುವ ಮರಣಾಂತಿಕ ಪಡೆಗಳು ಸಹಸ್ರಾರು ಪುರುಷರು ಮತ್ತು ಮಹಿಳೆಯರನ್ನು ಬಲಿತೆಗೆದುಕೊಂಡಿದೆ. FMLNನ ಧೀರ ಹೋರಾಟಗಾರರು ಪ್ರತಿಗಾಮಿ ಸೈನ್ಯದ ಮತ್ತು ಅವರ ಅಮೆರಿಕಾದ ಸಲಹೆಗಾರರಿಗೆ ಬಲವಾದ ಹೊಡೆತಗಳನ್ನು ನೀಡಿ ದೇಶದ ಮೂರನೆಯ ಒಂದು ಭಾಗವನ್ನು ಶತ್ರುಗಳ ಹತೋಟಿಯಿಂದ ವಿಮೋಚನೆಗೊಳಿಸಿದ್ದಾರೆ.

FMLN ಮತ್ತು ಎಲ್‌ಸಾಲ್ವಡೇರ್‌ನ ಜನತೆಗೆ ಅಧಿವೇಶನವು ತನ್ನ ದೃಢ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ.

## ನಮೀಬಿಯಾ

ದಕ್ಷಿಣ ಆಫ್ರಿಕಾದ ಅಲ್ಪ ಸಂಖ್ಯಾತ ಬಿಳಿಯರ ಸರ್ಕಾರದ ಕಪಿಮುಷ್ಟಿಯಿಂದ ನಮೀಬಿಯಾವನ್ನು ವಿಮೋಚನೆಗೊಳಿಸುವ ಗುರಿಯತ್ತ ತಮ್ಮ ಕಠಿಣ, ದೀರ್ಘಕಾಲದ ಹೋರಾಟಗಳ ಮೂಲಕ ಮುನ್ನಡೆ ಸಾಧಿಸಿರುವ ನಮೀಬಿಯಾದ ಸಮರ ಶೀಲ ಜನತೆಯನ್ನು ಮತ್ತು ಅವರನ್ನು ಪ್ರತಿನಿಧಿಸುವ ಏಕಮಾತ್ರ ನ್ಯಾಯಬದ್ಧ ಸಂಘಟನೆಯಾದ ಸೌತ್‌ವೆಸ್ಟ್ ಆಫ್ರಿಕನ್ ಪೀಪಲ್ಸ್ ಆರ್ಗನೈಸೇಷನ್ (SWAPO) ವನ್ನು 12ನೇ ಅಧಿವೇಶನವು ಅಭಿನಂದಿಸುತ್ತದೆ. ಅಂತರ್‌ರಾಷ್ಟ್ರೀಯ ಜನಾಭಿಪ್ರಾಯವನ್ನು ಮತ್ತು ವಿಶ್ವ ರಾಷ್ಟ್ರ ಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ ಜನಾಂಗೀಯವಾದಿ ಸರ್ಕಾರವು, ತಾನು ರಕ್ಷಣೆಯ ನೆಪದಿಂದ ಅಪಹರಿಸಿಕೊಂಡಿರುವ ನಮೀಬಿಯಾದ ಮೇಲಿನ ಆಕ್ರಮಣವನ್ನು ಮುಂದುವರಿಸುತ್ತಿದೆ. ಸ್ವಾಪೋಗೆ ಸಹಾಯ ನೀಡುತ್ತಿರುವ ಅಂಗೋಲಾ ಮತ್ತಿತರೆ ಮುಂಚೂಣಿ ರಾಷ್ಟ್ರಗಳ ಮೇಲೆ ಸಹ ಧಾಳಿ ಮಾಡಲಾಗುತ್ತಿದೆ. ಜನತೆಯ ಅತೀವ ಜಾಗೃತಿ ಮತ್ತು ಐಕ್ಯತೆಯಿಂದಾಗಿ ದಕ್ಷಿಣ ಆಫ್ರಿಕಾದ ಸೈನ್ಯ ಶಕ್ತಿಗೆ ಎದುರಾಗಿ ನಮೀಬಿಯನ್ ಜನತೆಯು ಹೋರಾಟವು ಬಲಗೊಳ್ಳುತ್ತಿದೆ. ವರ್ಣದ್ವೇಷಿಗಳು ಕೈಗೊಂಡಿರುವ ದಬ್ಬಾಳಿಕೆಯ ಕ್ರಮಗಳನ್ನು ಎದುರಿಸಿಯೂ ನಮೀಬಿಯಾದಲ್ಲಿ ಸಶಸ್ತ್ರ ಹೋರಾಟ ಮುಂದುವರಿಯುತ್ತಿದೆ.

ಸ್ವಾಪೋ ಮತ್ತು ನಮೀಬಿಯಾ ಜನತೆಯೊಂದಿಗೆ ಈ ಅಧಿವೇಶನವು ತನ್ನ ಸಂಪೂರ್ಣ ಬೆಂಬಲ ಹಾಗೂ ಸೌಹಾರ್ದತೆಯನ್ನು ವ್ಯಕ್ತಪಡಿಸಿ ಇನ್ನು ಹೆಚ್ಚಿನ ಯಶಸ್ಸು ಮತ್ತು ತಮ್ಮ ಗುರಿ ಸಾಧನೆಯಲ್ಲಿಪೂರ್ಣವಿಜಯವನ್ನು ಬಯಸುತ್ತದೆ. ನಮೀಯಾದ ಜನತೆಯ ಗುರಿ ಸಾಧನೆಗೆ ಅಧಿವೇಶನವು ತನ್ನ ಅಚಲವಾದ ಸಹಭಾವವನ್ನು ವ್ಯಕ್ತಪಡಿಸುತ್ತದೆ.

## ಸಹರಾವಿ ಗಣರಾಜ್ಯ

ರಾಷ್ಟ್ರೀಯ ವಿಮೋಚನೆಯ ಗುರಿಯತ್ತ ಮುನ್ನಡೆಯುವಲ್ಲಿ ಪಶ್ಚಿಮ ಸಹಾರಾದ ಜನತೆ ಮತ್ತು ಪೋಲಿಸಾರಿಯೋ ರಂಗದ ಹೋರಾಟವು ಗಳಿಸಿರುವ ಭಾರಿ ಯಶಸ್ಸಿನ ಬಗ್ಗೆ 12ನೇ ಅಧಿವೇಶನವು ತನ್ನ ಸಂತೋಷ ವ್ಯಕ್ತಪಡಿಸುತ್ತದೆ. ಪೋಲಿಸಾರಿಯೋ ರಂಗವನ್ನು ರಾಜಕೀಯವಾಗಿ ಮೂಲೆ ಗುಂಪು ಮಾಡುವಲ್ಲಿ ಮತ್ತು ಸೈನಿಕವಾಗಿ ದಮನ ಮಾಡುವಲ್ಲಿ ಮೊರಕ್ಕೋ ಸರ್ಕಾರದ ವೈಫಲ್ಯವು ಎಲ್ಲರಿಗೂ ಮನದಟ್ಟಾಗಿದೆ.

ಕಠಿಣ ಪರಿಸ್ಥಿಯಲ್ಲೂ ಅದನ್ನು ಸ್ಫೂರ್ತಿಯಿಂದ ಹೋರಾಡುತ್ತಿರುವ ಸಹರಾವಿ ಜನತೆಯು ತಮ್ಮ ಭವಿಷ್ಯವನ್ನು ಪುನರ್‌ರೂಪಿಸಿಕೊಳ್ಳುತ್ತಿದ್ದಾರೆ. ಭಾರತವೂ ಸೇರಿದಂತೆ 63 ರಾಷ್ಟ್ರಗಳು ಈವರೆಗೆ ಸಹರಾವಿ ಅರಬ್ ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಮಾನ್ಯತೆ ನೀಡಿವೆ.

(36ನೇ ಪುಟವನ್ನು ನೋಡಿ)

# ಏಶ್ಯಾದಲ್ಲಿ ಅಸಂಸ್ಥಾ ಸಾಮ್ರಾಜ್ಯಶಾಹಿ ಕುಟಿಲ ತಂತ್ರಗಳ ವಿರುದ್ಧ

ಅಸಂಸ್ಥಾ ಸಾಮ್ರಾಜ್ಯಶಾಹಿ ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಶ್ವದ ಮೇಲೆ ತನ್ನ ಪ್ರಾಬಲ್ಯ ಹೇರುವ ರಭಸವನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಈ ಉದ್ದೇಶ ಸಾಧನೆಗಾಗಿ ಅದು ವಿಶೇಷತಃ ಏಷ್ಯಾದತ್ತ ಗುರಿಯಿಟ್ಟಿದೆ. ಅದು ಹಿಂದೂ ಮಹಾಸಾಗರವನ್ನು ಸೈನ್ಯಮಯಗೊಳಿಸುತ್ತಿದೆ, ಈ ಖಂಡದ ಸಮಾಜವಾದೀ ದೇಶಗಳ ವಿರುದ್ಧ ಪಿತೂರಿ ನಡೆಸುತ್ತಿದೆ. ಮತ್ತು ತನ್ನ ಒತ್ತಡಕ್ಕೆ ಮಣಿಯಲು ನಿರಾಕರಿಸುವ ದೇಶಗಳನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದೆ. ತನ್ನ ನವ ವಸಾಹತುಶಾಹೀ ಗುರಿಗಳನ್ನು ಈಡೇರಿಸಿಕೊಳ್ಳಲು ಅದು ತನ್ನ ಆರ್ಥಿಕ ಸಂಪನ್ಮೂಲಗಳನ್ನು ಮತ್ತು ಬಹುರಾಷ್ಟ್ರೀಯ ಕಂಪೆನಿಗಳನ್ನು ಬಳಸಿಕೊಳ್ಳುತ್ತಿದೆ. ಅಸಂಸ್ಥಾ ಸಾಮ್ರಾಜ್ಯಶಾಹಿಗಳು ಈ ಆಕ್ರಮಣ ಪ್ರತಿರೋಧವನ್ನು ಎದುರಿಸುತ್ತಿದೆ. ಏಶ್ಯಾದ ವಿವಿಧ ಭಾಗಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಟಿಲೋಪಾಯಗಳನ್ನು ವಿಫಲಗೊಳಿಸಲು ಜನಪ್ರಿಯ ಆಂದೋಲನಗಳು ಉದಯವಾಗಿವೆ.

## ಪಶ್ಚಿಮ ಏಶ್ಯಾ

ಇಸ್ರೇಲ್ ಅಸಂಸ್ಥಾದ ಸಕ್ರಿಯ ನೆರವಿನೊಂದಿಗೆ ತನ್ನ ಆಕ್ರಮಣಕಾರೀ ವಿಸ್ತರಣಾವಾದವನ್ನು ಮುಂದುವರಿಸುತ್ತಿರುವುದನ್ನು ಹನ್ನೆರಡನೇ ಅಧಿವೇಶನ ಆತಂಕದಿಂದ ಗಮನಿಸುತ್ತದೆ. ಇಸ್ರೇಲ್ ಸಿರಿಯಾ, ಜೋರ್ಡಾನ್ ಮತ್ತು ಲೆಬನಾನ್‌ನಲ್ಲಿ ಆಕ್ರಮಿಸಿಕೊಂಡ ಪ್ರದೇಶಗಳನ್ನು ಖಾಲಿಮಾಡಲು ನಿರಾಕರಿಸುತ್ತಿದೆ. ಈ ಸಾಮ್ರಾಜ್ಯಶಾಹಿ ಪ್ಯಾಲೆಸ್ಟೈನ್ ವಿಮೋಚನಾ ಆಂದೋಲನದ ವಿರುದ್ಧ ಧಾಳಿ ನಡೆಸಲು ಝಿಯೊನಿಸ್ಟರನ್ನು ಬಳಸಿಕೊಳ್ಳುತ್ತಿದೆ. ಅಸಂಸ್ಥಾ ಅರಬ್ ಹೋರಾಟದ ಐಕ್ಯತೆಯನ್ನು ಮುರಿಯಲು ಈಜಿಪ್ಟನ್ನು ಬಳಸ ಬಯಸುತ್ತಿದೆ. ಅದು ಈಜಿಪ್ಟ್‌ನಲ್ಲಿ ತುರ್ತುರವಾನೆ ಪಡೆಗಳಿಗೆ ಸೌಲಭ್ಯಗಳನ್ನು ಹಾಗೂ ಮಿಲಿಟರಿ ನೆಲೆಗಳನ್ನು ಗಳಿಸಿಕೊಂಡಿದೆ.

ಲೆಬನಾನ್‌ನಲ್ಲಿ ಇಸ್ರೇಲಿನ ಸಶಸ್ತ್ರಬಲ ಮತ್ತು ಲೆಬನಾನ್‌ನ ಪ್ರತಿಗಾಮಿ ಶಕ್ತಿಗಳ ವಿರುದ್ಧ ಧೀರ ಸಮರ ನಡೆಸಿದರೂ ಪ್ಯಾಲೆಸ್ಟೈನ್ ಹೋರಾಟಗಾರರು ಹಿಂದೆ ಸರಿಯಬೇಕಾಗಿ ಬಂತು. ಈ ಸನ್ನಿವೇಶದಿಂದ ಉಂಟಾದ ಸಂಕಷ್ಟಗಳನ್ನು ಪ್ಯಾಲೆಸ್ಟೈನ್ ಆಂದೋಲನದ ಸಮರಶೀಲ ಸಂಘಟನೆಗಳು ಮೆಟ್ಟಿ ನಿಲ್ಲುತ್ತಿವೆ.

ಪ್ಯಾಲೆಸ್ಟೈನ್ ವಿಮೋಚನಾ ಆಂದೋಲನಕ್ಕೆ ಹಾಗೂ ಐಕ್ಯತೆಯನ್ನು ಮುರಿದು ಪಶ್ಚಿಮ ಏಶ್ಯಾದಲ್ಲಿ ತಮ್ಮ ಪ್ರಾಬಲ್ಯ ಹೇರಬೇಕೆನ್ನುವ ಅಸಂಸ್ಥಾ ಸಾಮ್ರಾಜ್ಯಶಾಹಿಯ ಪ್ರಯತ್ನಗಳನ್ನು ವಿಫಲಗೊಳಿಸಲು ಹೋರಾಡುತ್ತಿರುವ ಅರಬ್ ಪ್ರಭುತ್ವಗಳಲ್ಲಿನ ಪ್ರಗತಿಶೀಲ ಶಕ್ತಿಗಳಿಗೆ ಶುಭಾಶಯ ಕೋರುತ್ತದೆ. ಅಧಿವೇಶನ ದಕ್ಷಿಣ ಲೆಬನಾನ್‌ನ ಭಾಗಗಳನ್ನು ಇನ್ನೂ ಆಕ್ರಮಿಸಿಕೊಂಡಿರುವ ಇಸ್ರೇಲಿ ಆಕ್ರಮಣಕಾರರಿಗೆ ಪ್ರತಿದಿನ ಪ್ರಬಲ ಪ್ರತಿರೋಧ ನೀಡುತ್ತಿರುವ ಲೆಬನಾನ್ ಜನತೆಗೆ ಶುಭಾಶಯ ಕೋರುತ್ತದೆ.

## ಆಗ್ನೇಯ ಏಶ್ಯಾ

ದಶಕ, ದಶಕಗಳ ಯುದ್ಧದ ನಂತರ, ತಮ್ಮ ಸಮಾಜದ ಶಾಂತಿಯುತ ಪುನರ್ರಚನೆಯಲ್ಲಿ ತೊಡಗಿರುವ ವಿಯೆಟ್ನಾಂ, ಲಾವೊಸ್ ಹಾಗೂ ಕಂಪೂಚಿಯಾದ ಜನತೆಗೆ ಶುಭಾಶಯ ಕೋರುತ್ತದೆ. ಅವರಿಗೆ ತನ್ನ ಪೂರ್ಣ ಸೌಹಾರ್ದ ಹಾಗೂ ಬೆಂಬಲ ನೀಡುತ್ತದೆ. ಅಸಂಸ್ಥಾ ಸರ್ಕಾರ ವಿಯೆಟ್ನಾಂ ಅನ್ನು ಮೂಲೆ ಗುಂಪು ಮಾಡಲು ನಡೆಸುತ್ತಿರುವ ಪ್ರಯತ್ನಗಳನ್ನು ಥ್ಯಾಲೆಂಡ್‌ನಲ್ಲಿರುವ ಕಂಪೂಚಿಯಾದ ಪ್ರತಿ ಕ್ರಾಂತಿಕಾರಿ ಗುಂಪುಗಳಿಗೆ ಶಸ್ತ್ರಾಸ್ತ್ರ ಒದಗಿಸುತ್ತಿರುವುದನ್ನು ಹನ್ನೆರಡನೇ ಅಧಿವೇಶನ ಖಂಡಿಸುತ್ತದೆ.

ಆಗ್ನೇಯ ಏಶ್ಯಾದಲ್ಲಿ ಅಸಂಸ್ಥಾ ಪ್ರಜಾಪ್ರಭುತ್ವ ವಿರೋಧಿ ಆಡಳಿತಗಳಿಗೆ ಅಥವಾ ಮಿಲಿಟರಿ ಸರ್ವಾಧಿಕಾರಿಗಳಿಗೆ ಥ್ಯಾಲೆಂಡ್ ಫಿಲಿಪೈನ್ಸ್, ಇಂಡೋನೇಷ್ಯಾದಲ್ಲಿ ಊರುಗೋಲಾಗಿದೆ. ಈ ದೇಶಗಳಲ್ಲಿ ಸಾಮೂಹಿಕ ಪ್ರತಿಭಟನೆ ಮತ್ತು ಪ್ರಜಾಸತ್ತಾತ್ಮಕ ವಿರೋಧವನ್ನು ದಮನ ಮಾಡಲು ಅಸಂಸ್ಥಾ ಆ ಸರಕಾರಗಳಿಗೆ ನೆರವು ನೀಡುತ್ತಿದೆ. ಥ್ಯಾಲೆಂಡ್ ಮತ್ತು ಫಿಲಿಪೈನ್ಸ್‌ಗಳಲ್ಲಿ ದೊಡ್ಡ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದೆ ಹಾಗೂ ಸಶಸ್ತ್ರ ಸೈನ್ಯವನ್ನಿಟ್ಟಿದೆ.

ಫಿಲಿಪೈನ್ಸ್, ಥ್ಯಾಲೆಂಡ್ ಮತ್ತು ಇತರ ಆಗ್ನೇಯ ಏಶ್ಯಾ ದೇಶಗಳಲ್ಲಿ ಅಸಂಸ್ಥಾ ಹೇರಿದ ಆಡಳಿತಗಳನ್ನು ಕಿತ್ತೆಸೆಯಲು ಮತ್ತು ಪೂರ್ಣ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಕ್ರಿಯಾಶೀಲ ಹೋರಾಟ ನಡೆಸುತ್ತಿರುವ ಪ್ರಜಾಪ್ರಭುತ್ವ ಆಂದೋಲನಗಳಿಗೆ ಅಧಿವೇಶನ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ.

## ಪೂರ್ವ ಏಶ್ಯಾ

ಅಸಂಸ್ಥಾ ಸಾಮ್ರಾಜ್ಯಶಾಹಿಗಳುದಕ್ಷಿಣ ಕೊರಿಯಾದಲ್ಲಿ ಕೈಗೊಂಬೆ ಆಡಳಿತಕ್ಕೆ

ಆಧಾರ ಸ್ಥಂಭವಾಗಿದ್ದಾರೆ. ಅವರು ದಕ್ಷಿಣ ಕೊರಿಯಾದಲ್ಲಿ 40 ಸಾವಿರ ಸೇನಾ ಪಡೆಗಳನ್ನು ಹಾಗೂ ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣತಂತ್ರದತ್ತ ಗುರಿಯಿಟ್ಟ ಒಂದು ಸಾವಿರಕ್ಕೂ ಹೆಚ್ಚು ಪರಮಾಣು ಶಸ್ತ್ರಾಸ್ತ್ರಗಳನ್ನು ಕೂಡಿಟ್ಟಿದ್ದಾರೆ. ಕೊರಿಯಾ ವಿಭಜಿತವಾಗಿಯೇ ಇರುವುದಕ್ಕೆ ಅಸಂಸ್ಥಾವೇ ಹೊಣೆ.

ಕೊರಿಯಾದ ಶಾಂತಿಯುತ ಪುನರೇಕೀಕರಣಕ್ಕೆ ಮತ್ತು ಎರಡು ಭಾಗಗಳ ನಡುವೆ ಸಂಬಂಧಗಳನ್ನು ಉತ್ತಮಗೊಳಿಸಲು ಸತತವಾಗಿ ರಚನಾತ್ಮಕ ಪ್ರಸ್ತಾಪಗಳನ್ನು ಮುಂದಿಡುತ್ತಾ ಬಂದಿರುವ ಕೊರಿಯಾ ಕಾರ್ಮಿಕ ಪಕ್ಷ ಮತ್ತು ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯದ ಜನತೆಗೆ ಹನ್ನೆರಡನೇ ಅಧಿವೇಶನ ಶುಭಾಶಯ ಕೋರುತ್ತದೆ.

ಅಸಂಸ್ಥಾ ಸಾಮ್ರಾಜ್ಯಶಾಹಿ ಜಪಾನಿನ ಮಿಲಿಟರೀಕರಣವನ್ನು ಪ್ರೋತ್ಸಾಹಿಸುವ ಅಪಾಯಕಾರೀ ಮಾರ್ಗ ಹಿಡಿದಿದೆ. ಅದು ನಕಾಸೋನೆ ಸರಕಾರವನ್ನು ತನ್ನ ಜಾಗತಿಕ ರಣನೀತಿಯೊಳಗೆ ಸೆಳೆದುಕೊಂಡಿದೆ. ವಾಶಿಂಗ್ಟನ್ - ಸಿಯೊಲ್—ಟೋಕಿಯೋ ಅಕ್ಷ ಶಾಂತಸಾಗರ ಹಾಗೂ ಐಕ್ಯ ಏಶ್ಯಾ ಪ್ರದೇಶದ ಭದ್ರತೆಗೆ ಬೆದರಿಕೆ ಒಡ್ಡಿದೆ.

ಅಸಂಸ್ಥಾ, ತೈವಾನ್ ಆಡಳಿತವನ್ನು ಬೆಂಬಲಿಸುತ್ತಲೇ ಇದೆ ಮತ್ತು ತೈವಾನ್ ಮತ್ತು ಚೀಣಾದ ಪುನರೇಕೀಕರಣಕ್ಕೆ ಅಡ್ಡಿಯುಂಟುಮಾಡುತ್ತಿದೆ. ಈ ಅಧಿವೇಶನ ತೈವಾನನ್ನು ಚೀಣಾದೊಂದಿಗೆ ಮತ್ತೆ ಏಕೀಕರಿಸುವ ಚೀಣಾ ಜನತಾ ಗಣರಾಜ್ಯದ ಪ್ರಯತ್ನಗಳಿಗೆ ಪೂರ್ಣ ಬೆಂಬಲ ನೀಡುತ್ತದೆ.

ಅಸಂಸ್ಥಾ ಸಾಮ್ರಾಜ್ಯಶಾಹಿ ಏಶ್ಯಾದಲ್ಲಿ ತನ್ನೆಲ್ಲಾ ಮಿಲಿಟರಿ ನೆಲೆಗಳನ್ನು ತೊಡೆದು ಹಾಕಬೇಕೆಂದು, ಏಶ್ಯಾದ ತಂತಮ್ಮ ದೇಶಗಳಲ್ಲಿ ಜನಗಳ ದಮನ ಮಾಡುತ್ತಿರುವ ಮಿಲಿಟರಿ ಆಡಳಿತಗಳು ಹಾಗೂ ಸರ್ವಾಧಿಕಾರಗಳಿಗೆ ನೀಡುತ್ತಿರುವ ಸಕ್ರಿಯ ಬೆಂಬಲಕ್ಕೆ ನಿಲುಗಡೆ ಹಾಕಬೇಕೆಂದು ಹನ್ನೆರಡನೇ ಅಧಿವೇಶನ ಒತ್ತಾಯಿಸುತ್ತದೆ.

ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸಲು, ನವವಸಾಹತುಶಾಹಿ ಕುಟಿಲೋಪಾಯಗಳ ವಿರುದ್ಧ ಹೋರಾಡಲು ಮತ್ತು ಏಶ್ಯಾದ ಎಲ್ಲಾ ದೇಶ, ಜನತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಖಾತರಿಗೊಳಿಸುವುದಕ್ಕಾಗಿ ಹೋರಾಟ ನಡೆಸಲು, ಏಶ್ಯಾದ ಎಲ್ಲಾ ಪ್ರಗತಿಶೀಲ, ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳೊಂದಿಗೆ ಸೌಹಾರ್ದ ಸಂಬಂಧಗಳನ್ನು ಬಲಗೊಳಿಸಬೇಕೆಂದು ಭಾರತದ ದುಡಿಯುವ ಜನತೆ ಹಾಗೂ ಶಾಂತಿಪ್ರಿಯ ಶಕ್ತಿಗಳಿಗೆ ಅಧಿವೇಶನ ಕರೆ ನೀಡುತ್ತದೆ. ●

---

(34ನೇ ಪುಟದಿಂದ ಮುಂದುವರಿದುದು)

ಸಹರಾವಿ ಜನತೆಗೆ ಮತ್ತು ಪೋಲಿಸೋರಿಯೋ ರಂಗಕ್ಕೆ ಅಧಿವೇಶನವು ತನ್ನ ಸೌಹಾರ್ದ ಶುಭಾಶಯಗಳನ್ನು ಸಲ್ಲಿಸುವುದರೊಂದಿಗೆ ತಮ್ಮ ಅಂತಿಮ ವಿಜಯ ಸಾಧನೆಯ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನು ಮುಂದೆಯೂ ನೀಡಲು ಅಧಿವೇಶನ ಪ್ರತಿಜ್ಞೆ ಮಾಡುತ್ತದೆ.

## ಪೂರ್ವ ತೈಮೂರ್ ದ್ವೀಪ

ಇಂಡೋನೇಸಿಯಾದ ವಶದಲ್ಲಿ ಕಠಿಣಪರಿಸ್ಥಿತಿಯಲ್ಲೂ ಸ್ವಾತಂತ್ರ್ಯಮತ್ತು ಸ್ವಯಂ ನಿರ್ಣಯಾಧಿಕಾರಕ್ಕಾಗಿ ತಮ್ಮ ಕಠಿಣ ಹೋರಾಟವನ್ನು ಮುಂದುವರಿಸುತ್ತಿರುವ ಪೂರ್ವ ತೈಮೂರ್‌ನ ಜನತೆಗೆ 12 ನೇ ಅಧಿವೇಶನವು ತನ್ನ ಸೌಹಾರ್ದತೆಯನ್ನು ಸೂಚಿಸುತ್ತದೆ.

# ಇರಾನ್‌ನಲ್ಲಿ ದಬ್ಬಾಳಿಕೆಯ ವಿರುದ್ಧ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಪ್ರತಿಗಾಮೀ ಖೊಮೇನಿ ಆಡಳಿತ ತನ್ನ ಕುರುಡು ಸಂಪ್ರದಾಯವಾದಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ಆಳ್ವಿಕೆಯನ್ನು ವಿರೋಧಿಸುವವರನ್ನೆಲ್ಲಾ, ವಿಶೇಷತಃ ಇರಾನಿ ಜನತಾ ಫೆದಾಯೀ ಸಂಘಟನೆ (ಮೆಜಾರಿಟಿ), ತುದೇಹ್ ಪಕ್ಷ ಹಾಗೂ ಇರಾನಿನ ಇತರ ಪ್ರಗತಿಶೀಲ ಗುಂಪುಗಳ ಮುಖಂಡರನ್ನು ಹಾಗೂ ಕಾರ್ಯಕರ್ತರನ್ನೆಲ್ಲಾ ಒಬ್ಬರ ಮೇಲೊಬ್ಬರಂತೆ ಗಲ್ಲಿಗೇರಿಸುವುನ್ನು ಮತ್ತು ಬರ್ಬರ ಚಿತ್ರಹಿಂಸೆಗೆ ಗುರಿಪಡಿಸುತ್ತಿರುವುದನ್ನು ಖಂಡಿಸುತ್ತದೆ.

ಸಾವಿರಾರು ರಾಜಕೀಯ ಕೈದಿಗಳು ಈಗ ಖೊಮೇನಿ ಆಡಳಿತದ ನರಕಗಳಲ್ಲಿ ಮರಣದಂಡನೆ ಪಡೆದು ಕಾನೂನುಬಾಹಿರ ಸೆರೆಯಲ್ಲಿದ್ದಾರೆ.

ಅಧಿವೇಶನ ಈ ಅಮಾನುಷ ದಬ್ಬಾಳಿಕೆಯ ನೀತಿಯ ವಿರುದ್ಧ ದನಿಯೆತ್ತಬೇಕೆಂದು ಈ ದೇಶದ ಪ್ರಜಾಪ್ರಭುತ್ವವಾದೀ ಸಾರ್ವಜನಿಕ ಅಭಿಪ್ರಾಯಕ್ಕೆ ಕರೆ ನೀಡುತ್ತದೆ ಹಾಗೂ ಇರಾನ್‌ನ ಎಲ್ಲಾ ರಾಜಕೀಯ ಕೈದಿಗಳನ್ನು ತಕ್ಷಣ ಮತ್ತು ಬೇಷರತ್ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತದೆ.

ಅಧಿವೇಶನ ಜನತಾ ಫೆದಾಯೀ ಸಂಘಟನೆ (ಮೆಜಾರಿಟಿ), ತುದೇಹ್ ಪಕ್ಷ ಹಾಗೂ ಅವುಗಳ ಎಲ್ಲಾ ಧೀರ ಹೋರಾಟಶೀಲ ಕಾರ್ಯಕರ್ತರೊಂದಿಗೆ ತನ್ನ ಸೌಹಾರ್ದತೆ ವ್ಯಕ್ತಪಡಿಸುತ್ತದೆ. ●

# ಭಾರತದ ನೆರೆಹೊರೆಯ ದೇಶಗಳ ಜನತೆಯ ಹೋರಾಟಗಳಿಗೆ ಸೌಹಾರ್ದ ಬೆಂಬಲ

ತಮ್ಮ ದೇಶಗಳಲ್ಲಿ ಮಿಲಿಟರಿ ಆಳ್ವಿಕೆಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುತ್ತಿರುವ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶದ ಜನತೆಗಳಿಗೆ ಸಿ. ಪಿ. ಐ. (ಎಂ)ನ ಹನ್ನೆರಡನೇ ಅಧಿವೇಶನ ಶುಭಾಶಯ ಸಲ್ಲಿಸುತ್ತದೆ.

ಭಾರತವನ್ನು ಅಸ್ಥಿರಗೊಳಿಸುವ ತನ್ನ ಯೋಜನೆಯ ಭಾಗವಾಗಿ ಅಸಂಸ್ಥಾ ಸಾಮ್ರಾಜ್ಯಶಾಹಿ ಭಾರತವನ್ನು ಶತ್ರು ದೇಶಗಳಿಂದ ಸುತ್ತುವರಿಯಲು ಅತ್ಯಂತ ತತ್ಪರತೆಯಿಂದ ಪ್ರಯತ್ನಿಸುತ್ತಿದೆ. ಭಾರತದ ನೆರೆದೇಶಗಳನ್ನು ಅಸಂಸ್ಥಾ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಬೇಧಿಸಿ ಒಳಹೊಕ್ಕಿರುವುದು ಮತ್ತು ಈ ದೇಶಗಳಲ್ಲಿ ಮಿಲಿಟರಿ ಸೌಲಭ್ಯ ಪಡೆದುಕೊಂಡಿರುವುದು ಭಾರತದ ಸ್ವಾತಂತ್ರ್ಯ ಹಾಗೂ ಸಮಗ್ರತೆಗೆ ಒಂದು ಗಂಭೀರ ಬೆದರಿಕೆ ಆಗಿದೆ.

## ಪಾಕಿಸ್ತಾನ

ಪಾಕಿಸ್ತಾನದಲ್ಲಿ ಜಿಯಾ ಆಡಳಿತ ಸಂಸದೀಯ ಪ್ರಜಾಪ್ರಭುತ್ವವನ್ನೂ ನಾಗರಿಕ ಸ್ವಾತಂತ್ರ್ಯಗಳನ್ನೂ ಪುನರ್ ಸ್ಥಾಪಿಸಲು ನಿರಾಕರಿಸುತ್ತಿದೆ. ವಿರೋಧ ಪಕ್ಷಗಳನ್ನು ಕಾನೂನು ಬಾಹಿರಗೊಳಿಸಲು ಮತ್ತು ವಿರೋಧಿಗಳನ್ನು ಜೈಲಿಗಟ್ಟಲು ಪ್ರಜಾಪ್ರಭುತ್ವ ವಿರೋಧಿ ಕಾಯಿದೆಗಳನ್ನು ಉಪಯೋಗಿಸಿಕೊಳ್ಳುತ್ತಿದೆ. ತಾನು ಬದುಕುಳಿಯಲು ಸಾಮ್ರಾಜ್ಯಶಾಹಿಯ ಮೇಲೆ ಅವಲಂಬಿಸಿರಬೇಕಾದ ಜಿಯಾ ಆಡಳಿತ ಅಸಂಸ್ಥಾಕ್ಕೆ ಪೇಶಾವರ ಮತ್ತು ಗ್ವದರ್‌ಗಳಲ್ಲಿ ಮಿಲಿಟರಿ ನೆಲೆ ಸೌಲಭ್ಯ ನೀಡಿದೆ. ಅಸಂಸ್ಥಾ ಪಾಕಿಸ್ತಾನದೊಳಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸುರಿಯುತ್ತಿದೆ. ಸಾಮ್ರಾಜ್ಯಶಾಹಿಯ ಪ್ರಚೋದನೆಯಿಂದ ಪಾಕಿಸ್ತಾನೀ ಗಡಿದಾಟಿ ಬಂದು ತಮ್ಮ ಭಯೋತ್ಪಾದಕ ಕೃತ್ಯ ನಡೆಸುವ ಪಂಜಾಬಿನ ಖಾಲಿಸ್ತಾನೀ ತೀವ್ರಗಾಮಿಗಳಿಗೆ ಆಶ್ರಯ ಮತ್ತು ತರಬೇತಿ ನೀಡಿದೆ.

ಎರಡು ನೆರೆಹೊರೆಯ ದೇಶಗಳ ನಡುವೆ ಅಸಂಸ್ಥಾ ಸಾಮ್ರಾಜ್ಯಶಾಹಿ ವೈರತ್ವ ಸೃಷ್ಟಿಸುತ್ತಿದೆ. ಪಾಕಿಸ್ತಾನದ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮದ ಬೆಳವಣಿಗೆಂದ ಒಂದು ಹೊಸ ಅಪಾಯ ಎದುರಾಗಿದೆ. ಈ ಕ್ಷೇತ್ರದಲ್ಲಿ ಯಾವ ದೇಶವೂ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸಬಾರದು ಮತ್ತು ಈ ಎರಡು ದೇಶಗಳ ನಡುವಿನ ಸಂಬಂಧಗಳನ್ನು ಸುಧಾರಿಸಲು ಸಕಲ ಪ್ರಯತ್ನಗಳನ್ನು ನಡೆಸಬೇಕೆಂದು ಸಿ. ಪಿ. ಐ. (ಎಂ) ಬಯಸುತ್ತದೆ.

ಈ ಸಂದರ್ಭದಲ್ಲಿ ಪಾಕಿಸ್ತಾನದಲ್ಲಿ ಸೈನಿಕ ಆಳ್ವಿಕೆಯ ವಿರುದ್ಧ ಮತ್ತು ಇಸ್ಲಾಮೀ ಮೂಲಭೂತವಾದದ ವಿರುದ್ಧ ಪ್ರಜಾಪ್ರಭುತ್ವವಾದೀ ಶಕ್ತಿಗಳ ಹೋರಾಟ ವಿಶೇಷ ಮಹತ್ವ ಪಡೆಯುತ್ತದೆ. ಪಾಕೀಸ್ತಾನದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಮತ್ತು ಆಂತರಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹೀ ಮಧ್ಯಪ್ರದೇಶವನ್ನು ಕೊನೆಗೊಳಿಸಬೇಕೆಂದು ಸಮರ ನಡೆಸುತ್ತಿರುವ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳೊಂದಿಗೆ ಈ ಅಧಿವೇಶನ ಪೂರ್ಣ ಸೌಹಾರ್ದ ಹಾಗೂ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

## ಬಾಂಗ್ಲಾದೇಶ

ಬಾಂಗ್ಲಾ ದೇಶದಲ್ಲಿ ಮಿಲಿಟರಿ ಆಳ್ವಿಕೆ ಜನರನ್ನು ಇನ್ನೂ ಪ್ರಜಾಪ್ರಭುತ್ವ ಹಕ್ಕುಗಳಿಂದ ವಂಚಿತರಾಗಿಸುತ್ತಾ ನಡೆದಿದೆ. ವಿರೋಧೀ ಪಕ್ಷಗಳಿಗೆ ಕಿರುಕುಳ ಕೊಡಲಾಗುತ್ತಿದೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆರ್ಥಿಕತೆಯನ್ನು ಶೋಷಿಸಲು ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಚಿತ್ತಗಾಂಗನ್ನು ಅಸಂಸ್ಥಾಕ್ಕೆ ಅದರ ನಾವಿಕ ಪಡೆಯ ಹಡಗುಗಳಿಗೆ ಇಂಧನ ಪೂರೈಕೆ ಬಂದರನ್ನಾಗಿ ಉಪಯೋಗಿಸಲು ನೀಡಿದೆ. ಬಾಂಗ್ಲಾದೇಶದಲ್ಲಿ ಸಾಮ್ರಾಜ್ಯಶಾಹೀ ಶೋಷಣೆಯನ್ನು ಅಂತ್ಯಗೊಳಿಸಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಡುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ, ಅಧಿವೇಶನ, ತನ್ನ ಸೋದರ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ.

## ಶ್ರೀಲಂಕಾ

ಶ್ರೀಲಂಕಾದಲ್ಲಿ ಜಯವರ್ಧನೆ ಆಳ್ವಿಕೆ ಆರ್ಥಿಕತೆಯ ಜೀವಾಳವಾದ ವಲಯಗಳನ್ನು ತನ್ನ ವಶಪಡಿಸಿಕೊಳ್ಳಲು ಸಾಮ್ರಾಜ್ಯಶಾಹಿಗೆ ಅವಕಾಶ ನೀಡಿ ಈಗ ಅಸಂಸ್ಥಾಕ್ಕೆ ಟ್ರಿಂಕೋಮಲಿಯನ್ನು ಹಿಂದೂ ಮಹಾಸಾಗರದಲ್ಲಿ ಕಾರ್ಯಾಚರಣೆ ನಡೆಸುವ ಯುದ್ಧ ನೌಕೆಗಳಿಗೆ ನೆಲೆಯಾಗಿ ಉಪಯೋಗಿಸಲು ಅವಕಾಶ ನೀಡಿದೆ.

ಹಿಂದೂ ಮಹಾಸಾಗರದಲ್ಲಿ ಅಮೆರಿಕನ್ನರು ಪರಮಾಣು ಸಿಡಿತಲೆಗಳಿಂದ ಸಜ್ಜಿತಗೊಂಡ ಯುದ್ಧವಿಮಾನಗಳನ್ನು ನೆಲೆಗೊಳಿಸುವುದನ್ನು ಕೈಗೊಂಡಿದ್ದಾರೆ. ಈ ನೆಲೆಯಿಂದ ಅಸಂಸ್ಥಾ ಹಿಂದೂ ಮಹಾಸಾಗರದ ತೀರದ ದೇಶಗಳನ್ನು ಬೆದರಿಸುವುದು, ಭಾರತದ ಭದ್ರತೆಗೆ ಆತಂಕವನ್ನೊಡ್ಡುವುದು ಸಾಧ್ಯ.

## ಆಫ್‌ಘಾನಿಸ್ತಾನ

ಹನ್ನೆರಡನೇ ಅಧಿವೇಶನ ಜನತಾ ಪ್ರಜಾಪ್ರಭುತ್ವವಾದಿ ಪಕ್ಷ ಹಾಗೂ ಆಫ್‌ಘಾನಿಸ್ತಾನದ ಜನತೆಗೆ ತನ್ನ ಶುಭಾಶಯಗಳನ್ನು ಕೋರುತ್ತದೆ. ಆಫ್‌ಘಾನಿಸ್ತಾನದ ಸರಕಾರ ಮತ್ತು ಜನತೆ ಪಾಕಿಸ್ತಾನದಲ್ಲಿ ನೆಲ

ಹೂಡಿರುವ ಪ್ರತಿ ಕ್ರಾಂತಿಕಾರೀ ಗೂಂಡಾ ಪಡೆಗಳು ಭಯೋತ್ಪಾದನೆ ಮಾಡಲು ಮತ್ತು ಸಾಮಾನ್ಯ ಜೀವನವನ್ನು ಅಸ್ಥಿರಗೊಳಿಸಲು ನಡೆಸಿದ ಪ್ರಯತ್ನಗಳಿಗೆಲ್ಲಾ ಸರಿಯಾದ ಪಾಠ ಕಲ್ಪಿಸಿದೆಯೆಂಬುದನ್ನು ಅಧಿವೇಶನ ತೃಪ್ತಿಯಿಂದ ಗಮನಿಸಿದೆ. ಬಾಡಿಗೆ ಪಡೆಗಳಿಗೆ ಆಶ್ರಯ ನೀಡಿ, ಶಸ್ತ್ರಾಸ್ತ್ರ ಒದಗಿಸಿ ನೆರವು ನೀಡುವ ಅಸಂಸ್ಥಾ ಸಾಮ್ರಾಜ್ಯಶಾಹಿಯನ್ನು ಮತ್ತು ಪಾಕಿಸ್ತಾನದ ಮಿಲಿಟರಿ ಸರಕಾರವನ್ನು ಖಂಡಿಸುತ್ತದೆ. ಆಫ್‌ಘಾನಿಸ್ತಾನ ಸರಕಾರಕ್ಕೆ ಶತಮಾನಗಳ ಕಾಲದ ಶೋಷಣೆಯಿಂದುಂಟಾದ ಹಿಂದುಳಿಕೆಯನ್ನು ಹೋಗಲಾಡಿಸಿ ಆರ್ಥಿಕತೆಯನ್ನು, ಸಮಾಜವನ್ನು ಪುನರ್ರಚಿಸುವ ಕಾರ್ಯದಲ್ಲಿ ಅಧಿವೇಶನ ತನ್ನ ಪೂರ್ಣಬೆಂಬಲ ವ್ಯಕ್ತಪಡಿಸುತ್ತದೆ. ಆಫ್‌ಘಾನಿಸ್ತಾನ ಸರಕಾರ ವಿದೇಶೀ ಹಸ್ತಕ್ಷೇಪ ತಡೆಯುವ ಬಗ್ಗೆ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರಲು ನಡೆಸುವ ಪ್ರಯತ್ನಗಳಿಗೆ ತನ್ನ ಬೆಂಬಲ ನೀಡುತ್ತದೆ.

## ನೇಪಾಳ

ನೇಪಾಳದಲ್ಲಿ ದೊರೆ ಬೀರೇಂದ್ರ ಪ್ರಜಾಪ್ರಭುತ್ವ ಆಂದೋಲನವನ್ನು ದಮನ ಮಾಡಲು ತೀವ್ರ ದಬ್ಬಾಳಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ ಹಾಗೂ ರಾಜಕೀಯ ಪಕ್ಷಗಳ ಚಟುವಟಿಕೆಗಳ ಮೇಲೆ ನಿರ್ಬಂಧ ಹಾಕಿದ್ದಾರೆ. ದಬ್ಬಾಳಿಕೆಯ ಎಲ್ಲಾ ಕ್ರಮಗಳನ್ನು ಎದುರಿಸಿ ನಿಂತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಡುತ್ತಿರುವ ನೇಪಾಳದ ಎಡ ಮತ್ತು ಪ್ರಜಾಪ್ರಭುತ್ವದ ಶಕ್ತಿಗಳೊಂದಿಗೆ ಅಧಿವೇಶನ ತನ್ನ ಪೂರ್ಣ ಸೌಹಾರ್ದತೆ ವ್ಯಕ್ತಪಡಿಸುತ್ತದೆ.

ನಮ್ಮ ಉಪಖಂಡದ ಜನತೆಗಳು ವಸಾಹತುಶಾಹೀ ಪ್ರಾಬಲ್ಯದ ವಿರುದ್ಧ ಒಂದು ಕಠಿಣ ಹೋರಾಟದ ನಂತರ ಗೆದ್ದುಕೊಂಡ ತಮ್ಮ ದೇಶಗಳ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಸರ್ವಮಾನ್ಯ ಉದ್ದೇಶದಲ್ಲಿ ಒಂದಾಗಿದ್ದಾರೆ. ಈ ಸ್ವಾತಂತ್ರ್ಯವನ್ನು ಕೊರೆಯಲು ಅಸಂಸ್ಥಾ ಸಾಮ್ರಾಜ್ಯಶಾಹಿ ಪ್ರಯತ್ನಗಳನ್ನು ಉಪಖಂಡದ ಜನತೆಗಳ ಐಕ್ಯಸಂಕಲ್ಪದಿಂದ ವಿಫಲಗೊಳಿಸಲೇಬೇಕು. ಅಧಿವೇಶನ ಭಾರತೀಯ ಉಪಖಂಡದ ಹೋರಾಟಶೀಲ ಜನತೆಗಳ ಸೌಹಾರ್ದತೆಯ ಬಂಧನಗಳನ್ನು ಬಲಪಡಿಸುವ ಪ್ರತಿಜ್ಞೆಗೈಯುತ್ತದೆ.

### ಒಡನಾಡೀ ಶುಭಾಶಯಗಳು :

## ರೊಮಾನಿಯನ್ ಕಮ್ಯುನಿಸ್ಟ್ ಪಕ್ಷ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನದ ಸಂದರ್ಭದಲ್ಲಿ ರೊಮಾನಿಯಾ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ನಿಕೋಲಾಯಿ ಸೆಯಿಸೆಸ್ಕು ಪರವಾಗಿ ಹನ್ನೆರಡನೇ ಅಧಿವೇಶನದ ಪ್ರತಿನಿಧಿಗಳಿಗೆ, ಪಕ್ಷದ ಎಲ್ಲ ಸಮರಶೀಲರಿಗೆ ಮತ್ತು ಭಾರತದ ದುಡಿಯುವ ಜನತೆಗೆ ಹಾರ್ದಿಕ ಒಡನಾಡೀ ಶುಭಾಶಯಗಳು ಮತ್ತು ಪಕ್ಷದ ಮುಂದಿನ ಚಟುವಟಿಕೆಗಳಲ್ಲಿ ಯಶಸ್ಸು ಸಿಗಲೆಂಬ ಹಾರೈಕೆಗಳನ್ನು ವ್ಯಕ್ತಪಡಿಸುತ್ತೇವೆ.

ರೊಮಾನಿಯನ್ ಕಮ್ಯುನಿಸ್ಟರು ಮತ್ತು ರೊಮಾನಿಯಾ ಸಮಾಜವಾದೀ ಗಣತಂತ್ರದ ದುಡಿಯುವ ಜನತೆ ನಿಮ್ಮ ಪಕ್ಷ ದುಡಿಯುವ ಜನತೆಯ ಹಿತಾಸಕ್ತಿಗಳಿಗೆ ಸಾಮಾಜಿಕ ಪ್ರಗತಿ ಮತ್ತು ಕಲ್ಯಾಣದ ಆಕಾಂಕ್ಷೆಗಳಿಗೆ, ಪ್ರಜಾಸತ್ತಾತ್ಮಕ ಅಭಿವೃದ್ಧಿಗೆ, ಜನತೆಗಳ ನಡುವೆ ಶಾಂತಿ ಮತ್ತು ಅರಿವಿಗೆ ಒತ್ತಾಸೆ ನೀಡಲು ನಡೆಸಿಕೊಂಡು ಬಂದಿರುವ ಚಟುವಟಿಕೆಗಳನ್ನು ಆಸಕ್ತಿಯಿಂದ ಹಾಗೂ ಸೌಹಾರ್ದಭಾವದಿಂದ ಗಮನಿಸುತ್ತಿದ್ದೇವೆ.

ರೊಮಾನಿಯನ್ ಕಮ್ಯುನಿಸ್ಟ್ ಪಕ್ಷದ ಹದಿಮೂರನೇ ಅಧಿವೇಶನದ ನಿರ್ಣಯಗಳನ್ನು ಮತ್ತು ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ತಮ್ಮೆಲ್ಲ ಶಕ್ತಿಯನ್ನು ಮೀಸಲಿಡುತ್ತಾ ರೊಮಾನಿಯಾ ಸಮಾಜವಾದೀ ಗಣತಂತ್ರದ ಕಮ್ಯುನಿಸ್ಟರು ಮತ್ತು ದುಡಿಯುವ ಜನತೆ ಅಂತರ್ರಾಷ್ಟ್ರೀಯ ಸ್ಥಿತಿ ಮತ್ತಷ್ಟು ಹದಗೆಡದಂತೆ ತಡೆಯುವ, ಪುರುಷರು ಮತ್ತು ಮಹಿಳೆಯರು ಹಾಗೂ ಎಲ್ಲ ದೇಶಗಳ ಅಸ್ತಿತ್ವದ, ಜೀವನದ, ಸ್ವಾತಂತ್ರ್ಯದ ಹಾಗೂ ಶಾಂತಿಯ ಅತ್ಯುನ್ನತ ಹಕ್ಕಿನ ರಕ್ಷಣೆಯ ಬಗ್ಗೆ ತಮ್ಮ ಬದ್ಧತೆಯನ್ನು ಘೋಷಿಸುತ್ತಾರೆ ಮತ್ತು ಅಂತಹ ಕಾರ್ಯಾಚರಣೆಗಳಿಗಾಗಿ ಅವ್ಯಾಹತವಾಗಿ ಸಮರಶೀಲರಾಗಿದ್ದಾರೆ.

ನಿಮ್ಮ ಅಧಿವೇಶನದ ಕಾರ್ಯಕಲಾಪಗಳಲ್ಲಿ ನಿಮಗೆ ಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತಾ, ನಮ್ಮೆರಡು ಪಕ್ಷಗಳ ನಡುವಿನ ಸ್ನೇಹಪರ ಮತ್ತು ಒಡನಾಡೀ ಸಹಕಾರದ ಸಂಬಂಧಗಳು ಏಕಪ್ರಕಾರದಲ್ಲಿ ಬೆಳೆಯುತ್ತಿರುವುದರ ಬಗ್ಗೆ ನಮ್ಮ ತೃಪ್ತಿಯನ್ನು ಪುನರುಚ್ಚರಿಸಲು ಹಾಗೂ ಈ ಸಂಬಂಧಗಳು ನಮ್ಮೆರಡು ಜನತೆಗಳ, ಎಲ್ಲ ಸಾಮ್ರಾಜ್ಯಶಾಹಿ ವಿರೋಧಿ, ಪ್ರಗತಿಪರ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಸೌಹಾರ್ದತೆಯ ಹಿತಾಶಕ್ತಿಗಳಿಗನುಗುಣವಾಗಿ, ಒಂದು ಉತ್ತಮ ಹಾಗೂ ಹೆಚ್ಚು ನ್ಯಾಯಯುತವಾದ ಜಗತ್ತನ್ನು ಕಟ್ಟಲು, ಜನತೆಗಳ ನಡುವೆ ಅರಿವು ಮತ್ತು ದೃಢ ವಿಚಾರವನ್ನು ವ್ಯಕ್ತಪಡಿಸಲು ಈ ಅವಕಾಶವನ್ನು ಬಳಸಿಕೊಳ್ಳುತ್ತೇವೆ. **—ಕೇಂದ್ರ ಸಮಿತಿ**

# ದಕ್ಷಿಣ ಆಫ್ರಿಕಾ ನಿರ್ಣಯ :

ದಕ್ಷಿಣ ಆಫ್ರಿಕಾದ ಜನಾಂಗೀಯವಾದಿ ಸರ್ಕಾರದ ಕಾರಾಗೃಹದಲ್ಲಿ ಕಳೆದ 16 ವರ್ಷಗಳಿಂದ ಸೊರಗುತ್ತಿರುವ ದಕ್ಷಿಣ ಆಫ್ರಿಕನ್ನರ ವಿಮೋಚನಾ ಚಳುವಳಿಯ ಅಪ್ರತಿಮ ನಾಯಕ ನೆಲ್ಸನ್ ಮಂಡೇಲಾ ರವರನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 12 ನೇ ಅಧಿವೇಶನವು ಅಭಿನಂದಿಸುತ್ತದೆ. ಅವರನ್ನು ಕೂಡಲೇ ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತದೆ. ಬಿಳಿಯ ಅಲ್ಪ ಸಂಖ್ಯಾತರ ಜನಾಂಗೀಯ ಸರ್ಕಾರವನ್ನು ಕಿತ್ತೊಗೆಯಲು ಮತ್ತು ವರ್ಣದ್ವೇಷವನ್ನು ಎಂದೆಂದಿಗೂ ಕೊನೆಗೊಳಿಸುವ ಸಲುವಾಗಿ ಸಾಮೂಹಿಕ ಹೋರಾಟದ ಮೂಲಕ ಸಿಡಿದೆದ್ದಿರುವ ದಕ್ಷಿಣ ಆಫ್ರಿಕಾದ ಕಪ್ಪು ಜನರ ದೀರೋದಾತ್ತ ಹೋರಾಟಗಳನ್ನು 12 ನೇ ಅದಿವೇಶನವು ಅಭಿನಂದಿಸುತ್ತದೆ. ಸೈನಿಕ ಪಡೆಗಳ ಗುಂಡುಗಳನ್ನು ಮತ್ತು ಬರ್ಬರ ಧಾಳಿಗಳನ್ನು ಧೈರ್ಯದಿಂದ ಎದುರಿಸಿದ ದಕ್ಷಿಣ ಆಫ್ರಿಕಾದ ಜನತೆ ಸಮಾನತೆ ಮತ್ತು ವಿಮೋಚನೆಗಾಗಿ ನಡೆಸುತ್ತಿರುವ ತಮ್ಮ ಹೋರಾಟವನ್ನು ಆ ಪೈಶಾಚಿಕ ಶಕ್ತಿಯು ಬಗ್ಗು ಬಡಿಯಲು ಸಾಧ್ಯವಿಲ್ಲವೆಂದು ಸಾಬೀತು ಪಡಿಸಿದೆ. ದಕ್ಷಿಣ ಆಫ್ರಿಕಾದ ಒಂದು ಸಹಸ್ರಕ್ಕೂ ಹೆಚ್ಚು ವೀರ ಪುತ್ರ, ಪುತ್ರಿಯರು ಪೋಲೀಸ್ ಮತ್ತು ಮಿಲಿಟರಿ ಧಾಳಿಗೆ ಬಲಿಯಾಗಿದ್ದಾರೆ. ಇನ್ನೂ ಸಹಸ್ರಾರು ಮಂದಿ ಮುಂಜಾಗ್ರತಾ ಬಂಧನದ ಕಾನೂನಿನ ಪ್ರತೀಕಾರದಲ್ಲಿ ಸಿಲುಕಿ ಕಾರಾಗೃಹಗಳಲ್ಲಿ ಕೊಳೆಯುತ್ತಿದ್ದಾರೆ. ಶಾರ್ಪ್‌ವಿಲ್ಲೆ ಮತ್ತು ಸೊವೆಟೊಗಳ ಹುತಾತ್ಮರ ಉಜ್ವಲ ಸಂಪ್ರದಾಯವನ್ನು ಮುಂದುವರಿಸಿ ಹತ್ತಾರು ಸಹಸ್ರ ಮಂದಿ ಪ್ರತಿನಿತ್ಯ ದಕ್ಷಿಣ ಆಫ್ರಿಕಾದ ನಗರ ಪಟ್ಟಣಗಳಲ್ಲಿ ಜನಾಂಗೀಯ ಸರ್ಕಾರದ ಸೈನ್ಯಬಲವನ್ನೆದುರಿಸಿ ಸೆಣಸುತ್ತಿದ್ದಾರೆ. ಸಾಮೂಹಿಕ ಪ್ರತಿಭಟನೆಯನ್ನು ಹತ್ತಿಕ್ಕಲು 1985 ಜುಲೈನಲ್ಲಿ ಜನಾಂಗಿಯವಾದೀ ಸರ್ಕಾರವು ತುರ್ತುಪರಿಸ್ಥಿತಿಯನ್ನು ಹೇರಿದೆ. ಬೆಂಜಮನ್ ಮೊಲಾಯಿಸ್ ಎಂಬ ಯುವಕವಿ ಮತ್ತು ಸ್ವಾತಂತ್ರ್ಯ ಹೋರಾಟಗಾರನನ್ನು, ವಿಶ್ವದಾದ್ಯಂತ ಅವರ ಜೀವವನ್ನು ಉಳಿಸಲು ಮನವಿ ಮಾಡಿದರೂ ಗಲ್ಲಿಗೇರಿಸಲಾಯಿತು.

ಅಲ್ಪಸಂಖ್ಯಾತ ಬಿಳಿಯ ಬೋಥಾ ಸರ್ಕಾರವು ವಿಶ್ವಸಂಸ್ಥೆಯ ನಿರ್ಣಯಗಳನ್ನು ಮತ್ತು ಅಂತರಾಷ್ಟ್ರೀಯ ಜನಾಭಿಪ್ರಾಯವನ್ನು ಉಲ್ಲಂಘಿಸಿ ವರ್ಣದ್ವೇಷವನ್ನು ಕೊನೆಗೊಳಿಸಲು ನಿರಾಕರಿಸಿದೆ. ಬಿಳಿಯ ಬಂಡವಾಳಶಾಹಿಗಳ ಮತ್ತು ಅವರ ಅಂತರಾಷ್ಟ್ರೀಯ ಪೋಷಕರಾದ ಸಾಮ್ರಾಜ್ಯಶಾಹಿಯ ಅತಿ ದುರಾಸೆಯ ಲಾಭಕ್ಕಾಗಿ ಎರಡು ಕೋಟಿ ದಕ್ಷಿಣ ಆಫ್ರಿಕನ್ನರು ಗುಲಾಮೀ ಜೀವನ ನಡೆಸಬೇಕಾಗಿದೆ.

ರೀಗನ್ ಆಡಳಿತೆಯ ಮತ್ತು ಬ್ರಿಟಿಷ್ ಸರ್ಕಾರದ ನೇತೃತ್ವದ ಸಾಮ್ರಾಜ್ಯಶಾಹಿಗಳು ಜನಾಂಗೀಯವಾದಿ ಸರ್ಕಾರವನ್ನು ಎತ್ತಿಹಿಡಿಯುವ ಕೆಲಸವನ್ನು ಮುಂದುವರಿಸುತ್ತಿದ್ದಾರೆ. ಅಮೆರಿಕಾವು ದಕ್ಷಿಣ ಆಫ್ರಿಕಾದಲ್ಲಿ 14 ಬಿಲಿಯ ಡಾಲರ್‌ಗಳಷ್ಟು ಬಂಡವಾಳವನ್ನು ಹೂಡಿದೆ. ತಮ್ಮ ಅಗಾಧ ಬಂಡವಾಳದ ರಕ್ಷಣೆಯ ಸಲುವಾಗಿ ರೀಗನ್ ಆಡಳಿತೆ ಹಾಗೂ ಥ್ಯಾಚರ್ ಸರ್ಕಾರವು ಕಡ್ಡಾಯ ಆರ್ಥಿಕ ನಿರ್ಬಂಧಗಳನ್ನು ವಿಧಿಸಲು ನಿರಾಕರಿಸುತ್ತಿವೆ. ಇಂದು ಅಂತರಾಷ್ಟ್ರೀಯವಾಗಿ ಸಾಮ್ರಾಜ್ಯಶಾಹಿಯ ಮಾನವ ವಿರೋಧಿ ಗುಣ ಹಾಗೂ ಲಾಭಬಡುಕುತನ ಮತ್ತಾವ ಪ್ರಕರಣದಲ್ಲೂ ದಕ್ಷಿಣ ಆಫ್ರಿಕಾದ ವರ್ಣದ್ವೇಷ ನೀತಿಗೆ, ಮಾನವೀಯ ಹಕ್ಕುಗಳ ನಿರಾಕರಣೆಗೆ ನೀಡಿರುವ ಬೆಂಬಲದಲ್ಲಿ ವ್ಯಕ್ತವಾಗುವಷ್ಟು ಸ್ಪಷ್ಟವಾಗಿ ಕಾಣಸಿಗುವುದಿಲ್ಲ.

ದಕ್ಷಿಣ ಆಫ್ರಿಕಾ ಸರ್ಕಾರವು ಸಾಮ್ರಾಜ್ಯಶಾಹಿಯಿಂದ ನೇಮಿಸಿತವಾದ ಆಫ್ರಿಕಾ ಖಂಡದ ಪೋಲೀಸನಂತೆ ವರ್ತಿಸುತ್ತಿದೆ. ತನ್ನ ಗಡಿ ರಾಷ್ಟ್ರಗಳ ಮೇಲೆ ಅದರಲ್ಲೂ ನಿರ್ದಿಷ್ಟವಾಗಿ ಅಂಗೋಲಾದ ಮೇಲೆ ನಿರ್ಧಯವಾದ ಆಕ್ರಮಣಕಾರಿ ಧಾಳಿಗಳನ್ನು ಮಾಡುತ್ತಿದ್ದು ಶಸ್ತ್ರಸಜ್ಜಿತ ಮಧ್ಯಪ್ರವೇಶದ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಜಾಗತಿಕ ಅಭಿಪ್ರಾಯವನ್ನು ಉಲ್ಲಂಘಿಸಿ ನಮೀಬಿಯಾದ ಮೇಲಿನ ತನ್ನ ಆಕ್ರಮಣವನ್ನು ಮುಂದುವರಿಸುತ್ತಿದೆ. ಇದು ಇಸ್ರೇಲ್ ನೊಂದಿಗೂ ಸಮೀಪವರ್ತಿಯಾಗಿದ್ದು ಜಿಯೋನಿಸ್ಟ್ ವಿಸ್ತರಣಾ ಯೋಜನೆಗಳಲ್ಲಿ ಸಕ್ರಿಯ ಪಾಲುಗಾರನಾಗಿದೆ.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ಗೆ ಸಾಧ್ಯವಾದ ಎಲ್ಲಾ ರೀತಿಯಲ್ಲೂ ತನ್ನ ಸಹಾಯ ಮತ್ತು ಬೆಂಬಲವನ್ನು ವಿಸ್ತರಿಸಬೇಕೆಂದು 12ನೇ ಅಧಿವೇಶನವು ಭಾರತ ಸರ್ಕಾರಕ್ಕೆ ಕರೆ ನೀಡುತ್ತದೆ. ಅಲಿಪ್ತ ಚಳುವಳಿಯ ಅಧ್ಯಕ್ಷನಾಗಿ ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳನ್ನು ಆರ್ಥಿಕ ನಿರ್ಬಂಧಗಳನ್ನು ಹೇರುವಂತೆ ಒತ್ತಾಯಿಸಲು ಜಾಗತಿಕ ಅಭಿಪ್ರಾಯವನ್ನು ಕ್ರೋಢೀಕರಿಸುವಲ್ಲಿ ಮುಂದಾಳುತ್ವವಹಿಸಬೇಕು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ "ದಕ್ಷಿಣ ಆಫ್ರಿಕಾವನ್ನು ಜನಾಂಗೀಯ

ವಾದಿಗಳು ಆಳಲಾಗದಂತೆ ಮಾಡಿ" ಎಂದು ಕರೆ ನೀಡಿದೆ. 12ನೇ ಅಧಿವೇಶನವು ದಕ್ಷಿಣ ಆಫ್ರಿಕಾದ ಶೋಷಿತ ಜನತೆಯ ಸಮರ ಶೀಲ ಸಂಘಟನೆಯಾದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ಸನ್ನು ಅಭಿನಂದಿಸುತ್ತದೆ. ದಕ್ಷಿಣ ಆಫ್ರಿಕಾದ ಹೋರಾಟನಿರತ ಜನರಿಗೆ ತಮ್ಮ ಸೌಹಾರ್ದತೆ ಮತ್ತು ಬೆಂಬಲವನ್ನು ನೀಡಲು ಭಾರತದ ಎಲ್ಲ ವಿಭಾಗದ ಜನರಿಗೂ ಅಧಿವೇಶನವು ಕರೆನೀಡುತ್ತವೆ.

## ನಿಕಾರಾಗುವ ನಿರ್ಣಯ:

ನಿಕಾರಾಗುವದಲ್ಲಿ ಸ್ಯಾಂಡಿನಿಸ್ಟ್ ಕ್ರಾಂತಿಯನ್ನು ದಮನ ಮಾಡುವ ಅಮೇರಿಕಾದ ಕುಟಿಲತಂತ್ರಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 12ನೇ ಅಧಿವೇಶನವು ಉಗ್ರವಾಗಿ ಖಂಡಿಸುತ್ತದೆ ಹಾಗೂ ನಿಕಾರಾಗುವಾದ ಜನತೆ ಮತ್ತು ಸ್ಯಾಂಡಿನಿಸ್ಟ್ ರಾಷ್ಟ್ರೀಯ ವಿಮೋಚನಾ ರಂಗಕ್ಕೆ ತನ್ನ ಸೌಹಾರ್ದತೆಯನ್ನು ಸೂಚಿಸುತ್ತದೆ.

ಅಮೇರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಸಮೋಝಾ ಸರ್ಕಾರದ ವಿರುದ್ಧ 1979ರ ಕ್ರಾಂತಿಯ ವಿಜಯದ ನಂತರ ನಿಕಾರಾಗುವಾದ ಜನತೆಯು ಅಮೇರಿಕಾದಿಂದ ಸತತವಾದ ದ್ವೇಷ ಮತ್ತು ಬೆದರಿಕೆಗೊಳಗಾಗಿದ್ದಾರೆ. ಆರ್ಥಿಕ ದಿಗ್ಬಂಧನಗಳನ್ನು ಹೇರುವುದರೊಂದಿಗೆ ಅಮೇರಿಕಾವು ನಿಕಾರಾಗುವಾದ ಬಂದರಿನ ಸುತ್ತ ಮದ್ದುಗುಂಡಿನ ವ್ಯೂಹ ರಚಿಸಿ, ಹೊಂಡುರಾಸ್, ಎಲ್ ಸಾಲ್ವಡಾರ್ ಮತ್ತು ಕೋಸ್ಟಾರಿಕಾದಲ್ಲಿ ತನ್ನ ನೆಲೆಗಳನ್ನು ಬಲಗೊಳಿಸಿದೆ. ನಿಕಾರಾಗುವದಂಚಿನ ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರದಲ್ಲಿ ಅಮೇರಿಕಾದ ನಾವಿಕ ಸಮರಾಭ್ಯಾಸ ನಡೆಯುತ್ತಲೇ ಇದೆ. ಅಮೇರಿಕಾ ನಿಕಾರಾಗುವಾದ ಮೇಲೆ ಅತಿಕ್ರಮಣ ಯೋಜನೆಗಳನ್ನು ಸಹ ರೂಪಿಸಿದೆ. ಸಿ. ಐ. ಎ ಮತ್ತು ಪೆಂಟಗನ್‌ಗಳು ಬೆಂಬಲ ಪಡೆದ ಕಾಂಟ್ರಾಸ್ ಎಂಬ ಸರ್ಕಾರ ವಿರೋದಿ ಬಾಡಿಗೆ ಪಡೆಗಳು ಹೊಂಡುರಾಸ್ ಮತ್ತು ಕೋಸ್ಟಾರಿಕಾಗಳಲ್ಲಿ ಆಶ್ರಯ ಪಡೆದು ನಿಕಾರಾಗುವದ ಜನಜೀವನವನ್ನು ಅಸ್ತವ್ಯಸ್ತಗೊಳಿಸಲು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿವೆ.

ಮಧ್ಯ ಅಮೇರಿಕಾದಲ್ಲಿ ಶಾಂತಿಯನ್ನು ನೆಲೆಗೊಳಿಸಲು, ಕಾಂಟಾಡೋರಾ ಗುಂಪಿನ ರಾಷ್ಟ್ರಗಳು ಅನೇಕ ಸೂಚನೆಗಳನ್ನು ಪದೇ ಪದೇ ನೀಡಿದ್ದರೂ, ನಿಕಾರಾಗುವಾ ಆದಕ್ಕೆ ಸಮ್ಮತಿಸಿದ್ದರೂ ರೀಗನ್ ಆಡಳಿತವು ಅವುಗಳನ್ನು ಗಾಳಿಗೆ ತೂರಿದೆ.

ಇಂತಹ ಸಂಕಷ್ಟ ಪರಿಸ್ಥಿತಿಯಲ್ಲೂ ನಿಕಾರಾಗುವಾದ ಜನತೆಯು ಧೀರೋದಾತ್ತ ರಕ್ಷಣೆಯನ್ನೊಡ್ಡಿ ತಮ್ಮ ಕ್ರಾಂತಿಯನ್ನು ಮುಂದೆ ಕೊಂಡೊಯ್ಯುತ್ತಿದ್ದಾರೆ. ಎಲ್ಲಾ ಅಂತರ್‍ರಾಷ್ಟ್ರೀಯ ಪ್ರಗತಿಪರ ಶಕ್ತಿಗಳೂ ಮತ್ತು ಸಮಾಜವಾದಿ ರಾಷ್ಟ್ರಗಳೂ ನಿಕಾರಾಗುವಾದ ರಕ್ಷಣೆಗೆ ಧಾವಿಸಿದೆ.

ನಿಕಾರಾಗುವಾದ ಜನತೆ ಮತ್ತು ಸ್ಯಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗವನ್ನು ಸಿ. ಪಿ. ಐ. (ಎಂ) 12ನೇ ಅದಿವೇಶನವು ಅಭಿನಂದಿಸುತ್ತದೆ. ಹಾಗೂ ಅವರ ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಯ ಪ್ರಗತಿಪರ ಸಾಮಾಜಿಕ ಪರಿವರ್ತನೆಯ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲ ಸೂಚಿಸುತ್ತದೆ.

## ಇ. ಎಂ. ಎಸ್. ಗೆ ಅಭಿನಂದನೆಗಳು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪ್ರಧಾನ ಕಾರ್ಯದರ್ಶಿಯಾಗಿ ನೀವು ಪುನರಾಯ್ಕೆಗೊಂಡ ಸಂದರ್ಭದಲ್ಲಿ ನಾನು ನನ್ನ ಹಾರ್ದಿಕ ಅಭಿನಂದನೆಗಳನ್ನು ಮತ್ತು ಪಕ್ಷ ನಿಮಗೆ ಒಪ್ಪಿಸಿದ ಉನ್ನತ ಜವಾಬ್ದಾರಿಯ ಚಟುವಟಿಕೆಯಲ್ಲಿ ಯಶಸ್ಸು ದೊರೆಯಲೆಂಬ ಶುಭಾಶಯಗಳನ್ನು ವ್ಯಕ್ತಪಡಿಸುತ್ತೇನೆ.

**ನಿಕೊಲ್ಯಾ ಸಿಯುಸೆಸ್ಕು**
ಪ್ರಧಾನ ಕಾರ್ಯದರ್ಶಿ
ರೊಮಾನಿಯನ್ ಕಮ್ಯುನಿಸ್ಟ್ ಪಕ್ಷ

## ರಾಜಕೀಯ ಸಂಘಟನಾ ವರದಿಯ ಬಗ್ಗೆ ನಿರ್ಣಯ

ವರದಿಯ ದಿಕ್ಕು ಹಾಗೂ ತಿಳುವಳಿಕೆಗೆ ಅನುಗುಣವಾಗಿ ಬಂದ ಅನೇಕ ಸಲಹೆಗಳನ್ನು ಹಾಗೂ ಸಾಮೂಹಿಕ ಸಂಘಟನೆಗಳ ವರದಿಗಳನ್ನು ಸೇರಿಸಿ ರಾಜಕೀಯ ಸಂಘಟನಾ ವರದಿಯನ್ನು ಅಂತಿಮಗೊಳಿಸಲು ಪಕ್ಷದ 12ನೇ ಅಧಿವೇಶನ ಹೊಸ ಕೇಂದ್ರ ಸಮಿತಿಗೆ ಅಧಿಕಾರ ನೀಡುತ್ತದೆ.

ಅಧಿವೇಶನದ ನಿರ್ಣಯ

# ಶ್ರೀಲಂಕಾ ತಮಿಳರು : ಪ್ರಜಾಸತ್ತಾತ್ಮಕ ಇತ್ಯರ್ಥಕ್ಕೆ ಕರೆ

ಸಿ. ಪಿ. ಐ. (ಎಂ)ನ ಹನ್ನೆರಡನೇ ಅಧಿವೇಶನ ಶ್ರೀಲಂಕಾದ ಭದ್ರತಾ ಪಡೆಗಳಿಂದ ತಮಿಳು ಅಲ್ಪಸಂಖ್ಯಾತ ಜನಾಂಗಕ್ಕೆ ಸೇರಿದ ಅಮಾಯಕ ಪುರುಷರು, ಮಹಿಳೆಯರು ಮತ್ತು ಮಕ್ಕಳ ಭೀಕರ ಸಾಮೂಹಿಕ ಕೊಲೆ ಮುಂದುವರಿಯುತ್ತಿರುವುದನ್ನು ಅತ್ಯಂತ ತೀವ್ರ ಆತಂಕ ಹಾಗೂ ಕಾಳಜಿಯಿಂದ ಗಮನಿಸುತ್ತದೆ ಮತ್ತು ಅದನ್ನು ಬಲವಾಗಿ ಖಂಡಿಸುತ್ತದೆ.

ತಿಂಪೂ ಮಾತುಕತೆ ಹಾಗೂ ಕದನ ವಿರಾಮ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರುವ ಹಾದಿಯನ್ನು ತೆರೆದಿತ್ತು ಎಂಬುದನ್ನು ಅಧಿವೇಶನ ಗಮನಿಸುತ್ತದೆ. ಆದರೆ ಮಾತುಕತೆಯನ್ನು ಮುಂದೂಡಿದ್ದರಿಂದ ಉಂಟಾದ ಮಧ್ಯಂತರವನ್ನು ಜಯವರ್ಧನೆ ಸರಕಾರವು, ನಿರಂತರವಾಗಿ ಕದನ ವಿರಾಮವನ್ನು ಉಲ್ಲಂಘಿಸಲು, ಸಾಮ್ರಾಜ್ಯಶಾಹಿಗಳಿಂದ ಹೆಚ್ಚೆಚ್ಚು ಶಸ್ತ್ರಾಸ್ತ್ರಗಳನ್ನು ಪಡೆಯಲು, ಬ್ರಿಟಿಶ್ ಮತ್ತು ಮೊಸ್ಸಾದ್ ಬಾಡಿಗೆ ಸೈನಿಕರ ಸೇವೆ ಪಡೆಯಲು ಹಾಗೂ ಭಯೋತ್ಪಾದಕತೆಯ ಹುಟ್ಟಡಗಿಸುವ ಹೆಸರಿನಲ್ಲಿ ಅಮಾಯಕ ತಮಿಳರನ್ನು ವ್ಯಾಪಕವಾಗಿ ಕೊಲೆ ಮಾಡಲು ಉಪಯೋಗಿಸಿಕೊಂಡಿದೆ.

ಜಯವರ್ಧನೆ ಸರಕಾರ ಈ ಕ್ರಮಗಳ ಮೂಲಕ ಒಂದು ನ್ಯಾಯೋಚಿತ ಮತ್ತು ಪ್ರಜಾಸತ್ತಾತ್ಮಕ ಜನಾಂಗೀಯ ಪ್ರಶ್ನೆಗೆ ಮಿಲಿಟರಿ ಪರಿಹಾರದ ಮಾರ್ಗದಲ್ಲಿ ಸಾಗುತ್ತಿದೆಯೆಂಬುದನ್ನು ದೃಢಪಡಿಸಿದೆಯೆಂದು ಅಧಿವೇಶನ ಪರಿಗಣಿಸುತ್ತದೆ. ಶ್ರೀಲಂಕಾ ಸರಕಾರದ ಈ ನಿಲುವು ಆಳಗೊಳ್ಳುತ್ತಿರುವ ಆರ್ಥಿಕಬಿಕ್ಕಟ್ಟಿನಿಂದ, ಶ್ರೀಲಂಕಾದ ಜನತೆಯಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯಿಂದ ಬಿಡಿಸಿಕೊಳ್ಳಲು ಮಾಡುತ್ತಿರುವ, ಜನತೆಯ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಕೂಡಾ ಆಗಿದೆ. ಶ್ರೀಲಂಕಾ ಸರಕಾರದ ಮಿಲಿಟರಿ ಪರಿಹಾರದ ಧೋರಣೆ ಈಗಾಗಲೇ ಟ್ರಿಂಕೋಮಾಲಿಯಲ್ಲಿ ಶ್ರೀಲಂಕಾದ ಪರಾವಲಂಬನೆಯನ್ನು ಬಳಸಿಕೊಂಡು ಒಂದು ಮಿಲಿಟರಿ ನೆಲೆಯನ್ನು ಪಡೆಕೊಂಡ ಅಮೇರಿಕನ್ ಸಾಮ್ರಾಜ್ಯಶಾಹಿಯ ಮೇಲೆ ಇನ್ನಷ್ಟು, ಮತ್ತಷ್ಟು ಅವಲಂಬಿಸುವಂತೆ ಮಾಡಿದೆ. ಇದು ಶ್ರೀಲಂಕಾದ ಸಾರ್ವಭೌಮತೆ ಹಾಗೂ ಸ್ವಾತಂತ್ರ್ಯಕ್ಕೆ ಮಾತ್ರವಲ್ಲ, ಈ ಪ್ರದೇಶದ ಶಾಂತಿಗೆ ಬೆದರಿಕೆಯೊಡ್ಡಿದೆ ಎಂದು ಸಿ. ಪಿ. ಐ. (ಎಂ) ಅಧಿವೇಶನ ಹೇಳಬಯಸುತ್ತದೆ.

ಪ್ರತ್ಯೇಕ ಈಳಂನ ಬೇಡಿಕೆ ವಾಸ್ತವಿಕವಾಗಿ ಶ್ರೀಲಂಕಾದ ಅಲ್ಪಸಂಖ್ಯಾತ ಜನಾಂಗದ ಪ್ರಜಾಪ್ರಭುತ್ವವಾದೀ ಆಶೋತ್ತರಗಳನ್ನು ದಮನ ಮಾಡಲು ಜಯವರ್ಧನೆ ಸರಕಾರಕ್ಕೆ ನೆರವಾಗುತ್ತದೆ ಎಂದು ಅಧಿವೇಶನ ಪರಿಗಣಿಸುತ್ತದೆ.

ಒಂದು ಸಂಯುಕ್ತ ಶ್ರೀಲಂಕಾದ ಚೌಕಟ್ಟಿನೊಳಗೆ ಗರಿಷ್ಟ ಸ್ವಾಯತ್ತತೆಯ ನೀತಿಯನ್ನು ಅಂಗೀಕರಿಸಿದ ಟಿ. ಯು. ಎಲ್. ಎಫ್. ನ ಇತ್ತೀಚಿನ ಪ್ರಸ್ತಾಪಗಳು ಮಾತುಕತೆಗಳ ಪುನರಾರಂಭಕ್ಕೆ ಹಾಗೂ ಇತ್ಯರ್ಥಕ್ಕೆ ಒಂದು ಆಧಾರವನ್ನೊದಗಿಸುತ್ತದೆ ಎಂದು ಅಧಿವೇಶನ ಪರಿಗಣಿಸುತ್ತದೆ.

ಹನ್ನೆರಡನೇ ಅಧಿವೇಶನ ನಿರಾಶ್ರಿತರು ಸುರಕ್ಷತೆಯಿಂದ ಹಿಂದಿರುಗಲು ಅಗತ್ಯವಾದ ಸನ್ನಿವೇಶದ ಸೃಷ್ಟಿ ಸಾಧ್ಯವಾಗುವಂತೆ ಜನಾಂಗೀಯ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಪರಿಹಾರಕ್ಕಾಗಿ ಪ್ರಯತ್ನಗಳನ್ನು ಮುಂದುವರಿಸಬೇಕೆಂದು, ಭಾರತ ಸರಕಾರಕ್ಕೆ ಕರೆ ನೀಡುತ್ತದೆ.

ತಮಿಳು ಜನಾಂಗೀಯರ ಸ್ವಾಯತ್ತತೆಗಾಗಿ ಸತತವಾಗಿ ಹೋರಾಡುತ್ತಾ, ಸಿಂಹಳೀ ಮತ್ತು ತಮಿಳು ಮೂಲದ ದುಡಿಯುವ ಜನದ ಐಕ್ಯತೆ ಬೇಕೆನ್ನುವ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಎಡ ಶಕ್ತಿಗಳ ನಿಲುವನ್ನು ಅಧಿವೇಶನ ಬೆಂಬಲಿಸುತ್ತದೆ.

ಶ್ರೀಲಂಕಾದ ತಮಿಳು ಜನಾಂಗದ ಸಂಕಷ್ಟ ಪೀಡಿತ ಜನತೆಯೊಂದಿಗೆ ಸೌಹಾರ್ದತೆ ವ್ಯಕ್ತಪಡಿಸುತ್ತದೆ ಹಾಗೂ ಶ್ರೀಲಂಕಾದಲ್ಲಿ ಜನಾಂಗೀಯ ಸಮಸ್ಯೆಯ ಪ್ರಜಾಸತ್ತಾತ್ಮಕ ಇತ್ಯರ್ಥಕ್ಕೆ ಹೋರಾಡಬೇಕೆಂದು ತಮಿಳು ಜನಾಂಗವೂ ಸೇರಿದಂತೆ ಶ್ರೀಲಂಕಾದ ಎಲ್ಲಾ ಜನ ವಿಭಾಗಗಳಲ್ಲಿನ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳನ್ನು ಅಧಿವೇಶನ ವಿನಂತಿಸಿ ಕೊಳ್ಳುತ್ತದೆ.

ಶ್ರೀಲಂಕಾ ತಮಿಳರ ಹಕ್ಕುಗಳಿಗೆ ಬೆಂಬಲ ನೀಡಲು ಹಾಗೂ ಸಮಸ್ಯೆಯ ಒಂದು ನ್ಯಾಯೋಚಿತ ರಾಜಕೀಯ ಇತ್ಯರ್ಥಕ್ಕೆ ಜನರನ್ನು ಸಜ್ಜುಗೊಳಿಸಬೇಕೆಂದು ಪಕ್ಷದ ರಾಜ್ಯ ಘಟಕಗಳಿಗೆ ಅಧಿವೇಶನ ನಿರ್ದೇಶನ ನೀಡುತ್ತದೆ.

## ಅಧಿವೇಶನ ಶುಭಕರವಾಗಲಿ :

# ಅಫ್‌ಘಾನಿಸ್ತಾನ ಜನತಾ ಪ್ರಜಾಪ್ರಭುತ್ವ ಪಕ್ಷ

ಅಫ್‌ಘಾನಿಸ್ತಾನ ಜನತಾ ಪ್ರಜಾ ಪ್ರಭುತ್ವ ಪಕ್ಷದ ಕೇಂದ್ರ ಸಮಿತಿ ಸಿ.ಪಿ.ಐ. (ಎಂ)ನ ಹನ್ನೆರಡನೇ ಅಧಿವೇಶನ ಸೇರುತ್ತಿರುವುದಕ್ಕೆ ತನ್ನ ಹೃತ್ಪೂರ್ವಕ ಒಡನಾಡೀ ಶುಭಾಶಯಗಳನ್ನು ಹಾಗೂ ಅಭಿನಂದನೆಗಳನ್ನು ನಿಮಗೆ, ಗೌರವಾನ್ವಿತ ಸಂಗಾತಿಗಳಿಗೆ ಮತ್ತು ನಿಮ್ಮ ಮೂಲಕ ಕಮ್ಯುನಿಸ್ಟರಿಗೆ, ಕಾರ್ಮಿಕ ವರ್ಗಕ್ಕೆ ಹಾಗೂ ಭಾರತದ ಎಲ್ಲಾ ಶ್ರಮಜೀವಿ ಜನತೆಗೆ ವ್ಯಕ್ತಪಡಿಸುತ್ತದೆ ಹಾಗೂ ಅಧಿವೇಶನಕ್ಕೆ ಮಹಾನ್ ಯಶಸ್ಸು ಸಿಗಲೆಂದು ಹಾರೈಸುತ್ತದೆ.

ಸಿ.ಪಿ.ಐ. (ಎಂ) ನ 12ನೇ ಅಧಿವೇಶನ ಸಿ.ಪಿ.ಐ. (ಎಂ)ನ ಹೋರಾಟದ ಇತಿಹಾಸದಲ್ಲಿ, ಈ ಮಹಾನ್ ಹಾಗೂ ಮಹತ್ವದ ಘಟನೆ ಹಾಗೂ ಅದರ ನಿರ್ಣಯಗಳು ಮತ್ತು ಠರಾವುಗಳು ಭಾರತದ ಕಾರ್ಮಿಕ ವರ್ಗ ಹಾಗೂ ಎಲ್ಲಾ ಶ್ರಮಜೀವಿ ಜನತೆಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ, ಪ್ರಗತಿ ಹಾಗೂ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ, ಶಾಂತಿ ಹಾಗೂ ಜಗತ್ತಿನ ಎರಡೂ ಬಣಗಳ ನಡುವೆ ಒಡಂಬಡಿಕೆಯನ್ನು ದೃಢಗೊಳಿಸುವುದರಲ್ಲಿ ಮಹತ್ವದ ಪಾತ್ರವಹಿಸಲಿದೆ.

ಸಿ.ಪಿ.ಐ. (ಎಂ) ಅಸಂಸ್ಥಾ ಸಾಮ್ರಾಜ್ಯಶಾಹಿ ನೇತೃತ್ವದ ಜಾಗತಿಕ ಸಾಮ್ರಾಜ್ಯಶಾಹಿ ಹಾಗೂ ಪ್ರಾದೇಶಿಕ ಪ್ರತಿಗಾಮಿತ್ವದ ನಾಚಿಕೆಗೇಡೀ ಪಿತೂರಿಗಳ ಹಾಗೂ ಕುಟಿಲೋಪಾಯಗಳನ್ನು ಬಯಲಿಗೆಳೆಯುವಲ್ಲಿ ವಹಿಸಿದ ಪಾತದಿಂದಾಗಿ ಮತ್ತು ಭಾರತದ ಸಮಗ್ರತೆ, ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವ ಅದರ ಹೋರಾಟದಿಂದಾಗಿ ಸದಾ ಶಾಂತಿಪ್ರಿಯ ಹಾಗೂ ಪ್ರಗತಿಶೀಲ ಮಾನವ ಕುಲದ ಆಳವಾದ ಗೌರವಕ್ಕೆ ಪಾತ್ರವಾಗಿದೆ.

PDPA ಮತ್ತು ಸಿ. ಪಿ. ಐ. (ಎಂ) ನಡುವಿನ ಸದ್ಯದ ಸಂಬಂಧಗಳು ನಮ್ಮ ಕಾಲದ ಪ್ರಗತಿಶೀಲ ವಿಚಾರಗಳು ಹಾಗೂ ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆಯ ನೀತಿಗಳನ್ನಾಧರಿಸಿಕೊಂಡು ಅಭಿವೃದ್ಧಿ ಮತ್ತು ಬೆಳವಣಿಗೆಯ ಮಾರ್ಗದಲ್ಲಿ ಯಶಸ್ವಿಯಾಗಿ ಮುಂದುವರಿಯುತ್ತವೆ. ಈ ಸಂಬಂಧಗಳು ಭವಿಷ್ಯದಲ್ಲಿ ನಮ್ಮೆರಡು ದೇಶಗಳ ಜನಗಳ ಮತ್ತು ಜಾಗತಿಕ ಕಾರ್ಮಿಕರ ಆಂದೋಲನದ ಹಿತಾಸಕ್ತಿಗನುಗುಣವಾಗಿ ಕೂಡಾ ಬೆಳೆಯುತ್ತವೆಯೆಂಬ ವಿಶ್ವಾಸ ನಮಗಿದೆ.

ಸಿ.ಪಿ.ಐ. (ಎಂ)ನ ಹನ್ನೆರಡನೇ ಅಧಿವೇಶನ ನಡೆಸುತ್ತಿರುವುದಕ್ಕಾಗಿ ಮತ್ತೊಮ್ಮೆ ನಮ್ಮ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತಾ ಅಧಿವೇಶನದ ಕಾರ್ಯದಲ್ಲಿ ಹೆಚ್ಚೆಚ್ಚು ಯಶಸ್ಸು ದೊರೆಯಲೆಂದು ನಾವು ಹಾರೈಸುತ್ತೇವೆ.

ಸಿ.ಪಿ.ಐ. (ಎಂ)ನ ಹನ್ನೆರಡನೇ ಅಧಿವೇಶನ ಶುಭಕರವಾಗಲಿ !

ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆ ಚಿರಾಯುವಾಗಲಿ !

ಒಡನಾಡೀ ಶುಭಾಶಯಗಳೊಂದಿಗೆ

ಕೇಂದ್ರ ಸಮಿತಿ
ಪಿ.ಡಿ.ಪಿ.ಎ, ಕಾಬೂಲ್

## ಯುಗೋಸ್ಲಾವಿಯಾ ಕಮ್ಯುನಿಸ್ಟರ ಲೀಗ್‌ನಿಂದ ಸಂದೇಶ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನದ ಸಂದರ್ಭದಲ್ಲಿ ನಿಮ್ಮ ಪಕ್ಷದ ಈ ಮಹತ್ವದ ಸಭೆಯಲ್ಲಿ ಕಾರ್ಯಕಲಾಪಗಳು ಯಶಸ್ವೀ ಹಾಗೂ ಫಲಪ್ರದವಾಗಲೆಂಬ ನಮ್ಮ ಶುಭ ಶಾರೈಕೆಗಳನ್ನು ವ್ಯಕ್ತಪಡಿಸಬಯಸುತ್ತೇವೆ.

ನಿಮ್ಮ ದೇಶದಲ್ಲಿ ಜನತೆಯ ಜೀವನ ಪರಿಸ್ಥಿತಿಯನ್ನು ಸಾಮಾಜಿಕ ಪ್ರಗತಿಯನ್ನು ಪ್ರೋತ್ಸಾಹಿಸಲು ನಿಮ್ಮ ದೇಶದ ಇತರ ಪ್ರಗತಿಶೀಲ ಶಕ್ತಿಗಳೊಂದಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನಡೆಸುತ್ತಿರುವ ಚಟುವಟಿಕೆಗಳು ಹಾಗೂ ಪ್ರಯತ್ನಗಳನ್ನು ಯುಗೋಸ್ಲಾವಿಯಾ ಕಮ್ಯುನಿಸ್ಟರ ಲೀಗ್ ಅತ್ಯಂತ ಗಮನವಿಟ್ಟು ವೀಕ್ಷಿಸುತ್ತಿದೆ. ಇನ್ನು ಮುಂದೆ ಪ್ರಸ್ತುತ ಅಧಿವೇಶನದಲ್ಲಿ ಅಂಗೀಕರಿಸಲಿರುವ ಅಂದಾಜು ಹಾಗೂ ನಿರ್ಣಯಗಳಿಗೆ ಬದ್ಧರಾಗಿದ್ದುಕೊಂಡು ನೀವು ಭಾರತದ ಅಭಿವೃದ್ಧಿಯನ್ನು ಹೆಚ್ಚಿನ ವೇಗದಲ್ಲಿ ಹಾಗೂ ಅಲಿಪ್ತ ದೇಶಗಳ ಧೋರಣೆ ಮತ್ತು ಆಂದೋಲನದ ಭವಿಷ್ಯ ದೃಢೀಕರಣವನ್ನು ಸಾಧಿಸುವ ಉದ್ದೇಶ ಹೊಂದಿರುವ ಸಕಲ ಪ್ರಯತ್ನಗಳಿಗೆ ನಿಮ್ಮ ಕೊಡುಗೆನೀಡುತ್ತೀರೆಂಬವಿಶ್ವಾಸನಮಗಿದೆ.

ಈ ಸಂದರ್ಭದಲ್ಲಿ ನಾವು ಮತ್ತೊಮ್ಮೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದೊಂದಿಗೆ ತನ್ನ ಸಹಕಾರವನ್ನು ನಮ್ಮೆರಡು ಅಲಿಪ್ತ ದೇಶಗಳ ಜನತೆಗಳ ನಡುವಿನ ಗೆಳೆತನವನ್ನು ಬಲಪಡಿಸಲು ಮತ್ತು ಶಾಂತಿ ಹಾಗೂ ಸಮಾಜವಾದಕ್ಕಾಗಿ ಮತ್ತಷ್ಟು ಹೆಚ್ಚಿಸಲು ಯುಗೋಸ್ಲಾವಿಯಾ ಕಮ್ಯುನಿಸ್ಟರ ಲೀಗ್ ಸಿದ್ಧವಿದೆಯೆಂದು ಒತ್ತಿ ಹೇಳಬಯಸುತ್ತೇವೆ.

ಅಧಿವೇಶನದ ನಿರ್ಣಯಗಳು :

# ರಾಷ್ಟ್ರೀಯ ಪರಿಸ್ಥಿತಿ ಕುರಿತು

## ಪ್ರಸಕ್ತ ಆರ್ಥಿಕ ನೀತಿ ಮತ್ತು ಏಳನೇ ಯೋಜನೆ

ರಾಷ್ಟ್ರವನ್ನು ಹೆಚ್ಚುಹೆಚ್ಚಾಗಿ ಖಾಸಗೀಕರಣದತ್ತ ಒಯ್ಯುತ್ತಿರುವ, ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತದ್ವಾರ ತೆರೆಯುತ್ತಿರುವ, ಸಾರ್ವಜನಿಕ ವಲಯದ ಪಾತ್ರವನ್ನು ಕೆಳಕ್ಕೊಯ್ಯುತ್ತಿರುವ ಮತ್ತು ಇದುವರೆಗೆ ಬೆಳೆದುಬಂದಿರುವ ಯೋಜನಾ ವ್ಯವಸ್ಥೆಯನ್ನು ಹಾಳುಗೆಡುವುತ್ತಿರುವ ಆರ್ಥಿಕ ನೀತಿಯ ಇತ್ತೀಚಿನ ಬೆಳವಣಿಗೆಯನ್ನು ಕುರಿತಂತೆ ಸಿ. ಪಿ. ಐ. (ಎಂ) ನ ಹನ್ನೆರಡನೇ ಅಧಿವೇಶನ ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ. ಈ ಎಲ್ಲ ನೀತಿಗಳಿಂದಾಗಿ ಜನತೆಯ ಜೀವನಮಟ್ಟ ಮತ್ತಷ್ಟು ಹದಗೆಡುವುದಲ್ಲದೆ, ಆರ್ಥಿಕದೊಳಕ್ಕೆ ಸಾಮ್ರಾಜ್ಯಶಾಹಿಯ ಒಳನುಗ್ಗುವಿಕೆ ಮತ್ತು ದುಡಿಯುವ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ನಿರ್ಬಂಧಿಸುವಂತಹ ಅಧಿಕಾರಶಾಹಿ ಧೋರಣೆಗಳು ಬಲಗೊಳ್ಳುವುದರಲ್ಲಿ ಪರಿಣಮಿಸುತ್ತವೆ.

ಆರ್ಥಿಕ ನೀತಿಯಲ್ಲಿನ ಬದಲಾವಣೆಯನ್ನು ನವೆಂಬರ್ 1984ರಲ್ಲಿ ಜಾರಿಗೆ ತಂದ ಹೊಸ ಕಂಪ್ಯೂಟರ್ ನೀತಿ, 85-86ರ ಕೇಂದ್ರ ಬಜೆಟ್, ಆಯಾತ–ನಿರ್ಯಾತ ನೀತಿ, ಜವಳಿ ನೀತಿ ಮತ್ತು ಮಿಗಿಲಾಗಿ ಇತ್ತೀಚಿನ ಧೀರ್ಘಾವಧಿ ತೆರಿಗೆ ನೀತಿ ಮುಂತಾದವುಗಳಿಂದ ನಿಚ್ಚಳವಾಗಿ ಕಾಣಬಹುದಾಗಿದೆ.

ಈ ಎಲ್ಲ ನೀತಿಗಳಿಂದಾಗಿ ಕೈಗಾರಿಕೆಗಳಿಗೆ ನೀಡುವ ಲೈಸೆನ್ಸ್ ವ್ಯವಸ್ಥೆ ಸಡಿಲಗೊಂಡಿದೆ, ಏಕಸ್ವಾಮ್ಯ ಕಂಪೆನಿಗಳ ಮಿತಿಯನ್ನು ಹೆಚ್ಚಿಸಲಾಗಿದೆ. ವಿದೇಶಿ ಬಂಡವಾಳಕ್ಕೆ ಹೆಚ್ಚಿನ ಸ್ವಾತಂತ್ರ್ಯ, ಫೆರಾ ನಿಯಂತ್ರಣದಲ್ಲಿ ಸಡಿಲಿಕೆ, ಶ್ರೀಮಂತರ ಮತ್ತು ಕಂಪೆನಿ ಆದಾಯ ಮತ್ತು ಸಂಪತ್ತಿನ ಮೇಲಿನ ತೆರಿಗೆಯಲ್ಲಿ ಕಡಿತ, ಆಸ್ತಿಯ ತೆರಿಗೆಯ ರದ್ದುಗೊಳಿಸುವಿಕೆ, ಆಮದು ನೀತಿಯ "ಉದಾರೀಕರಣ" ಮತ್ತು ವಿದೇಶಿ ಸಹಯೋಗಗಳ ಹೆಚ್ಚಳ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಯೋಜನೆಗಳ ಹಣವಿನಿಯೋಗದಲ್ಲಿ ಕಡಿತವಾಗಿದೆ.

ಈ ಎಲ್ಲ ನೀತಿಗಳು ಬಹಳವಾಗಿ ಸಾಮ್ರಾಜ್ಯಶಾಹಿ ಹಾಗೂ ಅದರ ಏಜೆಂಟುಗಳಾದ ವಿಶ್ವಬ್ಯಾಂಕ್ ಮತ್ತು ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಪ್ರತಿಪಾದಿಸುವ ತಂತ್ರಕ್ಕೆ ಅನುಗುಣವಾಗಿದೆ. ವಿದೇಶಿ ಬಂಡವಾಳದ ಪ್ರಭಾವವನ್ನು ತೊಡೆದುಹಾಕದೆ ಮತ್ತು ಪರಿಣಾಮಕಾರಿಯಾದ ಭೂಸುಧಾರಣೆ ಜಾರಿಗೆ ತರದೆ ದೇಶದಲ್ಲಿ ಪ್ರಗತಿ ಸಾಧಿಸ ಹೊರಟ ಬಂಡವಾಳಶಾಹಿ ಅಭಿವೃದ್ಧಿಯ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿದೆ. ಭೂಒಡೆತನದ ಅತಿ ಕೇಂದ್ರೀಕರಣದ ಮುಂದುವರಿಕೆಯಿಂದಾಗಿ ಆಂತರಿಕ ಮಾರುಕಟ್ಟೆ ಸಂಕುಚಿತವಾಗಿದ್ದಲ್ಲದೇ ಕೃಷಿ ಕ್ಷೇತ್ರದಲ್ಲಿ ಉತ್ಪಾದನಾ ಶಕ್ತಿಗಳು ಬಿಡುಗಡೆಯಾಗಲಿಲ್ಲ. ಆಂತರಿಕ ಬಂಡವಾಳಕ್ಕೆ ಮಾರುಕಟ್ಟೆಯ ವಿಸ್ತರಣೆಗಿರುವ ಅವಕಾಶಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳದೆ ಭಾರತದ ದೊಡ್ಡ ಬಂಡವಾಳಗಾರರು ರಫ್ತು ಮಾರುಕಟ್ಟೆಯನ್ನು ಮುಟ್ಟಲು ಪ್ರಯತ್ನಿಸುತ್ತಿದ್ದಾರೆ ಮತ್ತು ಇದಕ್ಕೆ ವಿದೇಶಿ ಬಂಡವಾಳದ ಸಹಾಯವನ್ನು, ಮತ್ತು "ಆಧುನಿಕ" ತಂತ್ರಜ್ಞಾನವನ್ನು ಪಡೆಯಲು ಯತ್ನಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ವಿಶೇಷವಾಗಿ ಜಾಗತಿಕ ಬಂಡವಾಳ ಶಾಹಿ ಬಿಕ್ಕಟ್ಟಿನ ಹಿನ್ನಲೆಯಲ್ಲಿ ವಿದೇಶಿ ಬಂಡವಾಳವು ದೇಶೀಯ ಮಾರುಕಟ್ಟೆಯೊಳಕ್ಕೆ ಹೆಚ್ಚಿನ ಪ್ರವೇಶವನ್ನು ಬೇಡುವ ಮೂಲಕ ಪ್ರತಿಫಲವನ್ನು ಬಯಸುತ್ತಿದೆ. ತತ್ಫಲವಾಗಿ ಹೊಸ ನೀತಿಯು ಈಗಾಗಲೇ ನಮ್ಮ ದೇಶದಲ್ಲಿಯೇ ದೊರೆಯುತ್ತಿರುವ ಐಷಾರಾಮು ಅನುಭೋಗದ ವಸ್ತುಗಳ, ಅದರ ಬಿಡಿಭಾಗಗಳ, ಬಂಡವಾಳ ಸರಕುಗಳ ಮತ್ತು ತಂತ್ರಜ್ಞಾನದ ಆಮದಿನ ಪ್ರವಾಹಕ್ಕೆ ಎಡೆಮಾಡಿಕೊಡುತ್ತದೆ. ಅಲ್ಲದೆ ಇದರ ಉದ್ದೇಶ ಸ್ವಯಂಚಾಲಿತ ಯಂತ್ರಗಳ ಮೂಲಕ ಕಾರ್ಮಿಕರನ್ನು ಹೊರ ತಳ್ಳುವುದು ಮತ್ತು ಪ್ರಭುತ್ವ ಶಕ್ತಿಯನ್ನು ಚಲಾಯಿಸುವ ಸಾಧನಗಳನ್ನು ಬಲಪಡಿಸುವುದು. ಇವೆಲ್ಲವುಗಳ ಅನಿವಾರ್ಯ ಪರಿಣಾಮವೆಂದರೆ ಲಕ್ಷ ಲಕ್ಷ ಜನರು ಇರುವ ಉದ್ಯೋಗವನ್ನೂ ಕಳೆದುಕೊಳ್ಳುವುದು. ಮಧ್ಯಮ ಮತ್ತು ಸಣ್ಣ ಪ್ರಮಾಣದ ಅಸಂಖ್ಯಾತ ಕೈಗಾರಿಕಾ ಘಟಕಗಳ ನಿರ್ನಾಮ, ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ, ಅಸಮತೋಲನ ಬಿಕ್ಕಟ್ಟಿನಿಂದಾಗಿ

ಸಾಲದ ಬಲೆಯಲ್ಲಿ ಸಿಲುಕಿಕೊಳ್ಳುವುದು ಮತ್ತು ಹಲವಾರು ವರ್ಷಗಳಿಂದ ದೇಶದಲ್ಲಿ ನಿರ್ಮಿಸಲಾಗಿರುವ ತಂತ್ರಜ್ಞಾನದ ಭದ್ರ ನೆಲೆಯನ್ನು ಹಾಳುಗೆಡುವುದೇ ಆಗಿದೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಹೊಸ ಆರ್ಥಿಕ ನೀತಿಯು ನಮ್ಮ ಆರ್ಥಿಕ ಪರಮಾಧಿಕಾರವನ್ನು ಮೊಟಕುಗೊಳಿಸುತ್ತದಲ್ಲದೆ ಅಲಿಪ್ತ ನೀತಿಯನ್ನು ಕೈಬಿಡುವಂತಹ ಒತ್ತಡಗಳನ್ನು ನಿರ್ಮಿಸುತ್ತದೆ.

ನಮ್ಮ ಆರ್ಥಿಕ ನೀತಿಯಲ್ಲಾಗಿರುವ ಬದಲಾವಣೆಯನ್ನು ಏಳನೇ ಪಂಚವಾರ್ಷಿಕ ಯೋಜನೆಯು ಸಂಪೂರ್ಣವಾಗಿ ಪ್ರತಿಫಲಿಸುತ್ತದೆ. ದೇಶವು ಇಂದು ಬಿಕ್ಕಟ್ಟಿನಿಂದೊಡಗೂಡಿದ ಆರ್ಥಿಕ ಬೆಳವಣಿಗೆಯ ಮಾರ್ಗದಿಂದ ಹೊರಬರಲು ಮೂಲಭೂತ ಅವಶ್ಯಕತೆಯಾದ ತೀವ್ರ ಭೂಸುಧಾರಣೆಯು ಯೋಜನೆಯಲ್ಲಿ ನೆಪಮಾತ್ರಕ್ಕೆ ಕಾಣಿಸಲಾಗಿದೆ. ಸಂಪನ್ಮೂಲಗಳನ್ನು ಗ್ರಾಮೀಣ ಬಡಜನತೆಗೆ ಹಂಚಿ ಬಡತನವನ್ನು ಕಡಿಮೆಗೊಳಿಸಬೇಕೆಂಬ ತನ್ನ ಇಚ್ಛೆಯನ್ನು ಸಾರಿ ಹೇಳುವ ಸರ್ಕಾರ ಭೂಮಿಯಂತಹ ಮುಖ್ಯವಾದ ಸಂಪನ್ಮೂಲವನ್ನೂ ಬಡಜನತೆಯ ನಡುವೆ ಹಂಚಲು ಸಿದ್ಧವಿಲ್ಲ.

ಸಾರ್ವಜನಿಕ ಕ್ಷೇತ್ರಕ್ಕೆ ಎರಡನೆಯ ಸ್ಥಾನವನ್ನು ನೀಡಿರುವುದಲ್ಲದೆ ಯೋಜನೆಯಲ್ಲಿ ಅಂತರ್ಗತವಾಗಿರುವಂತೆ ಜನತೆಯ ಜೀವನ ಮಟ್ಟದಲ್ಲಿ ಕಡಿತ ಮಾಡಿದರೂ ಸಹ ಸಾರ್ವಜನಿಕ ಕ್ಷೇತ್ರಕ್ಕೆ ನಿಗದಿ ಪಡಿಸಿರುವ 180,000 ಕೋಟಿ ರೂಗಳನ್ನೂ ಒದಗಿಸಲಾಗದಿರುವ ಸಾಧ್ಯತೆಗಳಿವೆ. ದೇಶವು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನ ಆಳವು ಎಷ್ಟು ತೀವ್ರವಾಗಿದೆಯೆಂದರೆ ಯೋಜನೆಯ ಹಣಕಾಸಿಗೆ ಬಜೆಟ್‌ನ (ಪ್ರಸ್ತುಕ ತೆರಿಗೆ ಮಟ್ಟದಲ್ಲಿ) ಕಾಣಿಕೆಯು ನಕಾರಾತ್ಮವಾಗಿದೆ. ಪರಿಣಾಮವಾಗಿ ಯೋಜನೆಗೆ ಹಣವನ್ನು ಜನತೆಯ ಮೇಲೆ ಅಧಿಕ ಪ್ರಮಾಣದ ಅಪ್ರತ್ಯಕ್ಷ ತೆರಿಗೆ, ಹಣದುಬ್ಬರವುಂಟುಮಾಡುವ ಕೊರತೆ ಹಣಪೂರೈಕೆ ಮತ್ತು ವಿದೇಶಗಳಿಂದ ಸಾಲದ ಮೂಲಕ ಕ್ರೋಢಿಕರಿಸಬೇಕಾಗಿದೆ.

## ತಪ್ಪು ಲೆಕ್ಕಾಚಾರ

ಉದ್ದೇಶಪೂರ್ವಕವಾಗಿ ಕೈ ಬಿಟ್ಟಿರುವ ಹಲವಾರು ಅಂಶಗಳು ಮತ್ತು ಸರಿಯಿಲ್ಲದ ನಿರೀಕ್ಷೆಗಳಿಂದಾಗಿ ಯೋಜನೆಯ ಸಂಪನ್ಮೂಲಗಳ ಕ್ರೋಢೀಕರಣದ ಲೆಕ್ಕಚಾರವು ತಪ್ಪಾಗಿವೆ. ಉದಾ: ಯೋಜನೆಯ ಅವದಿಯಲ್ಲಿ ಕೊಡಬೇಕಾದ ತುಟ್ಟಿಭತ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ನಾಲ್ಕನೇ ವೇತನ ಆಯೋಗದ ಸಾಧ್ಯತೆಗಳನ್ನು ಪರಿಗಣಿಸಿಲ್ಲ. ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿನ ಲಾಭವು ದಕ್ಷತೆ ಹಾಗೂ ಉದ್ಯಮಗಳ ಸಾಮರ್ಥ್ಯದ ಉತ್ತಮ ಉಪಯೋಗದಿಂದ ಆರು ಪಟ್ಟು ಹೆಚ್ಚುತ್ತದೆಂಬ ಅವಾಸ್ತವಿಕ ನಿರೀಕ್ಷಣೆ.

ಯೋಜನೆಯಲ್ಲಿ ವಾಣಿಜ್ಯದ ಅಂದಾಜನ್ನು ಮಾಡುವಾಗ ರಫ್ತು ಪ್ರಮಾಣವು ತೀವ್ರವಾಗಿ ಹೆಚ್ಚುತ್ತದೆಂಬ ಅವಾಸ್ತವಿಕ ನಿರೀಕ್ಷೆ ಮತ್ತು ಆಮದು ಪ್ರಮಾಣದಲ್ಲಿ ಗಮನಾರ್ಹ ಕಡಿತ (ಆಮದು ನೀತಿಯನ್ನು ಉದಾರಗೊಳಿಸಿಯೂ) ಮುಂತಾದವುಗಳಿಂದಾಗಿ ಭಾರತವು ಎದುರಿಸುತ್ತಿರುವ ವಿದೇಶಿ ವಿನಿಮಯದ ಬಿಕ್ಕಟ್ಟಿನ ಆಳವನ್ನು ಉದ್ದೇಶಪೂರ್ವಕವಾಗಿ ಕಡಿಮೆ ಕಾಣುವಂತೆ ಅಂದಾಜು ಮಾಡಲಾಗಿದೆ. ವಾಸ್ತವದಲ್ಲಿ ಯೋಜನೆಯ ಅವಧಿಯಲ್ಲಿ ಆಮದು ನೀತಿಯನ್ನು ಮತ್ತಷ್ಟು ಉದಾರಗೊಳಿಸಲು ಯೋಚಿಸಲಾಗಿದೆ ಮತ್ತು ಇದನ್ನು ಸರಿತೂಗಿಸಲು ಇನ್ನೂ ಹೆಚ್ಚಿನ ರಫ್ತನ್ನು ನಿರೀಕ್ಷಿಸಲಾಗಿದೆ. ಆದರೆ ಯೋಜನೆಯ ಪ್ರಥಮವರ್ಷದ ಮೊದಲನೇ ನಾಲ್ಕು ತಿಂಗಳುಗಳ ಅನುಭವವೇ ಈ ವಿಚಾರದ ಪೊಳ್ಳುತನವನ್ನು ಸಾಬೀತು ಮಾಡಿದೆ. ಪ್ರಸಕ್ತ ಸಾಲಿನ ಏಪ್ರಿಲ್-ಜುಲೈ ಅಂಕಿ ಸಂಖ್ಯೆಗಳ ಪ್ರಕಾರ ಆಮದು ಶೇಖಡ 30 ರಷ್ಟು ಹೆಚ್ಚಾಗಿದ್ದರೆ ರಫ್ತಿನಲ್ಲಿನ ಹೆಚ್ಚಳ ಕಳೆದ ವರ್ಷದ ಇದೇ ಅವಧಿಯ ಪ್ರಮಾಣಕ್ಕಿಂತ ಶೇಖಡ ಅರ್ಧಕ್ಕೂ ಕಡಿಮೆ ಆಗಿದೆ. ಪರಿಣಾಮವಾಗಿ ಅಂತರರಾಷ್ಟ್ರೀಯ ವ್ಯಾಪಾರದಲ್ಲಿನ ಖೋತಾ ಕಳೆದ ವರ್ಷಕ್ಕಿಂತ ಎರಡು ಪಟ್ಟು ಹೆಚ್ಚಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ರಫ್ತಿಗಿಂತ ಆಮದಿನ ಹೆಚ್ಚಳದ ಪ್ರಮಾಣ 10,000ಕೋಟಿಗೂ ಮಿಕ್ಕಿ ಹಿಂದೆಂದೂ ಕಾಣದಂತಹ ಬಿಕ್ಕಟ್ಟಿಗೆ ಭಾರತವನ್ನು ಕೊಂಡೊಯ್ಯುತ್ತದೆ.

ಯೋಜನೆಯ ದಸ್ತಾವೇಜಿನಲ್ಲಿ ಹೇಳಿರುವಂತೆ 40 ಮಿಲಿಯನ್ ಹೊಸ ಉದ್ಯೋಗಗಳನ್ನು ನಿರ್ಮಿಸಲಾಗುತ್ತದೆ. ಮತ್ತು ಬರ್ಬರ ಬಡತನದಲ್ಲಿರುವವರ ಸಂಖ್ಯೆಯನ್ನು ಶೇಖಡ 37 ರಿಂದ 27ಕ್ಕೆ ಇಳಿಸಲಾಗುತ್ತದೆಂಬ ಮಾತುಗಳಿಗೆ ಯಾವುದೇ ಆಧಾರ ಕಾಣುವುದಿಲ್ಲ. ವಾಸ್ತವವಾಗಿ ಆರನೆಯ ಯೋಜನೆಯ ಅವಧಿಯಲ್ಲಿ ಬಡತನದ ರೇಖೆಯು ಕೆಳಗಿರುವವರ ಸಂಖ್ಯೆಯನ್ನು ಶೇಖಡ 37ಕ್ಕೆ ತರಲಾಗಿದೆಯೆಂಬ ಮಾತೇ ಸಂಶಯಾಸ್ಪದವಾಗಿದೆ. ಏಳನೇ ಯೋಜನೆಯು ಕ್ರಮಗಳ ನೀತಿಗಳ ಒಪ್ಪಂದವನ್ನು ವಿಶ್ಲೇಷಿಸುವಾಗ ಬಡತನದ ಬವಣೆ ಇನ್ನಷ್ಟು ತೀವ್ರವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಕೈಗಾರಿಕೆಗಳ ಮುಚ್ಚುವಿಕೆಯಿಂದ ವ್ಯಾಪಕವಾಗಿ ಉದ್ಯೋಗಗಳನ್ನು ನಿರ್ನಾಮ ಮಾಡುತ್ತಿದ್ದು ಮತ್ತು

ವಿವೇಚನೆಯಿಲ್ಲದ ಕಂಪ್ಯೂಟರೀಕರಣ ದಿಂದಾಗಿ ನಿರುದ್ಯೋಗದ ಸಮಸ್ಯೆ ಇನ್ನೂ ಉಲ್ಬಣಗೊಳ್ಳುತ್ತದೆ.

## ಗ್ರಾಮೀಣ ಉದ್ಯೋಗ

ಮೂವತ್ತು ಮಿಲಿಯನ್ ಆಹಾರ ದಾಸ್ತಾನು ಸರ್ಕಾರದ ಉಗ್ರಾಣದಲ್ಲಿ ಕೊಳೆಯುತ್ತಿರುವಾಗ ಗ್ರಾಮೀಣ ಪ್ರದೇಶ ದಲ್ಲಿ ಉದ್ಯೋಗ ನಿರ್ಮಾಣದ ವಿಚಾರದಲ್ಲಿ ಸರ್ಕಾರ ತೋರುತ್ತಿರುವ ದಿವ್ಯ ನಿರ್ಲಕ್ಷ್ಯ ಈ ಸಮಸ್ಯೆಯ ಬಗ್ಗೆ ಸರ್ಕಾರಕ್ಕಿರುವ ಅಪ್ರಾಮಾಣಿಕತೆಯನ್ನು ಸೂಚಿಸುತ್ತದೆ. ಈ ದಾಸ್ತಾನಿನಲ್ಲಿ ಕೇವಲ 5 ಮಿಲಿಯ ಟನ್ ಆಹಾರವನ್ನು ಉದ್ಯೋಗ ನಿರ್ಮಾಣಕ್ಕೆ ಉಪಯೋಗಿಸಿಕೊಂಡರೂ ಪ್ರತಿಯೊಬ್ಬ ಕೂಲಿಗೂ ದಿನಕ್ಕೆ ಒಂದು ಕೆ.ಜಿ. ಧಾನ್ಯದಂತೆ 5000 ಮಿಲಿಯ ಮಾನವ ದಿನದಷ್ಟು ಉದ್ಯೋಗವನ್ನು ನಿರ್ಮಿಸಬಹುದಾಗಿದೆ. 1984-85 ರಲ್ಲಿ ಕೇವಲ 1.70 ಲಕ್ಷ ಟನ್ ಆಹಾರ ಧಾನ್ಯ ವನ್ನು (ಲಭ್ಯವಿರುವ ದಾಸ್ತಾನಿನ ಶೇಖಡ 1 ಕ್ಕೂ ಕಡಿಮೆ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ನೀಡ ಲಾಯಿತು.

ಸರ್ಕಾರದ ಹೊಸ ಆರ್ಥಿಕನೀತಿಯ ಅಪಾಯಕಾರಿ ಪರಿಣಾಮಗಳನ್ನು ಬಯಲಿ ಗೆಳೆಯಲು ಮತ್ತು ಇದಕ್ಕೆ ಪ್ರತಿರೋಧ ಒಡ್ಡುವಂತೆ ಜನರನ್ನು ಎಚ್ಚರಿಸಲು ಮುಂದಾಗುವಂತೆ ದೇಶದ ಎಲ್ಲ ಎಡ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಅಧಿವೇಶನ ಕರೆನೀಡುತ್ತದೆ.

# ಜರ್ಮನಿಯ ಸೋಶಿಯಲಿಸ್ಟ್ ಯುನಿಟಿ ಪಾರ್ಟಿಯ ಸಂದೇಶ

ಜರ್ಮನಿಯ ಸೋಶಿಯಲಿಸ್ಟ್ ಯುನಿಟಿ ಪಾರ್ಟಿಯ ಎಲ್ಲಾ ಸದಸ್ಯರ ಮತ್ತು ಜರ್ಮನ್ ಗಣತಂತ್ರ ರಾಜ್ಯದ ಸಮಸ್ತ ದುಡಿಯುವ ಜನತೆಯ ಪರವಾಗಿ ಪಾರ್ಟಿಯ ಕೇಂದ್ರ ಸಮಿತಿಯು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಮಹಾಧಿವೇಶನದಲ್ಲಿ ಪಾಲು ಗೊಳ್ಳುವ ಎಲ್ಲಾ ಪ್ರತಿನಿಧಿಗಳಿಗೂ ತನ್ನ ಹಾರ್ದಿಕ ಮತ್ತು ಸಮರಶೀಲ ಅಭಿನಂದನೆ ಗಳನ್ನು ಸಲ್ಲಿಸುತ್ತದೆ.

ಜಗತ್ತಿನ ಶಾಂತಿಪ್ರಿಯ ಜನತೆ ಜಾಗತಿಕ ಅಣು ಯುದ್ಧವನ್ನು ತಪ್ಪಿಸುವುದಕ್ಕಾಗಿ, ಶಸ್ತ್ರಾಸ್ತ್ರ ಪೈಪೋಟಿ ಬಾಹ್ಯಾಕಾಶವನ್ನು ಆವರಿಸುವುದನ್ನು ನಿಲ್ಲಿಸಲು ಮತ್ತು ಹೊಸ ಶಸ್ತ್ರಾಸ್ತ್ರಗಳ ತಯಾರಿಕೆಯ ವಿರುದ್ಧ ನಡೆಸುತ್ತಿರುವ ಚಳುವಳಿಗಳಿಗೆ ಅತ್ಯಂತ ಹೆಚ್ಚು ಮಹತ್ವ ನೀಡುವಂತಹ ಈ ಸಂದ ರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಹನ್ನೆರಡನೇ ಮಹಾ ಧಿವೇಶನ ಜರುಗುತ್ತಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿಗೆ ಪರವಾಗಿರುವ ಶಕ್ತಿಗಳು ಬಲ ಗೊಳ್ಳಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಚಟುವಟಿಕೆಗಳು ನೆರವಾಗುತ್ತಿವೆ.

ಭಾರತದ ಸ್ವಾತಂತ್ರ್ಯ ಮತ್ತು ಐಕ್ಯತೆ ಯನ್ನು ಸಂರಕ್ಷಿಸಿಕೊಳ್ಳುವುದೇ ಉದ್ದೇಶ ವಾಗಿರುವ ನಿಮ್ಮ ಪಕ್ಷದ ಧೋರಣೆಯನ್ನು ಜರ್ಮನಿಯ ಸೋಶಿಯಲಿಸ್ಟ್ ಯುನಿಟಿ ಪಾರ್ಟಿ ಮೆಚ್ಚಿಕೊಂಡಿದೆ. ಸಾಮಾಜಿಕ ಪ್ರಗತಿಗಾಗಿ ನಿಮ್ಮ ಪಕ್ಷದ ಸಧಸ್ಯರು ನಡೆ ಸುತ್ತಿರುವ ಹೋರಾಟವನ್ನು ನಾವು ಸಹಾನುಭೂತಿಯಿಂದಲೂ ಆಸಕ್ತಿ ಯಿಂದಲೂ ಗಮನಿಸುತ್ತಿದ್ದೇವೆ.

ಭಾರತೀಯ ಜನತೆಯ ಅಭಿವೃದ್ಧಿಗಾಗಿ ನಡೆಯುತ್ತಿರುವ ಹೋರಾಟಗಳಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಹನ್ನೆರಡನೇ ಕಾಂಗ್ರೆಸ್ ಹೊಸ ಉತ್ತೇಜನ ನೀಡುವುದೆಂಬ ಭರವಸೆ ನಮಗಿದೆ.

ಆತ್ಮೀಯ ಸಂಗಾತಿಗಳೇ, ನಿಮ್ಮ ಅಧಿ ವೇಶನದ ಯಶಸ್ವಿಗಾಗಿ ನಿಮಗೆ ಸೋಶಿಯ ಲಿಸ್ಟ್ ಯುನಿಟಿ ಪಾರ್ಟಿ ಆಫ್ ಜರ್ಮ ನಿಯ ಹಾರ್ದಿಕ ಶುಭಾಶಯಗಳು.

**ಎರಿಕ್ ಹೊನೆಕ್ಕರ್**
ಪ್ರಧಾನ ಕಾರ್ಯದರ್ಶಿ
ಸೋಶಿಯಲಿಸ್ಟ್ ಯುನಿಟಿ
ಪಾರ್ಟಿ ಆಫ್ ಜರ್ಮನಿ.

# ಎಡರಂಗ ಸರ್ಕಾರಗಳ ರಕ್ಷಣೆಯಲ್ಲಿ

ಎಂಟು ವರ್ಷಗಳಿಂದ ಜನತೆಗೆ ಸೇವೆ ಸಲ್ಲಿಸುತ್ತಿರುವ ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಎಡರಂಗ ಸರ್ಕಾರಗಳನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹನ್ನೆರಡನೇ ಅಧಿವೇಶನ ಅಭಿನಂದಿಸುತ್ತದೆ. ಸಿ.ಪಿ.ಐ. (ಎಂ) ಮತ್ತು ಎಡ ಶಕ್ತಿಗಳ ನೇತೃತ್ವದಲ್ಲಿ ಜನತೆ ನಡೆಸಿದ ಧೀರ್ಘ ಕಾಲದ ಹೋರಾಟದ ಫಲವಾಗಿ ಎಡರಂಗ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿವೆ. ಇವುಗಳ ಅಸ್ತಿತ್ವವೇ ಈ ಸರ್ಕಾರಗಳನ್ನು ಉರುಳಿಸಲು ಯತ್ನಿಸುತ್ತಿರುವ ಕೇಂದ್ರ ಸರ್ಕಾರ ಮತ್ತು ಎಡರಂಗ ಸರ್ಕಾರಗಳ ನಡವಿನ ನಿರಂತರ ಘರ್ಷಣೆಯನ್ನು ಗುರುತಿಸುತ್ತದೆ. ಕೇಂದ್ರ ಸರ್ಕಾರವು ಪಕ್ಷಪಾತ ನೀತಿಯನ್ನು ಅನುಸರಿಸಿದಾಗ್ಯೂ ಎಡರಂಗ ಸರ್ಕಾರಗಳು ಸರ್ವಾಧಿಕಾರದ ವಿರುದ್ಧದ ಹೋರಾಟದ ರೂವಾರಿಯಾಗಿರುವುದಲ್ಲದೆ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ಅಭೇದ್ಯ ಕೋಟೆಯಾಗಿ ಮೂಡಿ ಬಂದಿವೆ.

ಕೇಂದ್ರ ಸರ್ಕಾರದ ವಿರೋಧದ ತೀವ್ರತೆಯ ನಡುವೆಯೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂರಕ್ಷಿಸುವ ನೀತಿಯನ್ನು ಜಾರಿಗೊಳಿಸಿರುವುದು ಮತ್ತು ಜನತೆಯ ಆರ್ಥಿಕ ಹಿತಾಸಕ್ತಿಗಳನ್ನು ರಾಷ್ಟ್ರದಲ್ಲಿ ವರ್ಗ ಹೋರಾಟದ ಒಂದು ಮಹತ್ತರ ಮಜಲನ್ನು ಪ್ರತಿನಿಧಿಸುತ್ತದೆ. ಬಂಡವಾಳಶಾಹಿ ಜಮೀನ್ದಾರಿ ವ್ಯವಸ್ಥೆಯ ಎಲ್ಲಾ ರೀತಿಯ ಬಿಕ್ಕಟ್ಟಿನ ನಡುವೆ ಈ ಎಡರಂಗ ಸರ್ಕಾರಗಳು ಜನತೆಯ ನಾಗರೀಕ ಹಕ್ಕುಗಳು, ಇನ್ನಿತರ ಹಕ್ಕುಗಳನ್ನು ರಕ್ಷಿಸುವಲ್ಲಿ ಸಫಲವಾಗಿವೆ.

ಈ ಸರ್ಕಾರಗಳ, ಸಾಧನೆಗಳು ನಿರಂತರ ಚಟುವಟಿಕೆಗಳು ದೇಶದಲ್ಲಿನ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬಲವರ್ಧನೆಗೆ ಶಕ್ತಿಯ ಮೂಲವಾಗಿದೆ. ಜನತಾ ಚಳುವಳಿಗಳ ವಿರುದ್ಧ ದಬ್ಬಾಳಿಕೆಯ ಕಾನೂನುಗಳನ್ನು ಬಳಸಲು ಈ ಸರ್ಕಾರಗಳು ನಿರಾಕರಿಸಿವೆ. ಸಂಘಟಿತ ಶಕ್ತಿ ಮತ್ತು ಹೋರಾಟಗಳ ಮೂಲಕ ವೇತನದಲ್ಲಿ ಮತ್ತು ದುಡಿಯುವವರ ಸ್ಥಿತಿಗತಿಗಳಲ್ಲಿ ಗಮನಾರ್ಹ ಬದಲಾವಣೆಯನ್ನು ಸಾಧಿಸುವಲ್ಲಿ ದುಡಿಯುವ ಜನತೆ ಸಫಲರಾಗಿದ್ದಾರೆ. ಕೇಂದ್ರದ ಪಕ್ಷಪಾತ ನೀತಿಯ ಪರಿಣಾಮವಾಗಿ ಈ ಸರ್ಕಾರಗಳ ಹಣಕಾಸು ಸಂಪನ್ಮೂಲಗಳು ತೀವ್ರಮಿತಿಗೊಳಗಾಗಿದ್ದರೂ ಜನತೆಗೆ ಪರಿಹಾರ ನೀಡಲು ಎಡರಂಗ ಸರ್ಕಾರಗಳು ಕ್ರಮ ಕೈಗೊಂಡಿವೆ.

### ಪರ್ಯಾಯ ಆರ್ಥಿಕ ನೀತಿ

ಪರ್ಯಾಯ ಆರ್ಥಿಕ ನೀತಿಯನ್ನು ಜಾರಿಗೊಳಿಸಿರುವುದನ್ನು ಪಶ್ಚಿಮಬಂಗಾಳ ಸರ್ಕಾರವು ಆಪರೇಷನ್ ಬರ್ಗಾ ಕಾರ್ಯಕ್ರಮದ ಜಾರಿಯಲ್ಲಿ, ಭೂಸುಧಾರಣೆಗಳನ್ನು ಕೈಗೆತ್ತಿಕೊಂಡಿರುವುದರಲ್ಲಿ ನಿಚ್ಚಳವಾಗಿ ಕಾಣಬಹುದು. ಪಂಚಾಯತ್ ವ್ಯವಸ್ಥೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೆಲಸಮಾಡುವಂತೆ ಸಹಾಯ ನೀಡುತ್ತಿರುವುದರಲ್ಲಿಯೂ ಕಾಣಬಹುದು. ಈ ಸರ್ಕಾರಗಳು ಬಹುಸಂಖ್ಯಾತ ಜನತೆಗೆ ವಿದ್ಯಾಭ್ಯಾಸವನ್ನು ವಿಸ್ತರಿಸುವಲ್ಲಿ ಗಮನಾರ್ಹ ಕ್ರಮಗಳನ್ನು ಕೈಗೊಂಡಿವೆ. ಗುಡ್ಡಗಾಡು ಜನಾಂಗದ ಪ್ರಶ್ನೆಯನ್ನು ತ್ರಿಪುರಾ ಸರ್ಕಾರ ಹೇಗೆ ನಿಭಾಯಿಸುತ್ತಿದೆ ಎಂಬುದು ಇಂತಹ ಮುಖ್ಯಪ್ರಶ್ನೆಗೆ ಎಡ ದೃಷ್ಟಿಕೋನ ಮತ್ತು ಬೂರ್ಜ್ವಾ ಭೂಮಾಲೀಕ ದೃಷ್ಟಿಕೋನಗಳ ನಡುವಿನ ವ್ಯತ್ಯಾಸವನ್ನು ಎತ್ತಿತೋರಿಸುತ್ತದೆ. ಎಡರಂಗ ಸರ್ಕಾರಗಳು, ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರ, ಸಂಪನ್ಮೂಲಗಳು ಸಿಗಬೇಕೆಂಬ ಹೋರಾಟದ ಮುಂಚೂಣಿಯಲ್ಲಿವೆ. ಈ ಸರ್ಕಾರಗಳು ಛಿದ್ರಕಾರಿ ಮತ್ತು ಮತಾಂಧ ಶಕ್ತಿಗಳ ವಿರುದ್ಧ ನಿರಂತರವಾಗಿ ಸ್ಥಿರವಾದ ನಿಲುವನ್ನು ತೆಗೆದುಕೊಂಡಿವೆ. ಮತೀಯ ಗಲಭೆಗಳು ತಲೆದೋರದಂತೆ ಆರಂಭದಲ್ಲಿಯೇ ಚಿವುಟಿಹಾಕಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿವೆ ಮತ್ತು ಪರಿಶಿಷ್ಠ ಜಾತಿ ಸ್ತ್ರೀಯರು ಮತ್ತು ಗ್ರಾಮಾಂತರ ಬಡಜನರ ಮೇಲೆ ದಬ್ಬಾಳಿಕೆಗಳನ್ನು ತಪ್ಪಿಸಿವೆ.

### ಎಡರಂಗ ಸರ್ಕಾರಗಳ ರಕ್ಷಣೆಗೆ ಕರೆ

ಆದಾಗ್ಯೂ ಈ ಸರ್ಕಾರಗಳ ವಿರುದ್ಧ ಸೇಡಿನ ನೀತಿಯನ್ನು ಕೇಂದ್ರ ಸರ್ಕಾರವು ನಿರಂತರವಾಗಿ ಮುಂದುವರಿಸುತ್ತಿದೆ. ಎಡರಂಗ ಸರ್ಕಾರಗಳ ಮೇಲಿನ ಧಾಳಿಯು ದೇಶದ ಎಡ ಮತ್ತು ಪ್ರಜಾ ಸತ್ತಾತ್ಮಕ ಚಳುವಳಿಯ ಮೇಲಿನ ಧಾಳಿಯ ಭಾಗವಾಗಿರುವುದರಿಂದ, ಈ ಸರ್ಕಾರಗಳ ರಕ್ಷಣೆಗಾಗಿ ಸೆಟೆದು ನಿಲ್ಲುವುದು ಭಾರತದ ಜನತೆಯ ಪ್ರಧಾನ ಕರ್ತವ್ಯವಾಗಿದೆ. ದುಡಿಯುವ ಜನತೆಯಿಂದ ಕಾಂಗ್ರೆಸ್ (ಐ) ದೂರವಾಗುತ್ತಾ, ಈ ಧಾಳಿಯೂ ತೀವ್ರವಾಗುತ್ತದೆ. ಜನತೆಯ ಮೂಲಭೂತ ಸಮಸ್ಯೆಗಳ ಪರಿಹಾರದಲ್ಲಿ ಕೇಂದ್ರ ಸರ್ಕಾರದ ವೈಫಲ್ಯ ಈ ಧಾಳಿಗಳನ್ನೆಸಗುವಲ್ಲಿ ವಿವೇಚನಾರಹಿತವನ್ನಾಗಿ ಮಾಡುತ್ತದೆ.

ಪ್ರಜಾಪ್ರಭುತ್ವದ ಕಾವಲುಠಾಣೆಗಳಾದ ಈ ಸರ್ಕಾರಗಳನ್ನು ರಕ್ಷಿಸಲು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ತಮ್ಮೆಲ್ಲ ಶಕ್ತಿಯನ್ನು ಕ್ರೋಡಿಕರಿಸಬೇಕೆಂದು ಹನ್ನೆರಡನೇ ಕಾಂಗ್ರೆಸ್ ಕರೆನೀಡುತ್ತದೆ. ಈ ಎರಡು ಸರ್ಕಾರಗಳನ್ನು ಕ್ರೋಡಿಕರಿಸಿಕೊಳ್ಳಲು ಮತ್ತು ಬೂರ್ಜ್ವ ಭೂಮಾಲೀಕ ಸರ್ಕಾರದ ದಬ್ಬಾಳಿಕೆಯಿಂದ ರಕ್ಷಿಸಲು ತೆಗೆದುಕೊಳ್ಳುವ ಪ್ರತಿಯೊಂದು ಕ್ರಮವೂ ಎಡ ಮತ್ತು ಪ್ರಜಾಪ್ರಭುತ್ವ ವಿಚಾರದೆಡೆಗೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸಲು ನಡೆಸುವ ಹೋರಾಟಕ್ಕೆ ಸಹಕಾರಿಯಾಗುತ್ತದೆ.

# ಅಸ್ಸಾಂ ಕುರಿತ ನಿರ್ಣಯ

ಇತ್ತೀಚೆಗೆ ನಡೆದ ಚುನಾವಣೆಗಳ ಫಲಿತಾಂಶ ಆರು ವರ್ಷ ಕಾಲ ಚಳುವಳಿ ನಡೆಸಿದ ನಾಯಕರುಗಳ ರಾಜಕೀಯ ಪಕ್ಷವಾದ ಅಸ್ಸಾಂ ಗಣ ಪರಿಷದ್ ಪರವಾಯಿತು ಎಂಬುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೆ ಅಧಿವೇಶನ ಗಮನಕ್ಕೆ ತೆಗೆದುಕೊಳ್ಳುತ್ತದೆ. ಈ ಹೊಸ ಪಕ್ಷ, ಅಸ್ಥಿತ್ವಕ್ಕೆ ಬಂದ ಕೆಲವೇ ವಾರಗಳಲ್ಲಿ ಚುನಾವಣೆಯಲ್ಲಿ ಅದು ಗಳಿಸಿದ ಜಯ ಅಸ್ಸಾಂ ಒಪ್ಪಂದದಫಲಿತಾಂಶಗಳು. ಸ್ವಾತಂತ್ರ್ಯ ಬಂದ ನಂತರದ 36 ವರ್ಷಗಳ ಕಾಲ ಅವಿಚ್ಛಿನ್ನವಾಗಿ ಅಸ್ಸಾಂನಲ್ಲಿ ರಾಜ್ಯಭಾರ ಮಾಡಿದ ಕಾಂಗ್ರೆಸ್ (ಐ) ಚುನಾವಣೆಯಲ್ಲಿ ಗಂಭೀರವಾದ ಹಿನ್ನೆಡೆಯನ್ನು ಅನುಭವಿಸಿರುವುದನ್ನು ಕೂಡ ಪಕ್ಷದ ಅಧಿವೇಶನ ಗಮನಕ್ಕೆ ತೆಗೆದುಕೊಳ್ಳುತ್ತದೆ. ಅಸ್ಸಾಂ ಗಣ ಪರಿಷದ್‌ನಂತೆ ಕಾಂಗ್ರೆಸ್ (ಐ) ಕೂಡ ಅಸ್ಸಾಂ ಒಪ್ಪಂದವನ್ನು ಮುಖ್ಯ ಘೋಷಣೆಯನ್ನಾಗಿ ಮಾಡಿ ಕೊಂಡಿತ್ತು. ಆದರೆ ಒಪ್ಪಂದವು ಪರಿಷದ್‌ಗೆ ದೊಡ್ಡ ಜಯವನ್ನು ತಂದುಕೊಟ್ಟರೆ ಹಿಂದಿನ ಆಡಳಿತ ಪಕ್ಷಕ್ಕೆ ಅಪಮಾನಕರವಾದ ಸೋಲನ್ನು ನೀಡಿತು. ಅಸ್ಸಾಂ ಸಮಸ್ಯೆಯನ್ನು ಬಗೆ ಹರಿಸುವ ಹೆಸರಿನಲ್ಲಿ ಅಲ್ಪ ಸಂಖ್ಯಾತರ ವಿರುದ್ಧ ನ್ಯಾಯ ಸಮ್ಮತವಲ್ಲದ ಪಕ್ಷಪಾತ ನೀತಿಯ ಮತ್ತು ಪ್ರಜಾಸತ್ತಾತ್ಮಕ ವಿರೋಧಿ ನಿಲುವನ್ನು ಕಾಂಗ್ರೆಸ್ (ಐ) ತೆಗೆದುಕೊಂಡಿದ್ದರಿಂದಾಗಿ ಭಾರಿ ಬೆಲೆಯನ್ನು ನೀಡಬೇಕಾಯಿತು.

ಚುನಾವಣೆಯ ಮತ್ತೊಂದು ಬೆಳವಣಿಗೆಯೆಂದರೆ ಒಪ್ಪಂದ ವಿರೋಧೀ ವೇದಿಕೆ ಹಾಗೂ ಅಲ್ಪ ಸಂಖ್ಯಾತರ ರಾಜಕೀಯ ಪಕ್ಷವಾಗಿ ಅಲ್ಪ ಸಂಖ್ಯಾತರ ಸಂಯುಕ್ತ ರಂಗ ರಾಜ್ಯ ವಿಧಾನ ಸಭೆಯಲ್ಲಿ ಗಮನಾರ್ಹ ಶಕ್ತಿಯಾಗಿ ಮೂಡಿ ಬಂದಿರುವುದು. ರಾಜೀವ್‌ಗಾಂಧಿ ಸರ್ಕಾರವು ಈ ಒಪ್ಪಂದದ ಮೂಲಕ ಸರ್ಕಾರದ ಮುದ್ರೆಯನ್ನೊತ್ತಿದ ಛಿದ್ರಕಾರಿ ದಾರಿಯ ಬೆಳವಣಿಗೆಯನ್ನು ಮತ್ತಷ್ಟು ಬಲಗೊಳಿಸಿದೆ.

## ಸಿ. ಪಿ. ಐ. (ಎಂ) ಎಚ್ಚರಿಕೆ

ಈ ಚುನಾವಣೆಗಳು, ಬಹು ಸಂಖ್ಯಾತ, ಅಲ್ಪ ಸಂಖ್ಯಾತ ಜನಾಂಗಗಳ ಆಧಾರದ ಪಕ್ಷಗಳು, ಗುಂಪುಗಳು ಹಾಗೂ ಮತೀಯ ಗುಂಪುಗಳು ರಾಜ್ಯದ ನೀತಿ ನಿರೂಪಣೆಯ ಮುಂಚೂಣಿ ತಂದಿದ್ದು, ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಇಡಿಯಾಗಿ ಸಂಪೂರ್ಣವಾಗಿ ಹಿಂದಕ್ಕೆ ತಳ್ಳಿಹಾಕುವುದರೊಂದಿಗೆ ಕೆಲವನ್ನು ಪೂರ್ತಿ ಅಳಿಸಿಹಾಕಿದೆ. ಈಶಾನ್ಯ ಭಾರತದಲ್ಲಿ ಸಕ್ರಿಯವಾಗಿರುವ ಸಾಮ್ರಾಜ್ಯಶಾಹಿ ಪ್ರೇರಿತ ಸಂಘ ಸಂಸ್ಥೆಗಳು ರಾಜಕೀಯ ಶಕ್ತಿಗಳ ಈ ಧೃವೀಕರಣದ ಲಾಭವನ್ನು ಪಡೆಯಬಹುದೆಂದು ಸಿ. ಪಿ. ಐ (ಎಂ) ಎಚ್ಚರಿಸುತ್ತದೆ.

ಗಣ ಪರಿಷದ್‌ನ ಮಂತ್ರಿ ಮಂಡಲವು ಈಗಾಗಲೇ ಅಸ್ಥಿತ್ವಕ್ಕೆ ಬಂದಿದೆ. ಸರ್ಕಾರ ಹಾಗೂ ಪರಿಷದ್‌ನ ನಾಯಕರುಗಳು ಶಾಂತಿ ಮತ್ತು ಪರಸ್ಪರ ಸಹಕಾರಕ್ಕೆ ಪುನಃ ಪುನಃ ಮನವಿ ಮಾಡಿಕೊಂಡಿರುವುವುದನ್ನು ಮತ್ತು ಅಲ್ಪಸಂಖ್ಯಾತರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮಾಡುವುದಾಗಿ ಭರವಸೆ ನೀಡಿರುವುದನ್ನು ಗಮನಕ್ಕೆ ತೆಗೆದುಕೊಂಡು ಇಂದು ಅಸ್ಸಾಂ ಪರಿಸ್ಥಿತಿ ಬಯಸುವಂತಹ ದೃಡ ನಿರ್ಧಾರದೊಂದಿಗೆ ಹೊಸ ಸರ್ಕಾರವು ಈ ಭರವಸೆಗಳನ್ನು ಜಾರಿಗೊಳಿಸುತ್ತದೆಂದು ಪಕ್ಷದ ಅಧಿವೇಶನ ಆಶಿಸುತ್ತದೆ. ಹೊಸ ಸರ್ಕಾರವನ್ನು ಶಾಂತಿ ಮತ್ತು ಪರಸ್ಪರ ಸ್ನೇಹವನ್ನು ಕಾಪಾಡಿಕೊಂಡು ಬರುವ ಮತ್ತು ಜನಸಮೂಹಗಳ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುವ ಸಾಧನೆಗಳ ಆಧಾರದಲ್ಲಿ ದೇಶದ ಜನತೆ ಅಳೆಯುತ್ತದೆ.

ನಿರಂತರವಾಗಿ ಸಂಕಷ್ಟಕ್ಕೊಳಗಾದ ಜನತೆಗೆ ಪರಿಹಾರ ನೀಡುವ, ಶೇಖಡ 40 ರಷ್ಟಿರುವ ಅಲ್ಪಸಂಖ್ಯಾತರನ್ನೂ ಒಳಗೊಂಡಂತೆ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮಾಡುವ, ಮತ್ತು ಬಹು ಬಾಷಾ ರಾಜ್ಯವಾಗಿರುವ ಅಸ್ಸಾಂನಲ್ಲಿ ಎಲ್ಲ ವಿಭಾಗಗಳ ನಡುವೆ ಶಾಂತಿ ಮತ್ತು ಸ್ನೇಹಪರ ಸಂಬಂಧಗಳನ್ನು ಪುನರ್ ಸ್ಥಾಪಿಸುವಲ್ಲಿ ಸರ್ಕಾರ ಕೈಗೊಳ್ಳುವ ಎಲ್ಲ ಕ್ರಮಗಳಿಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಹಕಾರ ನೀಡುತ್ತದೆ.

## ಮರುಕಳಿಸುತ್ತಿರುವ ಹಿಂಸೆ

ಅದೇ ಸಮಯದಲ್ಲಿ ಅಸ್ಸಾಂ ಗಣ ಪರಿಷದ್‌ನ ರಾಜಕೀಯ ವಿರೋಧಿಗಳ ಮೇಲೆ ನಡೆಯುತ್ತಿರುವ ಅಸಂಖ್ಯಾತ ಹಲ್ಲೆಗಳನ್ನು ಅಧಿವೇಶನ ತೀವ್ರವಾಗಿ ಖಂಡಿಸುತ್ತದೆ. ಸಿ. ಪಿ. ಐ. (ಎಂ) ಸದಸ್ಯರು ಮತ್ತು ಬೆಂಬಲಿಗರ ಪ್ರಾಣ ಮತ್ತು ಆಸ್ತಿಯ ಮೇಲೆ ಗಂಭೀರವಾದ ಧಾಳಿಗಳು ನಡೆದಿದ್ದು ಪಕ್ಷದ ಸದಸ್ಯನೊಬ್ಬನನ್ನು ತುಂಡು ತುಂಡು ಮಾಡಿ ಸಾಯಿಸಲಾಗಿದೆ.

ಶಾಂತಿಗಾಗಿ ಈ ನಾಯಕರುಗಳು ಮನವಿಮಾಡಿಕೊಳ್ಳುತ್ತಿದ್ದರೂ ಚುನಾವಣೆ

ನಂತರ ಮರುಕಳಿಸುತ್ತಿರುವ ಹಿಂಸೆಯ ವಿರುದ್ಧ ತೀವ್ರ ಪ್ರತಿಭಟನೆಯನ್ನು ಅಧಿವೇಶನ ದಾಖಲುಗೊಳಿಸುತ್ತದೆ. ಸ್ವೇಚ್ಛಾಚಾರದ ಪರಿಸ್ಥಿತಿಯ ವಿರುದ್ಧ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಯುತ್ತಿರುವ ಧಾಳಿಯ ವಿರುದ್ಧ ಅಸ್ಸಾಂ ಸರ್ಕಾರ ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧಿವೇಶನ ಆಗ್ರಹಪಡಿಸುತ್ತದೆ.

ಚುನಾವಣೆಗಳನ್ನು ಕುರಿತಂತೆ ಕೆಲವು ಕೇಂದ್ರಗಳಲ್ಲಿ ಶೇಖಡಾ 100 ಮತದಾನವಾಗಿರುವುದು, ಚುನಾವಣಾ ಕ್ಷೇತ್ರದಲ್ಲಿ ಒಟ್ಟಾಗಿ ಶೇಖಡ 99.5 ಮತದಾನ ನಡೆದಿರುವುದು, ಮತಎಣಿಕೆಯಲ್ಲಿ ಆದ ತೀವ್ರ ವಿಳಂಬ ಮುಂತಾದವುಗಳು ಅಸ್ಸಾಂನಲ್ಲಿ ಚುನಾವಣೆಯನ್ನು ಸಂಪೂರ್ಣ ನ್ಯಾಯಯುತವಾಗಿ ನಡೆಸಲು ಚುನಾವಣಾ ಆಯೋಗ ವಿಫಲವಾಗಿದೆಯೆಂಬುದನ್ನು ಸೂಚಿಸುತ್ತದೆ. ಎರಡು ದಶಲಕ್ಷ ಜನರಿಗೆ ಮತದಾನದ ಹಕ್ಕನ್ನು ನಿರಾಕರಿಸಿರುವುದರಲ್ಲಿ ಮತ್ತು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಚುನಾವಣಾ ಆಯೋಗವು ನ್ಯಾಯಸಮ್ಮತವಲ್ಲದ ಮಾರ್ಗವನ್ನು ಅನುಸರಿಸಿದೆ. ಕಳೆದ ಚುನಾವಣೆಯಲ್ಲೂ ಆಯೋಗದ ಕಾರ್ಯದಕ್ಷತೆ ಇದಕ್ಕಿಂಥ ಭಿನ್ನವಾಗಿರಲಿಲ್ಲ. ಚುನಾವಣಾ ವ್ಯವಸ್ಥೆಯಲ್ಲಿ ಜನತೆಯನಂಬಿಕೆಯನ್ನುಸಡಿಲಗೊಳಿಸುವ, ದೇಶವನ್ನು ಅಭದ್ರಗೊಳಿಸಲು ಯತ್ನಿಸುತ್ತಿರುವ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ಈ ಸಂಗತಿ, ಪಕ್ಷದ ಅಧಿವೇಶನದ ಪ್ರಕಾರ ಗಂಭೀರ ವಿಷಯವಾಗಿದೆ.

## ಪಕ್ಷದ ಅಸ್ಸಾಂ ಘಟಕಕ್ಕೆ ಅಭಿನಂದನೆ

ಅಲ್ಪ ಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸುವ ಅಸ್ಸಾಂ ಒಪ್ಪಂದದ ಅಂಶವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವಿರೋಧಿಸಿದೆಯಲ್ಲದೆ ಮೊದಲಿನಿಂದಲೂ ದೇಶದ ಐಕ್ಯತೆಯನ್ನು ರಕ್ಷಿಸುತ್ತಾ ಬಂದಿದೆ. ರಾಷ್ಟ್ರೀಯ ಐಕ್ಯತೆಗೆ ಈ ಅಪಾಯ ಎಲ್ಲಿಯವರೆಗೂ ಮುಂದುವರೆಯುತ್ತದೆಯೋ, ಅಲ್ಪಸಂಖ್ಯಾತರ ನ್ಯಾಯಬದ್ಧ ಹಕ್ಕುಗಳ ದಮನ ಎಲ್ಲಿಯವರೆಗೂ ಕೊನೆಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ನಿರಂತರವಾಗಿ ಪಕ್ಷ ಹೋರಾಡುತ್ತದೆ.

ಅಸ್ಸಾಂನಲ್ಲಿನ ಪರಿಸ್ಥಿತಿಯನ್ನು ದೀರೋದಾತ್ತವಾಗಿ ಎದುರಿಸಿದ ಪಕ್ಷದ ಅಸ್ಸಾಂ ಘಟಕವನ್ನು ಕಾಂಗ್ರೆಸ್ ಅಭಿನಂದಿಸುತ್ತದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಯಾವಾಗಲೂ ದೇಶದ ಐಕ್ಯತೆಯ ಧ್ವಜವನ್ನು ಅಸ್ಸಾಂ ಹಾಗೂ ಅಲ್ಲಿನ ಜನತೆಯ ಐಕ್ಯತೆಯನ್ನು ಎತ್ತಿ ಹಿಡಿದಿದೆ. ಈ ಉದ್ದೇಶ ಸಾಧನೆಯಲ್ಲಿ ತನ್ನ ಅತ್ಯಮೂಲ್ಯ ಕಾರ್ಯಕರ್ತರುಗಳನ್ನು ಕಳೆದುಕೊಂಡಿದೆ. ರಾಷ್ಟ್ರೀಯ ಸಮಗ್ರತೆಗಾಗಿ, ಜನತೆಯ ಐಕ್ಯತೆಗಾಗಿ ಪ್ರಜಾಪ್ರಭುತ್ವಕ್ಕಾಗಿ ನಡೆಯುವ ಹೋರಾಟದಲ್ಲಿ ಎಂದಿಗೂ ಹಿಂದೆ ಸರಿಯುವುದಿಲ್ಲವೆಂದು ಪಕ್ಷದ ಅಧಿವೇಶನ ಪ್ರತಿಜ್ಞೆ ಮಾಡುತ್ತದೆ.

# ಕಂಪೂಚಿಯಾ ಜನತಾ ಕ್ರಾಂತಿಕಾರಿ ಪಕ್ಷದ ಸಂದೇಶ

ಕಂಪೂಚಿಯಾ ಜನತಾ ಕ್ರಾಂತಿಕಾರಿ ಪಕ್ಷದ ಪರವಾಗಿ, ಕಂಪೂಚಿಯಾ ಜನತಾ ಗಣರಾಜ್ಯದ ಕಾರ್ಮಿಕ ವರ್ಗ ಹಾಗೂ ಜನತೆಯ ಪರವಾಗಿ ನಾವು ಸಿ. ಪಿ. ಐ. (ಎಂ.)ನ ಹನ್ನೆರಡನೇ ಅಧಿವೇಶನಕ್ಕೆ ಮತ್ತು ಈ ಅಧಿವೇಶನದ ಮೂಲಕ ಭಾರತೀಯ ಕಾರ್ಮಿಕ ವರ್ಗ ಹಾಗೂ ಜನತೆಗೆ ನಮ್ಮ ಅತ್ಯಂತ ಹೃತ್ಪೂರ್ವಕ ಹಾಗೂ ಸೋದರ ಅಭಿನಂದನೆಗಳನ್ನು ಕಳಿಸಬಯಸುತ್ತೇವೆ. ತಮ್ಮ ಪಾರಂಪರಿತ ಕಷ್ಟಸಾಧ್ಯ ಹೋರಾಟದಿಂದ ಹಾಗೂ ಸೃಜನಾತ್ಮಕ ಪ್ರಯತ್ನಗಳ ಶ್ರಮದಿಂದ ಭಾರತೀಯ ಕಾರ್ಮಿಕ ವರ್ಗ ಮತ್ತು ಜನತೆ ತಮ್ಮ ದೇಶವನ್ನು ರಕ್ಷಿಸುವಲ್ಲಿ ಹಾಗೂ ಕಟ್ಟುವಲ್ಲಿ ಮಹಾನ್ ಸಾಧನೆ ಪಡೆದಿದ್ದಾರೆ ಹಾಗೂ ಆ ಮೂಲಕ ಭಾರತವನ್ನು ದಿನೇ ದಿನೇ ಆಧುನಿಕ ಹಾಗೂ ಅಭಿವೃದ್ಧಿ ಹೊಂದಿದ ಉದ್ಯಮಗಳು ಹಾಗೂ ಕೃಷಿ ಕ್ಷೇತ್ರವಿರುವ ಒಂದು ದೇಶವನ್ನಾಗಿ ಮಾಡಿದ್ದಾರೆ. ಭಾರತೀಯ ಪ್ರಗತಿಶೀಲ ಶಕ್ತಿಗಳ ಜತೆಗೆ ನಿಮ್ಮ ಪಕ್ಷ ಸದಾ ಶಾಂತಿಯ ಪರವಾದ, ಸಾಮ್ರಾಜ್ಯಶಾಹಿ, ನವವಸಾಹತುಶಾಹಿ, ವಿಸ್ತರಣಾವಾದ, ಪ್ರಾಬಲ್ಯವಾದ, ಝಿಯೋನಿಸಂ, ವರ್ಣಭೇದದ ವಿರುದ್ಧವಾದ ಹಾಗೂ ವಿಮೋಚನಾ ಆಂದೋಲನಗಳಿಗೆ ಬೆಂಬಲ ನೀಡುವ ಒಂದು ವಿದೇಶಾಂಗ ಧೋರಣೆಗಾಗಿ ಹೋರಾಟ ನಡೆಸಿದೆ. ಅಲಿಪ್ತ ಆಂದೋಲನದ ಅಧ್ಯಕ್ಷನಾಗಿ ಭಾರತ ಸಾರಭೂತವಾಗಿ ಏಷ್ಯಾ ಹಾಗೂ ಜಗತ್ತಿನಲ್ಲಿ ಶಾಂತಿ ರಕ್ಷಣೆಗೆ ತನ್ನ ಕಾಣಿಕೆ ನೀಡುತ್ತಿದೆ. ಈ ಸಂದರ್ಭವನ್ನು ಬಳಸಿಕೊಂಡು ನಾವು ಕಂಪೂಚಿಯಾ ಜನತಾ ಗಣರಾಜ್ಯದ ಜನತೆಗೆ ಸಾಮ್ರಾಜ್ಯಶಾಹಿಯ ಹಾಗೂ ಅಂತರಾಷ್ಟ್ರೀಯ ಪ್ರತಿಗಾಮಿಗಳ ವಿರುದ್ಧ ನಮ್ಮ ಮಾತೃಭೂಮಿಯನ್ನು ರಕ್ಷಿಸುವ ಹಾಗೂ ಕಟ್ಟುವ ಹೋರಾಟದಲ್ಲಿ ದೃಢ ಬೆಂಬಲ ನೀಡಿದುದಕ್ಕಾಗಿ ಸಿ. ಪಿ. ಐ. (ಎಂ.) ಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ.

ಸ್ವಾಧೀನತೆಗಾಗಿ, ಹಿಂದೂ ಮಹಾಸಾಗರದಲ್ಲಿ ಶಾಂತಿ ಹಾಗೂ ಪರಮಾಣು ಮುಕ್ತವಲಯಕ್ಕಾಗಿ, ಶಸ್ತ್ರಾಸ್ತ್ರ ಪೈಪೋಟಿ ವಿರುದ್ಧ, ಪರಮಾಣು ಯುದ್ಧ ತಡೆಯುವಲ್ಲಿ, ಈ ಪ್ರದೇಶದಲ್ಲಿ ಮತ್ತು ಜಗತ್ತಿನಲ್ಲಿ ಶಾಂತಿಗಾಗಿ ಹೋರಾಟದಲ್ಲಿ ನಿಮಗೆ ಹೊಸ ಮಹಾನ್ ಯಶಸ್ಸು ದೊರೆಯಲೆಂದು ಹಾರೈಸುತ್ತೇವೆ.

ಸಿ. ಪಿ. ಐ. (ಎಂ.) ನ ಹನ್ನೆರಡನೇ ಅಧಿವೇಶನ ಯಶಸ್ವಿಯಾಗಲಿ.

# ಪಂಜಾಬ್ ಪರಿಸ್ಥಿತಿ

ಪಂಜಾಬ್‌ನ ಸಿಖ್ ಪ್ರತ್ಯೇಕತಾವಾದಿಗಳ ವಿಚ್ಛಿದ್ರಕಾರಿ, ಕೊಲೆಪಾತಕ ಕೃತ್ಯಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೇ ಕಾಂಗ್ರೆಸ್ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ. ಅವರುಗಳು ತಮ್ಮ ರಾಷ್ಟ್ರ ವಿರೋಧಿ ಕೃತ್ಯಗಳನ್ನು ಗುರುದ್ವಾರಗಳ ಒಳಗಿಂದ ನಡೆಸುತ್ತಿದ್ದು ವಿಧ್ವಂಸಕಾರಿ ಚಟುವಟಿಕೆಗಳಲ್ಲಿ ಪಾಕೀಸ್ಥಾನದ ತರಬೇತಿ ಶಿಬಿರಗಳಲ್ಲಿ ತರಬೇತಿ ಪಡೆದ ತರುಣರು ನಿರಂತರವಾಗಿ ಅವರ ಪಡೆಯನ್ನು ತುಂಬುತ್ತಿದ್ದಾರೆ. ಅಮೆರಿಕ, ಕೆನಡಾ ಮತ್ತು ಬ್ರಿಟನ್‌ಗಳ ಆಳುವ ವರ್ಗದವರಿಂದ ಪ್ರತ್ಯಕ್ಷ ಬೆಂಬಲವನ್ನು ಅವರು ಪಡೆಯುತ್ತಿದ್ದಾರೆ. ಚುನಾವಣೆಗಳಲ್ಲಿ ಪಂಜಾಬ್ ಒಪ್ಪಂದದ ಬೇಷರತ್ ಒಪ್ಪಿಗೆ ಮತ್ತು ಅದರ ಜಾರಿಗೊಳಿಸುವಿಕೆಯನ್ನು ಮುಖ್ಯ ಪ್ರಶ್ನೆಯನ್ನಾಗಿ ಮುಂದೆ ಮಾಡಿದ್ದ ಅಕಾಲಿ ಪಕ್ಷ ತನ್ನನ್ನು ಅಧಿಕಾರಕ್ಕೆ ತಂದ ಜನತೆಯನ್ನು ಅಣಿನೆರೆಸಿ ರಾಷ್ಟ್ರವಿರೋಧಿ ಚಟುವಟಿಕೆಯನ್ನು ರಾಜಕೀಯವಾಗಿ ಎದುರಿಸಲು ಹಿಂದೆಗೆಯುತ್ತಿದೆ. ಬದಲಾಗಿ ಅಕಾಲಿ ಪಕ್ಷವು ಸಿಖ್ ಭಾವನೆಯ ಬಂದಿಯಾಗಿದ್ದು ತೀವ್ರಗಾಮಿಗಳು ಹರತಾಳ ಮುಷ್ಕರಗಳಿಗೆ ಕರೆ ನೀಡಿದಾಗ ಶಾಲಾ ಕಾಲೇಜುಗಳನ್ನು ಮುಚ್ಚುವುದರ ಮೂಲಕ ತೀವ್ರಗಾಮಿಗಳ ಜೊತೆ ಪದೇ ಪದೇ ಹೊಂದಾಣಿಕೆ ಮಾಡಿಕೊಳ್ಳುತ್ತಿದೆ.

ಪಂಜಾಬ್ ಒಪ್ಪಂದಕ್ಕೆ ವಿರುದ್ಧವಾಗಿ ಮ್ಯಾಥ್ಯೂ ಆಯೋಗದ ಕಾರ್ಯವ್ಯಾಪ್ತಿಯನ್ನು ಕೇಂದ್ರ ಸರ್ಕಾರವು ಬದಲಾಯಿಸಿರುವುದು ದುರದೃಷ್ಟಕರ. ಪಂಜಾಬ್ ಒಪ್ಪಂದಕ್ಕೆ ಒಳಪಡುವ ಸಲ್ಲದ ವಿಚಾರಗಳ ಮೂಲಕ ಹರ್ಯಾಣ ಜನತೆಯನ್ನು ಎತ್ತಿಕಟ್ಟಲು ಹರ್ಯಾಣ ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಕೇಂದ್ರ ಸರ್ಕಾರ ಅನುವು ಮಾಡಿಕೊಟ್ಟಿದೆ. ಒಪ್ಪಂದದ ಅನ್ವಯ ಜಲ ಮತ್ತು ಪ್ರಾದೇಶಿಕ ವಿವಾದಗಳನ್ನು ಬಗೆಹರಿಸಲು ಇನ್ನೆರಡು ಆಯೋಗಗಳನ್ನು ರಚಿಸಬೇಕಾಗಿದ್ದು ಅವುಗಳನ್ನು ಇನ್ನೂ ಘೋಷಿಸಿಲ್ಲ. ಈ ಅಸ್ಥಿರ ನೀತಿಯು ಸಾಮ್ರಾಜ್ಯಶಾಹಿಗಳ ಮತ್ತು ತೀವ್ರಗಾಮಿಗಳ ಚಟುವಟಿಕೆಗಳಿಗೆ ಇಂಬು ಕೊಡುವುದಲ್ಲದೆ ರಾಷ್ಟ್ರದ ಹಿತಾಸಕ್ತಿಗಳಿಗೆ ಮಾರಕವಾಗಿ ಪರಿಣಮಿಸುತ್ತದೆ.

ಒಪ್ಪಂದವನ್ನು ಧ್ವಂಸಗೊಳಿಸಲು ಪಂಜಾಬ್, ಹರ್ಯಾಣ ಎರಡೂ ರಾಜ್ಯಗಳಲ್ಲೂ ಇನ್ನೂ ಕೆಲವು ವಿರೋಧಿಶಕ್ತಿಗಳು ಕಾರ್ಯಪ್ರವೃತ್ತವಾಗಿರುವುದನ್ನು ಪಕ್ಷದ ಅಧಿವೇಶನ ಗಮನಕ್ಕೆ ತೆಗೆದುಕೊಳ್ಳುತ್ತದೆ. ಸಟ್ಲೇಜ್-ಯಮುನ ಸಂಪರ್ಕ ಕಾಲುವೆಯನ್ನು ಪೂರ್ಣಗೊಳಿಸುವುದರ ವಿರುದ್ಧ ಪಂಜಾಬ್‌ನಲ್ಲಿ ಚಳುವಳಿಯನ್ನು ನಡೆಸಲಾಗುತ್ತಿದೆ. ಹರ್ಯಾಣದಲ್ಲಿ ಲೋಕದಳ ಬಿ. ಜೆ. ಪಿ. ಮತ್ತು ಜನತಾ ಪಕ್ಷಗಳು ಪಂಜಾಬ್ ಒಪ್ಪಂದವು ಹರ್ಯಾಣ ಜನತೆಯ ಹಿತಾಸಕ್ತಿಗಳನ್ನು ಬಲಿಕೊಟ್ಟಿದೆ ಎಂದು ವರ್ಣಿಸುತ್ತಾ ಚಳುವಳಿಯನ್ನು ನಡೆಸುತ್ತಿವೆ.

ಆದ್ದರಿಂದ ತನ್ನ ತೂಗೂಯ್ಯಾಲೆ ನೀತಿಯನ್ನು ಕೈಬಿಟ್ಟು ಪಂಜಾಬ್ ಒಪ್ಪಂದವನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೆರಡನೇ ಅಧಿವೇಶನ ಆಗ್ರಹಪಡಿಸುತ್ತದೆ.

ಅಕಾಲಿ ಸರ್ಕಾರವು ತೀವ್ರಗಾಮಿಗಳ ಚಟುವಟಿಕೆಗಳನ್ನು ಖಂಡಿಸಬೇಕಲ್ಲದೆ ಅವರ ರಾಷ್ಟ್ರವಿರೋಧಿ ಚಟುವಟಿಕೆಗಳ ವಿರುದ್ಧ ಜನತೆಯನ್ನು ಅಣಿನೆರಸುವುದರ ಜೊತೆಗೆ ಅಲ್ಪಸಂಖ್ಯಾತರ ಜೀವ ಮತ್ತು ಆಸ್ತಿಗಳ ರಕ್ಷಣೆ ಮಾಡಬೇಕೆಂದು, ರಾಜಕೀಯ ಚಟುವಟಿಕೆಗಳಿಗೆ ಗುರುದ್ವಾರಗಳನ್ನು ಬಳಸಲು ಅಕಾಲಿ ಸರ್ಕಾರ ಅನುವು ಮಾಡಿಕೊಡಬಾರದೆಂದು ಅಧಿವೇಶನ ಆಗ್ರಹಪಡಿಸುತ್ತದೆ.

ಸಿಖ್ ಮತ್ತು ಹಿಂದೂ ಜಾತೀಯ ಶಕ್ತಿಗಳನ್ನು ವಿರೋಧಿಸುವಂತೆ, ಅಂತೆಯೇ ತೀವ್ರಗಾಮಿ ಹಾಗೂ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟ ನಡೆಸುತ್ತಲೇ ಒಪ್ಪಂದವನ್ನು ಜಾರಿಗೊಳಿಸದಿರುವಂತೆ, ಪಿತೂರಿ ನಡೆಸುತ್ತಿರುವ ಎಲ್ಲ ಶಕ್ತಿಗಳನ್ನು ಬಯಲಿಗೆಳೆಯುವಂತೆ ಮನವಿ ಮಾಡುತ್ತದೆ. ಧರ್ಮ ಹಾಗೂ ಪ್ರಭುತ್ವವ್ಯವಸ್ಥೆಯನ್ನು ಬೇರ್ಪಡಿಸುವ ಹಾಗೂ ಜಾತ್ಯಾತೀತ ತತ್ವಗಳ ಆಧಾರದ ಮೇಲೆ ಪಂಜಾಬಿ ಜನತೆಯ ಐಕ್ಯತೆಯನ್ನು ಪುನಃ ಕಟ್ಟಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ಪಂಜಾಬ್‌ನಲ್ಲಿನ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಮನವಿ ಮಾಡುತ್ತದೆ.

ಪ್ರತ್ಯೇಕತಾವಾದಿಗಳ ಸವಾಲನ್ನು ಎದುರಿಸಿ ರಾಷ್ಟ್ರೀಯ ಐಕ್ಯತೆಯ ಬಾವುಟವನ್ನು ಎತ್ತಿಹಿಡಿಯಲು ನಮ್ಮ ಪಕ್ಷದ ಕಾರ್ಯಕರ್ತರು ಮತ್ತು ನಾಯಕರು ನಡೆಸಿರುವ ನಿರಂತರ ಹೋರಾಟವನ್ನು ಹನ್ನೆರಡನೆ ಕಾಂಗ್ರೆಸ್ ಶ್ಲಾಘನೆಯೊಂದಿಗೆ ಗಮನಕ್ಕೆ ತೆಗೆದುಕೊಳ್ಳುತ್ತದೆ.

# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಮೇಲೆ ಅತ್ಯಾಚಾರದ ವಿರುದ್ಧ

ಭಾರತ ಕಮ್ಯುನಿಸ್ಟ್‌ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನ ಪೋಲಿಸರಿಂದ ಮತ್ತು ಮೇಲಿನ, ಕೆಳಗಿನ ಜಾತಿಗಳಿಗೆ ಸೇರಿದ ಭೂಮಾಲಕರು ಹಾಗೂ ಗ್ರಾಮಾಂತರ ಶ್ರೀಮಂತರ ಸಶಸ್ತ್ರ ಗೂಂಡಾಗಳಿಂದ ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಜನಾಂಗಗಳ ಶ್ರಮಜೀವಿಗಳ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ಬಗ್ಗೆ ತನ್ನ ಕ್ರೋಧವನ್ನು ವ್ಯಕ್ತಪಡಿಸುತ್ತದೆ.

ಕಾಂಗ್ರೆಸ್(ಐ) ಆಡಳಿತದ ಭಾರತದಲ್ಲಿ ಹರಿಜನ ಹೆಂಗಸರ ಮೇಲೆ ಸಾಮೂಹಿಕ ಬಲಾತ್ಕಾರ, ಹರಿಜನರ ಆಸ್ತಿಪಾಸ್ತಿಗಳಿಗೆ ಬೆಂಕಿ, ಹರಿಜನರು ಬೆಳೆಸಿದ ಬೆಳೆಗಳ ಬಲಾತ್ಕಾರ ವಶ, ಅವರ ಒಡೆತನದ ಜಮೀನಿನಿಂದ ಒಕ್ಕಲೆಬ್ಬಿಸುವುದು, ಅವರ ಮಕ್ಕಳನ್ನು ಮತ್ತು ಕುಟುಂಬದ ಹಿರಿಯ ಸದಸ್ಯರ ನಿರ್ದಯ ಕೊಲೆ ದಿನನಿತ್ಯದ ಘಟನೆಗಳಾಗಿ ಬಿಟ್ಟಿವೆ. ಹೆಚ್ಚಿನ ಸಂದರ್ಭಗಳಲ್ಲಿ ಸ್ಥಳೀಯ ಪೋಲೀಸರು ನಾಚಿಕೆ ಹೇಸಿಗೆಯಿಲ್ಲದೆ ಗೂಂಡಾಗಳ ಪಕ್ಷ ವಹಿಸಿ ಅಪರಾಧಗಳಿಗೆ ಪ್ರೋತ್ಸಾಹ ನೀಡುತ್ತಾರೆ. ಒಂದೆಡೆ ಅಪರಾಧಿಗಳು ಸಾಮಾನ್ಯವಾಗಿ ಶಿಕ್ಷೆಗೊಳಗಾಗುವುದೇ ಇಲ್ಲವಾದರೆ ಮತ್ತೊಂದೆಡೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿರುದ್ಧ ಅತ್ಯಾಚಾರಗಳನ್ನು ಎರಡು ಕೋಮುಗಳ ನಡುವಿನ ಘರ್ಷಣೆ ಎಂದು ವರ್ಣಿಸಲಾಗುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಲ್ಲಿ ಹೆಚ್ಚಿನವರು ಕೃಷಿ ಕಾರ್ಮಿಕರಾಗಿ ದುಡಿಯುವುದರಿಂದ ಅವರು ಹೆಚ್ಚಿನ ಕೂಲಿಗಾಗಿ, ರಾಜ್ಯಸರಕಾರಗಳು ಸೂಚಿಸಿದ ಕನಿಷ್ಟಕೂಲಿಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸುವ ಹೋರಾಟಗಳು ಸದಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿರುದ್ಧ ಮುಯ್ಯಿಗೊಂದು ಕಾರಣವಾಗುತ್ತದೆ. ಪೋಲೀಸರ ಅಮಾನುಷತೆ ಮತ್ತು ಗೂಂಡಾಪಡೆಗಳ ಲೂಟಿಗೆ ಮಿತಿಯೇ ಇಲ್ಲವಾಗಿದೆ. ಹರಿಜನರು ಭೂಮಾಲಿಕರ ಮತ್ತು ಗ್ರಾಮಾಂತರ ಸಿರಿವಂತರ ರಾಕ್ಷಸೀ ಶೋಷಣೆಗೆ ತಲೆಬಾಗುವಂತೆ ಮಾಡಲು ಅವರ ವಿರುದ್ಧ ಸತತವಾಗಿ ಒಂದು ಭಯೋತ್ಪಾದಕ ಆಡಳಿತವನ್ನು ಹರಿಯಬಿಡಲಾಗುತ್ತಿದೆ.

ಹರಿಜನರ ಮೇಲೆ ಸಾಮಾಜಿಕ ತುಳಿತ ಅವರು ಅವಮಾನದ ಅತೀವ ಕೆಳಮಟ್ಟದ ಜೀವನ ನಡೆಸುವಂತೆ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ಕಮೀಷನರ್ ಪ್ರಕಟಿಸುವ ವಾರ್ಷಿಕ ವರದಿಗಳು ಅವರ ಸಾಮಾಜಿಕ ತೊತ್ತಳದುಳಿತದ ಭಯಾನಕ ಚಿತ್ರ ನೀಡುತ್ತವೆ.

ಪಶ್ಚಿಮಬಂಗಾಳ ಮತ್ತು ತ್ರಿಪುರಾಗಳು ಹರಿಜನರು ಹಾಗೂ ಬುಡಕಟ್ಟು ಜನಗಳ ಮೇಲೆ ಅತ್ಯಾಚಾರ ಘಟನೆಗಳಿಂದ ಮುಕ್ತವಾಗಿವೆ ಹಾಗೂ ಹರಿಜನರ ಮೇಲೆ ಆಕ್ರಮಣ ಮಾಡುವವರ ವಿರುದ್ಧ ಈ ಸರಕಾರಗಳು ಕಠಿಣ ಕ್ರಮ ಕೈಗೊಂಡಿವೆ ಎಂದು ಕೇಂದ್ರಸರಕಾರದ ವರದಿಗಳು ಒಪ್ಪುತ್ತವೆ. ತದ್ವಿರುದ್ಧವಾಗಿ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಕಾಂಗ್ರೆಸ್ಸಿಗರೂ ಕೂಡಾ ಹರಿಜನರ ಮೇಲೆ ಆಕ್ರಮಣ ಮಾಡಿದ ಅಪರಾಧಿಗಳಲ್ಲಿ ಸೇರಿದ್ದಾರೆ ಎಂದು ಕಂಡುಬಂದಿದೆ. ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಪೋಲೀಸ್ ಲಾಕಪ್ ಹರಿಜನರಿಗೆ ಚಿತ್ರಹಿಂಸಾ ಕೇಂದ್ರಗಳಾಗಿ ಬಿಟ್ಟಿವೆ. ಈ ರಾಜ್ಯಗಳ ಪೋಲೀಸ್ ಲಾಕಪ್ಪುಗಳಲ್ಲಿ ಹಲವಾರು ಹರಿಜನರ ಸಾವಿನ ವರದಿಗಳು ಬಂದಿವೆ.

## ಉದ್ಯೋಗದ ಮೀಸಲಾತಿ

ಉದ್ಯೋಗದ ಮೀಸಲಾತಿ ಕಳೆದ ಸುಮಾರು ನಾಲ್ಕು ದಶಕಗಳಿಂದಲೂ ಜಾರಿಯಲ್ಲಿದ್ದರೂ ಈ ದಲಿತ ಜನವಿಭಾಗಗಳ ಪರಿಸ್ಥಿತಿ ಸುಧಾರಿಸಿಲ್ಲ. ಉದ್ಯೋಗದ ಮೀಸಲಾತಿ ವಿದ್ಯಾವಂತ ವಿಭಾಗಕ್ಕೆ ತಮ್ಮ ವಿರುದ್ಧವಾದ ಪಕ್ಷಪಾತದಿಂದ ಪರಿಹಾರ ಪಡೆಯಲು ಅತ್ಯವಶ್ಯ ಸಹಾಯ ನೀಡಿದೆಯಾದರೂ ಇಡೀ ಸಮುದಾಯದ ಮೂಲಭೂತ ಪರಿಸ್ಥಿತಿಗಳಲ್ಲಿ ಯಾವುದೇ ಬದಲಾವಣೆ ಉಂಟುಮಾಡಿಲ್ಲ. ಪರಿಶಿಷ್ಟ ಜಾತಿಗಳು ಹಾಗೂ ಬುಡಕಟ್ಟುಗಳ ಶ್ರಮಜೀವಿಗಳನ್ನು ಭೂರ್ಜ್ವಾ-ಭೂಮಾಲಕ ಧೋರಣೆಗಳ ವಿರುದ್ಧ ಸರ್ವ ಸಾಮಾನ್ಯ ಅಂದೋಲನಕ್ಕೆ ಸೆಳೆಯಲು ತೀವ್ರ ಪ್ರಯತ್ನ ಮಾಡಬೇಕಾಗಿದೆ. ಪಕ್ಷಪಾತ ಮತ್ತು ಶೋಷಣೆಯಿಂದ ಅವರಮುಕ್ತಿಯ ಹೋರಾಟವನ್ನು ಮುನ್ನಡೆಸುವ ದಾರಿ ಇದೊಂದೇ.

ಸಿ.ಪಿ.ಐ. (ಎಂ)ನ ಹನ್ನೆರಡನೇ ಅಧಿವೇಶನ ಹರಿಜನರ ಹಾಗೂ ಬುಡಕಟ್ಟು ಜನರ ಮೇಲಿನ ಅತ್ಯಾಚಾರ ಹಾಗೂ ಸಾಮಾಜಿಕ ದಮನದ ವಿರುದ್ಧ ಮತ್ತು ಭೂಮಾಲಿಕರ ಮತ್ತು ಮೇಲಿನ ಮತ್ತು ಕೆಳಗಿನ ಜಾತಿಗಳ ಹಳ್ಳಿಯ ಶ್ರೀಮಂತರ ಬಾಡಿಗೆ ಗೂಂಡಾಗಳ ಆಕ್ರಮಣದಿಂದ ಪೂರ್ಣ ರಕ್ಷಣೆಗಾಗಿ ಹೋರಾಡಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಹಾಗೂ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡುತ್ತದೆ.

# ನವೀನ ಶಿಕ್ಷಣ ನೀತಿ

ಶೈಕ್ಷಣಿಕ ಕ್ಷೇತ್ರದ ಬಗ್ಗೆ ಕೇಂದ್ರ ಸರಕಾರ ಪ್ರಸ್ತಾಪಿಸುವ ಮಾರ್ಪಾಟುಗಳ ಕುರಿತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಈ ಹನ್ನೆರಡನೇ ಅಧಿವೇಶನವು ಕಟುವಾಗಿ ವಿಮರ್ಶಿಸ ಬಯಸುತ್ತದೆ.

ಈಗಾಗಲೇ ಪ್ರತಿಷ್ಠಿತರ ಸೊತ್ತಾಗಿರುವ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಈ ಮಾರ್ಪಾಟುಗಳು ಎರಡು ನಿರ್ದಿಷ್ಟ ಕವಲುಗಳಾಗಿ ವಿಭಜಿಸುವತ್ತ ಒಯ್ಯುತ್ತದೆ. ಒಂದು ಆಧುನಿಕ ತಂತ್ರಜ್ಞಾನದ ಅವಶ್ಯಕತೆಗಳನ್ನು ಪೂರೈಸಲು ಸಜ್ಜಿತವಾದದ್ದು, ಮತ್ತೊಂದು ಮಿಲಿಯಾಂತರ ಜನರನ್ನು ಅಜ್ಞಾನದಲ್ಲಿ, ಹಿಂದುಳಿದವರನ್ನಾಗಿಯೇ ಕೊಳೆಸುವಂತಹದ್ದು. ಒಂದು ಕಡೆ, ಪ್ರತಿಷ್ಠಿತ ವರ್ಗದವರಿಗಾಗಿ 'ಮಾದರಿ ಶಾಲೆ', ಮತ್ತೊಂದೆಡೆ 'ಉತ್ಕೃಷ್ಟತೆಯ ಕೇಂದ್ರಗಳನ್ನೂ' ಸೃಷ್ಟಿಸಲಾಗುತ್ತಿದ್ದರೆ, ಸಾಮಾನ್ಯ ಜನತೆಗಾಗಿ ಶಾಲಾಮಟ್ಟದಲ್ಲೂ ಸಹ 'ಅನೌಪಚಾರಿಕ ಶಿಕ್ಷಣ ಕ್ರಮ' ಮತ್ತು 'ಮುಕ್ತ ವಿಶ್ವ ವಿದ್ಯಾಲಯ'ಗಳನ್ನು ತೆರೆಯುವ ಸನ್ನಾಹ ನಡೆಯುತ್ತಿದೆ.

ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ 6 ರಿಂದ 14 ರ ವಯೋಮಾನದ ಮಕ್ಕಳಿಗೆ ಕಡ್ಡಾಯ ಮತ್ತು ಪುಕ್ಕಟೆ ವಿದ್ಯಾಭ್ಯಾಸ ನೀಡುವ ಹೊಣೆಗಾರಿಕೆಯನ್ನು ಸರಕಾರ ಕೈಬಿಡುವ ತೀರ್ಮಾನವನ್ನು ಘೋಷಿಸಿದೆ. ಸಂವಿಧಾನದ ನಿರ್ದೇಶನ ಸೂತ್ರಗಳ ಪ್ರಕಾರ 1960 ರೊಳಗೇ ಜಾರಿಮಾಡಬೇಕಾಗಿದ್ದ ಈ ಕ್ರಮವನ್ನು 1990 ರವರೆಗೂ ವಿಸ್ತರಿಸಲಾಯಿತು. ಕೇಂದ್ರ ಸರಕಾರ ಬಿಡುಗಡೆ ಮಾಡಿದ ದಸ್ತಾವೇಜು (ಶಿಕ್ಷಣದ ಸವಾಲುಗಳು) ಮತ್ತು ಏಳನೇ ಪಂಚವಾರ್ಷಿಕ ಯೋಜನೆಯ ಪ್ರಕಾರ 1990 ರಷ್ಟು ಹೊತ್ತಿಗೆ 6 ರಿಂದ 14 ರ ವಯೋಮಿತಿಯೊಳಗಿರುವ 600 ಲಕ್ಷ ಮಕ್ಕಳು ಯಾವುದೇ ಬಗೆಯ ಔಪಚಾರಿಕ ಅಥವಾ ಅನೌಪಚಾರಿಕ ಶಿಕ್ಷಣದ ಸೌಲಭ್ಯದಿಂದ ವಿವಂಚಿತರಾಗುತ್ತಾರೆ.

ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೈಬಿಟ್ಟಿರುವುದು ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಒಳಗೊಂಡಂತೆ ಇಡೀ ಶಿಕ್ಷಣ ಕಾರ್ಯಕ್ರಮಕ್ಕೇ ಅತ್ಯಂತ ಕಡಿಮೆ ಮೊತ್ತದ ಸಂಪನ್ಮೂಲಗಳನ್ನು ನಿಗದಿಪಡಿಸಿರುವುದರ ಜೊತೆಗೆ ಉಚ್ಚ ಶಿಕ್ಷಣದ ಮೇಲೆ ವಿಪರೀತ ನಿರ್ಬಂಧ ಹೇರಿರುವುದನ್ನು ಕಾಣಬಹುದು. ಇಷ್ಟು ಸಾಲದೆಂಬಂತೆ ಶಿಕ್ಷಕ ಸಮುದಾಯದ ಪ್ರಜಾತಾಂತ್ರಿಕ ಹಕ್ಕುಗಳ ಮೇಲೂ ಸಾಕಷ್ಟು ಆಕ್ರಮಣಗಳನ್ನು ಮಾಡಲಾಗಿದೆ.

ದೇಶದಲ್ಲಿ ಮೂರರನೇ ಎರಡಂಶದಷ್ಟು ಜನ ಇನ್ನೂ ಅನಕ್ಷರಸ್ತರಾಗಿರುವ ಸಮಯದಲ್ಲಿ ಈ ಧೋರಣೆಗಳು ಬಂದಿವೆ. ನಿರಕ್ಷರತೆಯನ್ನು ನಿರ್ಮೂಲ ಮಾಡುವ ಕ್ರಮಗಳನ್ನು ಕೈಗೊಳ್ಳುವ ಬದಲು ಈ ಧೋರಣೆಗಳು ನಿರಕ್ಷರತೆಯನ್ನೂ, ನಿರುದ್ಯೋಗವನ್ನೂ ಹೆಚ್ಚಿಸುವುದರಲ್ಲಿ ಪರಿಣಮಿಸುತ್ತವೆ.

## ಆರ್ಥಿಕ ಬದಲಾವಣೆಗಳೊಡನೆ ಸಂಬಂಧ

ಈ ಮಾರ್ಪಾಟುಗಳಿಗೂ ಆರ್ಥಿಕ ಧೋರಣೆಯ ಇತ್ತೀಚಿನ ಬದಲಾವಣೆಗಳಿಗೂ ನಿಕಟ ಸಂಬಂಧ ಇದೆ. ಮಾನವ ಶಕ್ತಿ ಹೇರಳವಾಗಿರುವ ನಮ್ಮ ಅರ್ಥವ್ಯವಸ್ಥೆಯಲ್ಲಿ ಬಂಡವಾಳ ಆಧಾರಿತ ತಾಂತ್ರಿಕತೆಯನ್ನೂ, ಆಧುನೀಕರಣ ಮತ್ತು ವಿದೇಶೀ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕಾದರೆ ಹಾಗೂ ರಫ್ತು ಮಾರುಕಟ್ಟೆಯ ವಿಸ್ತರಣೆಯ ಉದ್ದೇಶದಿಂದ ಹೆಚ್ಚು ಹೆಚ್ಚಾಗಿ ವಿದೇಶೀ ಸಹಯೋಗ ನಡೆಸಬೇಕಾದರೆ ಆಧುನಿಕ ತಾಂತ್ರಿಕತೆಯ ಅವಶ್ಯಕತೆಗಳನ್ನೂ ಪೂರೈಸುವ ಸೂಕ್ತ ತರಬೇತಿ ಹೊಂದಿದ ವಿಶಿಷ್ಟ ಪ್ರಕಾರದ ಮಾನವಶಕ್ತಿ ಬೇಕಾಗುತ್ತದೆ. ಇಂತಹ ವಿಶಿಷ್ಟ ವರ್ಗವೊಂದರ ನಿರ್ಮಾಣದಲ್ಲಿ ನಿರತರಾಗಿರುವ ಆಳುವವರ್ಗಗಳ ಪಾಲಿಗೆ ಬಹುಜನಸಮುದಾಯವೇ ಕಡೆಗಣಿಸಬಹುದಾದ ವರ್ಗ. ಅಂತೆಯೇ ಜನಸಾಮಾನ್ಯರನ್ನು ಅಜ್ಞಾನಿಗಳನ್ನಾಗಿಯೂ ಹಿಂದುಳಿದವರನ್ನಾಗಿಯೂ ಕೊಳೆಯ ಬಿಡಲಾಗುತ್ತಿದೆ.

ಇಪ್ಪತ್ತೊಂದನೆಯ ಶತಮಾನದ ಕಡೆಗೆ ಧಾವಿಸುತ್ತಿದ್ದೇವೆ ಎಂಬ ಜನಪ್ರಿಯ ಘೋಷಣೆಯ ಮರೆಯಲ್ಲಿ ಈ ಮಾರ್ಪಾಟುಗಳನ್ನು ತರಲಾಗುತ್ತಿದೆ. ವಿದ್ಯಾವಂತರ ನಿರುದ್ಯೋಗವೆಂಬ ಸಮಸ್ಯೆ ಇಲ್ಲವೇ ಇಲ್ಲವೆನ್ನಿಸಲು ಮತ್ತು ಶಿಕ್ಷಣವಿಲ್ಲದೆಯೂ ಯುವಕರಿಗೆ ಉದ್ಯೋಗ ಕೊಡಲಾಗುವುದೆಂದು ಹೇಳುತ್ತಾ ಯುವಕರ ಬೆಂಬಲಗಳಿಸುವ ಉದ್ದೇಶದಿಂದ ಉದ್ಯೋಗವನ್ನು ಪದವಿಯಿಂದ ಪ್ರತ್ಯೇಕಿಸಬೇಕು ಎಂದೂ ಹೇಳಲಾಗುತ್ತಿದೆ. ಆಧುನೀಕರಣದಿಂದಾಗಿ ಈಗ ಲಭ್ಯವಿರುವ ಉದ್ಯೋಗಾವಕಾಶಗಳೂ ಮೊಟಕುಗೊಳ್ಳುತ್ತಿವೆಯೆಂಬ ಸತ್ಯವನ್ನು ಯುವಕರಿಂದ ಮರೆಮಾಚಲಾಗುತ್ತಿದೆ. ಶಿಕ್ಷಣವನ್ನು ಉದ್ಯೋಗದಿಂದ ಬೇರ್ಪಡಿಸಬೇಕು ಎಂಬ ಮಾತು ಬಹುಪಾಲು ಜನಕ್ಕೆ ಶಿಕ್ಷಣಾವಕಾಶಗಳನ್ನು ನಿರಾಕರಿಸುವ ಕುಟಿಲ ನೀತಿಯ ಒಂದು ಅಂಗ ಅಷ್ಟೆ. ಹೀಗೆ ಹೇಳುತ್ತಿರುವ ಸರಕಾರ

(53ನೇ ಪುಟವನ್ನು ನೋಡಿ)

# ಮಹಿಳೆಯರಿಗೆ ಸಮಾನ ಹಕ್ಕು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹನ್ನೆರಡನೇ ಅಧಿವೇಶನವು ದೇಶದಲ್ಲಿ ಮಹಿಳೆಯರ ಅಸಮಾನತೆ ಹೆಚ್ಚುತ್ತಿರುವುದು ಅದರ ಹಿಂದೆಯೇ ಹೆಂಗಸರ ಮೇಲೆ ಅತ್ಯಾಚಾರ ತೀವ್ರವಾಗುತ್ತಿರುವುದರ ಬಗ್ಗೆ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ.

ಭಾರತದ ಸಂವಿಧಾನದಲ್ಲಿ ಮಹಿಳೆಯರ ಸಮಾನತೆ ಒಂದು ತತ್ವವಾಗಿ ವಿರಾಜಮಾನವಾಗಿದೆ. ದೇಶದ ಎಲ್ಲ ಪ್ರಜೆಗಳು ಕಾನೂನಿನ ದೃಷ್ಟಿಯಲ್ಲಿ ಸಮಾನರೆಂಬ ಹಕ್ಕನ್ನು ಸಂವಿಧಾನ ನೀಡಿದೆ. ಇವೆಲ್ಲ ಸಂವಿಧಾನಿಕ ಹಕ್ಕು ಮತ್ತು ಘೋಷಣೆಗಳಿದ್ದಾಗಲೂ ದೇಶದ ಎಲ್ಲಾ ಮಹಿಳೆಯರಿಗೆ ಈಗಲೂ ಸಮಾನ ಹಕ್ಕಿನ ನಿರಾಕರಣೆ ಮುಂದುವರೆಯುತ್ತಿದೆ.

ವರದಕ್ಷಿಣೆಯ ದುಷ್ಟ ಪದ್ಧತಿ ಆಳವಾಗಿ ಬೇರೂರಿ ವರದಕ್ಷಿಣೆಯ ಸಾವುಗಳು ದಿನೇ ದಿನೇ ಹೆಚ್ಚುವುದಕ್ಕೆ ಕಾರಣವಾಗಿದೆ. ಅತ್ಯಾಚಾರವು ಮಹಿಳೆಯರ ಮೇಲೆ ದ್ವೇಷ ಸಾಧಿಸುವ ಸಾಧನವಾಗುತ್ತಿದೆ. ಕೈಗಾರಿಕೆ ಮತ್ತು ಕೃಷಿಯೂ ಸೇರಿದಂತೆ ಉತ್ಪಾದನೆಯ ಪ್ರಮುಖ ಕ್ಷೇತ್ರಗಳಲ್ಲಿ ಅಸಮಾನ ವೇತನಗಳು ಮುಂದುವರಿಯುತ್ತಿದೆ. ಮಹಿಳೆಯರಲ್ಲಿ ನಿರಕ್ಷರತೆಯ ಪ್ರಮಾಣವಂತೂ ಅಗಾಧವಾದದ್ದು, ದೇಶದ ಒಟ್ಟು 330 ಮಿಲಿಯ ಮಹಿಳೆಯರಲ್ಲಿ ಅನಕ್ಷರಸ್ಥ ಮಹಿಳೆಯರ ಸಂಖ್ಯೆ 1981 ರಲ್ಲಿ 225 ಮಿಲಿಯದಿಂದ 1983 ರಲ್ಲಿ 250 ಮಿಲಿಯಕ್ಕೆ ಏರಿದೆ. ವೃತ್ತಿಪರ ತರಬೇತಿಗಳಲ್ಲೂ ಮಹಿಳೆಯರ ವಿರುದ್ಧ ಪಕ್ಷಪಾತ ಮುಂದುವರಿದಿದೆ. ಮಹಿಳೆಯರಿಗೆ ಉದ್ಯೋಗಾವಕಾಶಗಳು ಕುಗ್ಗಿರುವುದಷ್ಟೇ ಅಲ್ಲ ಆಳವಾಗುತ್ತಿರುವ ಬಂಡವಾಳಶಾಹಿ ಆರ್ಥಿಕ ಮುಗ್ಗಟ್ಟಿನಿಂದಾದ ಬೃಹತ್ಪ್ರಮಾಣದ ರಿಟ್ರೆಂಚ್‌ಮೆಂಟ್‌ನಲ್ಲಿ ಮಹಿಳೆಯರೇ ಹೆಚ್ಚಿನ ಬಲಿಪಶುಗಳು.

ಸರಕಾರ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಲು ಏನೂ ಮಾಡದಿರುವುದು ಮಾತ್ರವಲ್ಲ ಮಹಿಳೆಯರ ಹಕ್ಕುಗಳ ಮೇಲೆ ಧಾಳಿಮಾಡುವ ಮತಾಂಧರಿಗೆ ಬೆಂಬಲ ನೀಡುತ್ತಿದೆ.

## ಮೂಲಭೂತವಾಧಿಗಳಿಗೆ ಮಣಿದಿದ್ದಾರೆ

ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಪರಿಹಾರ ಧನದ ಕಾನೂನುಬದ್ಧ ಅರ್ಹತೆಯನ್ನು ಕೊನೆಗೊಳಿಸುವುದಕ್ಕಾಗಿ ಮುಸ್ಲಿಂ ಹೆಂಗಸರನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 125ರ ವ್ಯಾಪ್ತಿಯಿಂದ ಹೊರತುಪಡಿಸಬೇಕೆಂಬ ಮುಸ್ಲಿಂ ಮೂಲಭೂತವಾದಿಗಳ ಬೇಡಿಕೆಯನ್ನು ಸರಕಾರ ಪರಿಶೀಲಿಸುತ್ತಿದೆಯೆಂದು ಪ್ರಧಾನಮಂತ್ರಿಯವರು ಇತ್ತೀಚೆಗೆ ನಡೆದ ಮೊಮಿನ್ ಸಮ್ಮೇಳನದಲ್ಲಿ ಹೇಳಿರುವುದನ್ನು ಅಧಿವೇಶನ ಆತಂಕದಿಂದ ನೋಡುತ್ತದೆ. ಈ ಬಗ್ಗೆ ಈ ಮಹಾಧಿವೇಶನವು ತನ್ನ ಗಂಭೀರ ಕಳವಳ ವ್ಯಕ್ತಪಡಿಸುತ್ತದೆ.

ಇತ್ತೀಚೆಗೆ ಮಹಿಳಾ ಸಂಘಟನೆಗಳ ಪ್ರತಿನಿಧಿಗಳೊಡನೆ ನಡೆದ ಮಾತುಕತೆಗಳಲ್ಲಿ ಪ್ರಧಾನಮಂತ್ರಿಗಳು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳನ್ನು ಈ ಅಧಿವೇಶನವು ಗಂಭೀರವಾಗಿ ಪರಿಗಣಿಸಿ ಅದನ್ನು ತೀವ್ರವಾಗಿ ಖಂಡಿಸುತ್ತದೆ. ವೈಯುಕ್ತಿಕ ಕಾನೂನುಗಳ ಅನ್ವಯಿಸುವಿಕೆಯ ಹೆಸರಲ್ಲಿ ಪ್ರಧಾನಿಯವರು ಹೇಳಿರುವ ಮಾತುಗಳು ಮುಸ್ಲಿಂ ಹೆಂಗಸರನ್ನು ಖಾಯಂ ಆಗಿ ಗುಲಾಮಗಿರಿಗೆ ತಳ್ಳುವಂತಿವೆ.

ವರದಕ್ಷಿಣೆಯ ದುಷ್ಟ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲಗೊಳಿಸಲು, ಕೆಲಸದಿಂದ ವಜಾಗೊಳ್ಳುತ್ತಿರುವುದರ ವಿರುದ್ಧ ಸಂರಕ್ಷಣೆ ದೊರಕಿಸಲು, ಸ್ತ್ರೀ ಪುರುಷರಿಗೆ ಸಮಾನವೇತನ ನಿಗದಿ ಮಾಡಲು ಮತ್ತು ಎಲ್ಲ ಪ್ರಕಾರದ ಸಾಮಾಜಿಕ ಸುರಕ್ಷಿತತೆಯನ್ನು ಒದಗಿಸುವಂತೆ ಸೂಕ್ತ ಶಾಸನಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿ ಜಾರಿಗೆ ತರಬೇಕೆಂದು ಈ ಮಹಾಧಿವೇಶನ ಒತ್ತಾಯಿಸುತ್ತದೆ. ಮಹಿಳಾ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ಸಲಹಾ ಸಮಿತಿಗಳ ಸಕ್ರಿಯ ಸಹಕಾರದೊಂದಿಗೆ ಈ ಶಾಸನಗಳನ್ನು ಅನುಷ್ಠಾನಕ್ಕೆ ತರಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಈ ಅಧಿವೇಶನ ಒತ್ತಾಯಿಸುತ್ತದೆ.

ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 125 ಕ್ಕೆ ತಿದ್ದುಪಡಿ ತರುವ ಪ್ರಯತ್ನವನ್ನು ಸರಕಾರ ಕೈಬಿಡಲೇಬೇಕು ಮತ್ತು ಮುಸ್ಲಿಂ ಮಹಿಳೆಯರ ಈಗಿರುವ ನ್ಯಾಯಯುತ ಹಕ್ಕುಗಳನ್ನು ಕಾಪಾಡಲು ಅವಶ್ಯವಿರುವ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಈ ಅಧಿವೇಶನ ಒತ್ತಾಯಿಸುತ್ತದೆ.

ಮಹಿಳೆಯರಿಗೆ ಸಾಕ್ಷರತೆ ಒದಗಿಸಲು ಭಾರತ ಸರಕಾರ ಯೋಗ್ಯಕ್ರಮ ಕೈಗೊಳ್ಳಬೇಕೆಂದೂ ನಾವು ಒತ್ತಾಯಿಸುತ್ತೇವೆ.

ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮಹಿಳೆಯರಿಗೂ ಇಂತಹ ಮಹಿಳೆಯರನ್ನು ಒಂದುಗೂಡಿಸಿ ಸಮಾನ ಹಕ್ಕುಗಳಿಗಾಗಿ ಧೀರ ಹೋರಾಟ ನಡೆಸುತ್ತಿರುವ ಮಹಿಳಾ ಸಂಘಟನೆಗಳಿಗೂ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಈ ಹನ್ನೆರಡನೇ ಅಧಿವೇಶನ ತನ್ನ ಹೃತ್ಪೂರ್ವಕ ಬೆಂಬಲ ವ್ಯಕ್ತಪಡಿಸುತ್ತದೆ, ಪಕ್ಷದ ಕಾರ್ಯಕರ್ತರೆಲ್ಲರೂ ಪ್ರಾಮಾಣಿಕತೆಯಿಂದ ಈ ಹೋರಾಟವನ್ನು ಕೈಗೆತ್ತಿಕೊಳ್ಳಬೇಕೆಂದು ಕರೆ ನೀಡುತ್ತದೆ.

# ಸಂದೇಶ : ಲಾವೊ ಜನತಾ ಕ್ರಾಂತಿಕಾರಿ ಪಕ್ಷ

ಲಾವೊ ಜನತಾ ಕ್ರಾಂತಿಕಾರಿ ಪಕ್ಷದ ಸದಸ್ಯರು, ಲಾವೊ ಕಾರ್ಮಿಕವರ್ಗದ ಹಾಗೂ ಎಲ್ಲಾ ಜನಾಂಗೀಯ ಗುಂಪುಗಳ ಪರವಾಗಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಅಧಿವೇಶನಕ್ಕೆಹಾಗೂ ಅದರ ಮೂಲಕ ಪಕ್ಷದ ಎಲ್ಲಾ ಸದಸ್ಯರಿಗೆ, ಭಾರತದ ಕಾರ್ಮಿಕವರ್ಗ ಹಾಗೂ ಶ್ರಮಜೀವಿ ಜನತೆಗೆ ನಮ್ಮ ಅತ್ಯಂತ ಹೃತ್ಪೂರ್ವಕ ಶುಭಾಶಯ ಹಾಗೂ ಅಭಿನಂದನೆಗಳನ್ನು ವ್ಯಕ್ತಪಡಿಸಬಯಸುತ್ತೇವೆ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಾರತದಲ್ಲಿ ಕಾರ್ಮಿಕವರ್ಗದ ಮತ್ತು ಶ್ರಮಿಕ ಜನತೆಯ ನ್ಯಾಯಬದ್ಧ ಹಿತಾಸಕ್ತಿಗಳಿಗಾಗಿ, ಶಾಂತಿ ಸ್ವಾಧೀನತೆ, ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ಪ್ರಗತಿಗಾಗಿ ಎಡೆಬಿಡದೆ ಹೋರಾಡಲು ಭಾರತೀಯ ಕಾರ್ಮಿಕವರ್ಗವನ್ನು ಸಂಘಟಿಸಿ, ಅದರ ನೇತೃತ್ವ ವಹಿಸುವ ಮೂಲಕ ತನ್ನ ಚಟುವಟಿಕೆಗಳನ್ನು ಸದಾ ನಡೆಸಿಕೊಂಡು ಬಂದಿದೆ. ಅದೇ ಹೊತ್ತಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಏಶ್ಯಾ ಪ್ರದೇಶದಲ್ಲಿ ಹಾಗೂ ಜಗತ್ತಿನಲ್ಲಿ ಶಾಂತಿ ಹಾಗೂ ಸ್ಥಿರತೆಯ ಹೋರಾಟದಲ್ಲಿ ಸಕ್ರಿಯ ಚಟುವಟಿಕೆ ನಡೆಸಿಕೊಂಡು ಬಂದಿದೆ.

ಇನ್ನೊಮ್ಮೆ ನಾವು ಈ ಹಿಂದೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಅಧಿವೇಶನದ ನಿರ್ಣಯವನ್ನು ಕಾರ್ಯರೂಪಕ್ಕೆ ತರುವಲ್ಲಿ ಸಾಧಿಸಿದ ಉತ್ಕೃಷ್ಟ ಯಶಸ್ಸಿಗಾಗಿ ಮತ್ತು ಈ ಮೂಲಕ ಅಂತರ್‍ರಾಷ್ಟ್ರೀಯ ಶಾಂತಿ,ಭದ್ರತೆ ಹಾಗೂಹೊಸ ಅಂತರ್‍ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಆಂದೋಲನವನ್ನು ಬಲಗೊಳಿಸುವಲ್ಲಿ ಕಾಣಿಕೆ ನೀಡಿರುವುದಕ್ಕಾಗಿ ನಮ್ಮ ಅಭಿನಂದನೆಗಳನ್ನುವ್ಯಕ್ತಪಡಿಸಬಯಸುತ್ತೇವೆ. ನಮ್ಮೆರಡು ಪಕ್ಷಗಳ ನಡುವಣ ಸಂಬಂಧಗಳು ಮತ್ತಷ್ಟು ಬೆಳೆದು, ನಿರಂತರವಾಗಿ ಬಲಗೊಳ್ಳುತ್ತಿರುವುದರ ಬಗ್ಗೆ ನಮಗೆ ತೃಪ್ತಿಯಿದೆ.

ಈ ಶುಭಸಂದರ್ಭದಲ್ಲಿ ಈ ಅಧಿವೇಶನಕ್ಕೆ ಉತ್ಕೃಷ್ಟ ಯಶಸ್ಸು ದೊರೆಯುವಂತಾಗಲೆಂದು ಆರೈಸುತ್ತೇವೆ.

ಎರಡು ಪಕ್ಷಗಳು ಮತ್ತು ಲಾವೋ ಹಾಗೂ ಭಾರತ ಈ ಎರಡು ದೇಶಗಳ ನಡುವೆ ಸ್ನೇಹಯುತ ಸಂಬಂಧಗಳು ಮಾರ್ಕ್ಸ್‌ವಾದ-ಲೆನಿನ್‌ವಾದದ ನೀತಿಗಳ ಹಾಗೂ ಕಾರ್ಮಿಕವರ್ಗದ ಅಂತರ್‍ರಾಷ್ಟ್ರೀಯತೆಯ ಆಧಾರದ ಮೇಲೆ ಮತ್ತಷ್ಟು ಬೆಳೆದು, ನಿರಂತರವಾಗಿ ಬಲಗೊಳ್ಳುತ್ತಿರಲಿ ಎಂಬ ಆಶಯದೊಂದಿಗೆ,

ಕ್ರಾಂತಿಕಾರೀ ಶುಭಾಶಯಗಳೊಂದಿಗೆ,

**ಕೇಂದ್ರ ಸಮಿತಿ**

ಜನತಾ ಕ್ರಾಂತಿಕಾರಿ ಪಕ್ಷ

(51ನೇ ಪುಟದಿಂದ ಮುಂದುವರಿದುದು)

ಕ್ಯಾಪಿಟೇಶನ್ ಶುಲ್ಕಕ್ಕೆ ಒಪ್ಪಿಗೆ ಸೂಚಿಸುತ್ತದೆ. ಶಾಲಾ ಕಾಲೇಜು ಶುಲ್ಕಗಳನ್ನು ಜಾಸ್ತಿ ಮಾಡುವ ಉದ್ದೇಶ ಹೊಂದಿದೆ ಮತ್ತು ಖಾಸಗಿ ಜನರ ಮುತುವರ್ಜಿಯಿಂದಲೇ ಶಿಕ್ಷಣಕ್ಷೇತ್ರದ ವಿಸ್ತರಣೆ ಸಾಧ್ಯವೆಂದು ಹೇಳುತ್ತದೆ.

ನಮ್ಮನ್ನು ಹಿಂದೆ ಜಗ್ಗಲೆಳಸುವ ಈ ಎಲ್ಲ ಧೋರಣೆಗಳ ವಿರುದ್ಧ ಮತ್ತು ಶಿಕ್ಷಣದ ಹಕ್ಕನ್ನು ಸಂವಿಧಾನದಲ್ಲಿ ವಿರಾಜಿಮಾನವಾಗಬೇಕೆಂಬ ಒತ್ತಾಯಕ್ಕಾಗಿ ಇಡೀ ಜನತೆಯನ್ನು ಅಣಿನೆರಸುವ ಕರ್ತವ್ಯಕ್ಕೆ ಸಿ. ಪಿ. ಐ (ಎಂ) ಬದ್ಧಕಂಕಣವಾಗಿದೆ. ನಿರಕ್ಷರತೆ ಮತ್ತು ನಿರುದ್ಯೋಗವನ್ನು ಹೆಚ್ಚಿಸುವ ಕುಟಿಲತಂತ್ರವೆಂದು ಈ ನೀತಿಯನ್ನು ಬಯಲಿಗೆಳೆಯಬೇಕೆಂದೂ ಸಿ.ಪಿ.ಐ. (ಎಂ) ಜನತೆಗೆ ಕರೆ ನೀಡುತ್ತದೆ.

# ಒಗ್ಗಟ್ಟಿನ ಹಾರೈಕೆ: ಕೆನಡಾ ಕಮ್ಯುನಿಸ್ಟ್ ಪಕ್ಷ

ನಮಗೆ ನಿಮ್ಮ ಹನ್ನೆರಡನೇ ಅಧಿವೇಶನಕ್ಕೆ ನಮ್ಮ ಶುಭಾಶಯಗಳನ್ನು ಕೋರಲು ಹಾಗೂ ಅದರ ಕೆಲಸಗಳಲ್ಲಿ ಸತತ ಯಶಸ್ಸು ಸಿಗಲೆಂದು ಹಾರೈಸಲು ಅತ್ಯಂತ ಸಂತೋಷವಾಗುತ್ತಿದೆ.

ಯುದ್ಧ ಮತ್ತು ಶಾಂತಿಯ ಪ್ರಶ್ನೆ ಜಗತ್ತಿನ ಗಮನದ ಕೇಂದ್ರದಲ್ಲಿರುವ ನಮ್ಮ ಕಾಲದ ಒಂದು ಕ್ಲಿಷ್ಟ ಅವಧಿಯಲ್ಲಿ ಸಭೆ ಸೇರುತ್ತಿರುವ ಈ ಅಧಿವೇಶನ ಪರಮಾಣು, ರಾಸಾಯನಿಕ ಹಾಗೂ ಬಾಹ್ಯಾಕಾಶ ಯುದ್ಧಗಳ ಬೆದರಿಕೆಯ ವಿರುದ್ಧ ಹಾಗೂ ಭಾರತದ ಐಕ್ಯತೆಯನ್ನು ಬುಡಮೇಲು ಮಾಡುತ್ತಿರುವ ಸಾಮ್ರಾಜ್ಯಶಾಹಿ ಹಾಗೂ ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಭಾರತದಲ್ಲಿ ಯಾವ ಶಕ್ತಿಗಳನ್ನೆಲ್ಲಾ ಒಟ್ಟುಗೂಡಿಸಬಹುದೋ ಅವನ್ನೆಲ್ಲಾ ಒಟ್ಟುಗೂಡಿಸಲು ನೆರವಾಗುವ ಧೋರಣೆಗಳನ್ನು ಚರ್ಚಿಸಿ ರೂಪಿಸುವುದೆಂಬ ಭರವಸೆ ನಮಗಿದೆ.

ಈಗ ಹಿಂದೆಂದಿಗಿಂತಲೂ ಹೆಚ್ಚಾಗಿ ಸೋವಿಯೆತ್ ಒಕ್ಕೂಟ ಹಾಗೂ ಸಮಾಜವಾದಿ ಪ್ರಭುತ್ವಗಳ ಸಮುದಾಯ ಎಲ್ಲಾ ಕಮ್ಯುನಿಸ್ಟ್ ಹಾಗೂ ಕಾರ್ಮಿಕರ ಪಕ್ಷಗಳ ನಡುವೆ ಐಕ್ಯತೆ ಹಾಗೂ ಸಹಕಾರ ಸಾಮ್ರಾಜ್ಯಶಾಹಿಯ ವಿರುದ್ಧ ಹಾಗೂ ಪರಮಾಣು ಯುದ್ಧದ ಬೆದರಿಕೆಯ ವಿರುದ್ಧ ಹೋರಾಟವನ್ನು ಮುನ್ನಡೆಸುವಲ್ಲಿ ಅವಶ್ಯಕವಾಗಿದೆ. ಈಗ ಹಿಂದೆಂದಿಗಿಂತಲೂ ಹೆಚ್ಚಾಗಿ ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನವನ್ನು ಮಾರ್ಕ್ಸ್‌ವಾದ - ಲೆನಿನ್‌ವಾದ ಹಾಗೂ ಕಾರ್ಮಿಕವರ್ಗದ ಅಂತರ್‍ರಾಷ್ಟ್ರೀಯತೆಯ ಯುಕ್ತಿಯುಕ್ತವಾದ ನೀತಿಗಳ ಆಧಾರದ ಮೇಲೆ ಕ್ರೋಢೀಕರಿಸುವ ಜಗತ್ಯವಿದೆ.

ಮತ್ತೊಮ್ಮೆ ನಿಮ್ಮ ಅಧಿವೇಶನಕ್ಕೆ ಯಶಸ್ಸು ಕೋರುತ್ತಾ,

**WM-ಕಶ್ತನ್**, ಪ್ರಧಾನ ಕಾರ್ಯದರ್ಶಿ-

ಕೇಂದ್ರ ಕಾರ್ಯಕಾರಿ ಸಮಿತಿ

ಕೆನಡಾ ಕಮ್ಯುನಿಸ್ಟ್ ಪಕ್ಷ

# ಮುಸ್ಲಿಂ ಅಲ್ಪ ಸಂಖ್ಯಾತರ ಹಕ್ಕುಗಳ ಕುರಿತು

ಕಾಂಗ್ರೆಸ್ (ಐ) ಆಳ್ವಿಕೆಯ ಎಲ್ಲಾ ರಾಜ್ಯಗಳಲ್ಲಿ ಹಿಂದೂ-ಮುಸ್ಲಿಂ ದಂಗೆಗಳ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಯಂತ್ರ ಸಂಪೂರ್ಣವಾಗಿ ಕುಸಿದು ಬೀಳುತ್ತಿರುವುದರ ಬಗ್ಗೆ ಭಾರತದ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ಹನ್ನೆರಡನೇ ಮಹಾಧಿವೇಶನ ತನ್ನ ಆಘಾತ ಹಾಗೂ ತೀವ್ರ ಆತಂಕವನ್ನು ವಕ್ತಪಡಿಸುತ್ತದೆ. ಫಲಿತಾಂಶವಾಗಿ, ಭಿವಂಡಿಯಲ್ಲಾದಂತೆ, ಅಲ್ಪಸಂಖ್ಯಾತ ಕೋಮಿಗೆ ಯಾವುದೇ ಕಾನೂನು ರಕ್ಷಣೆ ಮತ್ತು ಭದ್ರತೆಯಿಲ್ಲದೆ ಅವರು ಬಹುಸಂಖ್ಯಾತ ಕೋಮಿನ ಸಮಾಜ-ವಿರೋಧಿ ವ್ಯಕ್ತಿಗಳ ಕೊಲೆ ಸುಲಿಗೆಗಳಿಗೆ ಗುರಿಯಾಗುತ್ತಾರೆ. ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಪೋಲೀಸ್ ಪಡೆ ಕೋಮು ವಿಷಜಂತುವಿನಿಂದ ಪೀಡಿತವಾಗಿ ಅಲ್ಪಸಂಖ್ಯಾತ ಕೋಮಿನ ವಿರುದ್ಧ ಹಿಂಸಾತ್ಮಕ ಸಾಮೂಹಿಕ ಆಕ್ರಮಣಗಳನ್ನು ತಡೆಯಲು ಅಸಮರ್ಥವಾಗುತ್ತದೆ. ಕೊಲೆ, ಲೂಟಿ ನಡೆಸಿದವರು ಶಿಕ್ಷೆಗೊಳಗಾಗುವುದು ತೀರಾ ಅಪರೂಪವಾದ್ದರಿಂದ ಅಲ್ಪ ಸಂಖ್ಯಾತರು ಸಾಮಾನ್ಯವಾಗಿ ಭಯ ಆತಂಕಗಳ ನಡುವೆ ಬದುಕುತ್ತಿರುತ್ತಾರೆ.

ಹನ್ನೆರಡನೇ ಅಧಿವೇಶನ ಇಂತಹ ಘಟನೆಗಳನ್ನು ಖಂಡಿಸುತ್ತದೆ ಮತ್ತು ಅಲ್ಪಸಂಖ್ಯಾತರ ಜೀವನ ಹಾಗೂ ಆಸ್ತಿ-ಪಾಸ್ತಿಗಳ ರಕ್ಷಣೆಗೆ ಬಿಗಿ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.

ಅಲ್ಪಸಂಖ್ಯಾತರಿಗೆ ಭದ್ರತೆ, ರಕ್ಷಣೆಯನ್ನು ಖಾತರಿಗೊಳಿಸಿರುವುದಕ್ಕೆ ಹಾಗೂ ಕೋಮುವಾದಿ ವ್ಯಕ್ತಿಗಳ ವಿರುದ್ಧ ದೃಢಕ್ರಮ ಕೈಗೊಂಡಿರುವುದಕ್ಕೆ ಪಶ್ಚಿಮ ಬಂಗಾಳ, ತ್ರಿಪುರಾಗಳ ಎಡರಂಗ ಮಂತ್ರಿಮಂಡಲಗಳನ್ನು ಹನ್ನೆರಡನೇ ಅಧಿವೇಶನ ಅಭಿನಂದಿಸುತ್ತದೆ.

ಹನ್ನೆರಡನೇ ಅಧಿವೇಶನ ಆರ್. ಎಸ್ ಎಸ್. ಹಾಗೂ ಇತರ ಹಿಂದೂ ಕೋಮು ಸಂಸ್ಥೆಗಳು ಮುಸ್ಲಿಮರನ್ನು ಬಲೆಗೆ ಬೀಳಿಸಲು ಕೈಗೊಂಡ ಅಪಪ್ರಚಾರವನ್ನು ಬಲವಾಗಿ ಖಂಡಿಸುತ್ತದೆ.

ಪ್ರಭುತ್ವದ ಹಾಗೂ ಆಡಳಿತದ ಜಾತ್ಯತೀತ ಸ್ವರೂಪವನ್ನು ಕಾಪಾಡಿಕೊಳ್ಳದೆ, ಲಿಂಗ, ಕೋಮು ಭೇದ-ಭಾವಗಳಿಲ್ಲದೆ ಕಾನೂನಿನೆದುರು ಸಮಾನತೆ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರದೆ ದೇಶದ ಐಕ್ಯತೆಯನ್ನು ಹಾಗೂ ಸಮಗ್ರತೆಯನ್ನು ರಕ್ಷಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಹನ್ನೆರಡನೇ ಅಧಿವೇಶನ ಪರಿಗಣಿಸುತ್ತದೆ. ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿನ ಆಚರಣೆ ಸಂವಿಧಾನ ನೀಡಿದ ಭರವಸೆಗಳಿಗೆ ವ್ಯತಿರಿಕ್ತವಾದುದು ಹಾಗೂ ಅಲ್ಪಸಂಖ್ಯಾತ ಕೋಮಿನ ಹಕ್ಕುಗಳ ಉಲ್ಲಂಘನೆ ಮಾಡುವಂತಹದು.

## ಪ್ರಜಾಪ್ರಭುತ್ವದ ಸತ್ವ ಪರೀಕ್ಷೆ

ಹನ್ನೆರಡನೇ ಅಧಿವೇಶನ, ಅಲ್ಪಸಂಖ್ಯಾತ ಕೋಮು ಹಲವಾರು ವಿಷಯಗಳಲ್ಲಿ ಅಸಮಾನತೆಗೆ ಗುರಿಯಾಗಿ ನರಳುತ್ತಿದೆ ಎಂದು ಅಭಿಪ್ರಾಯಪಡುತ್ತದೆ. ಹಾಗೂ ಎಲ್ಲಾ ಪಕ್ಷಪಾತದ ಆಚರಣೆಗಳನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸುತ್ತದೆ. ಧಾರ್ಮಿಕ ಮತ್ತು ಇತರ ಅಲ್ಪಸಂಖ್ಯಾತ ಗುಂಪುಗಳೊಡನೆ ನಡವಳಿಕೆ ಪ್ರಜಾಪ್ರಭುತ್ವದ ಸತ್ತ್ವ ಪರೀಕ್ಷೆ. ಕಾಂಗ್ರೆಸ್ (ಐ) ಈ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳಲು ಅಸಮರ್ಥವಾಗಿದೆ.

ಪಕ್ಷದ ಹನ್ನೆರಡನೇ ಅಧಿವೇಶನ ಅಲ್ಪಸಂಖ್ಯಾತರೊಡನೆ ನ್ಯಾಯೋಚಿತ ಹಾಗೂ ಸಮಾನ ನಡವಳಿಕೆಗಾಗಿ, ಸಂವಿಧಾನದ ಪ್ರಕಾರ ಅವರ ಮೂಲಭೂತ ಹಕ್ಕುಗಳಿಗಾಗಿ ಮುಂದೆಯೂ ಹೋರಾಡುತ್ತದೆ ಎಂದು ಮುಸ್ಲಿಂ ಅಲ್ಪಸಂಖ್ಯಾತ ಜನಸಮೂಹಗಳಿಗೆ ಭರವಸೆ ನೀಡುತ್ತದೆ.

ಹನ್ನೆರಡನೇ ಅಧಿವೇಶನ, ಅದೇ ಸಮಯದಲ್ಲಿ ಮುಸ್ಲಿಂ ಜನಸಮೂಹಗಳನ್ನು ಕುರುಡುಸಂಪ್ರದಾಯನಿಷ್ಠರು ಹಾಗೂ ಮೂಲಭೂತವಾದಿಗಳು ಧರ್ಮದ ಹೆಸರಿನಲ್ಲಿ ಕುರುಡು ಸಂಪ್ರದಾಯಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅವರ ಭಾವನೆಗಳನ್ನು ಉದ್ರೇಕಿಸುವ ವಿಚ್ಛಿದ್ರಕಾರೀ ತಂತ್ರ ಬಳಸುತ್ತಾರೆ ಎಂದು ಎಚ್ಚರಿಸುತ್ತದೆ.

ಕೋಮುವಾದ ಮತ್ತು ಕೋಮುವಾದೀ ದೃಷ್ಟಿಕೋನ ದೇಶವನ್ನು ವಿಭಜಿಸಿ ಭಾರತೀಯ ಜನತೆಯನ್ನು ಗುಲಾಮರನ್ನಾಗಿಸಬೇಕೆಂಬ ಸಾಮ್ರಾಜ್ಯಶಾಹಿಗಳ, ಏಜೆಂಟರ ಬಲೆಗೆ ನಾವಾಗಿ ಬಿದ್ದಂತಾಗುತ್ತದೆ ಹಾಗೂ ಅದು ಆಳುವ ವರ್ಗಗಳ ಶೋಷಣೆಯಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳುವ ಸಂಯುಕ್ತ ಹೋರಾಟಕ್ಕೆ ತೊಂದರೆಯುಂಟುಮಾಡಿ ವಿಚ್ಛಿದ್ರಗೊಳಿಸುತ್ತದೆ ಎಂದು ಎರಡೂ ಕೋಮಿನ ಜನತೆಗೆ ಹನ್ನೆರಡನೇ ಅಧಿವೇಶನ ಎಚ್ಚರಿಕೆ ನೀಡುತ್ತದೆ.

# ಭೋಪಾಲ ಅನಿಲ ದುರಂತದ ಬಗ್ಗೆ

ಕಲ್ಕತ್ತೆಯಲ್ಲಿ 1985 ರ ಡಿಸೆಂಬರ್ 25-29 ರವರೆಗೆ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಹನ್ನೆಡನೇ ಅಧಿವೇಶನ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿ ಯೂನಿಯನ್ ಕಾರ್ಬೈಡ್ ಲಿಮಿಟೆಡ್ ಅನ್ನು ಸಾಕಷ್ಟು ಸುರಕ್ಷಣಾ ಕ್ರಮುಗಳನ್ನು ಒದಗಿಸುವಲ್ಲಿ ಕ್ರಿಮಿನಲ್ ಉದಾಸೀನತೆ ತೋರಿ, 5000 ಜನರನ್ನು ಸಾಯಿಸಿ, 25000 ಮಂದಿ ಎಮ್. ಐ. ಸಿ. ಅನಿಲದ ತೊಂದರೆಗಳ ದುಷ್ಪರಿಣಾಮುಗಳಿಂದ ನರಳುವಂತೆ ಮಾಡಿ ಜಗತ್ತಿನ ಅತ್ಯಂತ ಕೆಟ್ಟ ಕೈಗಾರಿಕಾ ಅನರ್ಥ ಉಂಟುಮಾಡಿದುದಕ್ಕೆ ಬಲವಾಗಿ ಖಂಡಿಸುತ್ತದೆ. ಖರ್ಚು ಉಳಿಸಿ, ಸೂಪರ್ ಲಾಭ ಪಡೆಯುವುದಕ್ಕಾಗಿ ಈ ಕಂಪೆನಿ ಪಶ್ಚಿಮ ವರ್ಜೀನಿಯಾದ ಇದೇ ರೀತಿಯ ಸ್ಥಾವರಗಳಲ್ಲಿ ಒದಗಿಸಿದಂತಹ ಸುರಕ್ಷಣಾ ಕ್ರಮುಗಳನ್ನು ಇಲ್ಲಿ ಒದಗಿಸಲಿಲ್ಲ. ಇನ್ನೂ ನೀಚ ಸಂಗತಿಯೆಂದರೆ, ಅದು ಲೈಸೆನ್ಸ್ ಪಡೆಯುವಾಗ ಒದಗಿಸಿದ ತನ್ನದೇ ಆದ ಸುರಕ್ಷತಾ ಕೈಪಿಡಿಯ ಪ್ರಕಾರ ಕೂಡಾ ನಡೆದುಕೊಳ್ಳಲಿಲ್ಲ. ಇದಕ್ಕೆ ಮೊದಲು ಅಫಘಾತಗಳು ಸಂಭವಿಸಿದಾಗ ಅದು ಯಾವ ಕ್ರಮುವನ್ನೂ ಕೈಗೊಳ್ಳಲಿಲ್ಲ. ಅದರ ಬದಲು, ಅನಿಲ ಸೋರಿಕೆಯ ಘಟನೆಯನ್ನು ಮುಚ್ಚಿಡಲು ಪ್ರಯತ್ನಿಸಿತು. ಸುಮಾರು ಮೂರು ಗಂಟೆಗಳ ವರೆಗೆ ಜನರಿಗೆ ಮತ್ತು ಪೋಲೀಸರಿಗೆ ವಿಷಯ ತಿಳಿಯದ ಹಾಗೆ ಮಾಡಿ ತನ್ಮೂಲಕ ಅದು ಭಾರತದ ಜನತೆಯ ವಿರುದ್ಧ ತನ್ನ ಅಪರಾಧೀ ಕೃತ್ಯಗಳನ್ನು ಮತ್ತಷ್ಟು ಹೆಚ್ಚಿಸಿಕೊಂಡಿತು.

## ಚುನಾವಣೆಗಾಗಿ ನಾಟಕ

ಪಕ್ಷದ ಅಧಿವೇಶನ ಕೇಂದ್ರ ಹಾಗೂ ಮಧ್ಯಪ್ರದೇಶ ರಾಜ್ಯ ಇವೆರಡೂ ಕಡೆಗಳ ಕಾಂಗ್ರೆಸ್ (ಐ) ಸರಕಾರಗಳನ್ನು ಅವು ಮರಣಾಂತಿಕ ಎಂ.ಐ.ಸಿ. ಅನಿಲದಿಂದ ಪೀಡಿತರಾದ ಜನತೆಯ ಸಂಕಷ್ಟಗಳ ಬಗ್ಗೆ ನಿರ್ಲಕ್ಷ್ಯದ ನಿಲುವು ತಳೆದುದಕ್ಕೆ ಹಾಗೂ ಪೀಡಿತ ಜನತೆಗೆ ನೆರವು ಒದಗಿಸಲು ಸಾಕಷ್ಟು ಕ್ರಮುಕೈಗೊಳ್ಳದಿದ್ದುಕ್ಕೆ ತಪ್ಪಿತಸ್ಥರೆಂದು ಸಾರುತ್ತದೆ. ಅವು ಪೀಡಿತ ಜನತೆಗೆ ವೈದ್ಯಕೀಯ ನೆರವು ಹಾಗೂ ಪರಿಹಾರ ಒದಗಿಸಲು ವಿವಿಧ ಪಕ್ಷಗಳ ನೇತೃತ್ವದಲ್ಲಿರುವ ಪ್ರಜಾಪ್ರಭುತ್ವವಾದೀ ಸಾಮೂಹಿಕ ಸಂಘಟನೆಗಳನ್ನು ಸಜ್ಜುಗೊಳಿಸಿ ದೇಶದ ಸಮುಸ್ತ ಜನತೆಯುನ್ನು ಬಡಿದೆಬ್ಬಿಸಿ ಅದರ ಬಲದ ಮೇಲೆ ಭಾರತದ ಜನತೆಯ ವಿರುದ್ಧ ಇಂತಹ ಭೀಕರ ಅಪರಾಧ ಗೈದಿರುವ ಅಸಂಸ್ಥಾದ ಬಹುರಾಷ್ಟ್ರೀಯ ಕಂಪೆನಿಯನ್ನು ಶಿಕ್ಷಿಸುವ ಬದಲು, ಅಸಂಸ್ಥಾದೊಂದಿಗೆ ವ್ಯಾಪಾರ ಮತ್ತು ಸಂಬಂಧಗಳ ಮೇಲೆ ದುಷ್ಪರಿಣಾಮುವುಂಟಾಗಬಹುವೆಂಬ ಬೆದರಿಕೆಗೆ ಹೆದರಿ ತಲೆಬಾಗಿದ್ದಾವೆಂದೇ ಹೇಳಬೇಕು. ಈಗ ಅಂತಿಮವಾಗಿ ಅವರು ಎನ್.ಕೆ. ಸಿಂಗ್ ಆಯೋಗದ ಕಾರ್ಯನಿರ್ವಹಣೆಯನ್ನೇ ನಿಲ್ಲಿಸಿದ್ದಾರೆ. ಇದರ ಜತೆಗೆ ಆಯೋಗದ ಕಾರ್ಯಕಾಲದಲ್ಲಿ ಅದು ಎದುರಿಸಬೇಕಾಗಿ ಬಂದ ಅಸಹಕಾರವನ್ನು ನೋಡಿದರೆ ನ್ಯಾಯಾಂಗ ತನಿಖೆಗೆ ಆಜ್ಞೆ ನೀಡಿದ ಉದ್ದೇಶ ನಿಸ್ಸಂಶಯುವಾಗಿಯೂ ಸಾಕಷ್ಟು ಅಸಮರ್ಪಕವಾಗಿದ್ದರೂ ಅದಾಗಲೇ ಅಸ್ತಿತ್ವದಲ್ಲಿದ್ದ ಸುರಕ್ಷತತೆಯ ನಿಯಮುಗಳನ್ನು ಕೂಡಾ ಉಲ್ಲಂಘಿಸಿ ಅಪರಾಧ ಮಾಡಿದ ವ್ಯಕ್ತಿ ಅಥವಾ ಸಂಸ್ಥೆ ಯಾವುದು ಎಂಬುದನ್ನು ನಿರ್ಣಯಿಸುವುದಾಗಿರದೆ ಕೋಪೋದ್ರಿಕ್ತ ಜನತೆಯ ಭಾವನೆಯನ್ನು ಶಮುನಗೊಳಿಸಲು ಮುಂಬರಲಿದ್ದ ಸಾರ್ವತ್ರಿಕ ಚುನಾವಣೆಗಳ ಮೇಲೆ ಒಂದು ಕಣ್ಣಿಟ್ಟು ಕೈಕೊಂಡ ಕ್ರಮು ಎನ್ನುವುದು ಸಿದ್ಧವಾಗುತ್ತದೆ.

## ಯಾವುದೇ ಪರಿಹಾರ ನೀಡದೆ ರಾಷ್ಟ್ರೀಕರಿಸಲಿ

ಪಕ್ಷದ ಅಧಿವೇಶನ ಭಾರತ ಸರಕಾರ ಹಾಗೂ ಮಧ್ಯಪ್ರದೇಶ ಸರಕಾರ ಇವೆರಡೂ ತಮ್ಮ ಧೋರಣೆಗಳನ್ನು ಪರಿಷ್ಕರಿಸಿ,

(56ನೇ ಪುಟ ನೋಡಿ)

# ಸರಕಾರೀ ನೌಕರರ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ

ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರನ್ನು ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವ ಮೊದಲು ಆತ್ಮರಕ್ಷಣೆ ಮಾಡಿಕೊಳ್ಳುವ ಅವಕಾಶದ ಹಕ್ಕಿನಿಂದ ವಂಚಿಸುವ ಸಂವಿಧಾನದ 311 (2) (ಬಿ) ಕಲಮಿನ ಮೇಲೆ ಅತ್ಯುಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪನ್ನು ಬಲವಾಗಿ ಖಂಡಿಸುತ್ತದೆ.

ಸಂವಿಧಾನದ 310ನೇ ಕಲಮು ಒಬ್ಬ ಸರಕಾರೀ ನೌಕರ ತಾನು ರಾಷ್ಟ್ರಪತಿ ಅಥವಾ ರಾಜ್ಯಪಾಲರ ಇಚ್ಛೆಯಿರುವವರೆಗೆ ತನ್ನ ನೌಕರಿ ಹೊಂದಿರುತ್ತಾನೆ ಎಂದು ವಿಧಿಸಿದರೆ 311 (2) (ಎ) (ಬಿ) (ಸಿ) ಕಲಮು ಸರಕಾರೀ ನೌಕರರನ್ನು ಯಾವುದೇ ಆರೋಪಪಟ್ಟಿಕೊಡದೆ ಅಥವಾ ಯಾವುದೇ ತನಿಖೆ ನಡೆಸದೆ ವಜಾ ಮಾಡಲು ಸರಕಾರಕ್ಕೆ ಅಧಿಕಾರ ನೀಡುತ್ತದೆ.

ಈ ಕಲಮುಗಳನ್ನು ಸ್ವಾತಂತ್ರ್ಯ ಪಡೆದಂದಿನಿಂದ ಹಲವಾರು ಕಾರ್ಮಿಕ ಸಂಘಗಳ ಸಕ್ರಿಯ ಕಾರ್ಯಕರ್ತರ ವಿರುದ್ಧ ಬಳಸಲಾಗುತ್ತಿದೆ. ಇತ್ತೀಚಿನ ಅತುಚ್ಚ ನ್ಯಾಯಾಲಯದ ತೀರ್ಪು 1973 ರಷ್ಟು ಹಿಂದೇನೇ ರೈಲ್ವೇ ಅಧಿಕಾರಿಗಳು ಸಹಿ ಹಾಕಿದ ಹತ್ತು ಗಂಟೆಗಳ ಗರಿಷ್ಠ ಕೆಲಸದ ಒಪ್ಪಂದವನ್ನು ಜಾರಿಗೊಳಿಸದೇ ಇದ್ದುದರ ವಿರುದ್ಧ ಹೋರಾಡಿದ್ದಕ್ಕಾಗಿ ಹಲವಾರು ಲೋಕೋ-ನಿರ್ವಾಹಕ ಸಿಬ್ಬಂಧಿಯನ್ನು ಮನಸ್ವೇಚ್ಛೆ ವಜಾಮಾಡಿದ ಬಗ್ಗೆ ನಿಷ್ಕಾಳಜಿಯಿಂದ ಸಮರ್ಥಿಸಿದೆ.

ಹನ್ನೆರಡನೇ ಅಧಿವೇಶನ ಅತ್ಯುಚ್ಚ ನ್ಯಾಯಾಲಯದ ತೀರ್ಪನ್ನು ಒಗ್ಗಟ್ಟಿನಿಂದ ವಿರೋಧಿಸಿದುದಕ್ಕೆ ಸರಕಾರೀ ನೌಕರರು ಹಾಗೂ ಕಾರ್ಮಿಕ ಸಂಘಟನೆಯ ಆಂದೋಲನವನ್ನು ಅಭಿನಂದಿಸುತ್ತದೆ. ಅತ್ಯುಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಹಾಗೂ ಈ ಪ್ರಗತಿ ವಿರೋಧಿ ಕಲಮುಗಳನ್ನು ಭಾರತದ ಸಂವಿಧಾನದಿಂದ ಕೈಬಿಡಬೇಕೆಂದು ಒತ್ತಾಯಿಸಿ 1986 ರ ಫೆಬ್ರುವರಿ 26 ರಂದು ಒಂದು ದಿನದ ದೇಶವ್ಯಾಪೀ ಮುಷ್ಕರವನ್ನು ನಡೆಸಬೇಕೆಂದು 50 ಲಕ್ಷ ರಾಜ್ಯ ಸರ್ಕಾರೀ ನೌಕರರ ಒಕ್ಕೂಟದ ಕರೆಯನ್ನು ಅಧಿವೇಶನ ಬೆಂಬಲಿಸುತ್ತದೆ.

## ಸಂವಿಧಾನದಿಂದ ಕಿತ್ತು ಹಾಕಿ

ಹನ್ನೆರಡನೇ ಅಧಿವೇಶನ 1) ಸಂವಿಧಾನದ 310ನೇ ಕಲಮು ಹಾಗೂ 311 ನೇ ಕಲಮಿನ (a) (b) (c) ಪರಿಚ್ಛೇದಗಳನ್ನು ಕೈಬಿಟ್ಟು ಆ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರೀ ನೌಕರರಿಗೆ ಆತ್ಮ ರಕ್ಷಣೆಯ ಹಾಗೂ ಅಧಿಕಾರಿ ಶಾಹಿಯ ಸ್ವೇಚ್ಛಾಚಾರದ ಕ್ರಮದಿಂದ ರಕ್ಷಣೆಯ ಹಕ್ಕು ಕೊಡಬೇಕೆಂದು,

2) ಸಂಘ ರಚಿಸುವ ಸ್ವಾತಂತ್ರ್ಯ ಮತ್ತು ಸಂಘಟನೆಯ ಹಾಗೂ ಸಾಮೂಹಿಕ ಚೌಕಾಸಿಯ ಹಕ್ಕುಗಳನ್ನು ಕುರಿತಾದ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ನಡವಳಿಕೆಯನ್ನು ಭಾರತ ಸರಕಾರ ಸ್ಥಿರೀಕರಿಸಬೇಕೆಂದು,

3) ಮತ್ತಷ್ಟು ವಿಳಂಬ ಮಾಡದೆ ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರಿಗೆ ನಿರ್ಬಂಧರಹಿತ ಕಾರ್ಮಿಕ ಸಂಘಟನೆಯ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡಬೇಕೆಂದು,

4) ಅತ್ಯುಚ್ಚ ನ್ಯಾಯಾಲಯದ ತೀರ್ಪಿನ ಫಲವಾಗಿ ಸರ್ಕಾರೀ ನೌಕರರ ವಿರುದ್ಧ ಕೈಗೊಂಡ ಎಲ್ಲಾ ಕ್ರಮಗಳನ್ನು ತಕ್ಷಣ ವಾಪಾಸು ಪಡೆಯಬೇಕೆಂದು ಒತ್ತಾಯಿಸುತ್ತದೆ.

ಹನ್ನೆಡನೇ ಅಧಿವೇಶನ ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರಿಗೆ ಬೆಂಬಲವಾಗಿ ನಿಂತು ತಮ್ಮ ಹೋರಾಟದಲ್ಲಿ ಅವರು ಯಶಸ್ಸು ಗಳಿಸಲು ಸಾಧ್ಯವಾಗುವಂತೆ ಮಾಡಬೇಕೆಂದು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ವಿನಂತಿಸಿಕೊಳ್ಳುತ್ತದೆ.

---

(55ನೇ ಪುಟದಿಂದ ಮುಂದುವರಿದಿದೆ)

ಅಸಂಸ್ಥಾದ ಈ ಬಹುರಾಷ್ಟ್ರೀಯ ಕಂಪೆನಿಯಿಂದ ತಕ್ಕ ನಷ್ಟ ಪರಿಹಾರವನ್ನು ಪಡೆದು ಅದರ ಹಾಗೂ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅದರ ಅಂಗ ಸಂಸ್ಥೆಗಳ ಸೊತ್ತುಗಳನ್ನು ಯಾವುದೆ ಪರಿಹಾರ ನೀಡದೆ ರಾಷ್ಟ್ರೀಕರಿಸಿ ಜನತೆಗೆ ದೀರ್ಘಕಾಲೀನ ವೈದ್ಯಕೀಯ ನೆರವು ಹಾಗೂ ಪರಿಹಾರದ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತದೆ.

## ಸಾಮೂಹಿಕ ಸಂಘಟನೆಗಳ ಬಗ್ಗೆ ಮೆಚ್ಚುಗೆ

ಈ ಬೇಡಿಕೆಗಳಿಗಾಗಿ ಒಂದು ಅವ್ಯಾಹತ ಆಂದೋಲನ ಕಟ್ಟಬೇಕೆಂದು ತನ್ನ ಸದಸ್ಯರಿಗೆ ಕರೆ ನೀಡುತ್ತದೆ. ಮಧ್ಯಪ್ರದೇಶದ ಪಕ್ಷ ಹಾಗೂ ಇತರ ಸಾಮೂಹಿಕ ಸಂಘಟನೆಗಳು ಸಂಕಷ್ಟ ಪೀಡಿತ ಜನತೆಗೆ ಪರಿಹಾರ ಒದಗಿಸುವಲ್ಲಿ ಕೈಗೊಂಡ ಮಹತ್ವದ ಕೆಲಸವನ್ನು ಅಧಿವೇಶನ ಮೆಚ್ಚುಗೆಯಿಂದ ಗಮನಿಸುತ್ತದೆ.

ಅಧಿವೇಶನ ಸಂಕಷ್ಟ ಪೀಡಿತ ಜನತೆಗೆ ಆಳವಾದ ಸಹಾನುಭೂತಿ ಹಾಗೂ ದುಃಖ ತಪ್ತ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸುತ್ತದೆ.

ಜಂಟೀ ಉದ್ಯಮದ ಬಗ್ಗೆ ಬಿ. ಟಿ. ಆರ್. ಮಧ್ಯ ಪ್ರವೇಶ:

# ವರ್ಗ ಸಂಘರ್ಷದಲ್ಲಿ ಕಾರ್ಯತಾಂತ್ರಿಕ ಪ್ರತಿಕ್ರಿಯೆ

**ಪಶ್ಚಿಮ ಬಂಗಾಳದಲ್ಲಿ ಜಂಟಿ ಉದ್ಯಮಗಳ ಬಗ್ಗೆ ಪಕ್ಷದ ನಿಲುವನ್ನು ವಿವರಿಸಲು, ರಾಜಕೀಯ ಸಂಘಟನಾ ವರದಿಯ ಚರ್ಚೆಯ ಸಮಯದಲ್ಲಿ ಕಾ. ಬಿ. ಟಿ. ಆರ್. ರವರು ಮಾಡಿದ ಭಾಷಣದ ಪೂರ್ಣ ವರದಿ.**

ಸಂಗಾತಿಗಳೆ,

ರಾಜಕೀಯ-ಸಂಘಟನಾ ವರದಿಯ ಕರಡಿನಲ್ಲಿ ಪಶ್ಚಿಮ ಬಂಗಾಳದ ಜಂಟೀ ಉದ್ಯಮಗಳ ಬಗೆಗಿನ ಭಾಗಕ್ಕೆ ಇನ್ನೂ ಹೆಚ್ಚಿನ ವಿವರಣೆ ಬೇಕೆಂದು ಸಂಗಾತಿಗಳಿಗೆ ಅನಿಸಿದ್ದರಿಂದ ನಾನು ಮಾತನಾಡಬೇಕಾಗಿದೆ. ಅಲ್ಲಿ ಸಾರಾಂಶ ರೂಪದಲ್ಲಿ ಹೇಳಿರುವುದು ಸಂಗಾತಿಗಳಿಗೆ ತೃಪ್ತಿ ತಂದಿಲ್ಲವೆಂಬುದು ಎದ್ದು ತೋರುತ್ತಿದೆ. ಈ ಗೊಂದಲ ಹಾಗೂ ಹೆಚ್ಚಿನ ಸ್ಪಷ್ಟೀಕರಣದ ಬಗ್ಗೆ ಒತ್ತಾಯ ಅರ್ಥವಾದಂತಹದ್ದು. ಇದು, ಪಕ್ಷದ ಕಣ್ಣೋಟದ ಸ್ವಚ್ಛತೆಯ ರಕ್ಷಣೆಯ ಬಗ್ಗೆ, ಪಕ್ಷದ ಧೋರಣೆಯ ಮೂಲ ತತ್ತ್ವಗಳ ಬಗ್ಗೆ ಪ್ರತಿನಿಧಿಗಳು ವಹಿಸಿದ ಎಚ್ಚರವನ್ನು ಪ್ರತಿಬಿಂಬಿಸುತ್ತದೆ.

ನಾವೊಂದು ಹೊಸ ಪರಿಸ್ಥಿತಿಯ ಬಗ್ಗೆ ವ್ಯವಹರಿಸುತ್ತಿದ್ದೇವಾದ್ದರಿಂದ ಈ ಗೊಂದಲ ಹುಟ್ಟಿದೆ. ನಮ್ಮ ದೇಶದಲ್ಲಿ ಉಂಟಾಗುತ್ತಿರುವ ವರ್ಗ ಬೆಳವಣಿಗೆಗಳ ಸಂದರ್ಭದಲ್ಲಿ ನಾವು ಈ ಕ್ರಮವನ್ನು ಅರ್ಥಮಾಡಿಕೊಳ್ಳಬೇಕು.

ಮೊದಲನೆಯದಾಗಿ, ರಾಜಕೀಯ-ಸಂಘಟನಾ ವರದಿ ಬಹುರಾಷ್ಟ್ರೀಯ ಕಂಪನಿಗಳ ಸಂಬಂಧದಲ್ಲಿ ನಮ್ಮ ಮೂಲ ನಿಲುವನ್ನು ಪುನರ್ ಪ್ರತಿಪಾದನೆ ಮಾಡುತ್ತದೆ. ಈ ಬಹು ರಾಷ್ಟ್ರೀಯಗಳಿಗೆ ನಮ್ಮ ಆರ್ಥಿಕದ ಮೇಲೇರಬಯಸುವ ಅವರ ಹವಣಿಕೆಗೆ ನಮ್ಮ ಪಕ್ಷದ ವಿರೋಧವಿದೆ. ಕೇಂದ್ರ ಸರಕಾರ ಅವರಿಗೆ ತೋರಿಸಿದ ಎಲ್ಲಾ ರಿಯಾಯಿತಿಗಳನ್ನು ನಾವು ಬಲವಾಗಿ ವಿರೋಧಿಸುತ್ತೇವೆ ಹಾಗೂ ದೇಶದೊಳಗಿನ ಸಂಪನ್ಮೂಲಗಳನ್ನು ಒಗ್ಗೂಡಿಸಿ ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕೆಂದೂ, ವಿದೇಶಿ ಕಂಪನಿಗಳ ಮೇಲೆ ಅವಲಂಬನೆಯಿಂದ ಹೊರಬರಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತೇವೆ. ಈ ಕೆಲಸವನ್ನು ನೆರವೇರಿಸುವುದಕ್ಕೆ ಬೇಕಾದ ಸಂಪನ್ಮೂಲಗಳನ್ನು ಸಂಗ್ರಹಿಸಲು ಅವಶ್ಯವಿರುವ ಸಂಪೂರ್ಣ ಅಧಿಕಾರ ಕೇಂದ್ರ ಸರಕಾರಕ್ಕಿದೆ.

ಒಂದು ಏಕಸ್ವಾಮ್ಯ ಬಂಡವಾಳಶಾಹಿಗೆ ಸಂಬಂಧವಿರುವ ಖಾಸಗಿ ಕಂಪನಿಯೊಂದರ ಜೊತೆಯಲ್ಲಿ ಪಶ್ಚಿಮ ಬಂಗಾಳ ಸರಕಾರ ಜಂಟೀ ಉದ್ಯಮ ಒಪ್ಪಂದವೊಂದಕ್ಕೆ ಸಹಿ ಹಾಕಿರುವುದರಿಂದ ಈ ಗೊಂದಲ ಮೂಡಿದೆ.

## ವರ್ಗ ಸಂಘರ್ಷದ ಈಗಿನ ಸಂದರ್ಭ

ಎಡರಂಗ ಸರಕಾರದ ಕಾರ್ಯ ನಿರ್ವಹಣೆ, ಅದರ ಪಾತ್ರ, ಅದು ಯಾವ ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ, ಯಾವ ಕರ್ತವ್ಯಗಳನ್ನು ಸಾಧಿಸಬೇಕಾಗಿದೆ ಎಂಬುದನ್ನು ವರ್ಗ ಸಂದರ್ಭದಲ್ಲಿಟ್ಟು ನೋಡದ ಹೊರತು ಈ ಗೊಂದಲ ಪರಿಹಾರವಾಗುವುದಿಲ್ಲ.

ನಾವು ಎಡರಂಗ ಸರ್ಕಾರವನ್ನು ಒಂದು ಪಕ್ಷ ಇನ್ನೊಂದು ಪಕ್ಷದ ಮೇಲೆ ಪಡೆಯುವ ಯಾವುದೇ ಚುನಾವಣಾ ವಿಜಯದಂತೆ ಪರಿಗಣಿಸಬಹುದೇ ? ಎಸ್. ಟಿ. ಆರ್. ಅಥವಾ ಹೆಗ್ಗಡೆ ಮಂತ್ರಿಮಂಡಲದ ಜೊತೆ ಎಡರಂಗ ಸರ್ಕಾರವನ್ನೂ ಸಮೀಕರಿಸಬಹುದೇ ? ಅನೇಕ ಜನ ಇವನ್ನು ಒಂದೇ ಸಮನಾಗಿ ಕಾಣುತ್ತಿದ್ದಾರೆ. ಆದರೆ ಸಂವಿಧಾನಿಕವಾಗಿ ಆಯ್ಕೆಯಾಗಿದ್ದರೂ, ಇವು ಈ ದಿನದ ಸಾಮಾಜಿಕ ವ್ಯವಸ್ಥೆಗೆ ಹೊರಗಿನದಾದ ಅಂಶವನ್ನು ಪ್ರತಿನಿಧಿಸುತ್ತವೆ. ಅವು ಎಲ್ಲಿಯೂ ಅಧಿಕಾರದಲ್ಲಿರಬಹುದೆಂದು ನಿರೀಕ್ಷಿಸಲಾಗದ ವರ್ಗವನ್ನು, ಯಾವ ವರ್ಗದ ಪ್ರಗತಿಯನ್ನು ಆಳುವವರ್ಗಗಳು ಸೀಮಿತಗೊಳಿಸಿಯೇ ತೀರುತ್ತವೆಯೋ ಆ ವರ್ಗವನ್ನು ಪ್ರತಿನಿಧಿಸುತ್ತವೆ. ಈ ಎರಡು ಎಡರಂಗ ಸರ್ಕಾರಗಳು ನಮ್ಮ ಸಮಾಜದ ವರ್ಗ ಸಂಘರ್ಷದ ನೇರ

ಫಲಗಳು. ಜನತೆ ಮತ್ತು ಆಳುವ ವರ್ಗ ಹಾಗೂ ಪಕ್ಷದ ಪ್ರಮುಖ ವೈರುಧ್ಯ ರೂಪುಗೊಳ್ಳುವ ಅನೇಕ ರೀತಿಗಳಲ್ಲಿ ಒಂದು, ಈ ಎರಡು ಸಚಿವ ಸಂಪುಟಗಳು ನಿರ್ಮಾಣವಾಗಿ ಕಾರ್ಯನಿರ್ವಹಿಸುತ್ತಿರುವುದು.

## ಹೋರಾಟದ ಆಯುಧಗಳು

ಈ ಸರಕಾರಗಳ ಪೂರ್ಣ ಸಾಧ್ಯತೆಗಳನ್ನು ನಾವು ಉಪಯೋಗಿಸಿಕೊಳ್ಳುವ ಬಗೆ ಹೇಗೆ? ಕೆಲವರು ಪೂರ್ಣ ಸಾಧ್ಯತೆ ಎಂದರೆ ಯಾವುದಾದರೊಂದು ಪರಿಹಾರಗಳನ್ನು ನೀಡುವುದು ಎಂದು ಬಗೆಯುತ್ತಾರೆ. ಪರಿಹಾರಗಳೇನೊ ಅವಶ್ಯಕ ನಿಜ. ಆದರೆ ಅದು ಸರ್ಕಾರದ ಪೂರ್ಣಸಾಮರ್ಥ್ಯವನ್ನು ಹೊರತರುವುದಿಲ್ಲ. ಇನ್ನೂ ಕೆಲವರು ಈ ಸರ್ಕಾರಗಳು, ಬಂಗಾಳ ತ್ರಿಪುರಾಗಳ ಮುಖವನ್ನೇ ಬದಲಾಯಿಸಿಬಿಡಬಹುದೆನ್ನುತ್ತಾರೆ. ಇದು ಸುಧಾರಣಾವಾದ. ಈಗಿನ ಸಾಮಾಜಿಕ ವ್ಯವಸ್ಥೆ ಇರುವವರೆಗೂ ಯಾವುದೇ ಮೂಲಭೂತ ಬದಲಾವಣೆ ಸಾಧ್ಯವಿಲ್ಲ. ಪೂರ್ಣ ಸಾಧ್ಯತೆಗಳೆಂದರೆ, ಬಂಡವಾಳಶಾಹಿ ಭೂಮಾಲಿಕ ವರ್ಗಗಳ ನಿಯಂತ್ರಣದಲ್ಲಿರುವ ಇಂದಿನ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾ, ಮೂಲವರ್ಗಗಳನ್ನು ಅಣಿನೆರೆಸುವ ಸಾಧನವಾಗಿ, ನಾಳೆ ಬೇರೊಂದು ರೂಪದ ಹೋರಾಟವನ್ನು, ಬೀದಿ ಬೀದಿಗಳಲ್ಲಿ ಹೋರಾಟವನ್ನು ಯಾವ ಜನಸಮೂಹಗಳು ಮಾಡಬೇಕಾಗುತ್ತದೆಯೋ ಆ ಜನಸಮೂಹಗಳ ಮೇಲೆ ನಮ್ಮ ಪ್ರಭಾವವನ್ನು ಸಾಂದ್ರಗೊಳಿಸುವ ಮೂಲವರ್ಗಗಳನ್ನು ಅಣಿನೆರೆಸುವ ಸಾಧನವಾಗಿ ಪರಿಣಮಿಸುವುದೇ ಸರ್ಕಾರದ ಪೂರ್ಣ ಸಾಧ್ಯತೆಯೆಂದರೆ ಅರ್ಥ.

ಈ ಮಂತ್ರಿಮಂಡಲಗಳು ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ಮುಂಚೂಣಿಯ ಧಾಳಿಯನ್ನು ಆರಂಭಿಸಬೇಕೆಂದು ನಾವೆಂದೂ ನಿರೀಕ್ಷಿಸಿರಲಿಲ್ಲ. ಅಂತಹ ಒಂದು ನಿರೀಕ್ಷೆ ಸುಧಾರಣಾವಾದಿತನದ್ದು, ಒಂದು ಸಚಿವ ಸಂಪುಟದ ಪಾತ್ರದ ಬಗ್ಗೆ ಅತಿ ನಿರೀಕ್ಷೆಯನ್ನುಂಟುಮಾಡುವಂತಹದ್ದು. ಒಂದು ಹೋರಾಟದ ಸಾಧನವಾಗಿ ಈ ಸಚಿವ ಸಂಪುಟಗಳು, ಜನತಾ ಪ್ರಜಾಪ್ರಭುತ್ವರಂಗದ ಹೋರಾಟದಲ್ಲಿ ಬಹುಮುಖ್ಯವೆಂದು ನಾವು ಪರಿಗಣಿಸುತ್ತೇವೆಯೋ ಆ ವರ್ಗಗಳ ಮತ್ತು ಜನತೆಯ ಇನ್ನಷ್ಟು ಮತ್ತಷ್ಟು ಐಕ್ಯತೆಗೆ, ಧೃಢೀಕರಣಕ್ಕೆ, ಜನಸಮೂಹಗಳ ಮೇಲೆ ಪಕ್ಷದ ಹಿಡಿತವನ್ನು ಮತ್ತಷ್ಟು ಧೃಡಗೊಳಿಸುವುದಕ್ಕೆ ಕಾರಣವಾಗಬೇಕು. ಈ ಉದ್ದೇಶದ ಸಾಧನೆಯಾದರೆ, ಅವುಗಳ ಸಾಮರ್ಥ್ಯದ ಪೂರ್ಣ ಬಳಕೆಯಾದಂತೆಯೇ ಸರಿ.

ವಾಸ್ತವವೇನೆಂದರೆ ಪಶ್ಚಿಮ ಬಂಗಾಳ ಹಾಗೂ ತ್ರಿಪುರಾ ಸರ್ಕಾರಗಳ ಅಸ್ತಿತ್ವದ ಜೊತೆ ಜೊತೆಯಲ್ಲಿಯೇ ಕೇಂದ್ರ ಹಾಗೂ ರಾಜ್ಯಗಳ ನಡುವಿನ ಹೋರಾಟ ಮುಂದುವರಿಯುತ್ತಿರುತ್ತದೆ. ಆದರೆ ಬೇರೆ ಕಾಂಗ್ರೆಸ್ಸೇತರ ರಾಜ್ಯಗಳು ಹಾಗೂ ಕೇಂದ್ರದ ನಡುವಿನ ಹೋರಾಟಕ್ಕೆ ಭಿನ್ನವಾಗಿ, ಈ ಹೋರಾಟ (ಎಡರಂಗಗಳ ಹಾಗೂ ಕೇಂದ್ರದ ನಡುವಿನ ಹೋರಾಟ) ಬಂಡವಾಳಶಾಹಿ-ಭೂಮಾಲಕ ಸರಕಾರದ ನಡುವಿನ ಹಾಗೂ ಕಾರ್ಮಿಕವರ್ಗ ಹಾಗೂ ಜನತೆಯ ನಡುವಿನ ಹೋರಾಟ-ಈ ಹೋರಾಟದಲ್ಲಿ ಎಡರಂಗ ಸರ್ಕಾರಗಳನ್ನು ಅಲ್ಲಾಡಿಸಲು, ಅಗೌರವಗೊಳಿಸಲು ಕೇಂದ್ರ ಸರಕಾರ ಅನೇಕ ಮಾರ್ಗಗಳನ್ನು ಅನುಸರಿಸುತ್ತದೆ.

## ಆರ್ಥಿಕ ದಿಗ್ಬಂಧನ

ಆರಂಭದಲ್ಲಿ, ಕಾನೂನು ಹಾಗೂ ನ್ಯಾಯ ಪಾಲನೆಯ ಸಮಸ್ಯೆಯನ್ನು ಸೃಷ್ಟಿಸಲು ಪ್ರಯತ್ನಿಸಿದರು. ನಮ್ಮ ಪಕ್ಷ ಕಾಂಗ್ರೆಸ್ (ಐ) ಜನಗಳ ಕೊಲೆಗೆ ಕಾರಣ ಇತ್ಯಾದಿ ಇತ್ಯಾದಿಯಾಗಿ ಮಸಿಬಳಿಯುವುದಕ್ಕೆ ಆರಂಭಿಸಿದರು. 1982 ರ ಚುನಾವಣೆಯಲ್ಲಿ ಬಹುಮತವನ್ನು ಸ್ಥಾಪಿಸಿದ ನಮ್ಮ ಪಕ್ಷ ಹಾಗೂ ಎಡರಂಗ ಪ್ರಚಂಡ ವಿಜಯ ಪಡೆಯಿತು. ವರ್ಗ ಸಂಘರ್ಷದ ಮೊದಲ ಹಂತದ ಕೊನೆಯಲ್ಲಿ ಲೆಕ್ಕಾಚಾರ ನಮಗೆ ಬಹಳ ಅನುಕೂಲ ಫಲಿತಾಂಶವನ್ನೇ ತೋರಿಸಿದೆ. ಪಕ್ಷದ ಸುತ್ತ ಜನರನ್ನು ನೆರೆಸುವ ಕೆಲಸ ಮುಂದುವರಿದಿದೆ.

ಎರಡನೆಯ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದ ನಂತರ ಹೋರಾಟ ಇನ್ನೂ ತೀವ್ರ ರೂಪ ತಳೆಯಿತು. ಮೊದಲ ಹಂತದಲ್ಲಿ ಮತ್ತು ಎರಡನೇ ಹಂತದಲ್ಲೆರಡರಲ್ಲಿಯೂ ಎಡರಂಗವನ್ನು ಹೀಗಳೆಯುವುದಕ್ಕೆ, ಜನರ ಜೊತೆಗಿನ ಸಂಬಂಧವನ್ನು ಮುರಿಯುವುದಕ್ಕೆ ಆರ್ಥಿಕ ಭೇದನೀತಿಯನ್ನು ಬಳಸಿದರು. ಕೇಂದ್ರದ ಸಂಪನ್ಮೂಲಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದು, ಖಾಸಗಿ ಕಂಪನಿಗಳಿಂದ ಯಾವುದೇ ಹಣಹೂಡಿಕೆಯನ್ನು ತಡೆಯುವುದು ಇವೇ ಈ ಆರ್ಥಿಕ ಆಯುಧಗಳು. ಈ ಉದ್ದೇಶಕ್ಕಾಗಿ ಕೇಂದ್ರ ಸರಕಾರ ನೀಡಬೇಕಾದ ನ್ಯಾಯಬದ್ಧ ಸಹಾಯವನ್ನು, ಕೈಗಾರಿಕಾ ಲೈಸೆನ್ಸ್‌ಗಳನ್ನು ನಿರಾಕರಿಸಲಾಯಿತು.

ಪಶ್ಚಿಮ ಬಂಗಾಳ ಎದುರಿಸುತ್ತಿರುವ ಪರಿಸ್ಥಿತಿಯನ್ನು ನಿರ್ವಹಿಸಲು ಎಡರಂಗ ಸರಕಾರ ಅನರ್ಹ ಎಂದು ಜನರಿಗೆ ತೋರಿಸುವ ಪ್ರಯತ್ನವಿದು. ಇಂತಹ ಅಪಪ್ರಚಾರದಿಂದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಸ್ವಲ್ಪ ಲಾಭವನ್ನು ಪಡೆ

(60ನೇ ಪುಟ ನೋಡಿ)

# ಸಂವಿಧಾನಕ್ಕೆ ತಿದ್ದುಪಡಿಗಳು

1) ಸಂವಿಧಾನದ ಸದ್ಯದ ನಿಯಮ-9 ರ ಮೊದಲವಾಕ್ಯದಲ್ಲಿ "ಪಕ್ಷದ ಎಲ್ಲಾ ಸದಸ್ಯರು ಮತ್ತು ಉಮೇದುವಾರ ಸದಸ್ಯರು ಪಕ್ಷದ ಸದಸ್ಯತ್ವ ಚಂದಾ ವರ್ಷಕ್ಕೆ ಒಂದು ರೂಪಾಯಿ ಕೊಡಬೇಕು" ಎಂದಿದೆ. ಈ ವಾಕ್ಯವನ್ನು ತಿದ್ದುಪಡಿ ಮಾಡಿ ಈ ರೀತಿ ಸೇರಿಸಿಕೊಳ್ಳಬೇಕು—

"ಪಕ್ಷದ ಎಲ್ಲಾ ಸದಸ್ಯರು ಮತ್ತು ಉಮೇದುವಾರ ಸದಸ್ಯರು ಪಕ್ಷದ ಸದಸ್ಯತ್ವ ಚಂದಾ ವರ್ಷಕ್ಕೆ ಎರಡು ರೂಪಾಯಿ ಕೊಡಬೇಕು" ನಿಯಮದ ಉಳಿದ ಭಾಗ ಮೊದಲಿನಂತೆಯೇ ಇರುತ್ತದೆ.

2) ಸಂವಿಧಾನದಲ್ಲಿ ಸದ್ಯದ ನಿಯಮ-14 ವಿಭಾಗ 1 (ಅ) ಹೀಗಿದೆ—

"ಕೇಂದ್ರ ಸಮಿತಿಗೆ ಅವಶ್ಯಕವೆನಿಸಿದಾಗ, ಅಥವಾ ಪಕ್ಷದ ಸದಸ್ಯರ ಮೂರಲ್ಲೊಂದು ಭಾಗದಷ್ಟನ್ನು ಪ್ರತಿನಿಧಿಸುವ ಪಕ್ಷದ ರಾಜ್ಯ ಸಂಘಟನೆಗಳು ಕೇಳಿಕೊಂಡಾಗ ಪಕ್ಷದ ವಿಶೇಷ ಅಧಿವೇಶನವನ್ನು ಕೇಂದ್ರ ಸಮಿತಿ ಕರೆಯತಕ್ಕದ್ದು" ಅದನ್ನು ಈ ರೀತಿ ತಿಧ್ದುಪಡಿ ಮಾಡಬೇಕು—

"ಕೇಂದ್ರ ಸಮಿತಿಗೆ ಅವಶ್ಯಕವೆನಿಸಿದಾಗ, ಅಥವಾ ಪಕ್ಷದ ಒಟ್ಟು ಸದಸ್ಯತ್ವದ ಕನಿಷ್ಟ ಮೂರರಲ್ಲೊಂದು ಭಾಗದಷ್ಟನ್ನು ಪ್ರತಿನಿಧಿಸುವ ಎರಡು ಅಥವಾ ಹೆಚ್ಚು ರಾಜ್ಯ ಸಮಿತಿಗಳು ಕೇಳಿಕೊಂಡಾಗ ಪಕ್ಷದ ವಿಶೇಷ ಅಧಿವೇಶನವನ್ನು ಕೇಂದ್ರ ಸಮಿತಿ ಕರೆಯತಕ್ಕದ್ದು."

3) ಸದ್ಯದ ನಿಯಮ-19, ವಿಭಾಗ 7 ಹೀಗಿದೆ—

"ಪಕ್ಷದ ಸದಸ್ಯರನ್ನು ಹೊರಹಾಕುವ ಯಾವುದೇ ತೀರ್ಮಾನವೂ ಕ್ರಮ ತೆಗೆದುಕೊಂಡಿರುವ ಘಟಕದ ಮೇಲಿನ ಸಮಿತಿಯ ಒಪ್ಪಿಗೆಯಿಲ್ಲದೆ ಜಾರಿಗೆ ಬರುವುದಿಲ್ಲ. ಪಕ್ಷದಿಂದ ಹೊರಹಾಕಿದ ಸದಸ್ಯರನ್ನು ಮೇಲಿನಿಂದ ಒಪ್ಪಿಗೆ ಬರುವವರೆಗೆ ಪಕ್ಷದ ಎಲ್ಲಾ ಚಟುವಟಿಕೆಗಳಿಂದಲೂ ತೆಗೆದುಹಾಕತಕ್ಕದ್ದು."

ಮೇಲಿನ ಒಕ್ಕಣಿಕೆಯ ನಂತರ ಈ ರೀತಿ ಸೇರಿಸಬೇಕು.

"ಹೊರಹಾಕಲ್ಪಟ್ಟ ಸದಸ್ಯ ಮೇಲಿನ ಸಮಿತಿ ಒಪ್ಪಿಗೆ ಕೊಡುವ ತನಕ ಪಕ್ಷದ ಸದಸ್ಯತ್ವದಿಂದ ಅಮಾನತುಗೊಳಿಸಲ್ಪಟ್ಟಿರುತ್ತಾನೆ. ಮೇಲಿನ ಸಮಿತಿ ಆರು ತಿಂಗಳೊಳಗೆ ತನ್ನ ನಿರ್ಣಯವನ್ನು ತಿಳಿಸತಕ್ಕದ್ದು."

4) ಸದ್ಯದ ನಿಯಮ-22, ವಿಭಾಗ 1 ಹೀಗಿದೆ—

"ಪಕ್ಷದ ಅಧಿವೇಶನಕ್ಕೆ ಎರಡು ತಿಂಗಳಿಗೆ ಮೊದಲು ಪಕ್ಷದ ಎಲ್ಲಾ ಘಟಕಗಳಲ್ಲಿ ಚರ್ಚಿಸುವುದಕ್ಕಾಗಿ ಕರಡು ನಿರ್ಣಯಗಳನ್ನು ಕೇಂದ್ರ ಸಮಿತಿ ಬಿಡುಗಡೆ ಮಾಡಬೇಕು...." ಇತ್ಯಾದಿ.

"ಅದನ್ನು ಎಲ್ಲಾ ರಾಜ್ಯ ಸಮಿತಿಗಳು ತಂತಮ್ಮ ಭಾಷೆಗಳಲ್ಲಿ ಅನುವಾದಿಸಿ ಎಲ್ಲಾ ಶಾಖಾ ಸಮಿತಿಗಳಿಗೆ ಅಗತ್ಯವಿದ್ದಷ್ಟು ಪ್ರತಿಗಳನ್ನು ಕೇಂದ್ರ ಸಮಿತಿ ಕರಡನ್ನು ಬಿಡುಗಡೆ ಮಾಡಿದ ನಂತರ ಸಾಧ್ಯವಾದಷ್ಟುಅಲ್ಪಾವಧಿಯಲ್ಲಿ ಕಳಿಸತಕ್ಕದ್ದು" ಎಂಬ ವಾಕ್ಯವನ್ನೂ ಈಗಿನ ತೊಂದರೆಯನ್ನು ಪರಿಹರಿಸಿಕೊಳ್ಳಲು ಸೇರಿಸಬೇಕಾಗಿದೆ.

[**ಟಿಪ್ಪಣಿ:** ಕೆಲವು ಸಂಗಾತಿಗಳು ಕೆಲವು ತಿದ್ದುಪಡಿಗಳನ್ನು ಸೂಚಿಸಬಯಸುತ್ತಾರೆ. ಆದರೆ ಕಟ್ಟು ನಿಟ್ಟಾಗಿ ಹೇಳುವುದಾದರೆ, ಇಂತಹ ತಿದ್ದುಪಡಿಗಳು ಪಕ್ಷದ ಸಂವಿಧಾನದ ನಿಯಮ-24 ರ ಪ್ರಕಾರ ರೂಪಿಸುವ ಉಪನಿಬಂಧನೆಗಳಲ್ಲಿ ಬರುತ್ತವೆ. ಇದುವರೆಗೆ ಕೇಂದ್ರ ಸಮಿತಿ ಯಾವ ಉಪನಿಬಂಧನೆಯ ಕರಡನ್ನೂ ಕೂಡಾ ಸಿದ್ಧಗೊಳಿಸಿಲ್ಲ ಮತ್ತು ಅಂಗೀಕರಿಸಿಲ್ಲ. ಅದನ್ನು ಶೀಘ್ರವಾಗಿ ಮಾಡಬೇಕು. ಉಪನಿಬಂಧನೆಗಳ ವರ್ಗಕ್ಕೆ ಸೇರುವ ಇಂತಹ ಎಲ್ಲಾ ಸೂಚನೆ ಮತ್ತು ಪ್ರಸ್ತಾಪಗಳನ್ನೂ ಕೇಂದ್ರ ಸಮಿತಿಯ ಪರಿಗಣನೆಗೆ ಕಳಿಸಬಹುದು.]

(58ನೇ ಪುಟದಿಂದ)

ಪಡೆಯಿತು. ಇಂದಿರಾ ಸಾವಿನ ಸಹಾನುಭೂತಿಯ ಅಲೆಯ ಮೇಲೆ ಆಧರಿಸಿದ್ದ ಇವರು, ಕಾಂಗ್ರೆಸ್ (ಐ)ಗೆ ಮತ ನೀಡಿದರೆ ಕೈಗಾರಿಕೆಗಳನ್ನು ಪುನರಾರಂಭಿಸುತ್ತೇವೆ ಎಂದು ಜನರಿಗೆ ಆಶ್ವಾಸನೆ ನೀಡಿದರು. ಕೆಲವು ಜನ ಈ ಬಲೆಯಲ್ಲಿ ಬಿದ್ದು ಕಾಂಗ್ರೆಸ್‌ಗೆ ಮತ ನೀಡಿದರು.

ಆರ್ಥಿಕ ದಿಗ್ಬಂಧನವೆಂದು ಕರೆಯಬಹುದಾದ ಈ ನೀತಿಯನ್ನು ಕೆಲವು ಸಮೀಪ ದೃಷ್ಟಿದೋಷ ಪೀಡಿತ ಜನರು, ಬಂಗಾಲಿಗಳ ವಿರುದ್ಧ ಪಕ್ಷಪಾತ ಎಂದು ಬಗೆಯುತ್ತಾರೆ. ಆದರೆ ವಾಸ್ತವವಾಗಿ ಇದು, ರಾಜ್ಯದ ಕಾರ್ಮಿಕ ವರ್ಗ ಹಾಗೂ ಜನತೆಯ ಮೇಲೆ ಹೂಡಿದ ತೀವ್ರತರ ವರ್ಗ ಸಮರ.

## ವಿಜಯದ ಮಹತ್ವ

ಕ್ರಾಂತಿಕಾರಿ ಬೆಳವಣಿಗೆಗಳ ಕಡೆಗೆ ಮುನ್ನಡೆಯಲು ಅತ್ಯಾವಶ್ಯವೆಂದು ಜಲಂಧರ್ ಅಧಿವೇಶನ ಘೋಷಿಸಿದಂತೆ, ಜನತೆಯ ನಡುವೆ ವರ್ಗ ಶಕ್ತಿಗಳ ಸಮತೋಲನದಲ್ಲಿ ಬದಲಾವಣೆಯನ್ನು ಸಾಧಿಸುತ್ತಿರುವುದರಲ್ಲಿಯೇ ನಾವು ಪಡೆದ ವಿಜಯದ ಮಹತ್ವ ಅಡಗಿದೆ. 5 ವರ್ಷಗಳ ಸಚಿವ ಸಂಪುಟದ ಅಸ್ತಿತ್ವದಲ್ಲಿ ಆಳುವ ಕಾಂಗ್ರೆಸ್ (ಐ) ಮಾತ್ರವೇ ಅಲ್ಲ ಎಲ್ಲ ಬಂಡವಾಳಶಾಹಿ ಪಕ್ಷಗಳನ್ನೂ ನಾವು ಮೂಲೆಗುಂಪು ಮಾಡಿದ್ದೇವೆ. ಎಡ ಪಕ್ಷಗಳಲ್ಲಿ ನಾವೇ ನಿರ್ಣಾಯಕ ಶಕ್ತಿಯಾಗಿದ್ದೇವೆ. ಈ ಮೊದಲನೆಯ ಬೆಳವಣಿಗೆ ವರ್ಗ ಸಂಘರ್ಷವನ್ನು ಹರಿತಗೊಳಿಸಿದ್ದರೆ ಎರಡನೆಯದು ಎಡರಂಗ ಸರ್ಕಾರದ ಸ್ಥಿರತೆಗೆ ಕಾರಣವಾಗಿದೆ.

ತೀವ್ರ ಸಂಘರ್ಷದ ಮಧ್ಯೆ ಎಡರಂಗದ ಸಾಧನೆಗಳು ಸಾಧಿಸಲ್ಪಟ್ಟುವುಎಂಬುದನ್ನು ನಮ್ಮ ಅನೇಕ ಸಂಗಾತಿಗಳು ಮನಗಾಣಲು ವಿಫಲರಾಗಿದ್ದಾರೆ. ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂರಕ್ಷಿಸುವುದು, ಸಾಮಾನ್ಯರ ಮೇಲೆ ಯಾವುದೇ ದಮನಕಾರಿ ಕಾನೂನನ್ನು ಪ್ರಯೋಗಿಸಲು ನಿರಾಕರಿಸುವುದೇ ಮೊದಲಾದ ಸಾಧನೆಗಳು ಕೇಂದ್ರದ ಧೋರಣೆಗಳ ವಿರುದ್ಧ ಒಂದು ಸಮರವೇ ಎಂಬುದನ್ನು ಸದ್ಯದ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸುವ ಶಕ್ತಿಗಳನ್ನು ಬಲಗೊಳಿಸುತ್ತದೆ ಎಂಬುದನ್ನು ಪರಿಗಣಿಸುವುದಿಲ್ಲ. ಆಡಳಿತದ ಮೂಲಕ ಕೈಗೊಂಡ ಕ್ರಮಗಳನ್ನು ವರ್ಗದೃಷ್ಟಿಗೆ ಹೊರತಾದ ಸಂಸದೀಯ ಕ್ರಮಗಳೆಂದು ನಮ್ಮ ಸಂಗಾತಿಗಳು ಎಣಿಸುವುದರಿಂದಲೇ ಈ ಸಚಿವಾಧಿಕಾರವನ್ನು ಈಗ ಹಿಡಿದಿರುವ ಕಾರ್ಮಿಕವರ್ಗ ಹಾಗೂ ಅದರ ಪಕ್ಷ ಹೂಡಿದ ವರ್ಗ ಸಂಘರ್ಷದ ಭಾಗವೆಂದು ಪರಿಗಣಿಸದಿರುವುದರಿಂದಲೇ, ಜನತೆಯ ಹಂಬಲಗಳನ್ನು ಹೆಚ್ಚಿಸುತ್ತಿರುವ, ವರ್ಗ ಸಂಘರ್ಷವನ್ನು ತೀವ್ರಗೊಳಿಸುತ್ತಿರುವ ಈ ಕ್ರಮಗಳ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲಾಗಿಲ್ಲ.

ಇದಕ್ಕೆ ಕಾರಣವೇನೆಂದರೆ, ಈ ಹಿಂದೆ, ನಮ್ಮ ಚಳುವಳಿಗೆ ನಾಯಕತ್ವ ನೀಡಿದ ಪಕ್ಷದ ಉದ್ದೇಶ ಸಾಧನೆಯಲ್ಲಿ ಸಂಕಷ್ಟಕ್ಕೀಡಾದ, ನಮ್ಮ ಸಾಮೂಹಿಕ ಚಳುವಳಿಗಳನ್ನು ಕಟ್ಟಿದ ನಮ್ಮ ಅನೇಕ ಜನ ಪ್ರತಿಭಟನೆಯ ಒಂದು ರೂಪಕ್ಕೆ, ಆಂಶಿಕ ಒತ್ತಾಯಗಳಿಗಾಗಿ ಆರ್ಥಿಕ ಹೋರಾಟಕ್ಕೆ ರೂಢಿಯಾಗಿ ಹೋಗಿದ್ದಾರೆ.

## ಮುಂಚೂಣಿಯ ಕಾವಲು ಠಾಣೆಗಳು

ನಮ್ಮ ಪಕ್ಷ ಎರಡು ಎಡರಂಗ ಸರ್ಕಾರಗಳನ್ನು ಪ್ರಜಾಸತ್ತಾತ್ಮಕ ಹೋರಾಟದ ಮುಂಚೂಣಿಯ ಕಾವಲು ಠಾಣೆಗಳೆಂದು ಪರಿಗಣಿಸುತ್ತದೆ. ಅವುಗಳ ಅಸ್ತಿತ್ವದ ಮುಂದುವರಿಕೆ ವರ್ಗ ಸಂಘರ್ಷವನ್ನು ಹರಿತಗೊಳಿಸಿ, ನಮ್ಮ ದೇಶದ ಎಡ ಶಕ್ತಿಗಳಿಗೆ ಸುತ್ತ ಅಣಿನೆರೆಯುವ ಕೇಂದ್ರವಾಗುತ್ತವೆ. ಈ ಎರಡೂ ರಾಜ್ಯಗಳಲ್ಲಿ ಬೃಹತ್ ಜನ ವಿಭಾಗಗಳು ಪಕ್ಷದ ಪ್ರಭಾವಕ್ಕೆ ಒಳಗಾದಂತೆಲ್ಲಾ ಅವುಗಳ ಈ ಪಾತ್ರ ಹೆಚ್ಚು ಹೆಚ್ಚು ಪ್ರಮುಖವಾಗುತ್ತದೆ.

## ಕೇಂದ್ರದ ವಿರುದ್ಧ ಪ್ರತಿತಂತ್ರ

ಈ ವರ್ಗ ಪಿತೂರಿಯ ವಿರುದ್ಧ ಪ್ರತಿಕ್ರಮಗಳನ್ನು ಕೈಗೊಳ್ಳಬೇಕೆ? ಅಥವಾ ಈ ಪಿತೂರಿ ಯಶಸ್ವಿಯಾಗಲು, ಜನಗಳ ಮುಂದೆ ಎಡರಂಗ ಸರಕಾರ ಯಾವುದೇ ಕೈಗಾರಿಕೆಯನ್ನು ತರಲು ಅಸಮರ್ಥವೆಂಬುದು ಸಾಬಿತಾಗಲು ಬಿಡಬೇಕೆ?

ಈ ಹಿನ್ನೆಲೆಯಲ್ಲಿಯೇ ಈ ಪ್ರಸಕ್ತ ಜಂಟೀ ಉದ್ಯಮದ ಪ್ರಶ್ನೆ ಉದಯಿಸಿದ್ದು. ಕೇಂದ್ರದಲ್ಲಾಳುವ, ಆಳುವವರ್ಗದ ಸರಕಾರದ ರಾಜಕೀಯ ಕುತಂತ್ರದಿಂದ ಹಣ ಸಂಪನ್ಮೂಲಗಳು ನಿರಾಕರಿಸಲ್ಪಟ್ಟಾಗ, ಬಂಡವಾಳ ಹೂಡಿಕೆ ಇಲ್ಲದಾದಾಗ, ಮುಚ್ಚುವಿಕೆಯೊಂದೇ ಮಾರ್ಗವಾಗುಳಿದಾಗ, ಖಾಸಗೀ ಉದ್ಯಮದೊಂದಿಗೆ ಸಹಭಾಗಿತ್ವ ಕೈಗೊಳ್ಳುವುದರ ಮೂಲಕ ಎಡರಂಗ ಸಂಪುಟ ಪ್ರತಿಕ್ರಮವನ್ನು ಕೈಗೊಂಡಿತು. ಇದು ಮೂಲ ಕಾರ್ಯ

ಯೋಜನೆಯನ್ನು ಕೈಬಿಟ್ಟದ್ದಲ್ಲಿ, ತಕ್ಷಣದ ಧಾಳಿಯನ್ನೆದುರಿಸಲು ಪ್ರತಿಕಾರ್ಯತಂತ್ರ.

ನಾವು ಯೋಚಿಸುತ್ತಿರುವ ಈ ಕ್ರಮ ಕಾಂಗ್ರೆಸ್ಸ್ (ಐ) ಸರಕಾರ ಖಾಸಗಿ ಬಂಡವಾಳದೊಡನೆ ಸಹ ಉದ್ಯಮ ಸ್ಥಾಪಿಸುವುದಕ್ಕೆ ಸಮಾನವಾದುದೆಂದು ಪರಿಗಣಿಸಬಾರದು. ಪ್ರಶ್ನೆಯೆಂದರೆ ಯಾರು ಯಾರನ್ನು ನಿಯಂತ್ರಿಸುತ್ತಾರೆ ಎಂಬುದು. ನಾವು ಸಹ ಉದ್ಯಮದಲ್ಲಿ ಸಾರ್ವಜನಿಕ ವಲಯವನ್ನು ಪ್ರತಿನಿಧಿಸಿದಾಗಿನ ಶಕ್ತಿಗಳ ಸಮತೋಲನ ಬಂಡವಾಳಶಾಹಿ ಪಕ್ಷದ ಪ್ರಸಂಗವಲ್ಲಿನದ್ದೇ ಅಲ್ಲ. ಎಲ್ಲಾ ಪ್ರಗತಿಪರ ಸರಕಾರಗಳೂ ಇಂತಹ ತಾತ್ಕಾಲಿಕ ಕ್ರಮಗಳನ್ನು ಆಗಾಗ್ಗೆ ಕೈಗೊಳ್ಳಬೇಕಾಗುತ್ತದೆ. ದಕ್ಷತೆಯನ್ನು, ಈ ಕರ್ತವ್ಯವನ್ನು ಅವು ಹೇಗೆ ನಿರ್ವಹಿಸುತ್ತವೆ ಎಂಬುದರ ಮೇಲೆಯೇ ನಾವು ತೀರ್ಮಾನಿಸುವುದು.

ಈ ಹಿನ್ನೆಲೆಯಲ್ಲಿಯೇ ನಾವು, ಜಂಟೀ ಉದ್ಯಮಗಳ ಬಗ್ಗೆ ನಮ್ಮ ಒಸ್ಪಂದವನ್ನು ಅರ್ಥಮಾಡಿಕೊಳ್ಳಬೇಕು. ಸಾರ್ವಜನಿಕ ವಲಯ ಯಾವಾಗಲೂ ಖಾಸಗೀ ವಲಯದ ಮೇಲೆ ಪ್ರಾಧಾನ್ಯ ಪಡೆದಿರಬೇಕು, ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗಿಯವರ ವಶಗೊಳಿಸಬಾರದು ಎಂಬುದು ನಮ್ಮ ಪಕ್ಷದ ನಿಲುವು. ಕಾಂಗ್ರೆಸ್ ಸರಕಾರದಡಿಯಲ್ಲಿ ಜಂಟಿ ಉದ್ಯಮ ಪೂರ್ಣ ಖಾಸಗೀಕರಣಕ್ಕೆ ಹಾದಿಮಾಡಿಕೊಟ್ಟಂತೆ ಎಂದು ನಾವು ಟೀಕಿಸುತ್ತೇವೆ.

ಇದೆಲ್ಲಾ ಇಜ. ಅದೇ ಸಮಯದಲ್ಲಿಯೇ ಈ ಪ್ರಶ್ನೆ ಕೇಂದ್ರ ಹಾಗೂ ಪಶ್ಚಿಮ ಬಂಗಾಳ ಸರಕಾರದ ನಡುವಿನ ಹೋರಾಟಕ್ಕೆ ನೇರವಾಗಿ ಸಂಬಂಧಿಸಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ಇರುವವರೆಗೂ ಕೈಗಾರಿಕಾ ರಂಗದಲ್ಲಿ ಪ್ರಗತಿಯಾಗುವುದಿಲ್ಲ, ಉದ್ಯೋಗದ ಆಸೆಯನ್ನು ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವವರೆಗೂ ಮುಂದೂಡಬೇಕಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಮಾಡಿ ತೋರಿಸಬೇಕೆಂಬುದು ಕೇಂದ್ರ ಸರಕಾರದ ನಿರಂತರ ಯತ್ನ. ಎಡರಂಗ ಸರಕಾರವನ್ನು ಕೆಳಗಿಳಿಸಬೇಕೆಂಬ ಈ ಉದ್ದೇಶ ಸಾಧನೆಗೆ ಪಶ್ಚಿಮ ಬಂಗಾಳದಲ್ಲಿ ಹೊಸ ಕೈಗಾರಿಕೆಗಳನ್ನು ಆರಂಭಿಸುವುದಕ್ಕೆ ಲೈಸೆನ್ಸ್ ನಿರಾಕರಿಸುತ್ತದೆ, ಖಾಸಗಿಯವರು ಬಂಡವಾಳ ಹೂಡುವುದನ್ನು ತಡೆಯುತ್ತದೆಯೇ ಹೊರತು ಸಾರ್ವಜನಿಕ ವಲಯವನ್ನು ಬೆಳೆಸಲೆಂದೇನಲ್ಲ.

ಈ ಸಹ ಉದ್ಯಮವನ್ನು ನಮ್ಮ ಧೋರಣೆಯನ್ನಾಗಿ ನಾವು ಘೋಷಿಸಿಲ್ಲವಾದ್ದರಿಂದ ಅದರ ಬಗ್ಗೆ ಯಾವ ಆತಂಕವೂ ಬೇಕಾಗಿಲ್ಲ. ನಾವು ಅಧಿಕಾರದಲ್ಲಿರುವವರೆಗೂ ಯಾವ ಖಾಸಗಿ ಬಂಡವಾಳಕ್ಕೂ ಉದ್ಯಮಕ್ಕೂ ಅವಕಾಶ ನೀಡುವುದಿಲ್ಲವೆಂದೂ ಹೇಳಿಲ್ಲ. ಒಂದು ಹೊಸ ಉದ್ಯಮ ಇಲ್ಲಿ ಆರಂಭವಾದರೆ ಇದನ್ನೂ ಒಂದು ರಾಜೀ ಮನೋಭಾವದ ಉದಾಹರಣೆಯನ್ನಾಗಿ, ಕೆಲಸಗಾರರ ಬಂಡವಾಳಶಾಹಿ ಶೋಷಣೆಗೆ ಆಹ್ವಾನವೆಂದು ಒಂದು ತೀವ್ರನಿಲುವನ್ನು ಕೆಲವರು ತೆಗೆದುಕೊಳ್ಳಬಹುದು. ಇಂತಹ ಟೀಕೆ, ಯಾವ ವಾಸ್ತವ ಪರಿಸ್ಥಿತಿಯ ಮಧ್ಯೆ ಎಡರಂಗ ಕೆಲಸ ಮಾಡಬೇಕಾಗಿದೆ ಎಂಬುದನ್ನು ಗುರುತಿಸದೇ ಮಾಡಿದ್ದು.

## ಆಧಾರವಿಲ್ಲದ ಟೀಕೆ

ಎರಡು ಕಾರಣಗಳಿಂದ ಈ ಗೊಂದಲ ಉಂಟಾಗುತ್ತದೆ. ಒಂದನೆಯದಾಗಿ ಈ ಕ್ರಮಗಳನ್ನು ಇಂದಿನ ಆರ್ಥಿಕ ಪರಿಸ್ಥಿತಿಯ ಜೊತೆ ಜೊತೆಯಲ್ಲಿ ನೋಡದಿರುವುದು, ಕೇಂದ್ರದ ಧಾಳಿಯನ್ನು ಎದುರಿಸುವ ಪ್ರತಿಕ್ರಮಗಳ ಒಂದು ಭಾಗವಾಗಿ ಅದನ್ನು ಪರಿಗಣಿಸದಿರುವುದು.

ಎರಡನೆಯದಾಗಿ ಕಾರ್ಯ ಯೋಜನೆ ಹಾಗೂ ಕಾರ್ಯ ತಂತ್ರದ ನಡುವೆ, ಶಕ್ತಿ ಸಮತೋಲನ ಬದಲಾವಣೆಯ ನಂತರವೇ ಜಾರಿ ಮಾಡಬಹುದಾದ ಮೂಲಧೋರಣೆ ಹಾಗೂ ವರ್ಗ ಚಳುವಳಿಯನ್ನು ಮುಂದೊಯ್ಯಲು ಬೇಕಾದ ಪ್ರಾಯೋಗಿಕವಾದ ಇವತ್ತಿನ ಅವಶ್ಯಕತೆಯ ನಡುವೆ ಗೊಂದಲ. ಏಕ ಸ್ವಾಮ್ಯವನ್ನು ಕಿತ್ತೊಗೆಯುವುದು, ಖಾಸಗಿ ಕ್ಷೇತ್ರವನ್ನು ರಾಷ್ಟ್ರೀಕರಿಸುವುದು ಮೊದಲಾದ ನಮ್ಮ ಮೂಲ ಘೋಷಣೆಗಳು ಇನ್ನೂ ಪ್ರಚಾರದ ಹಂತದಲ್ಲಿಯೇ ಇವೆ, ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದಷ್ಟು ಜನಸಮುದಾಯದ ಒತ್ತಾಯ ಇನ್ನೂ ಬೆಳೆದಿಲ್ಲ. ಆದುದರಿಂದಲೇ ಈ ಕಾರ್ಯತಾಂತ್ರಿಕ ದೃಷ್ಟಿಕೋನದ ಸಂಕ್ರಮಣ ಕಾಲದ ಕ್ರಮಗಳು. ನಮ್ಮ ಸಮುದಾಯ ನೆಲೆಯನ್ನು ಧೃಡಗೊಳಿಸಿಕೊಂಡು ಮುನ್ನಡೆಯುವುದಕ್ಕಾಗಿ ತಕ್ಷಣದ ಅಗತ್ಯಗಳನ್ನು ಪೂರೈಸುವ ಈ ಕ್ರಮಗಳ ಅಗತ್ಯ.

ಪಕ್ಷದ ಘೋಷಣೆಗಳನ್ನು ಜನರ ಕಾರ್ಯಾಚರಣೆಯ ಘೋಷಣೆಗಳನ್ನಾಗಿ ಮಾಡಲು ಕಾರ್ಯತಂತ್ರಗಳು ಅವಶ್ಯಕ. ಇಂದಿನ ವರ್ಗಪರಿಸ್ಥಿತಿಯ ಕಾರಣದಿಂದ, ಎಡರಂಗ ಸರ್ಕಾರಗಳಂತಹ ಶಕ್ತಿಯುತ ಸಾಧನಗಳನ್ನು ದುರ್ಬಲಗೊಳಿಸಲು, ಅಸ್ಥಿರಗೊಳಿಸಲು ಕೇಂದ್ರ ಮಾಡುವ ಕುಟಿಲೋಪಾಯಗಳನ್ನು ವಿಫಲಗೊಳಿಸಲು ನಾವು ಯಾವುದೇ ಕಾರ್ಯತಾಂತ್ರಿಕ ಕ್ರಮಗಳನ್ನು ಅನುಸರಿಸಿದರೂ, ಖಾಸಗಿ ಬಂಡವಾಳ, ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಏಕಸ್ವಾಮ್ಯಗಳಿಗೆ ಸಂಬಂಧಿಸಿದ ನಮ್ಮ ಮೂಲಭೂತ ಘೋಷಣೆಗಳನ್ನು, ಕಾರ್ಯ

# ಕ್ರೆಡೆಂಶಿಯಲ್ ಸಮಿತಿ ವರದಿ

ಕೇಂದ್ರಸಮಿತಿ ನಿರ್ಧರಿಸಿದಂತೆ ಅಧಿವೇಶನಕ್ಕೆ ಪ್ರತಿನಿಧಿಗಳ ಸಂಖ್ಯೆ 596 ಹಾಗೂ ವೀಕ್ಷಕರ ಸಂಖ್ಯೆ 50. ಒಟ್ಟು 646.

ಪ್ರತಿನಿಧಿಗಳಲ್ಲಿ ಕೇರಳದ ಕಾಮ್ರೇಡ್ ಜವಾಹರ್ ಪಕ್ಷದ ಅಧಿವೇಶನದಲ್ಲಿ ಭಾಗವಹಿಸಲು ಬರುತ್ತಿರುವಾಗ ನಿಧನಹೊಂದಿದರು. ಕಾಮ್ರೇಡ್ ಚಂದೂಭಾಯಿ ಪಟೇಲ್ ಹಾಗೂ ಕಾಮ್ರೇಡ್ ಸುಭೋದ್‌ಸೇನ್, ಪಶ್ಚಿಮ ಬಂಗಾಳದ ಪ್ರತಿನಿಧಿ ಅನಾರೋಗ್ಯದ ಕಾರಣ ಭಾಗವಹಿಸಲಿಲ್ಲ. ರಾಜಸ್ತಾನದಿಂದ ಒಬ್ಬ ಪ್ರತಿನಿಧಿ ಅಧಿವೇಶನಕ್ಕೆ ಬರಲಿಲ್ಲ.

ಕೇಂದ್ರಸಮಿತಿ 592 ಪ್ರತಿನಿಧಿ ಕಾರ್ಡುಗಳನ್ನು ಹಾಗೂ ಐವತ್ತು ವೀಕ್ಷಕ ಕಾರ್ಡುಗಳನ್ನು ಹಂಚಿತು. ಪ್ರತಿನಿಧಿ ಕಾರ್ಡು ಪಡೆದ ಪ್ರತಿನಿಧಿಗಳಲ್ಲಿ ಪಶ್ಚಿಮ ಬಂಗಾಲದ ಕಾಮ್ರೇಡ್ ಜಾಮಿನಿ ಸಾಹಾ ಅನಾರೋಗ್ಯದ ಕಾರಣ ಭಾಗವಹಿಸಲಾಗಲಿಲ್ಲ.

ನಮಗೆ ಪ್ರತಿನಿಧಿಗಳಿಂದ 591 ಫಾರ್ಮ್‌ಗಳು, ವೀಕ್ಷಕರಿಂದ 50 ಫಾರ್ಮ್‌ಗಳು ಬಂದವು.

ಈ ಫಾರ್ಮ್‌ಗಳ ಆಧಾರದ ಮೇಲೆ ಈ ವರದಿಯನ್ನು ಸಲ್ಲಿಸುತ್ತಿದ್ದೇವೆ.

| ಲಿಂಗ | ಪ್ರತಿನಿಧಿಗಳು | ವೀಕ್ಷಕರು |
|---|---|---|
| ಪುರುಷರು | 563 | 42 |
| ಮಹಿಳೆಯರು | 28 | 8 |
| **ವಯಸ್ಸು** | | |
| 30 ವರ್ಷದವರೆಗೆ | 14 | 2 |
| 31-40 ವರ್ಷ | 118 | 17 |
| 41-50 ವರ್ಷ | 138 | 16 |
| 51-60 ವರ್ಷ | 170 | 6 |
| 61-70 ವರ್ಷ | 99 | 6 |
| 70 ವರ್ಷಕ್ಕಿಂತ ಹೆಚ್ಚು | 52 | 3 |

(61ನೇ ಪುಟದಿಂದ)

ಯೋಜನೆಯ ಉದ್ದೇಶಗಳನ್ನು ನಿರಂತರವಾಗಿ ಜನಪ್ರಿಯಗೊಳಿಸುವುದನ್ನು ಎಂದಿಗೂ ಮರೆಯಬಾರದು. ಆಳುವ ವರ್ಗದ ಕೈಯೊಳಗೆ ನಾವು ಸಿಲುಕಿಕೊಳ್ಳದಿರಬೇಕಾದರೆ ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು.

ನಮ್ಮ ಪ್ರತಿಯೊಂದು ಯಶಸ್ವೀ ಕಾರ್ಯತಂತ್ರವನ್ನೂ ಪತ್ರಿಕೆಗಳು ಸಂದರ್ಭಸಾಧಕತನ ಎಂದು ಬಣ್ಣಿಸುತ್ತವೆ. ಏಕೆಂದರೆ, ನಮ್ಮ ಚಟುವಟಿಕೆಗಳಿಂದ ಜನಸಮುದಾಯಕ್ಕೆ ಏನೂ ಪ್ರಯೋಜನವಾಗದಂತೆ ಮೂಲಭೂತ ನಿಲುವನ್ನೇ ತಳೆಯುವಂತೆ ನಮ್ಮನ್ನು ನಿರ್ಬಂಧ ಪಡಿಸಬೇಕೆಂಬುದು ಅವುಗಳ ಪ್ರಯತ್ನ.

ಈ ಬಗ್ಗೆ ಪಕ್ಷದ ದೃಷ್ಟಿಕೋನವನ್ನು ಪ್ರತಿನಿಧಿಸದ ತಪ್ಪು ಹೇಳಿಕೆಗಳು ಹಾಗೂ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇಂತಹ ಹೇಳಿಕೆಗಳನ್ನು ತಿದ್ದಬಹುದು, ಅದರಲ್ಲಿ ಅಡಕವಾಗಿರುವ ವಿಷಯಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ರೂಪಿಸಬಹುದು.

ಸರ್ಕಾರದ ಸಾಧನೆಗಳ ಮೂಲಕ ಬಂಗಾಳದ ಮುಖವನ್ನೇ ಬದಲಾಯಿಸಿಬಿಡಬಹುದು ಎಂಬ ಭ್ರಮೆ ನಮಗೆ ಎಂದೂ ಇರಲಿಲ್ಲ. ಈಗಲೂ ಅದನ್ನು ಒಪ್ಪಿಕೊಳ್ಳುವುದಿಲ್ಲ. ಸರಕಾರೀ ಚಟುವಟಿಕೆಗಳ ಮೂಲಕ ಬಂಗಾಳವನ್ನು ಬಂಗಾರದ ನೆಲವನ್ನಾಗಿಸುವ ಯೋಚನೆ ಮಾಡುವುದು ಶುದ್ಧ ಸುಧಾರಣಾವಾದ.

ನಮ್ಮ ಪಕ್ಷದ ಸಂಗಾತಿಗಳು, ಯಾವುದೇ ಕ್ರಮವನ್ನೂ, ಪರಿಸ್ಥಿತಿಯ ಸಂದರ್ಭದಲ್ಲಿಟ್ಟು, ಅದು ಜನತೆಯ ದೀರ್ಘಾವಧಿ ಹಿತಗಳನ್ನು ಬಲಿಕೊಡುತ್ತದೆಯೋ ಅಥವಾ ಜನತೆಯ ಬಲಕ್ಕೆ ಧೃಢತೆಯನ್ನು ನೀಡಿ, ಹೊಸ ಸವಾಲುಗಳನ್ನು ಹೆಚ್ಚು ಆತ್ಮವಿಶ್ವಾಸದಿಂದ ಎದುರಿಸಲು ಶಕ್ತಿ ನೀಡುತ್ತದೆಯೋ ಎಂಬುದರ ಮೇಲೆಯೇ ತೀರ್ಮಾನ ಕೈಗೊಳ್ಳಬೇಕು.

ನಮ್ಮ ದೃಷ್ಟಿಕೋನವನ್ನು, ನಮ್ಮ ಧೋರಣೆಯನ್ನು ಚರ್ಚಿಸುವಾಗ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ, ಎಡರಂಗವನ್ನು ರಕ್ಷಿಸುವುದು, ನಿರ್ವಹಿಸುವುದು, ಸಶಕ್ತಗೊಳಿಸುವುದು ಪಕ್ಷದ ಹಾಗೂ ಇಡೀ ಪ್ರಜಾಸತ್ತಾತ್ಮಕ ಚಳುವಳಿಯ ತುರ್ತು ರಾಜಕೀಯ ಕರ್ತವ್ಯವೆಂಬುದನ್ನು ನಾವು ಮರೆಯಬಾರದು.

| ವರ್ಗ ಮೂಲ | ಪ್ರತಿನಿಧಿಗಳು | ವೀಕ್ಷಕರು |
|---|---|---|
| ಕಾರ್ಮಿಕ ವರ್ಗ | 71 | 7 |
| ಕೃಷಿ ಕಾರ್ಮಿಕರು | 25 | — |
| ಬಡರೈತರು | 66 | 7 |
| ಮಧ್ಯಮ ರೈತರು | 123 | 6 |
| ಶ್ರೀಮಂತ ರೈತರು | 20 | 1 |
| ಭೂಮಾಲಕರು | 29 | — |
| ಬೂರ್ಜ್ವಾ | — | 2 |
| ಮಧ್ಯಮ ವರ್ಗ | 241 | 25 |
| ಕಿರಿಬೂರ್ಜ್ವಾ | 16 | 1 |
| ತಿಳಿಸಿಲ್ಲ | — | 1 |
| **ಶಿಕ್ಷಣ** | | |
| ಪ್ರಾಥಮಿಕ ಹಂತದವರೆಗೆ (5 ನೇ ತರಗತಿ) | 35 | 2 |
| ಎಂಟನೇ ತರಗತಿಯವರೆಗೆ | 62 | 3 |
| ಹತ್ತನೇ ತರಗತಿ/ಮೆಟ್ರಿಕ್ | 125 | 8 |
| ಇಂಟರ್ ಮೀಡಿಯೇಟ್/ಪದವಿಪೂರ್ವ/ಉಚ್ಚಮಾಧ್ಯಮಿಕ/ಐಟಿಐ. ಡಿಪ್ಲೊಮಾ | 111 | 2 |
| ಪದವೀಧರ | 150 | 17 |
| ಸ್ನಾತಕೋತ್ತರ | 103 | 18 |
| ಪಾರಾಂಪರಿಕ ಶಾಲಾ ಶಿಕ್ಷಣ ಇಲ್ಲದವರು | 5 | — |
| **ಸತತ ಪಾರ್ಟಿ ಜೀವನ** | | |
| 1942 ರ ಮೊದಲು | 98 | 4 |
| 1947 ರ ಮೊದಲು | 67 | 1 |
| 1964 ರ ಮೊದಲು | 229 | 9 |
| 1970 ರ ಮೊದಲು | 119 | 12 |
| 1977 ರ ಮೊದಲು | 60 | 14 |
| 1977 ರ ನಂತರ | 18 | 10 |

ಅತಿದೀರ್ಘ ಪಾರ್ಟಿ ಜೀವನ—ಕಾಮ್ರೇಡ್ ಬಿ.ಟಿ. ರಣದಿವೆ-ಡಿಸೆಂಬರ್ 1928
ಕಾಮ್ರೇಡ್ ಬೀರೇಶ್ ಮಿಶ್ರಾ —1938

ಅತಿಚಿಕ್ಕ ಪಾರ್ಟಿ ಜೀವನ—ಕಾಮ್ರೇಡ್ ಎನ್.ಬಸುದೇವನ್ (ಅಂಡಮಾನ್)-1983
ಕಾಮ್ರೇಡ್ ಕುಮಾರ್ ಶಿರಾಲ್ಕರ್ (ಮಹಾರಾಷ್ಟ್ರ) -1980

**ಅತ್ಯಂತ ಹಿರಿಯರು :** ಕಾಮ್ರೇಡ್ ರತನ್ ಲಾಲ್ ಬ್ರಾಹ್ಮನ್ (ಪಶ್ಚಿಮ ಬಂಗಾಲ) —87 ವರ್ಷ.
ಕಾಮ್ರೇಡ್ ಬೀರೇಶ್ ಮಿಶ್ರಾ (ಅಸ್ಸಾಂ) — 80 ವರ್ಷ.

**ಅತ್ಯಂತ ಕಿರಿಯರು :** ಕಾಮ್ರೇಡ್ ಎ.ಎಸ್. ರಾಧಾಕೃಷ್ಣನ್ (ಕೇರಳ) — 21ವರ್ಷ 10 ತಿಂಗಳು.
ಕಾಮ್ರೇಡ್ ವಲೆಟಿ ಕೃಷ್ಣನ್ (ಆಂಧ್ರ ಪ್ರದೇಶ) —27 ವರ್ಷ 9 ತಿಂಗಳು.

**ಪಕ್ಷದಲ್ಲಿ ಸಂಘಟನಾ ಸ್ಥಾನಮಾನ**

| | ಪ್ರತಿನಿಧಿ | ವೀಕ್ಷಕರ |
|---|---|---|
| ಪಾಲಿಟ್ ಬ್ಯೂರೋ ಸದಸ್ಯರು | 8 | — |
| ಕೇಂದ್ರ ಸಮಿತಿ ಸದಸ್ಯರು | 30 | — |
| ಅಖಿಲ ಭಾರತ ಫ್ರಾಕ್ಷನ್ ಸಮಿತಿ ಸದಸ್ಯರು | 12 | — |
| ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರು | 74 | 11 |
| ರಾಜ್ಯ ಸಮಿತಿ ಸದಸ್ಯರು | 241 | 20 |
| ರಾಜ್ಯ ಉಪಸಮಿತಿ/ಫ್ರಾಕ್ಷನ್ ಸಮಿತಿ ಸದಸ್ಯರು | 29 | 2 |
| ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು | 44 | 1 |
| ಜಿಲ್ಲಾ ಸಮಿತಿ ಸದಸ್ಯರು | 122 | 3 |
| ಪ್ರದೇಶ/ತಾಲ್ಲೂಕು/ವಲಯ ಸಮಿತಿ ಸದಸ್ಯ/ಕಾರ್ಯದರ್ಶಿ | 3 | 1 |
| ಸ್ಥಳೀಯ ಸಮಿತಿ ಸದಸ್ಯ/ಕಾರ್ಯದರ್ಶಿ | — | 1 |
| ಘಟಕದ ಸದಸ್ಯ/ಕಾರ್ಯದರ್ಶಿ | 19 | 1 |
| ತಿಳಿಸಿಲ್ಲ. | 9 | 11 |

**ಸಾಮೂಹಿಕ ಸಂಘಟನೆಯಲ್ಲಿ ಸ್ಥಾನಮಾನ**

| | | |
|---|---|---|
| ಅಖಿಲ ಭಾರತ ಪದಾಧಿಕಾರಿಗಳು | 54 | 4 |
| ಅಖಿಲ ಭಾರತ ಕಮಿಟಿ ಸದಸ್ಯರು | 89 | 5 |
| ರಾಜ್ಯ ಮಟ್ಟದ ಪದಾಧಿಕಾರಿಗಳು | 96 | 22 |
| ರಾಜ್ಯ ಮಟ್ಟದ ಕಮಿಟಿ ಸದಸ್ಯರು | 153 | 6 |
| ಜಿಲ್ಲಾ ಮಟ್ಟದ ಪದಾಧಿಕಾರಿಗಳು | 23 | 1 |
| ಜಿಲ್ಲಾ ಮಟ್ಟದ ಕಮಿಟಿ ಸದಸ್ಯರು | 19 | — |
| ಯಾವುದೂ ಇಲ್ಲ | 157 | 12 |

| ಪಕ್ಷಕ್ಕೆ ಪ್ರವೇಶ | ಪ್ರತಿನಿಧಿಗಳು | ವೀಕ್ಷಕರು |
|---|---|---|
| ಕಾರ್ಮಿಕರಂಗದ ಮೂಲಕ | 39 | 16 |
| ಕಿಸಾನ್ ರಂಗದ ಮೂಲಕ | 119 | 4 |
| ಕೃಷಿ ಕಾರ್ಮಿಕ ರಂಗ | 22 | 1 |
| ಯುವರಂಗ | 36 | 2 |
| ವಿದ್ಯಾರ್ಥಿ ರಂಗ | 212 | 15 |
| ಮಹಿಳಾರಂಗ | 9 | 2 |
| ಸಾಂಸ್ಕೃತಿಕ ರಂಗ | 4 | 2 |
| ಇತರ ರಂಗ | 50 | 7 |
| ತಿಳಿಸಿಲ್ಲ | — | 1 |
| ಅರೆ ಪೂರ್ಣಾವಧಿ | 83 | 21 |
| ಪೂರ್ಣಾವಧಿ | 508 | 29 |

**ದುಡಿಯುವ ರಂಗ**

| | | |
|---|---|---|
| ಪಕ್ಷದ ಸಂಘಟನೆ | 254 | 17 |
| ಕಾರ್ಮಿಕ ಸಂಘ | 131 | 5 |
| ಕಿಸಾನ್ ಸಭಾ | 106 | — |
| ಕೃಷಿ ಕಾರ್ಮಿಕರು | 33 | 2 |
| ಮಧ್ಯಮ ವರ್ಗದ ನೌಕರರು | 101 | — |
| ವಿದ್ಯಾರ್ಥಿ | 12 | 2 |
| ಯುವಜನ | 20 | — |
| ಮಹಿಳಾ | 17 | 2 |
| ಸಾಂಸ್ಕೃತಿಕ | 6 | 1 |
| ಇತರ | 22 | 1 |
| ತಿಳಿಸಿಲ್ಲ | 7 | — |

**ಆದಾಯ ಗುಂಪು**

| | | |
|---|---|---|
| 300 ರೂ. ವರೆಗೆ | 93 | 4 |
| 301–500 | 174 | 14 |
| 501–1000 | 189 | 10 |
| 1001–2000 | 80 | 5 |
| 2001–5000 | 24 | 10 |
| 5000ಕ್ಕೆ ಮೇಲೆ | 6 | — |
| ಆದಾಯವಿಲ್ಲ | 11 | 3 |
| ತಿಳಿಸಿಲ್ಲ. | 17 | 4 |

| ಜೈಲು ಜೀವನ | ಪ್ರತಿನಿಧಿಗಳು | ವೀಕ್ಷಕರು |
|---|---|---|
| 6 ತಿಂಗಳವರೆಗೆ | 159 | 26 |
| ಒಂದು ವರ್ಷದವರೆಗೆ | 28 | 4 |
| ಮೂರು ವರ್ಷಗಳವರೆಗೆ | 131 | 3 |
| ಐದು ವರ್ಷಗಳವರೆಗೆ | 60 | 1 |
| ಹತ್ತು ವರ್ಷಗಳವರೆಗೆ | 65 | 2 |
| ಹತ್ತು ವರ್ಷಕ್ಕಿಂತ ಹೆಚ್ಚು | 21 | 1 |
| ಏನಿಲ್ಲ | 127 | 13 |

ಜೈಲಿನಲ್ಲಿ ಗರಿಷ್ಠ ಅವಧಿ : ಕಾಮ್ರೇಡ್ ಗಣೇಶ್ ಘೋಷ್ (ಪಶ್ಚಿಮ ಬಂಗಾಲ) —29 ವರ್ಷ

ಕಾಮ್ರೇಡ್ ಮಹದೇವ್ ಸಾಹಾ (ಕೇಂದ್ರ ಸಮಿತಿ ಸಿಬ್ಬಂದಿ) —12 ವರ್ಷ

| ಜೈಲು ಶಿಕ್ಷೆಯ ಸಂಖ್ಯೆ | ಪ್ರತಿನಿಧಿಗಳು | ವೀಕ್ಷಕರು |
|---|---|---|
| 1 | 112 | 11 |
| 2-3 | 147 | 13 |
| 4-5 | 102 | 6 |
| 6-10 | 67 | 5 |
| 10ಕ್ಕೂ ಹೆಚ್ಚು | 14 | 2 |
| ತಿಳಿಸಿಲ್ಲ | 12 | — |
| ಏನೂ ಇಲ್ಲ | 127 | 13 |

**ಭೂಗತ ಜೀವನ**

| | | |
|---|---|---|
| 6 ತಿಂಗಳವರೆಗೆ | 70 | 11 |
| ಒಂದು ವರ್ಷದವರೆಗೆ | 36 | 2 |
| 3 ವರ್ಷಗಳವರೆಗೆ | 153 | 4 |
| 5 ವರ್ಷಗಳವರೆಗೆ | 53 | — |
| 10 ವರ್ಷಗಳವರೆಗೆ | 43 | 3 |
| 10 ಕ್ಕಿಂತ ಹೆಚ್ಚು | 5 | — |
| ಏನೂ ಇಲ್ಲ | 231 | 30 |

ಗರಿಷ್ಠ ಭೂಗತ ಅವಧಿ : ಕಾಮ್ರೇಡ್ ರಾಧಿಕಾ ಭಟ್ಟಾಚಾರ್ಜಿ (ಪಶ್ಚಿಮ ಬಂಗಾಳ)
—14 ವರ್ಷ 6 ತಿಂಗಳು.
ಕಾಮ್ರೇಡ್ ಬೀರೇಶ್ ಮಿಶ್ರಾ (ಅಸ್ಸಾಂ)
—8 ವರ್ಷ 6 ತಿಂಗಳು

| ಎಷ್ಟು ಬಾರಿ ಭೂಗತರು | ಪ್ರತಿನಿಧಿಗಳು | ವೀಕ್ಷಕರು |
|---|---|---|
| 1 | 134 | 12 |
| 2-3 | 156 | 12 |
| 4-5 | 50 | 1 |
| 6-10 | 8 | 2 |
| 10ಕ್ಕಿಂತ ಹೆಚ್ಚು | — | — |
| ತಿಳಿಸಿಲ್ಲ | 12 | — |
| ಏನೂ ಇಲ್ಲ | 231 | 30 |

**ವೈವಾಹಿಕ ಸ್ಥಾನಮಾನ**

| | | |
|---|---|---|
| ವಿವಾಹಿತರು | 499 | 43 |
| ಅವಿವಾಹಿತರು | 90 | 7 |
| ತಿಳಿಸಿಲ್ಲ | 2 | — |

**ಮಕ್ಕಳ ಸಂಖ್ಯೆ**

| | | |
|---|---|---|
| 1 | 99 | 5 |
| 2 | 127 | 10 |
| 3 | 77 | 11 |
| 4-5 | 108 | 7 |
| 5ಕ್ಕಿಂತ ಹೆಚ್ಚು | 33 | 1 |
| ಇಲ್ಲ | 55 | 9 |

**ಚುನಾಯಿತ ಸ್ಥಾನ**

| | | |
|---|---|---|
| ಸಂಸತ್ ಸದಸ್ಯ | 18 | — |
| ಮುಖ್ಯಮಂತ್ರಿ | 2 | — |
| ಮಂತ್ರಿ | 23 | — |
| ಎಂ. ಎಲ್. ಎ. | 30 | — |
| ಮೇಯರ್ | 1 | 1 |
| ಕಾರ್ಪೊರೇಶನ್/ನಗರಸಭೆ | 2 | 1 |
| ಜಿಲ್ಲಾ ಪರಿಷತ್ತು | 9 | — |
| ಪಂಚಾಯತು ಸಮಿತಿ | — | — |
| ಗ್ರಾಮ ಪಂಚಾಯತು | 3 | — |
| ಸಿಂಡಿಕೇಟ್ | 2 | — |
| ಸೆನೇಟ್ | 3 | — |

ಈ ಸಂಬಂಧದಲ್ಲಿ ನಾವು ಈ ಕೆಲವು ಸಲಹೆ ಮಂಡಿಸಲು ಅವಕಾಶ ಬಯಸುತ್ತೇವೆ.

1) ಹನ್ನೊಂದನೇ ಅಧಿವೇಶನ ಚುನಾಯಿಸಿದ ಕ್ರೆಡೆಂಶಿಯಲ್ ಸಮಿತಿ ಸೂಚಿಸಿದಂತೆ ಒಂದು ಮಾದರಿ ಕ್ರೆಡೆಂಶಿಯಲ್ ನಮೂನೆ ತಯಾರಿಸಬಹುದು.

2) ಪ್ರತಿನಿಧಿಗಳು ಸಧ್ಯದ ಕೆಲಸವನ್ನು ನಮೂನೆಯಲ್ಲಿ ಸೇರಿಸಬಹುದು.

3) ಪ್ರತಿನಿಧಿಗಳು ದುಡಿಯುತ್ತಿರುವ ಪಕ್ಷ ಹಾಗೂ ಪ್ರಮುಖ ಸಾಮೂಹಿಕ ಸಂಘಟನೆಗಳನ್ನು ಕ್ರೆಡೆಂಶಿಯಲ್ ನಮೂನೆಯಲ್ಲಿ ಸೇರಿಸಬಹುದು. ಈಗಿನ ನಮೂನೆಯಲ್ಲಿನ ಪೂರ್ಣಾವಧಿ ಕಾರ್ಯಕರ್ತರಿಗೆ ಮಾತ್ರ ಇದೆ.

4) ಉಪಸಮಿತಿ ಅಂಶಿಕ / ಸಮಿತಿಗಳನ್ನು ಪಕ್ಷದ ಘಟಕಗಳೆಂದು ಪ್ರತಿನಿಧಿಗಳ ಪಕ್ಷದಲ್ಲಿ ಸ್ಥಾನಮಾನವನ್ನು ನಿರ್ಧರಿಸುವಾಗ ತಿಳಿಯಬೇಕಾಗಿಲ್ಲ. ಇದನ್ನು ಕ್ರೆಡೆಂಶಿಯಲ್ ನಮೂನೆಯಿಂದ ತೆಗೆಯಬಹುದು.

ಕ್ರಾಂತಿಕಾರಿ ಶುಭಾಶಯಗಳೊಂದಿಗೆ

1. ಚಿತ್ತಬ್ರತ ಮಜುಂದಾರ್
2. ಎಸ್. ಕೆ. ಶುಕ್ಲಾ
3. ಎಸ್. ರಾಮಚಂದ್ರನ್ ಪಿಳ್ಳೈ

ಡಿಸೆಂಬರ್ 29, 1985

# ವಿವಿಧ ಕಾರ್ಯಕ್ರಮಗಳು-ಜನತೆಯ ಉತ್ಸಾಹ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 12ನೇ ಅಧಿವೇಶನಕ್ಕೆ ಪೂರಕವಾಗಿ ಎಲ್ಲಾ 8 ದಿನ ವಿವಿಧ ಕಾರ್ಯಕ್ರಮಗಳು. ಸಾಲ್ಟ್ ಲೇಕ್‌ನ ಯುವಭಾರತಿ ಕ್ರೀಡಾಂಗಣದಲ್ಲಿ ನಡೆದವು. ಜನತೆಯ ಅಮಿತೋತ್ಸಾಹ ಮತ್ತು ಅಚ್ಚುಕಟ್ಟಾದ ಸಂಘಟನೆ ಈ ವಿಶೇಷ ಕಾರ್ಯಕ್ರಮಗಳ ಗಮನಸೆಳೆಯುವ ಅಂಶವಾಗಿತ್ತು.

ಕಾರ್ಯಕ್ರಮಗಳಿಗೆ ಪಕ್ಷದ ಉತ್ಸಾಹಿ ಸ್ವಯಂಸೇವಕರು ಭಾರಿ ಸಿದ್ಧತೆ ನಡೆಸಿದ್ದರು. ಕ್ರೀಡಾಂಗಣವನ್ನು ಪ್ರವೇಶಿಸುವಲ್ಲಿ 70 ಅಡಿ ಎತ್ತರ, 20 ಅಡಿ ಅಗಲವಿದ್ದ, ತುದಿಯಲ್ಲಿ ದೊಡ್ಡ ಕೆಂಪು ನಕ್ಷತ್ರ ಹೊತ್ತ ಮಹಾದ್ವಾರ ನಿರ್ಮಿಸಲಾಗಿತ್ತು. ಕ್ರೀಡಾಂಗಣದ ಎಲ್ಲಾ ಎತ್ತರ ಜಾಗಗಳಲ್ಲಿ ಅಸಂಖ್ಯ ಕೆಂಬಾವಟಗಳು ಪಟಪಟಿಸುತ್ತಾ ಸಂಭ್ರಮದ ವಾತಾವರಣ ನಿರ್ಮಿಸಿದ್ದುವು.

ಕ್ರೀಡಾಂಗಣದ ಮೊದಲನೆಯ ಅಂತಸ್ತನ್ನು ಸಂಪೂರ್ಣವಾಗಿ, ಕೆಳ ಅಂತಸ್ತನ್ನು ಭಾಗಶಃ ಉದ್ದದ ಗ್ಯಾಲರಿಯಾಗಿ ಉಪಯೋಗಿಸಲಾಗಿತ್ತು. ಹೊರಗಡೆ ಭಾರಿ ಶಾಮಿಯಾನಾಗಳು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಾಗಿದ್ದವು.

ಡಿಸೆಂಬರ್ 22ರಿಂದ 29ರ (ಅಧಿವೇಶನದ ಅವಧಿ) ಪ್ರತಿ "ದಿನ" ವನ್ನು ಒಂದು ಜನ ವಿಭಾಗದ ದಿನವಾಗಿ ಆಚರಿಸಲಾಯಿತು. 8 ದಿನಗಳ ಕಾರ್ಯಕ್ರಮಗಳನ್ನು ಅನುಕ್ರಮವಾಗಿ-ರೈತರ, ನೌಕರರ ಶಿಕ್ಷಕರ, ಕಾರ್ಮಿಕರ, ಮಹಿಳೆಯರ, ವಿದ್ಯಾರ್ಥಿ-ಯುವಜನರ, ಮತ್ತು ಮಕ್ಕಳ "ದಿನ"ಗಳಾಗಿ ಆಚರಿಸಲಾಯಿತು. ಕೊನೆಯ ದಿನವನ್ನೂ ಡಿ. (29) ಕಾರ್ಮಿಕರ ದಿನವಾಗಿ ಆಚರಿಸಲಾಯಿತು. ಪ್ರತಿ ದಿನ ಭಾರಿ ಮೆರವಣಿಗೆಗಳು ಕ್ರೀಡಾಂಗಣಕ್ಕೆ ಬಂದು ಸೇರಿ, ಸಂಭ್ರಮ ಮತ್ತು ವರ್ಣಮಯ ಸನ್ನಿವೇಶಸೃಷ್ಟಿಸುತ್ತಿದ್ದವು.

ಕ್ರೀಡಾಂಗಣದ "ಗ್ಯಾಲರಿ"ಗಳಲ್ಲಿ ನಾಲ್ಕು ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಯುದ್ಧ ಮತ್ತು ಶಾಂತಿ, ಸ್ವಾತಂತ್ರ್ಯ ಚಳುವಳಿ, ಪಶ್ಚಿಮ ಬಂಗಾಳದಲ್ಲಿ ಹೋರಾಟ ಮತ್ತು ಪ. ಬಂಗಾಳದಲ್ಲಿ ಎಡರಂಗ ಸರ್ಕಾರಗಳ ಮೇಲೆ ನಡೆದ ಪ್ರದರ್ಶನಗಳು,ದೃಶ್ಯ ಮತ್ತು ಮಾಡೆಲ್‌ಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದವು ಹುತಾತ್ಮರ ವಿಭಾಗವನ್ನು ನೋಡಿದ ಹಲವು ಪ್ರೇಕ್ಷಕರು ಭಾವುಕರಾದರು.

51 ವಿಜ್ಞಾನ ಕ್ಲಬುಗಳು ಮತ್ತು 35 ಶೈಕ್ಷಣಿಕ ಸಂಸ್ಥೆಗಳನ್ನು ಪ್ರತಿನಿಧಿಸಿದ 225 ಅರಳುವ ಪ್ರತಿಭೆಯ ಮರಿವಿಜ್ಞಾನಿಗಳು ಭಾಗವಹಿಸಿದ, ವಿಜ್ಞಾನ ಮೇಳ, ಸುಮಾರು 50 ಪ್ರಕಾಶಕರು ಭಾಗವಹಿಸಿದ ಪುಸ್ತಕಮೇಳ ಪ್ರದರ್ಶನಗಳಿಗೆ ಪೂರಕವಾಗಿದ್ದವು.

ಸಾಸ್ಕೃತಿಕ ಕಾರ್ಯಕ್ರಮಗಳು ಪ್ರತಿ ದಿನ ಮಧ್ಯಾಹ್ನ 3 ಗಂಟೆಗೆ ಆರಂಭವಾಗಿ ರಾತ್ರಿ ತಡವಾಗಿ ಮುಗಿಯುತ್ತಿದ್ದವು ಹಾಡುಗಳು, ನೃತ್ಯಗಳು, ನಾಟಕಗಳು, ಗಮಕಗಳು, ಗೊಂಬೆಯಾಟ, ಫಿಲ್ಮ್‌ಗಳು ಮತ್ತು ಮೂಕಾಭಿನಯಗಳೊಂದಿಗೆ ಕಾರ್ಯಕ್ರಮಗಳು ವೈವಿಧ್ಯಮಯವಾಗಿದ್ದವು, ರಾಜ್ಯದ ಪ್ರಮುಖ ಜನಪರ ಸಾಂಸ್ಕೃತಿಕ ತಂಡಗಳಲ್ಲದೆ, ತ್ರಿಪುರ, ಆಂಧ್ರ, ತಮಿಳುನಾಡು, ಕೇರಳ, ದೆಹಲಿ ಮತ್ತು ಬಿಹಾರದಿಂದ ಬಂದ ತಂಡಗಳೂ ಭಾಗವಹಿಸಿದವು. ಇಪ್ಟಾ ಮತ್ತು ಗಣನಾಟ್ಯ ಸಂಘದ ಸಮೂಹ ಗೀತೆಗಳು ಬಹಳ ಜನಪ್ರಿಯವಾಗಿದ್ದವು. ರಬೀಂದ್ರ ಸಂಗೀತ, ಜಾನಪದ ಹಾಡುಗಳಲ್ಲದೆ ಹಲವು ನಾಟಕಗಳನ್ನು ಪ್ರದರ್ಶಿಸಲಾಯಿತು. ಪ್ರೇಮಚಂದ್‌ರವರ ಕಥೆ ಆಧಾರಿತ 'ಧನ್ ಸಾಗರ್,' ಉತ್ಪಲ್‌ದತ್‌ರವರ 'ಮಹಾಬಿದ್ರೋಹ', 'ಪಾಂಡುಲಿಪಿ' ಇವು ಪ್ರಮುಖ ನಾಟಕಗಳಾಗಿದ್ದವು. ಎಲ್ಲಾ ಕಾರ್ಯಕ್ರಮಗಳಿಗೂ ಜನ ಕಿಕ್ಕಿರಿದು ತುಂಬಿರುತ್ತಿದ್ದರು.

ಹೆಚ್ಚು ಕಡಿಮೆ ಪ್ರತಿದಿನ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ವಿಜ್ಞಾನದ ಮೇಲೆ ಮೊದಲನೆಯ ದಿನವೇ ವಿಚಾರಗೋಷ್ಠಿ ಇತ್ತು. ಆಮೇಲೆ ಕೇಂದ್ರ ರಾಜ್ಯ ಸಂಬಂಧಗಳು, ಶಿಕ್ಷಣ, ಸಮೂಹ ಮಾಧ್ಯಮ, ಕೇಂದ್ರ ಮತ್ತು ಸಂಸ್ಕೃತಿ, ಕೈಗಾರಿಕೆ ಬಿಕ್ಕಟ್ಟು ಮತ್ತು ಕಾರ್ಮಿಕನ ಪಾತ್ರ, ಎಡರಂಗ ಸರ್ಕಾರ ಸರ್ಕಾರ ಮತ್ತು ಕೃಷಿ ಸಂಬಂಧಗಳು ಇವೇ ಮುಂತಾದ ವಿಚಾರಗೋಷ್ಠಿಗಳಲ್ಲಿ ಪಕ್ಷದ ಹಲವು ನಾಯಕರು ವಿಚಾರ ಮಂಡಿಸಿದರು. ವಿಶ್ವಸಂಸ್ಥೆಯ ಅಣಕು ಅಧಿವೇಶನ ವಿಶೇಷವಾಗಿ ಜನರನ್ನು ಆಕರ್ಷಿಸಿತು.

ಕಾರ್ಯಕ್ರಮದ ಪ್ರಚಂಡ ಯಶಸ್ಸಿಗೆ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ ಜನರೇ ಮುಖ್ಯಕಾರಣ. ರಾಜ್ಯದ ಎಲ್ಲಾ ಜಿಲ್ಲೆಗಳ ಮೂಲೆಮೂಲೆಯಿಂದ ಎಲ್ಲಾ ವಿಭಾಗಗಳ ಜನರು ಪ್ರತಿದಿನ ಮಹಾಪೂರದಂತೆ ಬರುತ್ತಿದ್ದರು. ಪ್ರತಿದಿನ ಅಂದಾಜಿನಂತೆ ಕೆಲವು ಲಕ್ಷ ಜನರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಇಂತಹ ಭಾರಿ ಸಂಖ್ಯೆಯಲ್ಲಿ ಜನಪ್ರವಾಹವಿದ್ದರೂ, ಯಾವುದೇ ಅಹಿತಕಾರಿ ಘಟನೆಗಳಿಲ್ಲದೆ ಕಾರ್ಯಕ್ರಮ ಸಾಂಗವಾಗಿ ನೆರವೇರಿದ್ದು ಕಾರ್ಯಕರ್ತರ ಅವಿರತ ಶಿಸ್ತುಬದ್ಧ ಕೆಲಸ ಮತ್ತು ಜನತೆಯ ಸಂಘಟಿತ ದೃಷ್ಟಿಕೋನದಿಂದ ಮಾತ್ರ

# ಐಕ್ಯಭಾವದ ಮಹಾಧಿವೇಶನ

ನಮ್ಮ ಪಕ್ಷ ವಿವರವಾದ ಚರ್ಚೆಯ ನಂತರ, ದೇಶವನ್ನು ಎದುರಿಸುತ್ತಿರುವ ಸಮಸ್ಯೆಗಳಿಗೆ ಒಂದು ಸರ್ವ ಸಾಮಾನ್ಯ ದೃಷ್ಟಿಕೋನವನ್ನು ರೂಪಿಸಿದೆ. ಅದು ವಿದೇಶ ನೀತಿಯ, ಅಂತರಿಕ ಆರ್ಥಿಕ ನೀತಿಯ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ ವಿಷಯದಲ್ಲಿ ಪರ್ಯಾಯ ಧೋರಣೆಗಳನ್ನು ಮುಂದಿಡಲು ಶಕ್ತವಾಗಿದೆ. ಈ ಅಧಿವೇಶನದ ಸಾಧನೆ ಯೆಂದರೆ ಪಕ್ಷ, ತಾನು ಹಂತ ಹಂತವಾಗಿ ಬೆಳೆದಿದ್ದೇನೆ ಎಂಬುದನ್ನು, ನಮ್ಮ ರಾಜಕೀಯ ದೃಷ್ಟಿಕೋನದ ಬಗ್ಗೆ ಸರ್ವಾನುಮತವಿದೆ ಎಂಬುದನ್ನು ಜನಗಳಿಗೆ ಎತ್ತಿ ತೋರಿಸಿದೆ. ಈ ಅಧಿವೇಶನವನ್ನು ಐಕ್ಯಭಾವದ ಅಧಿವೇಶನವೆಂದು ಕರೆಯಬಹುದು 'ಎಂದು ಇ. ಎಂ. ಎಸ್. ಹೇಳಿದರು.

ಕೆಲವು ರಾಜ್ಯಗಳ ಹೊರತಾಗಿ ಇತರ ರಾಜ್ಯಗಳಲ್ಲಿ, ಚುನಾವಣೆಯಲ್ಲಿ ಪ್ರತಿಬಿಂಬಿತ ವಾಗದಿದ್ದರೂ, ಸಂಘಟನಾ ರಂಗದಲ್ಲಿ ಪಕ್ಷದ ಮುನ್ನಡೆ ಗುರುತಿಸಲ್ಪಟ್ಟಿತು.

ಪಂಜಾಬ್ ಹಾಗೂ ಅಸ್ಸಾಂಗಳಲ್ಲಿ ಸಿ. ಪಿ. ಐ. (ಎಂ) ಬೆಂಕಿ, ನರಕಗಳ ಮಧ್ಯೆ ಹಾದು ಹೋಗ ಬೇಕಾಗಿದ್ದರೂ ಪಕ್ಷದ ಸಂಗಾತಿಗಳು ಧೈರ್ಯವಾಗಿ ಎದುರಿಸಿದರು. ನಿಂತನೆಲೆಯನ್ನು ಬಿಟ್ಟಲುಗ ಲಿಲ್ಲ. ಈ ಎರಡು ರಾಜ್ಯಗಳ ಜೊತೆಗೆ, ಹಿಂದೀ ಪ್ರದೇಶದ ರಾಜ್ಯಗಳಲ್ಲಿನ ಪಕ್ಷದ ಮುನ್ನಡೆ ಸೇರಿದರೆ, ಪಕ್ಷಕ್ಕೆ ಒಂದು ಸರಿಯಾದ ರಾಜಕೀಯ ಕಣ್ಣೋಟವಿರುವುದು ಮಾತ್ರವಲ್ಲ, ಎಲ್ಲಾ ಕಷ್ಟಗಳನ್ನು ಮೀರಬಲ್ಲ ಧೈರ್ಯ, ಸಂಘಟನೆಗಳೂ ಇವೆ ಎಂದು ಪಕ್ಷ ಹೆಮ್ಮೆಯಿಂದ ಹೇಳಬಹುದು.

ಸಾಲ್ಕಿಯಾದಲ್ಲಿ ಸಂಘಟನಾ ರಂಗದ ಕರ್ತವ್ಯಗಳ ಬಗ್ಗೆ ಕಂಡ ಕಾಣ್ಕೆ ಇನ್ನೂ ಪೂರ್ಣವಾಗಬೇಕಾಗಿದೆ. ಈ ದೌರ್ಬಲ್ಯವನ್ನು ಮೀರಲು ಸಾಧ್ಯವಾಗಿದ್ದರೆ, ಪಕ್ಷದ ಮುನ್ನಡೆ ಮತ್ತಷ್ಟು ವಿಸ್ತಾರವಾಗುತ್ತಿತ್ತು, ಶೀಘ್ರವಾಗುತ್ತಿತ್ತು. ಈ ದೌರ್ಬಲ್ಯಗಳನ್ನು ಮೀರಲು, ಮುಂದಿನ ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೊ, ರಾಜ್ಯ ಸಮಿತಿಗಳ ಜೊತೆ ಸಮಾಲೋಚಿಸಿ ಯೋಜನೆಯನ್ನು ಹಾಕುತ್ತದೆ.

ಅಧಿವೇಶನಾಂಗಣದ ಹೊರಗೆ ಸೇರಿದ್ದ ಬೃಹತ್ ಜನಸಂದಣಿಯನ್ನು ಉಲ್ಲೇಖಿಸಿ, ಜನ, ಪಕ್ಷದ ಕಡೆಗೆ ಅತೀವ ನಿರೀಕ್ಷೆಯಿಂದ ನೋಡುತ್ತಿದ್ದಾರೆ. ಅವರು ಹಾಜರಾಗಿದ್ದ ವಿವಿಧ ರಾಜ್ಯ ಸಮ್ಮೇಳನಗಳ ಕಾಲದಲ್ಲಿ ಕಂಡ ಬೃಹತ್ ಜನ ಸಂದಣಿಗಳ ಬಗ್ಗೆ ನೆನಪಿಸಿಕೊಳ್ಳುತ್ತಾ, ಇದು ಪಕ್ಷದ ಹೆಗಲ ಮೇಲೆ ಅಪರಿಮಿತ ಜವಾಬ್ದಾರಿಯನ್ನು ಹೊರಿಸಿದೆ ಎಂಬುದನ್ನು ಒತ್ತಿ ಹೇಳಿದರು. ಪಕ್ಷದ ಕಾರ್ಯಕರ್ತರು ಈ ಅಧಿವೇಶನ ಸರ್ವಾನುಮತದಿಂದ ಅಂಗೀಕರಿಸಿದ ಕಣ್ಣೋಟದ ಆಧಾರದಲ್ಲಿ ಮುನ್ನಡೆದರೆ ಸಾಲ್ಕಿಯಾ ಪ್ಲೀನಂ ಕಾಣ್ಕೆಯ ಪಕ್ಷವನ್ನು ಬೆಳೆಸುವುದು ಸಾಧ್ಯ ಎಂದರು.

ಇ. ಎಂ. ಎಸ್. ರವರು ಅಧಿವೇಶನಕ್ಕೆ ಅತ್ಯುತ್ತಮ ಸಿದ್ಧತೆಗಳನ್ನು ಮಾಡಿದ ಹಾಗೂ ಎಲ್ಲಾ ಗೋಷ್ಠಿಗಳಲ್ಲಿಯೂ ಅತಿ ದೊಡ್ಡ ಸಂಖ್ಯೆಯಲ್ಲಿ ಜನ ಸಮುದಾಯವನ್ನು ಅಣಿ ನೆರಸಿದ ಪಶ್ಚಿಮ ಬಂಗಾಳ ಸಂಗಾತಿಗಳಿಗೆ ವಂದನೆಗಳನ್ನು ಸಲ್ಲಿಸಿದರು.

# ವಿಯಟ್ನಾಂ ಕಮ್ಯುನಿಸ್ಟ್ ಪಕ್ಷದಿಂದ ಶುಭ ಸಂದೇಶ

ವಿಯಟ್ನಾಂ ಕಮ್ಯುನಿಸ್ಟ್ ಪಕ್ಷದ, ಕಾರ್ಮಿಕ ವರ್ಗದ ಹಾಗೂ ಜನತೆಯ ಪರವಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 12ನೇ ಅಧಿವೇಶನಕ್ಕೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇವೆ.

ಹಿಂದಿನ ವರ್ಷಗಳಲ್ಲಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಾರತದ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ರಾಷ್ಟ್ರೀಯ ಸಮಗ್ರತೆಗೆ, ದೇಶದ ಅಭ್ಯುದಯಕ್ಕೆ ಹಾಗೆಯೇ ಏಷ್ಯಾ ಜನತೆಯ ಸರ್ವಸಾಮಾನ್ಯ ಹೋರಾಟಕ್ಕೆ, ಜಗತ್ತಿನೆಲ್ಲೆಡೆಯಲ್ಲಿ ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ಪ್ರಗತಿಗಾಗಿ ಪ್ರಮುಖ ಕಾಣಿಕೆಗಳನ್ನು ನೀಡಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಸಾಧನೆಯ ದಾಖಲೆಗಳ ಬಗ್ಗೆ ನಾವು ಹರ್ಷಭರಿತರಾಗಿದ್ದೇವೆ. ನಿಮ್ಮ ಉಚ್ಚಮೌಲ್ಯದ ಕ್ರಾಂತಿಕಾರಿ ಪಥದಲ್ಲಿ ನಿಮ್ಮ ಪಕ್ಷ ಹೊಸ ಹೊಸ ಗೆಲುವುಗಳನ್ನು ಪಡೆಯುತ್ತಾ ಮುನ್ನುಗ್ಗುತ್ತದೆಂದು ಆಶಿಸುತ್ತೇವೆ.

ನಮ್ಮೆರಡೂ ಪಕ್ಷಗಳ ಹಾಗು ನಮ್ಮ ಎರಡೂ ಜನತೆಯ ಮಧ್ಯೆ ಸಮರಶೀಲ ಸೌಹಾರ್ದಭಾವ, ಸ್ನೇಹ ಸಂಬಂಧಗಳು ಹಾಗೂ ಸಹಕಾರ ಧೃಡವಾಗಲಿ ಹಾಗೂ ಬೆಳೆಯಲಿ.

ನಿಮ್ಮ ಪಕ್ಷದ ಅಧಿವೇಶನ ಒಳ್ಳೆಯ ಯಶಸ್ಸು ಕಾಣಲಿ.

ಕೇಂದ್ರ ಸಮಿತಿ
ವಿಯಟ್ನಾಂ ಕಮ್ಯುನಿಸ್ಟ್ ಪಕ್ಷ

## ಬಹಿರಂಗ ಸಭೆ :

# ಚಾರಿತ್ರಿಕ ನಗರದಲ್ಲಿ ಅತ್ಯಂತ ದೊಡ್ಡ ರ್ಯಾಲಿ

ಹನ್ನೆರಡನೇ ಅಧಿವೇಶನದ ಬಹಿರಂಗ ಸಭೆಗೆ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಜನತೆ ಸೇರಿತ್ತು. ಕಲ್ಕತ್ತಾದ ಬ್ರಿಗೆಡ್ ಪರೇಡ್ ಮೈದಾನ ಕಿಕ್ಕಿರಿದು ತುಂಬಿದ್ದಲ್ಲದೆ, ಸುತ್ತಮುತ್ತಲಿನ ಪ್ರದೇಶಗಳೂ ತುಂಬಿ ತಳುಕುತ್ತಿದ್ದವು. ಬಹಿರಂಗ ಸಭೆಗೆ ಸೇರಿದ್ದ ಜನಸ್ತೋಮ ಎಷ್ಟು ಅಗಾಧವಾಗಿತ್ತೆಂದರೆ, ಸಾಮಾನ್ಯವಾಗಿ ಸಿನಿಕತನ ತೋರಿಸುವ ದೊಡ್ಡ ಪತ್ರಿಕೆಗಳೂ ಇತ್ತೀಚಿನ ವರ್ಷಗಳಲ್ಲಿ ಕಲ್ಕತ್ತಾ ಕಂಡ ಅತ್ಯಂತ ದೊಡ್ಡ ರ್ಯಾಲಿ ಎಂದು ಒಪ್ಪಿಕೊಂಡಿವೆ. 10 ರಿಂದ 15 ಲಕ್ಷ ಜನ ರ್ಯಾಲಿಗೆ ಸೇರಿದ್ದರು ಎಂದು ಅಂದಾಜು ಮಾಡಲಾಗಿದೆ. ಪಕ್ಷದ ನಾಯಕರು ವೇದಿಕೆಯನ್ನೇರುವ ಮೊದಲೇ ಅಗಾಧ ಜನಸ್ತೋಮ ಸೇರಿತ್ತು. ಎಲ್ಲೆಡೆ ಕೆಂಬಾವುಟಗಳು ಪಟಪಟಿಸುತ್ತಿದ್ದವು.

ರ್ಯಾಲಿಗಿಂತ ಪೂರ್ಣ ಒಂದು ದಿನ ಮೊದಲಿನಿಂದಲೇ ಬಹಿರಂಗ ಅಧಿವೇಶನದಲ್ಲಿ ಪಾಲುಗೊಳ್ಳಲು, ನೆರೆ ರಾಜ್ಯಗಳಿಂದ ಮಾತ್ರವಲ್ಲದೆ ದೇಶದ ಮೂಲೆಗಳಿಂದ ಜನರು ಶಿಸ್ತುಬದ್ಧ ಮೆರವಣಿಗೆಗಳೊಂದಿಗೆ ಆಗಮಿಸಲು ಆರಂಭಿಸಿದ್ದರು. ಪಕ್ಷದ ಸ್ವಯಂ ಸೇವಕರು ದೂರದಿಂದ ಆಗಮಿಸಿದ್ದ ಇವರಿಗೆ ತಾತ್ಕಾಲಿಕ ಉಳಕೊಳ್ಳುವ ಶಿಬಿರ ಮತ್ತು ಆಹಾರದ ಪ್ಯಾಕೆಟ್‌ಗಳ ವ್ಯವಸ್ಥೆ ಮಾಡಿದ್ದರು.

ಡಿಸೆಂಬರ್ 30 (ರ್ಯಾಲಿಯ ದಿನ) ನಗರದ ಮುಖ್ಯ ಬೀದಿಗಳ ಮೂಲಕ ಎಲ್ಲಾ ಜನವಿಭಾಗಗಳಿಂದ ಬಂದ ಲಕ್ಷಗಟ್ಟಲೆ ಜನರು-ಗಂಡಸರು, ಹೆಂಗಸರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು ಮತ್ತು ಮಕ್ಕಳು ಸ್ಫೂರ್ತಿದಾಯಕ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನ ಮೆರವಣಿಗೆಯಲ್ಲಿದ್ದರೂ ಯಾವುದೇ ರಸ್ತೆ ಸಾಗಾಟ ಅಸ್ತವ್ಯಸ್ತಗೊಳ್ಳಲಿಲ್ಲ ಎಂದು ದೊಡ್ಡ ಪತ್ರಿಕೆಗಳೂ ಒಪ್ಪಿಕೊಳ್ಳಬೇಕಾಯಿತು.

ಬಹಿರಂಗ ಸಭೆಯ ಅಧ್ಯಕ್ಷತೆವಹಿಸಿದ ರಾಜ್ಯ ಸಮಿತಿ ಕಾರ್ಯದರ್ಶಿ ಮತ್ತು ನವ-ಚುನಾಯಿತ ಪೊಲಿಟ್ ಬ್ಯೂರೊ ಸದಸ್ಯ ಕಾ. ಸರೋಜ್‌ಮುಖರ್ಜಿ ಅಧಿವೇಶನದ ಯಶಸ್ಸಿಗೆ ಕಾರಣರಾದ ಎಲ್ಲರಿಗೂ, ಹಾಗೂ ರಾಜ್ಯದ ಜನತೆಗೂ ಅಭಿನಂದನೆ ಸಲ್ಲಿಸಿದರು. ಇ. ಎಂ. ಎಸ್ ನಂಬೂದಿರಿ ಪಾಡ್, ಬಿ.ಟಿ. ರಣದಿವೆ, ಮತ್ತು ಜ್ಯೋತಿ ಬಸು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಮುಖ ಭಾಷಣಕಾರರಾಗಿದ್ದರು.

## "ಕಾಂಗ್ರೆಸ್ (ಐ) ಸರ್ವಾಧಿಕಾರದ ವಿರುದ್ಧ ಹೋರಾಡಿ"

ರ್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಪಕ್ಷದ ಕಾರ್ಯದರ್ಶಿ ಇ. ಎಂ. ಎಸ್. ನಂಬೂದರಿ ಪಾಡ್, ಕಾಂಗ್ರೆಸ್ (ಐ) ದೇಶದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡಲು ಅನರ್ಹ ಎಂದು ಘೋಷಿಸಿದರು. ಯಾವಾಗಲು ಕಾಂಗ್ರೆಸ್ ನಾಯಕರು "ಜಾತಿವಾದ, ಕೋಮುವಾದ ಮತ್ತು ಪ್ರಾದೇಶಿಕತೆಯ ಅಪಾಯ"ಗಳ ಬಗ್ಗೆ ಮಾತನಾಡುತ್ತಿದ್ದರೂ, ಅಧಿಕಾರಕ್ಕೆ ಅಂಟಿಕೊಳ್ಳಲು ಇದೇ ಶಕ್ತಿಗಳ ಜತೆ ಕೈಮಿಲಾಯಿಸಲು ಹೇಸುತ್ತಿಲ್ಲವೆಂದು ಇ.ಎಂ.ಎಸ್. ಹೇಳಿದರು. ಇದು ಹಿಂದೆ ಕೇರಳ, ಆ ಮೇಲೆ ಅಸ್ಸಾಮ್, ಪಂಜಾಬ್ ಮತ್ತು ತ್ರಿಪುರಾಗಳಲ್ಲಿ ನಡೆದಿದೆ. ಗುಜರಾತಿನಲ್ಲಿ ಆಳುವ ಪಕ್ಷ ಮೀಸಲಾತಿಯ ವಿಷಯದಲ್ಲಿ ಜಾತಿ-ಜಾತಿಗಳ ನಡುವೆ ತಿಕ್ಕಾಟ ತಂದಿಟ್ಟು, ರಾಜ್ಯ ಭುಗಿಲೆದ್ದಿದೆ. ಪ್ರಧಾನ ಮಂತ್ರಿಗಳ ಇತ್ತೀಚಿನ ಹೇಳಿಕೆಗಳನ್ನು ನೋಡಿದರೆ, ಮುಸ್ಲಿಂ ವೈಯಕ್ತಿಕ ಕಾನೂನಿನ ಬಗ್ಗೆ ಮುಸ್ಲಿಂ ಮೂಲಭೂತವಾದಿಗಳ ಜತೆ ರಾಜಿ ಮಾಡಲು ತಯಾರಿರುವಂತಿದೆ. ಕಾಂಗ್ರೆಸ್ ಹೇಗಾದರೂ ಅಧಿಕಾರಕ್ಕೆ ಅಂಟಿಕೊಳ್ಳಲು ಬಯಸುವ ಸ್ವಾರ್ಥಿ ವ್ಯಕ್ತಿಗಳಿಂದ ತುಂಬಿದೆ. ಕಾಂಗ್ರೆಸ್(ಐ)ನಿಂದ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹೊಸದಾಳಿಗಳು ಮುಂದುವರಿಯುತ್ತಿವೆ. ಹಾಗೂ ಇದನ್ನು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಐಕ್ಯತೆಯಿಂದ ಎದುರಿಸಬೇಕೆಂದು ಇ ಎಂ. ಎಸ್. ಕರೆಯಿತ್ತರು.

ಏಳನೆಯ ಯೋಜನೆಯ ಬಗ್ಗೆ ಜ್ಯೋತಿ ಬಸು ಮತ್ತು ನೃಪೆನ್ ಚಕ್ರವರ್ತಿಯವರ

ಟೀಕೆಯು ಬಗ್ಗೆ ಪ್ರಧಾನ ಮಂತ್ರಿ ನಡೆದುಕೊಂಡ ರೀತಿ ಸರ್ವಾಧಿಕಾರಿ ವರ್ತನೆಯ ಇತ್ತೀಚಿನ ಉದಾಹರಣೆ. ಕಾಂಗ್ರೆಸ್ (ಐ) ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ಕರೆ ಮತ್ತು ಪಕ್ಷದ ಕಾರ್ಯಕ್ರಮಕ್ಕೆ ಬರುವ ವರ್ಗಗಳಲ್ಲಿ ಬೆಂಬಲ ಮುಂದುವರಿಸುವ ಮನವಿಯೊಂದಿಗೆ ಇ.ಎಂ.ಎಸ್ ತಮ್ಮ ಭಾಷಣ ಮುಗಿಸಿದರು.

## "ಹಳೆಯ ನಾಟಕ ಕಂಪನಿಯ ಹೊಸ ನಟ"

ಪೊಲಿಟ್ ಬ್ಯೂರೋ ಸದಸ್ಯ ಬಿ. ಟಿ. ರಣದಿವೆ, ರ್‍ಯಾಲಿಯನ್ನುದ್ದೇಶಿಸಿ ಹಿಂದಿಯಲ್ಲಿ ಮಾತನಾಡಿದರು. ರಣದಿವೆಯವರು ರಾಜೀವ್ ಗಾಂಧಿಯವರು ಅಧಿಕಾರ ವಹಿಸಿಕೊಂಡದ್ದರಿಂದ ಬದಲಾವಣೆ ಬರಬಹುದೆಂಬ ಆಸೆ ಇಟ್ಟುಕೊಂಡಿರುವವರ ಬಗ್ಗೆ ಪ್ರಸ್ತಾಪಿಸಿ, ರಾಜೀವ್ ಹಳೆಯ ನಾಟಕ ಕಂಪನಿಯ ಹೊಸ ನಟ ಅಷ್ಟೇ ಎಂದರು. ಹಿಂದೆ ಕಾಂಗ್ರೆಸ್ ದುರಾಡಳಿತದಿಂದ ದೇಶ ಆರ್ಥಿಕ ಬಿಕ್ಕಟ್ಟು ವಿಷಮಗೊಂಡಿರುವುದರ ಬಗ್ಗೆ ಹಾಗೂ ಈಗ ಕಂಪ್ಯೂಟರೀಕರಣದಿಂದ ದೊಡ್ಡ ಪ್ರಮಾಣದ ಲೇಆಫ್ ಮತ್ತು ಗುತ್ತೇದಾರಿ ಬಂಡವಾಳಶಾಹಿ ಲಾಭವನ್ನು ಏರಿಸುವ ಬಗೆಯನ್ನು ಅವರು ವಿವರಿಸಿದರು. ಕಾಂಗ್ರೆಸ್ ಆಡಳಿತದಲ್ಲಿ ಪ್ರಾದೇಶಿಕತೆ ಮತ್ತು ಪ್ರತ್ಯೇಕತಾವಾದವನ್ನು ಬಡಿದೆಬ್ಬಿಸುವ ಮೂಲಕ ದೇಶದ ಐಕ್ಯತೆ, ಸಮಗ್ರತೆಗೆ ಒದಗಿರುವ ಅಪಾಯದ ಬಗ್ಗೆಯೂ ಅವರು ಮಾತನಾಡಿದರು.

ಪ. ಬಂಗಾಳ ಮತ್ತು ತ್ರಿಪುರಾದ ಎಡರಂಗ ಸರ್ಕಾರಗಳು ಜನಪರ ಸರ್ಕಾರಗಳು ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಡಬೇಕೆಂದು ತೋರಿಸಿಕೊಟ್ಟಿವೆ. ಇವುಗಳ ಆಡಳಿತದಲ್ಲಿ ಜಾತಿವಾದ, ಕೋಮುವಾದ, ಪ್ರಾದೇಶಿಕತೆಗಳ ಬಾಧೆಯಿಲ್ಲ. ದಮನಕಾರಿ ಕಾನೂನು, ಪ್ರತಿಬಂಧಕ ದಸ್ತಗಿರಿಯ ದಮನಗಳಿಲ್ಲ. ಆಂತರಿಕವಾಗಿ ಎಡರಂಗ ಸರ್ಕಾರಗಳು 30 ವರ್ಷದ ಜನಪರ ಹಾಗೂ ವರ್ಗ ಹೋರಾಟದ ಫಲ ಎಂದು ಬಿ. ಟಿ. ಆರ್. ವಿವರಿಸಿದರು.

ಎಡ ಶಕ್ತಿಗಳಿಗೆ ವರ್ಗ ಹೋರಾಟ ಸಾಮೂಹಿಕ ಹೋರಾಟಗಳೇ ಅಸ್ತ್ರಗಳು ಇವನ್ನ ವ್ಯಾಪಕವಾಗಿ ಬಳಸಬೇಕು. ಕಾಂಗ್ರೆಸ್ (ಐ) ಸರ್ವಾಧಿಕಾರ ಮತ್ತು ಜನವಿರೋಧಿ ನೀತಿಗಳ ವಿರುದ್ಧ ವ್ಯಾಪಕ ವಿರೋಧ ಸಂಘಟಿಸುವುದರಲ್ಲಿ ಕಾರ್ಮಿಕವರ್ಗ ತನ್ನ ಕರ್ತವ್ಯ ನಿಭಾಯಿಸಬೇಕು ಎಂದು ಬಿ. ಟಿ. ಆರ್. ಹೇಳಿದರು.

## "ಪ್ರತಿ ಹಳ್ಳಿಗೂ ಶಾಲೆ ಮತ್ತು ಪಕ್ಷ ಘಟಕ"

ಪ. ಬಂಗಾಳದ ಮುಖ್ಯಮಂತ್ರಿ ಹಾಗೂ ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿ ಬಸು ಲಕ್ಷ ಲಕ್ಷ ಸಂಖ್ಯೆಯಲ್ಲಿ ಬಂದು ಸೇರಿದ ಜನಸ್ತೋಮಕ್ಕೆ, ಹನ್ನೆರಡನೇ ಅಧಿವೇಶನವನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ಅಭಿನಂದಿಸಿದರು. ಆರು ಯೋಜನೆಗಳ ನಂತರವೂ ಜನರ ಸಂಕಷ್ಟ ಹೆಚ್ಚಾಗಿದೆ. ಸೀಮಿತ ವರ್ಗ ಹಿತಾಸಕ್ತಿಯನ್ನು ರಕ್ಷಿಸುವ ಕಾಂಗ್ರೆಸ್ ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿ ಶ್ರೀಸಾಮಾನ್ಯನ ಅಳಿದುಳಿದಿರುವ ಕೊಳ್ಳುಶಕ್ತಿಯನ್ನು ಕುಂಠಿತಗೊಳಿಸುವ ಮೂಲಕ ದೇಶದ ಮಾರುಕಟ್ಟೆಯನ್ನು ಬರಿದು ಮಾಡಿ ರಫ್ತು ಹೆಚ್ಚಿಸುವ ಹೊಂಚು ಹಾಕಿದೆ.

ಬಸುರವರು ಕಾಂಗ್ರೆಸ್ (ಐ)ನ್ನು ಪುನರುಜ್ಜೀವನಗೊಳಿಸುವ ಪ್ರಧಾನಿಗಳ ಹೇಳಿಕೆಯನ್ನು ಗೇಲಿ ಮಾಡುತ್ತಾ, ಮುಂಬಯಿ ಕಾಂಗ್ರೆಸ್ ಶತಮಾನೋತ್ಸವದ ಹಗರಣ ಅದನ್ನು ಕಿತ್ತುತಿನ್ನುತ್ತಿರುವ ಕ್ಯಾನ್ಸರ್ ಅನ್ನು ಬಯಲುಪಡಿಸಿದೆಯೆಂದರು. ಅಂತರಿಕ ಪ್ರಜಾಪ್ರಭುತ್ವವಿಲ್ಲದ ಕಾಂಗ್ರೆಸ್ (ಐ) ದೇಶದಲ್ಲಿ ಪ್ರಜಾಪ್ರಭುತ್ವ ಕಾಪಾಡಲು ಸಾಧ್ಯವಿಲ್ಲ. ದೇಶದ ಬೇಸತ್ತ ಯುವಕರನ್ನು ಸಮಾಜ ವಿರೋಧಿಗಳನ್ನಾಗಿ ಮಾಡುವ ಹಂಚಿಕೆ ಕಾಂಗ್ರೆಸ್(ಐ)ದು. ಕೇಂದ್ರ ಸರ್ಕಾರ ಎಡರಂಗ ಸರ್ಕಾರದ ವಿರುದ್ಧ ಹೇರಿರುವ ಆರ್ಥಿಕ ನಿರ್ಬಂಧದ ಬಗ್ಗೆ ವಿವರಿಸಿದ ಅವರು, ಜಂಟಿ ಕೈಗಾರಿಕೆಗಳ ಮೇಲೆ ಸಾರ್ವಜನಿಕ ಕ್ಷೇತ್ರದ ನಿಯಂತ್ರಣದ ಬಗ್ಗೆ ಖಾತರಿಪಡಿಸುವ ಶಕ್ತಿ ಎಡರಂಗ ಸರ್ಕಾರಕ್ಕಿದೆ ಎಂದು ಸಾರಿದರು.

ಎಡರಂಗ ಸರ್ಕಾರದ ಸಾಧನೆಗಳ ಬಗ್ಗೆ ಮಾತನಾಡುತ್ತಾ ಸಾರ್ವತ್ರಿಕ ಶಿಕ್ಷಣದ ವಿಸ್ತರಣೆ, ವಿಸ್ತೃತ ಭೂಸುಧಾರಣೆಗಳ ಬಗ್ಗೆ ಅವರು ಪ್ರಸ್ತಾಪಿಸಿದರು. ಕಾಂಗ್ರೆಸ್ ತುಳಿತಕ್ಕೆ ಸಿಕ್ಕು ಈಗ ಆತ್ಮಗೌರವವನ್ನ ಮರಳಿ ಪಡೆದ ಜನರ ಬೆಂಬಲದ ಮೇಲೆ ನಿಂತಿರುವ ಎಡರಂಗ ಸರ್ಕಾರಗಳು ದೇಶದ ಜನರಿಗೆ ಸ್ಫೂರ್ತಿದಾಯಕ. ಪ. ಬಂಗಾಳದಲ್ಲಿಶಾಲೆಗಳಿಲ್ಲದ ಹಳ್ಳಿಗಳಿಲ್ಲ. ಹಾಗೆನೇ ಪಕ್ಷದ ಘಟಕವಿಲ್ಲದ ಹಳ್ಳಿ ಇಲ್ಲದಂತೆ ಮಾಡಿ. ಹೋರಾಟವನ್ನು ಹೆಚ್ಚಿನ ಉತ್ಸಾಹದಿಂದ ಮುಂದೆ ಒಯ್ಯಲು ಪಕ್ಷವನ್ನು ಬಲಪಡಿಸಿ ಎಂದು ನೆರೆದ ಜನಸ್ತೋಮಕ್ಕೆ ಬಸು ಕರೆನೀಡಿದರು.

# ಸಂತೋಷದತ್ತ ಮುನ್ನಡೆ

ಬಡತನವು ಮಾನವ ಜೀವನದಲ್ಲೊಂದು ಕ್ರೂರ ಸಮಸ್ಯೆ ಆಗಿರುವುದು, ನಿರುದ್ಯೋಗ ಹಾಗೂ ಅಲ್ಪ ಉದ್ಯೋಗದಿಂದ ಬಳಲುವ, ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಭೂರಹಿತ ಕಾರ್ಮಿಕರ ಹಾಗೂ ಚಿಕ್ಕಪುಟ್ಟ ರೈತರಿಗೆ ಖಾಯಂ ಉದ್ಯೋಗವನ್ನು ಕಲ್ಪಿಸಿ ಇವರ ಬಡತನವನ್ನು ನಿವಾರಿಸುವಲ್ಲಿ ಅವರನ್ನು ಸ್ವಾವಲಂಬಿಗಳಾಗಿ ಅಭಿವೃದ್ಧಿಪಡಿಸುವಲ್ಲಿ ಬೀಡಿ ಉದ್ಯಮವು ಮಹತ್ವಾದ ಪಾತ್ರವನ್ನು ವಹಿಸುತ್ತಿದೆ.

ನಿಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ "ಮಂಗಳೂರು ಪ್ರಕಾಶ್ ಬೀಡಿಗಳು" ಈ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವಷ್ಟೇ ಅಲ್ಲದೆ ಅವರ ಜೀವನ ಸುಧಾರಣೆ ಯತ್ತಲೂ ತನ್ನ ಕಿಂಚಿತ್ ಪಾತ್ರ ನಿರ್ವಹಿಸುತ್ತಿದೆ. ಮಾತ್ರವಲ್ಲ ಉದ್ಯಮದ ಪ್ರಗತಿಯಲ್ಲಿ ತಾವು ಸಕ್ರಿಯ ಪಾಲುಗಾರರೆಂಬ ಮನೋಭಾವವನ್ನು ತಾಳುವಂಥ ಅವಕಾಶವನ್ನು ಕಲ್ಪಿಸಿರುತ್ತದೆ. ಲಾಭಗಳಿಸುವಷ್ಟರಲ್ಲೇ ಹರ್ಷಿಸದೇ ಗಳಿಸಿದ ಲಾಭವನ್ನು ಕಾರ್ಮಿಕರ ಹಿತರಕ್ಷಣೆಗೆ ಉಪಯೋಗಿಸುವಲ್ಲಿ ಅತೀವ ಹರ್ಷಪಡುತ್ತದೆ.

ಈ ಧೋರಣೆಯಿಂದಲೂ ಪರಿಣಾಮವಾಗಿ ಕಾರ್ಮಿಕರ ವಿಪುಲ ಸಹಕಾರದಿಂದಲೂ ನಮ್ಮ ಉದ್ಯಮ ಬೆಳೆದಿದೆ. ಉದ್ಯಮದ ಬೆಳವಣಿಗೆಯ ಮೂಲಕ ಕಾರ್ಮಿಕರ ಸ್ಥಿತಿಗತಿ ಗಳೂ ಸುಧಾರಿಸಿವೆ. ಫಲರೂಪವಾಗಿ ನಮ್ಮ ಉತ್ಪನ್ನಗಳ ಗುಣಮಟ್ಟ ಹಾಗೂ ಬೆಲೆ ಮಟ್ಟಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಿರುತ್ತದೆ.

ಉದ್ಯೋಗವನ್ನು ಕಲ್ಪಿಸುವಲ್ಲಿ ಉದ್ಯಮವನ್ನು ಬೆಳೆಸುವ ನಮ್ಮ ಪಾತ್ರ ನಿಮಿತ್ತ ಮಾತ್ರದ್ದೆಂದು ನಾವೆಂದೂ ಮರೆಯಲಾರೆವು. ಪೋಷಕರಾದ ಸೇದುಗರು ತಾವು ಉರಿಸುವ ಪ್ರತಿಯೊಂದು ಬೀಡಿಯೂ ಗ್ರಾಮೀಣ ಗುಡಿಸಲೊಂದರಲ್ಲಿ ಬಡಕುಟುಂಬ ವೊಂದರ, ಬಾಳ ಬೆಳಕನ್ನು, ಭವಿಷ್ಯದ ಆಶಾಜ್ಯೋತಿಯನ್ನು ಬೆಳಗಿಸುವತ್ತ ಸಹಕರಿಸುವು ದೆಂದು ಮನಗಂಡಲ್ಲಿ ನಮ್ಮ ಸಾಧನೆಗೆ ಗರಿಷ್ಠ ಪ್ರೋತ್ಸಾಹ ದೊರೆಯುವುದು. ಈ ಉದಾತ್ತ ಧೋರಣೆಯತ್ತ ಮುನ್ನಡೆಯಲು ಕಾರಣ ಕರ್ತರಾದ ಪೋಷಕರಾದ ನಿಮಗೆಲ್ಲರಿಗೂ ಶುಭಾಶಯಗಳನ್ನರ್ಪಿಸುವೆವು.

ಪ್ರಕಾಶ್ ಬೀಡೀಸ್ ಲಿಮಿಟೆಡ್.

ಕೊಡಿಯಾಲಬೈಲ್, ಮಂಗಳೂರು-575003

# ಜೆಕೊಸ್ಲೋವಾಕಿಯಾ ಕಮ್ಯುನಿಸ್ಟ್ ಪಕ್ಷದ ಸಂದೇಶ

ಜೆಕೊಸ್ಲೋವಾಕಿಯಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 12ನೇ ಅಧಿವೇಶನದ ಪ್ರತಿನಿಧಿಗಳಾದ ನಿಮಗೆ ಹಾಗೂ ನಿಮ್ಮ ಮೂಲಕ ಪಕ್ಷದ ಎಲ್ಲಾ ಸದಸ್ಯರಿಗೆ ಪ್ರಾಮಾಣಿಕ ಒಡನಾಡೀ ಶುಭಾಶಯಗಳನ್ನು ಕೋರುತ್ತದೆ.

ಶಸ್ತ್ರಾಸ್ತ್ರ ಸ್ಪರ್ಧೆಯ ವಿರುದ್ಧ ಬಾಹ್ಯಾಕಾಶದ ಮಿಲಿಟರೀಕರಣವನ್ನು ನಿವಾರಿಸುವ ಎಲ್ಲ ಖಂಡಗಳಲ್ಲಿ ಉದ್ರಿಕ್ತ ಕೆಂಡಗಳಾಗಿರುವ ಪರಿಸ್ಥಿತಿಯನ್ನು ಶಮನಗೊಳಿಸುವ ತುರ್ತು ಕರ್ತವ್ಯ ವಿಶ್ವದ ಎಲ್ಲಾ ರಾಷ್ಟ್ರಗಳ ಮುಂದಿರುವಾಗ ನಿಮ್ಮ ಪಕ್ಷದ ಅಧಿವೇಶನ ಜರುಗುತ್ತಿದೆ. ದಕ್ಷಿಣ ಏಷ್ಯಾದ ದೇಶಗಳನ್ನು ಅಸ್ಥಿರಗೊಳಿಸುವ ಉದ್ದೇಶದ. ಹಿಂದೂ ಮಹಾಸಾಗರವನ್ನು ಮಿಲಿಟರೀಕರಣಗೊಳಿಸುವ ಗುರಿಯ ಅಸಂಸ್ಥಾ (US) ನ ಪ್ರತಿಗಾಮೀ ವಲಯಗಳ ಅಪಾಯಕಾರೀ ಯೋಜನೆಗಳು ಭಾರತದ ಜನತೆ, ಹಾಗೂ ಆ ಪ್ರದೇಶದ ಎಲ್ಲಾ ರಾಷ್ಟ್ರಗಳ ಜನತೆಯ ಹಿತಾಶಕ್ತಿಗಳಿಗೆ ನೇರ ಅಪಾಯವನ್ನೊಡ್ಡುತ್ತಿವೆ.

ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ಧೋರಣೆಯನ್ನು ಇನ್ನೂ ಹೆಚ್ಚು ದೃಢವಾಗಿ ಎದುರಿಸುವುದಕ್ಕಾಗಿ ಹಾಗೂ ವಿಶ್ವ ಶಾಂತಿ ಸಂರಕ್ಷಣೆಯ ಹೋರಾಟವನ್ನು ತೀವ್ರಗೊಳಿಸುವುದಕ್ಕಾಗಿ ಐಕ್ಯತೆಯನ್ನು, ಸಹಕಾರವನ್ನು ಬಲಗೊಳಿಸಬೇಕಾದುದು ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ, ಶಾಂತಿಪ್ರಿಯ ಶಕ್ತಿಗಳ ಕರ್ತವ್ಯವಾಗಿದೆ.

ನಿಮ್ಮ ಪಕ್ಷದ, ಭಾರತದ ಜನತೆಯ ಸುಖೀ ಜೀವನಕ್ಕಾಗಿ, ಭಾರತದ ಕಾರ್ಮಿಕ ವರ್ಗದ ಸಮಾನ ರಾಜಕೀಯ ಸಾಮಾಜಿಕ ಹಕ್ಕುಗಳಿಗಾಗಿ ದೇಶದ ಸ್ವಾತಂತ್ರ್ಯವನ್ನು ಬಲಪಡಿಸುವುದಕ್ಕಾಗಿ ಶ್ರಮವರಿಯದ, ದೃಢ ಹೋರಾಟವನ್ನು ಜೆಕೊಸ್ಲೋವಾಕ್ ಕಮ್ಯುನಿಸ್ಟರು ಅತೀವ ಗೌರವದಿಂದ ಕಾಣುತ್ತಾರೆ. ಈ ಘನವಾದ ಉದ್ದೇಶಗಳನ್ನು ಸಾಧಿಸುವ ದಾರಿಯಲ್ಲಿ ನಿಮ್ಮ ಪಕ್ಷದ 12ನೇ ಅಧಿವೇಶನದ ನಿರ್ಣಯಗಳು ಸಹಾಯಕವಾಗುತ್ತದೆಂಬುದು ನಮಗೆ ಮನವರಿಕೆಯಾಗಿದೆ.

ಪ್ರಿಯ ಸಂಗಾತಿಗಳೇ, ಸಾಮಾಜಿಕ ಪ್ರಗತಿಯತ್ತ ವಿಶ್ವಶಾಂತಿ ರಕ್ಷಣೆಯತ್ತ ನಿಮ್ಮ ಹೋರಾಟಕ್ಕೆ ಹೆಚ್ಚು ಹೆಚ್ಚು ಯಶಸ್ವೀ ದೊರಕಲಿ ಎಂದು ನಾವು ಹಾರೈಸುತ್ತೇವೆ.

**ಕೇಂದ್ರ ಸಮಿತಿ**

ಜೆಕೊಸ್ಲೋವಾಕಿಯ ಕಮ್ಯುನಿಸ್ಟ್ ಪಕ್ಷ.

# ಲಕ್ಷ ಸಹಿ ಸಂಗ್ರಹ ಚಳುವಳಿ : ಜನವರಿ 30 ವಿಧಾನ ಸೌಧ ಚಲೋ

ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಮುದಾಯವು ಶೈಕ್ಷಣಿಕವಾಗಿ ಎದುರಿಸುತ್ತಿರುವ ಪ್ರಮುಖ ಬೇಡಿಕೆಗಳಾದ ಡೊನೇಷನ್ ನಿಷೇಧಿಸುವ ಸರ್ಕಾರದ ಆಜ್ಞೆಗೆ ಕೋರ್ಟು ನೀಡಿರುವ ತಡೆಯಾಜ್ಞೆ ತೆರವುಮಾಡಿ ಕೂಡಲೇ ಜಾರಿಗೊಳಿಸಬೇಕು. ಕ್ಯಾಪಿಟೇಷನ್ ಫೀ ಆಧಾರಿತ ನೂತನ ವೈದ್ಯಕೀಯ ಕಾಲೇಜುಗಳ ಪರವಾನಗಿ ರದ್ದುಗೊಳಿಸುವುದು, ಪಿ. ಯು. ಸಿ. ವರಿವಿಗೆ ಉಚಿತ ಕಡ್ಡಾಯ ಶಿಕ್ಷಣ, ನಿರುದ್ಯೋಗ ಭತ್ಯೆ ಯೋಜನೆ ಜಾರಿಗೆ ತರಬೇಕು. ಬರಗಾಲ ಪೀಡಿತ ಪ್ರದೇಶದ ವಿದ್ಯಾರ್ಥಿಗಳಿಗೆ ಫೀ ರಿಯಾಯಿತಿ ನೀಡಿ ಶಾಲೆಗಳಲ್ಲಿ ಉಪಹಾರ ಯೋಜನೆ ಜಾರಿಗೊಳಿಸಬೇಕು. ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಅವಶ್ಯಕ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು. ಖಾಲಿ ಇರುವ ಶಿಕ್ಷಕರ ಹುದ್ದೆಯ ಭರ್ತಿ, ಕರ್ನಾಟಕ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಯವರ ಶೀಘ್ರ ಅಂಕಿತ ದೊರೆಯಬೇಕು. ಮುಂತಾದ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರವನ್ನು ಒತ್ತಾಯಿಸಲು ಎಸ್. ಎಫ್. ಐ. ರಾಜ್ಯ ಸಮಿತಿಯು ಜನವರಿ 30 ರಂದು ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ರೂಪಿಸಿದೆ. ರಾಜ್ಯದ ಮೂಲೆ ಮೂಲೆಗಳಿಂದ ಸಹಸ್ರಾರು ವಿದ್ಯಾರ್ಥಿಗಳು ಅಂದು ಮೆರವಣಿಗೆಯಲ್ಲಿ ತೆರಳಿ ಸರ್ಕಾರಕ್ಕೆ ಒಂದು ಲಕ್ಷ ಸಹಿಯನ್ನೊಳಗೊಂಡ 25 ಅಂಶಗಳನ್ನು ಬೇಡಿಕೆ ಪತ್ರವನ್ನು ಸಲ್ಲಿಸಲಾಗುವುದು.

ಎಸ್. ಎಫ್. ಐ. ರಾಜ್ಯ ಸಮಿತಿ.

# ನೂತನ ಕೇಂದ್ರ ಸಮಿತಿ

ಪಕ್ಷದ ಹನ್ನೆರಡನೇ ಅಧಿವೇಶನ ಎಪ್ಪತ್ತು ಸದಸ್ಯರ ಕೇಂದ್ರ ಸಮಿತಿಯನ್ನು ರಚಿಸಲು ನಿರ್ಧರಿಸಿತು. ಅಧಿವೇಶನ ಹೊಸ ಕೇಂದ್ರ ಸಮಿತಿಗೆ 66 ಸದಸ್ಯರನ್ನು ಆರಿಸಿ ಉಳಿದ ನಾಲ್ಕು ಸ್ಥಾನಗಳನ್ನು ಮುಂದೆ ಭರ್ತಿಮಾಡಲು ಖಾಲಿ ಬಿಡಲಾಯಿತು.

ಕೇಂದ್ರ ಸಮಿತಿಯ ಸದಸ್ಯರ ಹೆಸರುಗಳು ಈ ರೀತಿಯಿವೆ.

1. ಇ. ಎಂ. ಎಸ್. ನಂಬೂದಿರಿಪಾದ್
2. ಬಿ. ಟಿ. ರಣದಿವೆ
3. ಎಂ. ಬಸವಪುನ್ನಯ್ಯ
4. ಹರ್‌ಕಿಶನ್ ಸಿಂಗ್ ಸುರ್ಜಿತ್
5. ಜ್ಯೋತಿ ಬಸು
6. ಸಮರ್ ಮುಖರ್ಜಿ
7. ಇ. ಬಾಲಾನಂದನ್
8. ನೃಪೇನ್ ಚಕ್ರವರ್ತಿ
9. ಸರೋಜ್ ಮುಖರ್ಜಿ
10. ವಿ. ಎಸ್. ಅಚ್ಯುತಾನಂದನ್
11. ಅಬ್ದುಲ್ಲಾ ರಸೂಲ್
12. ಮನೋರಂಜನ್ ರಾಯ್
13. ಬಿನೊಯ್ ಚೌಧರಿ
14. ಶಾಂತಿಮಯ ಘೋಷ್
15. ಇ. ಕೆ. ನಾಯನಾರ್
16. ಟಿ. ಕೆ. ರಾಮಕೃಷ್ಣನ್
17. ಸುಶೀಲಾ ಗೋಪಾಲನ್
18. ವಿ. ನಲ್ಲಶಿವನ್.
19. ಆರ್. ಉಮಾನಾಥ
20. ಎಂ. ಹೆಚ್. ರಾವ್
21. ಎಲ್. ಬಿ. ಗಂಗಾಧರರಾವ್
22. ಎನ್. ಪ್ರಸಾದರಾವ್
23. ಅಹಲ್ಯಾ ರಂಗ್‌ನೇಕರ್
24. ಗೋದಾವರಿ ಪರುಳೇಕರ್
25. ಎಸ್. ವೈ. ಕೊಲ್ಹಾಟಕರ್
26. ನಂದೇಶ್ವರ ತಾಲೂಕ್‌ದಾರ್
27. ಅಚಿಂತ್ಯ ಭಟ್ಟಾಚಾರ್ಯ
28. ಗಣೇಶ ಶಂಕರ ವಿದ್ಯಾರ್ಥಿ
29. ಶಿವಾಜಿ ಪಟ್ನಾಯಿಕ್
30. ದಶರಥ ದೇವ್
31. ಸತ್ವಂತ್ ಸಿಂಗ್
32. ಜಿ. ಎಸ್. ರಂಧಾವ
33. ಎಸ್. ಡಿ. ತಿವಾರಿ
34. ಎಂ. ಕೆ. ಪಂಧೆ
35. ನೃಸಿಂಗ ಚಕ್ರವರ್ತಿ
36. ಬಿಮನ್ ಬಸು
37. ಬುದ್ಧದೇವ್ ಭಟ್ಟಾಚಾರ್ಯ
38. ಮಹ್ಮದ್ ಅಮಿನ್
39. ಎಂ. ಎಂ. ಲಾರೆನ್ಸ್
40. ರವೀಂದ್ರನಾಥ್
41. ಎಸ್. ರಾಮಚಂದ್ರನ್ ಪಿಳ್ಳೈ
42. ಪಿ. ಆರ್. ಪರಮೇಶ್ವರನ್
43. ವಿ. ನರಸಿಂಹ ರೆಡ್ಡಿ
44. ಕೊರ್ಚಾಲ ಸತ್ಯನಾರಾಯಣ
45. ಹೇಮೆನ್ ದಾಸ್
46. ಸುಭೋದ್ ರಾಯ್
47. ಎನ್. ಕೆ. ಶುಕ್ಲಾ
48. ಅಜಯ್ ರಾವುತ್
49. ಮಾನಿಕ್ ಸರ್ಕಾರ್
50. ರಾಮ್ ಸುಮೇರ್ ಯಾದವ್
51. ಮೊತೀಲಾಲ್ ಶರ್ಮಾ
52. ಹರಿರಾಮ್ ಚೌಹಾನ್
53. ಪ್ರಕಾಶ್ ಕರಾತ್
54. ಮಹ್ಮದ್ ಯೂಸುಫ್
55. ರಘುಬೀರ್‌ಸಿಂಗ್ ಹೂಡಾ
56. ಪಿ. ರಾಮಚಂದ್ರರಾವ್
57. ಸೀತಾರಾಮ ಯೆಚ್ಚೂರಿ
58. ಸುನಿಲ್ ಮೈತ್ರಾ
59. ಸುಕೋಮಲ್ ಸೆನ್
60. ಅನಿಲ್ ಬಿಸ್ವಾಸ್
61. ಬಿಪ್ಲಬ್‌ದಾಸ್ ಗುಪ್ತಾ
62. ಎನ್. ಶಂಕರಯ್ಯ
63. ಪಿ. ರಾಮಚಂದ್ರನ್
64. ಮಂಗತ ರಾಮ್
65. ಹನ್ನನ್ ಮೊಲ್ಲಾ
66. ನೂರುಲ್ ಹುದಾ

ಹೊಸ ಚುನಾಯಿತ ಕೇಂದ್ರ ಸಮಿತಿ ಇ. ಎಂ. ಎಸ್. ನಂಬೂದರಿಪಾದ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆ ಮಾಡಿತು.

ಕೇಂದ್ರ ಸಮಿತಿ, ಪಾಲಿಟ್‌ಬ್ಯೂರೋಗೆ ಈ ಕೆಳಗಿನವರನ್ನು ಆರಿಸಿತು.

1. ಇ.ಎಂ.ಎಸ್.ನಂಬೂದಿರಿ ಪಾದ್
2. ಬಿ. ಟಿ. ರಣದಿವೆ
3. ಎಂ. ಬಸವಪುನ್ನಯ್ಯ
4. ಹರ್‌ಕಿಶನ್‌ಸಿಂಗ್ ಸುರ್ಜೀತ್
5. ಜ್ಯೋತಿ ಬಸು
6. ಸಮರ್ ಮುಖರ್ಜಿ
7. ಇ. ಬಾಲಾನಂದನ್
8. ನೃಪೇನ್ ಚಕ್ರವರ್ತಿ
9. ಸರೋಜ್ ಮುಖರ್ಜಿ
10. ವಿ. ಎಸ್. ಅಚ್ಯುತಾನಂದನ್.

# ಪಾಲಿಟ್ ಬ್ಯೂರೊ ಸದಸ್ಯರು



ಎಡದಿಂದ ಬಲಕ್ಕೆ

1. ವಿ. ಎಸ್. ಅಚ್ಯುತಾನಂದನ್
2. ಸರೋಜ್ ಮುಖರ್ಜಿ
3. ಸಮರ್ ಮುಖರ್ಜಿ
4. ಹರ್ ಕಿರ್ಷಸಿಂಗ್ ಸುರ್ ಜೀತ್
5. ಇ. ಎಂ. ಎಸ್. ನಂಬೂದಿರಿಪಾಡ್ (ಪ್ರಧಾನ ಕಾರ್ಯದರ್ಶಿ)
6. ಬಿ. ಟಿ. ರಣದಿವೆ
7. ಜೋತಿಬಸು
8. ಎಂ. ಬಸವಪುನ್ನಯ್ಯ
9. ನೃಪೇನ್ ಚಕ್ರವರ್ತಿ
10. ಇ. ಬಾಲನಂದನ್

REG. No. BGW-148 MAG [2] PRB DECR 319/78-79

# ‘ಐಕ್ಯರಂಗ’ಕ್ಕೆ

# “ಎರಡು ಲಕ್ಷ ರೂ. ನಿಧಿ ಕೂಡಿಸಿ”

ಪಕ್ಷವನ್ನು ಕಟ್ಟುವುದನ್ನು ಎಲ್ಲಿಂದ ಆರಂಭಿಸಬೇಕು? ಎಂಬ ಪ್ರಶ್ನೆಯನ್ನು ಹಾಕಿಕೊಂಡ, ಮೊದಲ ಸಮಾಜವಾದಿ ರಾಷ್ಟ್ರದ ನಿರ್ಮಾಪಕ, ಅಪ್ರತಿಮ ಕ್ರಾಂತಿಕಾರಿ ನಾಯಕ ಕಾಂ. ಲೆನಿನ್‌ರವರು, ಪಕ್ಷ ಕಟ್ಟುವುದನ್ನು ಪತ್ರಿಕೆಯಿಂದ ಆರಂಭಿಸಬೇಕು, ಏಕೆಂದರೆ ಪತ್ರಿಕೆ ಪಕ್ಷದ, ಸೈದ್ಧಾಂತಿಕ ಶಿಕ್ಷಕ, ಹೋರಾಟಗಾರ, ಸಂಘಟಕ ಎಂದು ಪ್ರತಿಪಾದಿಸಿದರು.

ಬಂಡವಾಳಶಾಹಿ - ಜಮೀನ್ದಾರಿ ಸಾಮಾಜಿಕ ವ್ಯವಸ್ಥೆಯಲ್ಲಿ, ಆಳುವ ವರ್ಗದ ಪತ್ರಿಕೆಗಳು ದಿನನಿತ್ಯ ಪ್ರಸರಿಸುವ ಅಪಪ್ರಚಾರಗಳಿಗೆ, ಕೇಂದ್ರ ಸರಕಾರದ ಬಿಗಿಮುಷ್ಠಿಯಲ್ಲಿರುವ ಪ್ರಬಲ ಸಂವಹನ ಸಾಧನಗಳಾದ ರೇಡಿಯೊ, ದೂರದರ್ಶನಗಳ ಅಪಪ್ರಚಾರಗಳಿಗೆ, ಬಲವಾದ ಸವಾಲು ನೀಡಲು, ಜನ ಸಮುದಾಯವನ್ನು ಆಳುವ ವರ್ಗಗಳ ಸೈದ್ಧಾಂತಿಕ ಹಿಡಿತದಿಂದ ವಿಮುಕ್ತಗೊಳಿಸಲು ನಮಗಿರುವ ಸಾಧನಗಳಲ್ಲಿ ಪ್ರಮುಖವಾದದ್ದು ಪಕ್ಷದ ಪತ್ರಿಕೆಗಳು. ಈ ಪತ್ರಿಕೆಗಳನ್ನೋದಿ ಸಂಗಾತಿಗಳು, ಅಭಿಮಾನಿಗಳು ತಮ್ಮ ರಾಜಕೀಯ ಸೈದ್ಧಾಂತಿಕ ಪಜ್ಞೆಯನ್ನು ಎತ್ತರಿಸಿಕೊಂಡರೆ ಮಾತ್ರ, ತಾವು ನಾಯಕತ್ವ ನೀಡುತ್ತಿರುವ ಸಂಘಟನೆಗಳಲ್ಲಿ ಪಕ್ಷದ ಪ್ರಭಾವವನ್ನು ವಿಸ್ತರಿಸಲು ಸಾಧ್ಯ.

ಆದ್ದರಿಂದ ಸಂಗಾತಿಗಳೇ, ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಮುಖವಾಣಿ ‘ಐಕ್ಯರಂಗ’ವನ್ನು ಸುವ್ಯವಸ್ಥಿತಗೊಳಿಸಲು, ರಾಜ್ಯ ಸಮ್ಮೇಳನದಲ್ಲಿ ನಿರ್ಧರಿಸಿದಂತೆ ತನ್ನದೇ ಆದ ಒಂದು ಮುದ್ರಣಾಲಯವನ್ನು, ಕಛೇರಿಯನ್ನು ಪಡೆಯಲು ‘ಎರಡು ಲಕ್ಷ ರೂಪಾಯಿ’ಗಳ ನಿಧಿಯನ್ನು ಸಂಗ್ರಹಿಸಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. ಎಲ್ಲಾ ಸಂಗಾತಿಗಳೂ ತಮ್ಮ ಶಕ್ತಿಮೀರಿ ಪ್ರಯತ್ನಿಸಿ ಈ ಕರೆಗೆ ಓಗೊಟ್ಟು ನಿಧಿಯನ್ನು ಕೂಡಿಸಬೇಕೆಂದು, ಒಂದು ಶಕ್ತ ಸೈದ್ಧಾಂತಿಕ, ರಾಜಕೀಯ ಆಯುಧವಾಗಿ ‘ಐಕ್ಯರಂಗ’ ರೂಪುಗೊಳ್ಳಲು ನೆರವಾಗಬೇಕೆಂದು ಕೋರುತ್ತೇವೆ.

ಪಕ್ಷದ ಪ್ರತಿಯೊಬ್ಬ ಸದಸ್ಯನೂ, ಅಭಿಮಾನಿಯೂ ಈ ಕರ್ತವ್ಯ ಪೂರೈಸುವುದರಲ್ಲಿ ಭಾಗಿಯಾಗಬೇಕೆಂದು ವಿನಂತಿಸುತ್ತೇವೆ.

**ವಿ. ಸೂ.** : ನಿಧಿಯ ಕೂಪನ್‌ಗಳು ಪಕ್ಷದ ಜಿಲ್ಲಾ ಸಮಿತಿ ಹಾಗೂ ‘ಐಕ್ಯರಂಗ’ ಕಛೇರಿಯಲ್ಲಿ ದೊರಕುತ್ತದೆ.

**ಸಂಪಾದಕರು**
**“ ಐಕ್ಯರಂಗ ”**

Printed & Published by P Ramachandia Rao on behalf of the Communist Party of India (Marxist) Karnataka State Committee, K. V. Temple Stieet, Sultanpet Bangalore-560053
Editoria' and manageriel office L-56. K. V. Temple Street Sultanpet Bangalore-53 Phone : 75331
EDITOR : P. RAMACH ANDRA RAO, MANAGING EDITOR : N. K. UPADHYAYA

Piinted at RAVEE TRADERS, Balepet Cross, Bangalore-560 053